ಬುಧವಾರ, ಸೆಪ್ಟೆಂಬರ್ 25, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 267 | ಪುಟ 14
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಕೃತಕ ಬುದ್ಧಿಮತ್ತೆ ಪರಿಸರಕ್ಕೆ ಶಾಪವೇ?

ಅನುಭವ ಮಂಟಪ
ಮೀಸಲಾತಿಯ ಕ್ರಮಬದ್ಧ ವಿಕೇಂದ್ರೀಕರಣ

ಎಂಬಿಬಿಎಸ್ ಪ್ರವೇಶ: 'ಎನ್‌ಆರ್‌ಐ ಕೋಟಾ–ವಂಚನೆ ನಿಲ್ಲಲಿ' 11

ಲೆಬನಾನ್: ಸಾವಿನ ಸಂಖ್ಯೆ 558ಕ್ಕೆ ಏರಿಕೆ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
84,914	25,940	₹77,050 (ಬೆಂಗಳೂರು)	₹91,200 (ಬೆಂಗಳೂರು)	83.63

ಮುಡಾ ಪ್ರಕರಣ: ಸಿ.ಎಂ ಅರ್ಜಿ ಮೇಲಿನ ತೀರ್ಪು ಪ್ರಕಟಿಸಿದ ಹೈಕೋರ್ಟ್ • ನ್ಯಾಯಾಲಯದತ್ತ ಇಂದೂ ಚಿತ್ತ

ತನಿಖೆಗೆ ದಾರಿ: ಮೇಲ್ಮನವಿಗೆ ತಯಾರಿ

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ತಮ್ಮ ವಿರುದ್ಧ ತನಿಖೆಗೆ ರಾಜ್ಯಪಾಲರು ನೀಡಿದ್ದ ಅನುಮತಿ ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಜಾಗೊಳಿಸಿ ಮಹತ್ವದ ತೀರ್ಪು ನೀಡಿರುವ ಹೈಕೋರ್ಟ್, ತನಿಖೆಗೆ ಅಸ್ತು ಎಂದಿದೆ. ಇದರ ಬೆನ್ನಲ್ಲೇ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ಮುಂದಿದ್ದ ಸಿದ್ದರಾಮಯ್ಯ ವಿರುದ್ಧದ ಪ್ರಕರಣಕ್ಕೆ ಇದ್ದ ತಡೆ ಆದೇಶ ತೆರವುಗೊಂಡಂತಾಗಿದೆ. ಬುಧವಾರ, ಈ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಗೆ ಬರಲಿದೆ. ಈ ಬೆಳವಣಿಗೆಯ ಬೆನ್ನಲ್ಲೇ, ವಿಭಾಗೀಯದ ಪೀಠದ ಮುಂದೆ ಬುಧವಾರವೇ ಮೇಲ್ಮನವಿ ಸಲ್ಲಿಸಲು ಸಿದ್ದರಾಮಯ್ಯ ತಯಾರಿ ನಡೆಸಿದ್ದಾರೆ. ಸಿದ್ದರಾಮಯ್ಯ ಪರ–ವಿರುದ್ಧದ ಸಂಘಟನೆಗಳು ಹೋರಾಟಕ್ಕೆ ಅಣಿಯಾಗಿವೆ

ರಾಜ್ಯಪಾಲರ ನಡೆಗೆ ನ್ಯಾಯಪೀಠ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಪಾಲರ ಆದೇಶ ಪ್ರಶ್ನಿಸಿ ಸಿದ್ದರಾಮಯ್ಯ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ಪೂರ್ಣಗೊಳಿಸಿ, ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಪ್ರಕಟಿಸಿದ್ದು, 'ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗೆ ನೀಡಿದ್ದ ಮಧ್ಯಂತರ ಆದೇಶ ಮುಂದುವರಿಯುವುದಿಲ್ಲ' ಎಂದು ಸ್ಪಷ್ಟಪಡಿಸಿದೆ.

'ರಾಜ್ಯಪಾಲರ ಆದೇಶವು ವಿವೇಚನಾ ಶೂನ್ಯವಾಗಿಲ್ಲ. ಎಲ್ಲವೂ ಕಾನೂನಿಗೆ ಅನುಗುಣವಾಗಿಯೇ ಇದೆ. ತನಿಖಾಧಿಕಾರಿಯಿಂದ ಮುಂಚಿತವಾಗಿಯೇ ತನಿಖೆ ನಡೆಸಿ ವರದಿ ಪಡೆಯಬೇಕಾದ ಅಗತ್ಯವಿಲ್ಲ. ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ (ಪಿಸಿ ಕಾಯ್ದೆ) 17ಎ ಅಡಿ ಖಾಸಗಿ ವ್ಯಕ್ತಿಯೂ ತನಿಖೆ ನಡೆಸುವಂತೆ ಕೋರಿ ಅನುಮತಿ ಪಡೆಯಬಹುದು' ಎಂದು ಪೀಠ ಹೇಳಿದೆ.

'ಫಿರ್ಯಾದುದಾರರು ತಮ್ಮ ದೂರನ್ನು ಮುಂದುವರಿಸಲು ಮತ್ತು ಇದಕ್ಕೆ ಪೂರಕವಾಗಿ ರಾಜ್ಯಪಾಲರಿಂದ ಮಂಜೂರಾತಿ ಪಡೆಯಲು ಸಮರ್ಥರಾಗಿದ್ದಾರೆ. ಸಾಮಾನ್ಯ ಸಂದರ್ಭಗಳಲ್ಲಿ, ಸಚಿವ ಸಂಪುಟದ ಸಲಹೆಯಂತೆ ಕಾರ್ಯ ನಿರ್ವಹಿಸುವುದು ರಾಜ್ಯಪಾಲರ ಕರ್ತವ್ಯ. ಆದಾಗ್ಯೂ, ವಿಶೇಷ ಸಂದರ್ಭಗಳಲ್ಲಿ ಅವರು ಸ್ವತಂತ್ರ ನಿರ್ಧಾರವನ್ನು ತೆಗೆದುಕೊಳ್ಳಬಹುದು' ಎಂದು ವಿವರಿಸಿದೆ.

'ವಾಸ್ತವವಾಗಿ ಪಿಸಿ ಕಾಯ್ದೆಯ ಕಲಂ 17ಎ ಅಡಿಯಲ್ಲಿ ಅನುಮತಿ ಕಡ್ಡಾಯವಾಗಿದೆ. ಆದರೆ, ಖಾಸಗಿ ದೂರುದಾರರ ವಿಚಾರದಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತ–2023ರ (ಬಿಎನ್‌ಎಸ್‌ಎಸ್) ಕಲಂ 200 ಅಥವಾ 223ರ ಅಡಿಯಲ್ಲಿ ಪೊಲೀಸ್ ಅಧಿಕಾರಿಯೇ ಅನುಮತಿ ಕೋರಬೇಕೆನ್ನುವ ಅಗತ್ಯ ಎಲ್ಲಿಯೂ ಇಲ್ಲ. ಖಾಸಗಿ ದೂರುದಾರರೂ ರಾಜ್ಯಪಾಲರಿಂದ ಮಂಜೂರಾತಿ ಪಡೆಯಬಹುದು. ಅಂತಹ ಅನುಮತಿಯನ್ನು ಪಡೆಯುವುದು ದೂರುದಾರರ ಕರ್ತವ್ಯ' ಎಂದು ನ್ಯಾಯಪೀಠ ಹೇಳಿದೆ.

ಏನಿದು ವಿವಾದ?: 'ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರ ಒಡೆತನದ್ದು ಎನ್ನಲಾದ ಕೃಷಿ ಭೂಮಿಯನ್ನು ಮುಡಾ ವಶಪಡಿಸಿಕೊಂಡು ಅದಕ್ಕೆ ಬದಲು 14 ನಿವೇಶನ ಪ್ರಮುಖ ಜಾಗದಲ್ಲಿ ಹಂಚಿಕೆ ಮಾಡಿದೆ' ಎನ್ನುವುದು ವಿವಾದದ ಕೇಂದ್ರ ಬಿಂದು.

'ಪರಿಹಾರ ರೂಪದಲ್ಲಿ ನೀಡಲಾದ ನಿವೇಶನಗಳ ಹಂಚಿಕೆ ಪ್ರಕ್ರಿಯೆಯೇ ಅಕ್ರಮದಿಂದ ಕೂಡಿದೆ. ಇಡೀ ಪ್ರಕ್ರಿಯೆಯಲ್ಲಿ ಸಿದ್ದರಾಮಯ್ಯನವರು ಪ್ರಭಾವ ಬೀರಿರುವುದು ಕಂಡು ಬಂದಿದೆ' ಎಂದು ಆರೋಪಿಸಲಾದ ಮೂರು ಖಾಸಗಿ ದೂರುಗಳನ್ನು ರಾಜ್ಯಪಾಲರಿಗೆ ಸಲ್ಲಿಸಲಾಗಿತ್ತು. ಇವುಗಳನ್ನು ಆಧರಿಸಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ-1988ರ ಕಲಂ (ಪಿಸಿ ಕಾಯ್ದೆ) 17ಎ ಅಡಿ ತನಿಖೆ ನಡೆಸಲು 2024ರ ಆಗಸ್ಟ್ 17ರಂದು ಮಂಜೂರಾತಿ ನೀಡಿದ್ದರು. 'ರಾಜ್ಯಪಾಲರ ಆದೇಶವನ್ನು ರದ್ದುಪಡಿಸಬೇಕು' ಎಂದು ಕೋರಿ ಸಿದ್ದರಾಮಯ್ಯ ಹೈಕೋರ್ಟ್ ಮೆಟ್ಟಿಲೇರಿದ್ದರು.

ತನಿಖಾ ಪ್ರಕ್ರಿಯೆ ಹೇಗೆ?

- ಖಾಸಗಿ ದೂರುಗಳನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ವಿಚಾರಣೆಗೆ ಸ್ವೀಕರಿಸಿ, ದೂರುಗಳನ್ನು ಪರಿಶೀಲಿಸಬಹುದು. ಅವುಗಳಲ್ಲಿರುವ ಆರೋಪ ಕುರಿತು ತನಿಖೆಗೆ ಆದೇಶಿಸಬಹುದು
- ಇವು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್‌ಗಳ ಅಡಿ ನೀಡಲಾದ ದೂರುಗಳಾಗಿರುವ ಕಾರಣ, ಇಂತಹ ಪ್ರಕರಣಗಳ ತನಿಖೆಗಾಗಿಯೇ ಅಸ್ತಿತ್ವದಲ್ಲಿರುವ ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಪ್ರಕರಣ ವರ್ಗಾವಣೆ ಆಗುತ್ತದೆ
- ವಿಶೇಷ ನ್ಯಾಯಾಲಯವು ನೀಡುವ ಆದೇಶದ ಅನುಸಾರ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಬೇಕಾಗುತ್ತದೆ
- ಮೂರು ಖಾಸಗಿ ದೂರುಗಳಿಗೆ ಸಂಬಂಧಿಸಿ ಒಂದೇ ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಬೇಕಾಗುತ್ತದೆ

ಇನ್ನಷ್ಟು ಸುದ್ದಿಗಳು 4

'ರಾಜೀನಾಮೆ ಕೊಡಲ್ಲ: ಎಚ್‌ಡಿಕೆ ಕೊಟ್ಟರೇ?'

'ನಾನು ಹೆದರಲ್ಲ. ರಾಜೀನಾಮೆ ನೀಡಲ್ಲ. ನಿಮ್ಮ ಷಡ್ಯಂತ್ರವನ್ನು ಸೋಲಿಸುತ್ತೇನೆ' ಎಂದು ಬಿಜೆಪಿ–ಜೆಡಿಎಸ್ ನಾಯಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

'ನಾನು ರಾಜೀನಾಮೆ ಕೊಡುತ್ತೇನೆಂದು ಕಾದು ಕುಳಿತಿದ್ದೀರಾ? ಯಾವ ತಪ್ಪೂ ಮಾಡದ ನನ್ನನ್ನು ಷಡ್ಯಂತ್ರದಿಂದ ಇಳಿಸಲು ನೋಡುತ್ತಿದ್ದೀರಾ? ಇದು ಅಸಾಧ್ಯ. ನಾನು ಹೋರಾಟ ರಾಜಕಾರಣದಿಂದ ಬಂದವನು' ಎಂದರು.

'ನಾನ್ಯಾಕೆ ರಾಜೀನಾಮೆ ಕೊಡಬೇಕು. ಎಫ್‌ಐಆರ್ ಆಗಿ ಜಾಮೀನಿನ ಮೇಲೆ ಇರುವ ಎಚ್.ಡಿ. ಕುಮಾರಸ್ವಾಮಿ ರಾಜೀನಾಮೆ ಕೊಟ್ಟಿದ್ದಾರೆಯೇ' ಎಂದೂ ಪ್ರಶ್ನಿಸಿದರು.

ಮುಖ್ಯಮಂತ್ರಿ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿಯವರು ಪ್ರತಿಭಟನೆ ಹಮ್ಮಿಕೊಂಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಅವರನ್ನು ನಾವು ಎದುರಿಸುತ್ತೇವೆ' ಎಂದು ಕೋಪದಿಂದಲೇ ಹೇಳಿದರು.



'ಮುಡಾ ಪ್ರಕರಣದಲ್ಲಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 17ಎ ಅಡಿ ತನಿಖೆ ಮಾಡಲು ಆದೇಶ ನೀಡಿದ ಮಾತ್ರಕ್ಕೆ ನಾನು ತಪ್ಪು ಮಾಡಿದ್ದೇನೆ ಎಂದಲ್ಲ. ನಾನು ಯಾವುದೇ ತಪ್ಪು ಮಾಡಿಲ್ಲ' ಎಂದರು.

4ನೇ ಪುಟ ನೋಡಿ

ಪಕ್ಷ ಅಥವಾ ಸರ್ಕಾರ ಯಾರ ಒತ್ತಡಕ್ಕೂ ಮಣಿಯುವುದಿಲ್ಲ. ದೆಹಲಿಯಿಂದ ಹಳ್ಳಿಯವರೆಗೂ ಕಾಂಗ್ರೆಸ್, ಸಿದ್ದರಾಮಯ್ಯ ಅವರಿಗೆ ಬೆಂಬಲ ನೀಡಲಿದೆ. ಕಾನೂನು ಹೋರಾಟ ಮಾಡುತ್ತೇವೆ

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಸಿದ್ದರಾಮಯ್ಯ ರಾಜೀನಾಮೆ ಕೊಡಲಿ ಎಂದು ಒತ್ತಾಯ ಮಾಡುವುದಿಲ್ಲ. ಕಾನೂನಿನಲ್ಲಿ ರಕ್ಷಣೆ ಪಡೆಯಲು ಅವಕಾಶ ಇದೆ. ಕಾನೂನು ಬಾಹಿರ ಚಟುವಟಿಕೆ ಮಾಡಿದ್ದರೆ, ಕೋರ್ಟ್ ತೀರ್ಪು ಕೊಡುತ್ತದೆ

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ



40 ವರ್ಷಗಳ ರಾಜಕೀಯ ಜೀವನದಲ್ಲಿ ಒಂದೂ ಕಪ್ಪು ಚುಕ್ಕೆ ಇಲ್ಲ ಎಂದು ಎದೆ ತಟ್ಟಿಕೊಂಡು ಹೇಳುತ್ತಿದ್ದ ಸಿದ್ದರಾಮಯ್ಯ ಅವರು ಹೈಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ನೈತಿಕ ಹೊಣೆ ಹೊತ್ತು ತಕ್ಷಣವೇ ರಾಜೀನಾಮೆ ನೀಡಲಿ

ಆರ್.ಅಶೋಕ

ವಿಧಾನಸಭೆ ವಿರೋಧ ಪಕ್ಷದ ನಾಯಕ

ಮುಖ್ಯಮಂತ್ರಿ ಬೆಂಬಲಕ್ಕೆ ಸಚಿವರ ದಂಡು

ಹೈಕೋರ್ಟ್ ತೀರ್ಪು ಪ್ರಕಟಿಸುತ್ತಿದ್ದಂತೆ, ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ನಡೆಯುತ್ತಿದ್ದ ಕಾರ್ಯಕ್ರಮದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 'ಕಾವೇರಿ' ನಿವಾಸದ ಕಡೆಗೆ ತರಾತುರಿಯಲ್ಲಿ ತೆರಳಿದರು. ಅದೇ ವೇಳೆಗೆ ಸಚಿವ ಸಂಪುಟದ ಸಹೋದ್ಯೋಗಿಗಳು, ಕೆಲವು ಕಾಂಗ್ರೆಸ್ ಮುಖಂಡರೂ ಮುಖ್ಯಮಂತ್ರಿ ಭೇಟಿಗೆ ಅಲ್ಲಿಗೆ ದೌಡಾಯಿಸಿದರು.

ಹೈಕೋರ್ಟ್ ತೀರ್ಪು ಹಾಗೂ ಮುಂದಿನ ಹೆಜ್ಜೆಯ ಕುರಿತು ಸಚಿವರು ಮತ್ತು ಕಾನೂನು ತಜ್ಞರ ಜೊತೆ ಚರ್ಚೆ ನಡೆಸಿದರು. ದೂರವಾಣಿ ಮೂಲಕ ತಮ್ಮ ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ ಜೊತೆಗೂ ಸಮಾಲೋಚನೆ ನಡೆಸಿದರು. ಅಲ್ಲದೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರಿಗೂ ಕರೆ ಮಾಡಿದ ಸಿದ್ದರಾಮಯ್ಯ ಅವರ ಜೊತೆ ಚರ್ಚೆ ನಡೆಸಿದರು. ಸಚಿವರಾದ ಎಚ್.ಕೆ. ಪಾಟೀಲ, ಎಚ್.ಸಿ. ಮಹದೇವಪ್ಪ, ಕೆ.ಜೆ. ಜಾರ್ಜ್, ಕೃಷ್ಣ ಬೈರೇಗೌಡ, ಈಶ್ವರ ಖಂಡ್ರೆ, ಎನ್. ಚಲುವರಾಯಸ್ವಾಮಿ, ಬೈರತಿ ಸುರೇಶ್, ಶಾಸಕ ಆರ್.ವಿ. ದೇಶಪಾಂಡೆ ಇದ್ದರು.

ಕರ್ತವ್ಯಲೋಪ ಎಸಗಿದ 318 ಪಿಡಿಒ ಅಮಾನತು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ನಿಗದಿತ ಅವಧಿಯ ಒಳಗೆ ಶೌಚಾಲಯಗಳ ನಿರ್ಮಾಣಕ್ಕೆ ಅನುದಾನ ಬಳಕೆ ಮಾಡದ 318 ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು (ಪಿಡಿಒ) ಅಮಾನತು ಮಾಡಲು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸೂಚಿಸಿದೆ.

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ವೈಯಕ್ತಿಕ ಶೌಚಾಲಯ ನಿರ್ಮಾಣ ಮಾಡಲು 'ಸಿಟಿಜನ್ ಪೋರ್ಟಲ್' ಮೂಲಕ ಸಲ್ಲಿಕೆಯಾದ ಬೇಡಿಕೆ ಆಧಾರದಲ್ಲಿ ಪ್ರತಿ ಪಂಚಾಯಿತಿವಾರು ಪಟ್ಟಿ ಸಿದ್ಧಪಡಿಸಲಾಗಿತ್ತು. ಎಲ್ಲ ಪಂಚಾಯಿತಿಗಳಿಂದ ಸಲ್ಲಿಕೆಯಾಗಿದ್ದ 4.85 ಲಕ್ಷ ಶೌಚಾಲಯಗಳಲ್ಲಿ 3.60 ಲಕ್ಷ ಶೌಚಾಲಯಗಳಿಗೆ ಅನುದಾನ ಬಿಡುಗಡೆ ಮಾಡಲಾಗಿತ್ತು. ಬಿಡುಗಡೆಯಾದ ಅನುದಾನವನ್ನು ನಿಗದಿತ ಅವಧಿಯ ಒಳಗೆ ಖರ್ಚು ಮಾಡದ ಪಿಡಿಒಗಳನ್ನು ಅಮಾನತು ಮಾಡಲು ತಕ್ಷಣ ಕ್ರಮ ಕೈಗೊಳ್ಳುವಂತೆ 30 ಜಿಲ್ಲೆಗಳ ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ಇಲಾಖೆ ಪತ್ರ ಬರೆದಿದೆ.

₹12 ಸಾವಿರ ಸಹಾಯಧನ: ಗ್ರಾಮೀಣ ಪ್ರದೇಶದ ಮನೆಗಳಲ್ಲಿ ಶೌಚಾಲಯ ನಿರ್ಮಿಸಿಕೊಳ್ಳಲು ಅರ್ಜಿ ಸಲ್ಲಿಸುವ ಸಾಮಾನ್ಯ ವರ್ಗ, ಹಿಂದುಳಿದ ವರ್ಗಗಳು ಹಾಗೂ ಅಲ್ಪ ಸಂಖ್ಯಾತ ಸಮುದಾಯದ ಪ್ರತಿ ಕುಟುಂಬಕ್ಕೂ ಸ್ವಚ್ಛ ಭಾರತ್ ಯೋಜನೆಯಡಿ ಕೇಂದ್ರ ಸರ್ಕಾರ ₹7,200 ಹಾಗೂ ರಾಜ್ಯ ಸರ್ಕಾರ ₹4,800 ಸೇರಿ ₹12 ಸಾವಿರ ಸಹಾಯಧನ ನೀಡುತ್ತಿವೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಟುಂಬಗಳಿಗೆ ₹15 ಸಾವಿರ ನಿಗದಿ ಮಾಡಲಾಗಿದೆ.

ಬೇಡಿಕೆಯ ಆಧಾರದಲ್ಲಿ ಅನುದಾನ ಬಿಡುಗಡೆ ಮಾಡಲಾಗಿತ್ತು. ಅವುಗಳಲ್ಲಿ 318 ಪಂಚಾಯಿತಿಗಳು ಆಗಸ್ಟ್ ಅಂತ್ಯದವರೆಗೂ ಒಂದೂ ಶೌಚಾಲಯ ನಿರ್ಮಿಸದೇ, ಅನುದಾನವನ್ನು ಹಾಗೆಯೇ ಉಳಿಸಿಕೊಂಡಿದ್ದವು. ಈ ಕುರಿತು ಗ್ರಾಮೀಣಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಈಚೆಗೆ ನಡೆದ ಸಭೆಯಲ್ಲಿ ಚರ್ಚೆ ನಡೆದಿತ್ತು. ಅನುದಾನ ಬಳಕೆ ಮಾಡದ ಎಲ್ಲ ಪಿಡಿಒ ಹಾಗೂ ಜಿಲ್ಲಾ ಪಂಚಾಯಿತಿ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲು ಸಭೆಯಲ್ಲಿ ಸೂಚಿಸಲಾಗಿತ್ತು.

₹6.01 ಕೋಟಿ
ಶೌಚಾಲಯ ನಿರ್ಮಾಣಕ್ಕಾಗಿ ಮೀಸಲಿಡಲಾಗಿದ್ದ ಅನುದಾನದಲ್ಲಿ ಬಳಕೆಯಾಗದ ಮೊತ್ತ

ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಆದರೆ, ತಾಂತ್ರಿಕ ಸಮಸ್ಯೆಗಳಿಂದ ಖಜಾನೆ–2 ಮೂಲಕ ಫಲಾನುಭವಿಗಳಿಗೆ ಹಣ ಪಾವತಿಸಲು ಅಡಚಣೆಯಾಗಿದೆ

ಎಚ್.ಆರ್. ರಾಜೇಶ್, ರಾಜ್ಯ ಪರಿಷತ್ ಸದಸ್ಯ, ಸರ್ಕಾರಿ ನೌಕರರ ಸಂಘ

ಹೆಸರಿಗಷ್ಟೇ ಬಯಲು ಬಹಿರ್ದೆಸೆ ಮುಕ್ತ!

ರಾಜ್ಯವನ್ನು 'ಬಯಲು ಬಹಿರ್ದೆಸೆ ಮುಕ್ತ ರಾಜ್ಯ'ವೆಂದು ಘೋಷಿಸಿ ಆರು ವರ್ಷ ಕಳೆದರೂ ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳಿಗೆ ಸಾಕಷ್ಟು ಬೇಡಿಕೆ ಇದೆ.

ರಾಜ್ಯದಲ್ಲಿ 2014ರಿಂದ ಸ್ವಚ್ಛ ಭಾರತ್ ಮಿಷನ್ ಯೋಜನೆ–1 ಜಾರಿಗೊಳಿಸಲಾಯಿತು. 2012ರಲ್ಲಿ ಶೌಚಾಲಯಗಳ ಸಮೀಕ್ಷೆ ನಡೆಸಿದಾಗ ಇದ್ದ 70.32 ಲಕ್ಷ ಕುಟುಂಬಗಳಲ್ಲಿ ಶೇ 65ರಷ್ಟು ಕುಟುಂಬಗಳು ವೈಯಕ್ತಿಕ ಶೌಚಾಲಯವನ್ನೇ ಹೊಂದಿರಲಿಲ್ಲ. ಉದ್ಯೋಗ ಖಾತ್ರಿ ಯೋಜನೆಯನ್ನೂ ಬಳಸಿಕೊಂಡು ಸಮರೋಪಾದಿಯಲ್ಲಿ ಶೌಚಾಲಯಗಳನ್ನು ನಿರ್ಮಿಸಲಾಯಿತು. 2018ರಲ್ಲಿ ಕರ್ನಾಟಕವನ್ನು 'ಬಯಲು ಬಹಿರ್ದೆಸೆ ಮುಕ್ತ ರಾಜ್ಯ'ವೆಂದು ಘೋಷಿಸಲಾಗಿತ್ತು.

ಅಬಕಾರಿ ಕಚೇರಿಯಲ್ಲಿ 'ಗಾಂಜಾ' ಸಿಗರೇಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 62 ಅಬಕಾರಿ ವಿಭಾಗ ಕಚೇರಿಗಳ ಮೇಲೆ ಲೋಕಾಯುಕ್ತವು ಮಂಗಳವಾರ ಏಕಕಾಲದಲ್ಲಿ ದಾಳಿ ನಡೆಸಿದೆ. ಈ ವೇಳೆ ಹಲವು ಕಚೇರಿಗಳಲ್ಲಿ ಗಾಂಜಾ, ಗಾಂಜಾ ತುಂಬಿದ ಸಿಗರೇಟ್ ಮತ್ತು ದಾಖಲೆ ಇಲ್ಲದ ಮದ್ಯದ ಬಾಟಲಿಗಳು ಪತ್ತೆಯಾಗಿವೆ.

ಮದ್ಯದಂಗಡಿಗಳ ಪರವಾನಗಿ ಅರ್ಜಿ, ಪರವಾನಗಿ ನವೀಕರಣ ಅರ್ಜಿ, ಸ್ಥಳಾಂತರಕ್ಕೆ ಸಲ್ಲಿಸಿದ ಅರ್ಜಿಗಳು ವಿಲೇವಾರಿ ಆಗುವುದೇ ಇಲ್ಲ ಎಂದು 132 ದೂರುಗಳು ಬಂದಿದ್ದವು. ಈ ಸಂಬಂಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಪರಿಶೀಲನೆಯ ಭಾಗವಾಗಿ 62 ಕಚೇರಿಗಳಲ್ಲಿ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ದಾಳಿ ನಡೆಸಲಾಗಿದೆ ಎಂದು ಲೋಕಾಯುಕ್ತವು ಮಾಹಿತಿ ನೀಡಿದೆ.

ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಮತ್ತು ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದಲ್ಲಿ ಯಶವಂತಪುರ ಮತ್ತು ಬ್ಯಾಟರಾಯನಪುರ ಅಬಕಾರಿ ಕಚೇರಿಗಳಲ್ಲಿ ದಾಳಿ ನಡೆಸಲಾಗಿದೆ. 'ಎರಡೂ ಕಚೇರಿಗಳಲ್ಲಿ, ಅಧಿಕಾರಿಗಳ ಕೊಠಡಿಗಳಲ್ಲಿ ದಾಖಲೆ ಇಲ್ಲದ ಮದ್ಯದ ಬಾಟಲಿಗಳು ಮತ್ತು ಗಾಂಜಾ ಪತ್ತೆಯಾಗಿದೆ. ಕೆಲವು ಅಧಿಕಾರಿಗಳ ಕೊಠಡಿಗಳಲ್ಲಿ, ಡ್ರಾಯರ್‌ಗಳಲ್ಲಿ ಗಾಂಜಾ ತುಂಬಿಸಿದ್ದ ಸಿಗರೇಟ್‌ಗಳು ಪತ್ತೆಯಾಗಿವೆ' ಎಂದು ನ್ಯಾಯಮೂರ್ತಿ ಬಿ.ವೀರಪ್ಪ ಮಾಹಿತಿ ನೀಡಿದರು.

3Aನೇ ಪುಟ ನೋಡಿ

ADVERTORIAL

ಮಂಡಿನೋವು ಸರ್ಜರಿ ಇಲ್ಲದೇ ಉಪಶಮನ

10,000ಕ್ಕೂ ಹೆಚ್ಚು ಮಂದಿಗೆ ಅಲಿವಿಯೇಟ್‌ನಿಂದ ನೋವು ಮುಕ್ತ ಜೀವನ

✔ ಕೇವಲ 30-60 ನಿಮಿಷದ ವಿಧಾನ ✔ ಆಸ್ಪತ್ರೆ ವಾಸವಿಲ್ಲ ✔ ವೇಗವಾದ ಚೇತರಿಕೆ

ಮೊಣಕಾಲಿನ ಅಸ್ಥಿಸಂಧಿವಾತದ ನೋವನ್ನು ಕೇವಲ ಔಷಧಿಗಳಿಂದ ಮಾತ್ರವೇ ಪರಿಣಾಮಕಾರಿಯಾಗಿ ನಿರ್ವಹಿಸುವುದು ಸಾಧ್ಯವೇ ಇಲ್ಲ. ಸಂಧಿವಾತವು ತೀವ್ರವಾಗಿರುವವರಿಗೆ ಶಸ್ತ್ರಚಿಕಿತ್ಸೆಯ ಅಗತ್ಯವಿದ್ದರೂ ಸಹ, ಬಹುಪಾಲು ಜನರು ಶಸ್ತ್ರಚಿಕಿತ್ಸೆಯಿಲ್ಲದ ನೋವಿನಿಂದ ಮುಕ್ತರಾಗಬಹುದು.

ರೇಡಿಯೊ ಫ್ರೀಕ್ವೆನ್ಸಿ ಅಬ್ಲೇಶನ್ (ಆರ್.ಎಫ್.ಎ), ಸರ್ಜರಿಯೇ ಇಲ್ಲದೇ ನೋವನ್ನು ಉಪಶಮಿಸುವ ಆಧುನಿಕ ಚಿಕಿತ್ಸಾ ವಿಧಾನಗಳಲ್ಲಿ ಒಂದಾಗಿದೆ.

ಈ ವಿಧಾನವು ಪೀಡಿತ ಪ್ರದೇಶದಲ್ಲಿನ ನೋವಿಗೆ ಕಾರಣವಾಗುವ ನರಗಳನ್ನು ಗುರುತಿಸಿ, ಅವು ಮೆದುಳಿಗೆ ನೋವಿನ ಸಂದೇಶ ನೀಡದಂತೆ ತಡೆಯುವ ಕೆಲಸ ಮಾಡುತ್ತದೆ. ಇದರಿಂದಾಗಿ ನೋವು ಹಂತ ಹಂತವಾಗಿ ಕಡಿಮೆಯಾಗುತ್ತದೆ.

ಮೊಣಕಾಲು ನೋವಿನ ಪ್ರಚೋದಕ ಸ್ಥಳವನ್ನು ಕಂಡುಹಿಡಿಯುತ್ತಿರುವ ವೈದ್ಯರು

RADIO FREQUENCY ABLATION FDA APPROVED

ಈ ಪ್ರಕ್ರಿಯೆಯು ಕನಿಷ್ಠ ಛೇದನವನ್ನು ಒಳಗೊಂಡಿರುವುದು ಮಾತ್ರವಲ್ಲದೇ, ಅತೀ ಕಡಿಮೆ ಚೇತರಿಕೆಯ ಸಮಯವನ್ನು ತೆಗೆದುಕೊಳ್ಳುತ್ತದೆ. ಹೆಚ್ಚಿನ ರೋಗಿಗಳು ಅದೇ ದಿನ ಮನೆಗೆ ತೆರಳಿ, ಮರುದಿನ ದಿಂದಲೇ ಸಾಮಾನ್ಯ ಚಟುವಟಿಕೆಗಳನ್ನು ಶುರು ಮಾಡಬಹುದು.

ಆರ್‌ಎಫ್‌ಎ ವಿಧಾನದ ಹಂತಗಳು :

1. **ತಯಾರಿ:** ವೈದ್ಯರು ಸ್ಥಳೀಯ ಅರಿವಳಿಕೆಯನ್ನು ನೋವು ಇರುವ ಜಾಗಕ್ಕೆ ಚುಚ್ಚಿ, ಮಂಡಿಯ ಪ್ರದೇಶ ನಿಷ್ಕ್ರಿಯಗೊಳಿಸುತ್ತಾರೆ.
2. **ಚಿತ್ರಣ:** ನೋವು ಉಂಟುಮಾಡುವ ನರಗಳನ್ನು ಪತ್ತೆಹಚ್ಚಲು ವೈದ್ಯರು ಎಕ್ಸ್–ರೇ ಅಥವಾ ಅಲ್ಟ್ರಾಸೌಂಡ್ ಅನ್ನು ಬಳಸುತ್ತಾರೆ.
3. **ಪರೀಕ್ಷೆ:** ಸರಿಯಾದ ನರವನ್ನು ಖಚಿತಪಡಿಸಲು ಸೂಜಿಯ ಮೂಲಕ ವಿದ್ಯುತ್ ಪ್ರವಾಹವನ್ನು ಕಳುಹಿಸಲಾಗುತ್ತದೆ, ಇದು ಜುಮ್ಮೆನಿಸುವಿಕೆ ಸಂವೇದನೆ ಉಂಟುಮಾಡುತ್ತದೆ.
4. **ತಾಪನ:** ರೇಡಿಯೋ ಆವರ್ತನದ ಮೂಲಕ ಉತ್ಪತ್ತಿಯಾಗುವ ಶಾಖವು ಪೀಡಿತ ಪ್ರದೇಶದ ನರಗಳಿಗೆ ನೀಡಲಾಗುತ್ತದೆ, ಇದು ನರಗಳಲ್ಲಿ ಸಣ್ಣ ಗಾಯವನ್ನು ಉಂಟುಮಾಡಿ ನೋವಿನ ಸಂಕೇತಗಳನ್ನು ಮೆದುಳಿಗೆ ಕಳುಹಿಸ–ದಂತೆ ತಡೆಯುತ್ತದೆ.

5. **ಪ್ರಕ್ರಿಯೆಯ ನಂತರ:** ಸಣ್ಣ ಬ್ಯಾಂಡೇಜ್ ಅನ್ನು ಅನ್ವಯಿಸಲಾಗುತ್ತದೆ. ನೀವು ಸ್ವಲ್ಪ ವಿಶ್ರಾಂತಿ ಪಡೆದು ಮನೆಗೆ ತೆರಳಬಹುದು. ನಂತರ ನೋವು ಕ್ರಮ ಕ್ರಮವಾಗಿ ಉಪಶಮನಗೊಳ್ಳುತ್ತದೆ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಕೂಡ ಅಲಿವಿಯೇಟ್‌ನಲ್ಲಿ ಸರ್ಜರಿ ಇಲ್ಲದೇ ಚಿಕಿತ್ಸೆ ಲಭ್ಯ

ನೋವು ಮುಕ್ತ ಜೀವನಕ್ಕೆ ಇಂದೇ ಸಂಪರ್ಕಿಸಿ
81475 50855
080 23614888

ಅಲಿವಿಯೇಟ್ ಪೇನ್ ಮ್ಯಾನೇಜ್‌ಮೆಂಟ್ ಕ್ಲಿನಿಕ್ಸ್
ಪೀಣ್ಯಾ ದಾಸರಹಳ್ಳಿ Google Reviews 4.8 ★★★★★

ಇವರ ಕ್ಲಿನಿಕ್ಕುಗಳು ಬೆಂಗಳೂರಿನಲ್ಲಿ ಇಲ್ಲಿವೆ:
ಪೀಣ್ಯಾ ದಾಸರಹಳ್ಳಿ | ಸದಾಶಿವನಗರ | ವೈಟ್‌ಫೀಲ್ಡ್ | ಜಯನಗರ | ಇಂದಿರಾನಗರ

ಅ.5ರವರೆಗೆ ಎಸ್‌ಐಟಿ ವಶಕ್ಕೆ ಶಾಸಕ ಮುನಿರತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಹೆಚ್ಚಿನ ವಿಚಾರಣೆಗಾಗಿ ಅಕ್ಟೋಬರ್ 5ರವರೆಗೆ ಸಿಐಡಿಯ ವಿಶೇಷ ತನಿಖಾ ದಳದ (ಎಸ್‌ಐಟಿ) ವಶಕ್ಕೆ ನೀಡಿ 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯ ಮಂಗಳವಾರ ಆದೇಶಿಸಿದೆ.

ಆದೇಶದ ಬೆನ್ನಲ್ಲೇ ಮುನಿರತ್ನ ಅವರನ್ನು ಎಸ್‌ಐಟಿ ಕಸ್ಟಡಿಗೆ ಪಡೆದುಕೊಂಡಿತು.

ರಾಮನಗರ ಜಿಲ್ಲೆಯ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಅತ್ಯಾಚಾರ ಪ್ರಕರಣದ ಸಂಬಂಧ ಮುನಿರತ್ನ ಅವರು ಬಂಧನಕ್ಕೆ ಒಳಗಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದರು.

5ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

INSIGHTSIAS
SIMPLIFYING IAS EXAM PREPARATION

INTEGRATED FOUNDATION PROGRAM FOR UPSC CSE:

OGP 2025

OFFLINE & ONLINE GUIDANCE PROGRAM 2025

Full-fledged Integrated Classroom Program for freshers (GS+CSAT+ESSAY)

FEATURES
- Daily & Weekly revision tests for Prelims & Mains and Full-length tests after the completion of every subject
- Student-centric, student-friendly learning environment with focus on outcomes
- Integrated coverage of Prelims & Mains syllabus
- ETHICS, ESSAY & CSAT Classes are integrated & given prominence
- Free access to All India Prelims Test Series



BY VINAY SIR
Founder & Director, InsightsIAS

OGP EXCELLENCE
DIYA DASGUPTA AIR 207, CSE 2023 | SURYABHAN YADAV AIR 27, CSE 2022 | PUSAPATI SAHITYA AIR 24, CSE 2021 | AVINASH V AIR 31, CSE 2021 | VAIBHAV RAWAT AIR 25, CSE 2020 | AKSHAY SINHA AIR 77, CSE 2020 | JEYDEV AIR 5, CSE 2019

BATCH - 9 (Bengaluru) Starts on 30th Sept. 2024 & BATCH - 10 (Bengaluru) Starts on 30th Oct. 2024

Bengaluru Office:
Nanda Ashirwad Complex, 3rd floor, Above Village Hyper Market, Chandra layout, Bengaluru - 560072.

BATCH - 1 (Davanagere) Starts on 30th Sept. 2024

FOUNDATION COURSE FOR UPSC CSE EXAM
DAVANAGERE CENTER:
(OFFLINE) LIVE STREAMING + 1-TIME RECORDED ACCESS
FEES: 60,000/- incl. taxes

Davanagere Office:
#1092 Jadhav Complex, Ring Road, Nijilingappa Layout, Opp to EDU ASIA School Davangere, Karnataka - 577004

Contact: 08069405205
Mail: support@insightsias.com
www.insightsonindia.com
instacourses.insightsonindia.com

Branches: Bengaluru | Delhi | Lucknow | Hyderabad | Srinagar | Dharwad | Davanagere

ಮಕ್ಕಳ ಕ್ಯಾನ್ಸರ್ ಕುರಿತು ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಕ್ಯಾನ್ಸರ್ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಸೆಪ್ಟೆಂಬರ್ ತಿಂಗಳಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ತಿಳಿಸಿದೆ.

ನಗರದ ಮೆಟ್ರೊ ನಿಲ್ದಾಣ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಚಿತ್ರ ರಚಿಸಿ ಮಕ್ಕಳ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಕ್ಯಾನ್ಸರ್‌ಗೆ ಸಂಬಂಧಿಸಿದ ಸವಾಲುಗಳು ಮತ್ತು ಕಾಯಿಲೆಯನ್ನು ಬೇಗ ಪತ್ತೆಹಚ್ಚಿ ಚಿಕಿತ್ಸೆ ನೀಡುವುದು ಹೇಗೆ ಎಂಬುದರ ಕುರಿತು ಜನರಿಗೆ ಅರಿವು ಮೂಡಿಸುವ ಕಾರ್ಯ ನಡೆಯುತ್ತಿದೆ.

ಪ್ರತಿ ವರ್ಷ ವಿಶ್ವದಾದ್ಯಂತ ಸುಮಾರು 5 ಲಕ್ಷ ಮಕ್ಕಳು ಹಾಗೂ ದೇಶದಲ್ಲಿ 50 ಸಾವಿರ ಮಕ್ಕಳು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಕರ್ನಾಟಕದಲ್ಲಿ ಸುಮಾರು 3 ಸಾವಿರ ಪ್ರಕರಣಗಳು ದಾಖಲಾಗಿದ್ದು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಪ್ರತಿ ವರ್ಷ ಸುಮಾರು 800 ಮಕ್ಕಳು ಕ್ಯಾನ್ಸರ್ ಚಿಕಿತ್ಸೆಗಾಗಿ ದಾಖಲಾಗುತ್ತಿದ್ದಾರೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಚಿಕಿತ್ಸೆ ಹಾಗೂ ಆರೈಕೆಗೆ ಸಂಸ್ಥೆಯು ಪ್ರತ್ಯೇಕ ಕಪೂರ್ ಬ್ಲಾಕ್ ಹೊಂದಿದೆ. ಮಕ್ಕಳ ವಿಭಾಗದಲ್ಲಿ ನಿತ್ಯ 4ರಿಂದ 5 ಮಂದಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಶೇ 80ರಿಂದ 85ರಷ್ಟು ಮಕ್ಕಳು ಈ ರೋಗದಿಂದ ಗುಣಮುಖರಾಗುತ್ತಿದ್ದಾರೆ. ದೇಶದಲ್ಲೂ ಗುಣಮುಖರಾಗುವವರ ಸಂಖ್ಯೆ ಹೆಚ್ಚುತ್ತಿದೆ. ಇನ್ನೂ ಉತ್ತಮ ಫಲಿತಾಂಶ ಬರಬೇಕೆಂದರೆ, ರೋಗವನ್ನು ಆರಂಭದಲ್ಲಿಯೇ ಪತ್ತೆ ಮಾಡಿ, ಸುಲಭ ಮಾರ್ಗದಲ್ಲಿ ಚಿಕಿತ್ಸೆಯನ್ನು ಕೊಡಿಸಬೇಕು ಎಂದು ಸಲಹೆ ನೀಡಿದೆ.

ಮಕ್ಕಳಲ್ಲಿ ಕಂಡುಬರುವ ಕ್ಯಾನ್ಸರ್ ಲಕ್ಷಣಗಳು: ವಾರದಿಂದ ಕಾಡುವ ಜ್ವರ, ಎರಡು ವಾರಕ್ಕೂ ಹೆಚ್ಚು ಕುತ್ತಿಗೆ ಭಾಗದಲ್ಲಿ ಊತ ಇರುವುದು ಹಾಗೂ ಹೊಟ್ಟೆ ಅಥವಾ ದೇಹದ ಯಾವುದೇ ಭಾಗದಲ್ಲಿ ಗಡ್ಡೆ ಅಥವಾ ಊತ ಕಂಡು ಬರುವುದು, ಪದೇ ಪದೇ ವಾಂತಿ ಮತ್ತು ತಲೆ ನೋವು.

ರಾಜ್ಯ ಸರ್ಕಾರದ ಅಧಿನಿಯಮಕ್ಕೆ ರಾಜ್ಯಪಾಲರ ಒಪ್ಪಿಗೆ

ಸಿನಿ ಕಾರ್ಯಕರ್ತರಿಗೆ ‘ಅಭಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಿನಿಮಾ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಕಲ್ಪಿಸುವ ‘ಕರ್ನಾಟಕ ಸಿನಿಮಾ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ಅಧಿನಿಯಮ- 2024’ಕ್ಕೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ.

ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರಿಗೆ ಸಾಮಾಜಿಕ ಭದ್ರತೆ ಒದಗಿಸುವುದಕ್ಕಾಗಿ ಕ್ಷೇಮಾಭಿವೃದ್ಧಿ ಮಂಡಳಿ ರಚಿಸಲಾಗುವುದು. ಇವರಿಗೆ ನೆರವಾಗುವ ಉದ್ದೇಶದಿಂದ ಸಿನಿಮಾ ಟಿಕೆಟ್‌ಗಳು, ವಂತಿಗೆ ಶುಲ್ಕಗಳು ಮತ್ತು ಸಂಬಂಧಿತ ಸಂಸ್ಥೆಗಳಿಂದ ಸೃಜಿಸಲಾದ ಎಲ್ಲ ಆದಾಯದ ಮೇಲೆ

ಶೇ 2 ಮೀರದಂತೆ ಉಪಕರ ವಿಧಿಸಲು ಅವಕಾಶ ಕಲ್ಪಿಸಲಾಗಿದೆ.

ಸಂಬಂಧಿತ ಸಂಸ್ಥೆಗಳು ಎಂದರೆ, ಏಕಪರದೆ ಚಿತ್ರಮಂದಿರಗಳು, ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳು, ಚಿತ್ರಮಂದಿರಯೇತರ (ಒಟಿಟಿ), ದೂರದರ್ಶನ ವಾಹಿನಿಗಳು ಮತ್ತು ಸರ್ಕಾರವು ಕಾಲ ಕಾಲಕ್ಕೆ ಅಧಿಸೂಚಿಸುವ ಯಾವುದೇ ಸಂಸ್ಥೆಗಳು. ಇವುಗಳಿಂದ ಉಪಕರ ಸಂಗ್ರಹಿಸಲಾಗುವುದು ಎಂದು ಮಸೂದೆಯಲ್ಲಿ ವಿವರಿಸಲಾಗಿದೆ.

ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರು ಎಂದರೆ, ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ಕಲಾವಿದ (ನಟ, ಸಂಗೀತಗಾರ ಅಥವಾ ನೃತ್ಯಪಟು ಒಳಗೊಂಡ) ಅಥವಾ ಯಾವುದೇ ಕೆಲಸ, ಕೌಶಲಯುಕ್ತ, ಕೌಶಲರಹಿತ, ಭೌತಿಕ, ಮೇಲ್ವಿಚಾರಣೆ, ತಾಂತ್ರಿಕ, ಕಲಾತ್ಮಕ ಅಥವಾ ಇತರ ಕಾರ್ಯಗಳಲ್ಲಿ ತೊಡಗಿಕೊಂಡ ವ್ಯಕ್ತಿ ಮತ್ತು ಅವರ ಕುಟುಂಬದವರಿಗೆ (ಪತ್ನಿ ಅಥವಾ ಪತಿ, ಅಪ್ರಾಪ್ತ ಗಂಡು ಮಕ್ಕಳು, ಅವಿವಾಹಿತ ಹೆಣ್ಣು ಮಕ್ಕಳು, ತಂದೆ, ತಾಯಿ, ಸಂಪೂರ್ಣ ಅವಲಂಬಿತ ಮಾನಸಿಕ ಅಸ್ವಸ್ಥ ಅಥವಾ ಅಂಗವಿಕಲರು) ಸಾಮಾಜಿಕ ಭದ್ರತೆ ನೀಡಲಾಗುವುದು. ಇದಕ್ಕಾಗಿ ಕ್ಷೇಮಾಭಿವೃದ್ಧಿ ನಿಧಿಯನ್ನು ಸ್ಥಾಪಿಸಲಾಗುವುದು.

ಈ ಯೋಜನೆಯಡಿ ನೋಂದಾಯಿಸಿಕೊಳ್ಳುವ ಅಸಂಘಟಿತ ಕಾರ್ಯಕರ್ತರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳಾದ ಜೀವ ವಿಮೆ, ಅಪಘಾತ ಪರಿಹಾರ, ಹೆರಿಗೆ ಭತ್ಯೆ, ಶವಸಂಸ್ಕಾರ ವೆಚ್ಚ ನೀಡಲಾಗುವುದು. ಅಲ್ಲದೇ, ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಧನ ಸಹಾಯ ನೀಡಲು ಉದ್ದೇಶಿಸಲಾಗಿದೆ. ಈ ಕಾಯ್ದೆ ಜಾರಿ ಬಂದ ಬಳಿಕ ಸಿನಿಮಾ ಟಿಕೆಟ್ ದರ ಹೆಚ್ಚಾಗಲಿದೆ.

ಮುಖ್ಯಾಂಶಗಳು

- ಶೇ 2ರಷ್ಟು ಉಪಕರಣ ಸಂಗ್ರಹಕ್ಕೆ ಅವಕಾಶ
- ಸ್ಥಾಪನೆಯಾಗಲಿದೆ ಕ್ಷೇಮಾಭಿವೃದ್ಧಿ ನಿಧಿ
- ಅಸಂಘಟಿತ ಕಾರ್ಯಕರ್ತರಿಗೆ ಹಲವು ಸೌಲಭ್ಯ

ಕ್ರಿಸ್ತು ಜಯಂತಿ: ‘ಕನ್ನಡ ಹಬ್ಬ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಪರಂಪರೆಯಲ್ಲಿ ದೇಶದ ಸಂವಿಧಾನದ ಮಹತ್ತರ ಆಶಯಗಳನ್ನು ಕಾಣಬಹುದು ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಅಭಿಪ್ರಾಯಪಟ್ಟರು.

ನಗರದ ಕ್ರಿಸ್ತು ಜಯಂತಿ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ ‘ಕನ್ನಡ ಹಬ್ಬ’ ಸಮಾರಂಭದಲ್ಲಿ ಮಾತನಾಡಿದರು.

ಅಂಬೇಡ್ಕರ್ ಅವರು ಭಾರತ ಸಂವಿಧಾನದ ಮೂಲಕ ನೀಡಿರುವ ಸಮಾನತೆಯ ಆಶಯವುಳ್ಳ ಅನೇಕ ಸಂಗತಿಗಳನ್ನು ಕನ್ನಡ ಪರಂಪರೆಯು ಕಟ್ಟಿಕೊಟ್ಟಿದೆ. ಯಾವ ಜಾತಿಯಲ್ಲಿ ಹುಟ್ಟಿದರೇನು, ಆದಿಕವಿ ಪಂಪನ ನುಡಿಯಂತೆ ಮಾನವೀಯ ಸದ್ಗುಣಗಳನ್ನು ಬೆಳೆಸಿಕೊಳ್ಳುವ ಮೂಲಕ ಮನುಷ್ಯ ಜಾತಿ ಆಗಬೇಕಿರುವುದು ಮುಖ್ಯ. ನಿಜವಾದ ಸಿರಿ ಸಂಪತ್ತು ಯಾವುದೆಂದರೆ, ಕವಿರಾಜಮಾರ್ಗದಲ್ಲಿ ತಿಳಿಸಿದಂತೆ ನೆರೆಹೊರೆಯವರ ಧರ್ಮ ಹಾಗೂ ವಿಚಾರಗಳನ್ನು ಸಹಿಸುವುದೇ ಆಗಿದೆ ಎಂದು ಹೇಳಿದರು.

ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಕ್ರೈಸ್ತ ಮಿಷನರಿಗಳ ಕೊಡುಗೆ ಪ್ರಾತಃಸ್ಮರಣೀಯವಾದುದು. ಭಾರತ ಕಂಡ ಅಪ್ರತಿಮ ಪ್ರಗತಿಪರ ರಾಜರಾದ ಶಾಹು ಮಹಾರಾಜ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಶಿಕ್ಷಕರಾಗಿ ಮಾರ್ಗದರ್ಶನ ನೀಡಿದ್ದು ಫ್ರೇಜರ್ ಎಂಬ ಕ್ರೈಸ್ತಮೂಲದ ಮೇಷ್ಟ್ರು ಎಂದರು.

ಕಾಲೇಜಿನ ಮಾನವ ಸಂಪನ್ಮೂಲ ಕೇಂದ್ರದ ನಿರ್ದೇಶಕ ಫಾದರ್ ಜೋಷಿ ಮ್ಯಾಥ್ಯು ಅಧ್ಯಕ್ಷತೆ ವಹಿಸಿದ್ದರು. ಮಾನವಿಕ ನಿಕಾಯ ಡೀನ್ ಎ.ವಿ. ಗೋಪಕುಮಾರ್, ಕನ್ನಡ ವಿಭಾಗದ ಮುಖ್ಯಸ್ಥ ಕ್ಯಾಪ್ಟನ್ ಬಿ.ಎಸ್. ಸರ್ವೇಶ್, ಕನ್ನಡ ಸಹಾಯಕ ಪ್ರಾಧ್ಯಾಪಕ ಎನ್. ಚಂದ್ರಶೇಖರ್, ಸಹಾಯಕ ಪ್ರಾಧ್ಯಾಪಕರಾದ ಸೈಯದ್ ಮುಯಿನ್, ಎ.ಕೆ.ರವಿಶಂಕರ್, ಎಂ.ಭೈರಪ್ಪ, ಕೆ.ಪ್ರೇಮಕುಮಾರ್, ಎಚ್.ಜೆ.ಕಿರಣಕುಮಾರ್, ವಿದ್ಯಾರ್ಥಿ ಪ್ರತಿನಿಧಿಗಳಾದ ಗ್ರೀಷ್ಮ ಹಾಗೂ ಪಿ. ಮಧು ಪಾಲ್ಗೊಂಡಿದ್ದರು.

ಕನ್ನಡ ಹಬ್ಬದ ಪ್ರಯುಕ್ತ ಆಯೋಜಿಸಿದ್ದ ಹೆಜ್ಜೆನಾದ-ನೃತ್ಯ, ಸವಿಗಾನ-ಗಾಯನ, ಜ್ಞಾನಯಾನ-ರಸಪ್ರಶ್ನೆ, ನುಡಿರಂಗ-ಚರ್ಚಾ ಸ್ಪರ್ಧೆ, ಅಭಿವ್ಯಕ್ತಿ-ಕಿರುನಾಟಕ, ಅಂತರಂಗ-ಸೃಜನಶೀಲ ಬರಹ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ನಗರದ ಕ್ರಿಸ್ತು ಜಯಂತಿ ಕಾಲೇಜಿನಲ್ಲಿ ಆಯೋಜಿಸಿದ್ದ ‘ಕನ್ನಡ ಹಬ್ಬ’ ಸಮಾರಂಭವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಉದ್ಘಾಟಿಸಿದರು. ಫಾದರ್ ಜೋಷಿ ಮ್ಯಾಥ್ಯು, ಮಾನವಿಕ ನಿಕಾಯ ಡೀನ್ ಎ.ವಿ.ಗೋಪಕುಮಾರ್, ಕನ್ನಡ ವಿಭಾಗದ ಮುಖ್ಯಸ್ಥ ಕ್ಯಾಪ್ಟನ್ ಬಿ.ಎಸ್. ಸರ್ವೇಶ್, ಕನ್ನಡ ಸಹಾಯಕ ಪ್ರಾಧ್ಯಾಪಕ ಎನ್. ಚಂದ್ರಶೇಖರ್ ಇದ್ದರು

ಶೋಷಿತ ಸಮುದಾಯಗಳ ಪ್ರತಿಭಟನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ ಅವರ ರಾಜಕೀಯ ಬದುಕಿಗೆ ಕಪ್ಪು ಚುಕ್ಕೆ ಇಟ್ಟು, ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸಲು ಬಿಜೆಪಿ– ಜೆಡಿಎಸ್ ನಾಯಕರು ಯತ್ನಿಸುತ್ತಿದ್ದಾರೆ’ ಎಂದು ಆರೋಪಿಸಿ ರಾಜ್ಯದಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಶೋಷಿತ ಸಮುದಾಯಗಳ ಮಹಾ ಒಕ್ಕೂಟವು ಪ್ರತಿಭಟನೆ ಹಮ್ಮಿಕೊಂಡಿದೆ.

‘ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ (ಸೆಪ್ಟೆಂಬರ್ 25) ಬೆಳಿಗ್ಗೆ 11 ಗಂಟೆಗೆ ಪ್ರತಿಭಟನೆ ಆಯೋಜಿಸಲಾಗಿದೆ’ ಎಂದು ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ ತಿಳಿಸಿದ್ದಾರೆ.

‘ಮುಖ್ಯಮಂತ್ರಿ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 17–ಎ ಅಡಿ ತನಿಖೆಗೆ ಅನುಮತಿ ನೀಡಿರುವುದನ್ನು ಅನುಮೋದಿಸಿ ಹೈಕೋರ್ಟ್ ನೀಡಿರುವ ತೀರ್ಪು ಕೂಡಾ ರದ್ದು ಆಗುವ ವಿಶ್ವಾಸವಿದೆ. ಈ ರಾಜಕೀಯ ಹೋರಾಟದಲ್ಲಿ ರಾಜ್ಯದ ಶೋಷಿತ, ಅಹಿಂದ ಸಮುದಾಯಗಳು ಸಿದ್ದರಾಮಯ್ಯ ಜೊತೆ ನಿಲ್ಲಲಿವೆ. ಕಾನೂನು ಮತ್ತು ಸಂವಿಧಾನದಲ್ಲಿ ನಮಗೆ ನಂಬಿಕೆ ಇದೆ’ ಎಂದೂ ಅವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

ತಮಟೆ ಬಾರಿಸಲು ನಿರಾಕರಣೆ: ದಲಿತ ಕುಟುಂಬಕ್ಕೆ ಬಹಿಷ್ಕಾರ

ಹೈದರಾಬಾದ್ (ಪಿಟಿಐ): ಅಂತ್ಯಸಂಸ್ಕಾರದಲ್ಲಿ ತಮಟೆ ಬಾರಿಸಲಿಲ್ಲ ಎನ್ನುವ ಕಾರಣಕ್ಕೆ ಮಾದಿಗ ಸಮುದಾಯದ ಸ್ನಾತಕೋತ್ತರ ಪದವೀಧರರಾದ ಸಹೋದರರು ಹಾಗೂ ಅವರ ಕುಟುಂಬವನ್ನು ತೆಲಂಗಾಣದ ಮೇದಕ್ ಜಿಲ್ಲೆಯ ಗ್ರಾಮವೊಂದರಲ್ಲಿ ಬಹಿಷ್ಕರಿಸಲಾಗಿದೆ .

ಅಂತ್ಯಸಂಸ್ಕಾರದ ವೇಳೆ ತಮಟೆ ಬಾರಿಸುವುದು ಮಾದಿಗ ಸಮುದಾಯದ ಕುಲಕಸುಬು. ತಮಟೆ ಬಾರಿಸುವಂತೆ ಗ್ರಾಮಸ್ಥರೂ ಸೇರಿದಂತೆ ಮಾದಿಕ ಸಮುದಾಯದವರೇ ಆದ ಕೆಲವರು ಈ ಸಹೋದರರನ್ನು ಒತ್ತಾಯಿಸಿದ್ದಾರೆ. ‘ನಮ್ಮ ಕುಲಕಸುಬನ್ನು ನಾವು ಮುಂದುವರೆಸುವುದಿಲ್ಲ’ ಎಂದು ಹೇಳಿ ಗ್ರಾಮಸ್ಥರ ಒತ್ತಾಯವನ್ನು ಧಿಕ್ಕರಿಸಿದ್ದಕ್ಕಾಗಿ ಸಹೋದರರನ್ನು ಗ್ರಾಮದಿಂದ ಬಹಿಷ್ಕರಿಸಲಾಗಿದೆ.

‘ಸಹೋದರರು ಹೈದರಾಬಾದ್‌ನಲ್ಲಿ ಉದ್ಯೋಗದಲ್ಲಿದ್ದಾರೆ. ಕುಲಕಸುಬು ಮುಂದುವರೆಸದ ಕಾರಣ ಸ್ವಂತ ಮನೆ ಕಟ್ಟಿಸಿಕೊಳ್ಳುವುದಕ್ಕೂ ಈ ಸಹೋದರರಿಗೆ ಗ್ರಾಮದ ಮುಖ್ಯಸ್ಥ ಅನುಮತಿ ನಿರಾಕರಿಸಿದ್ದಾರೆ. ಜೊತೆಗೆ, ಈ ಕುಟುಂಬಕ್ಕೆ ನೀರಿನ ಸಂಪರ್ಕ ಕಲ್ಪಿಸಲೂ ನಿರಾಕರಿಸಲಾಗಿದೆ’ ಎಂದು ಪೊಲೀಸರು ವಿವರಿಸಿದರು.

ತಮಟೆ ಬಾರಿಸುವಂತೆ ಒತ್ತಾಯಿಸಿದ 16 ಜನರನ್ನು ಬಂಧಿಸಿರುವ ಪೊಲೀಸರು, ಕಾಣೆಯಾಗಿರುವ ಗ್ರಾಮದ ಉಳಿದ 15 ಮಂದಿಗಾಗಿ ಹುಡುಕಾಟ ನಡೆಸಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ ಕಾಯ್ದೆ) ಹಾಗೂ ನಾಗರಿಕ ಹಕ್ಕುಗಳ ಕಾಯ್ದೆ ಅಡಿಯಲ್ಲಿ ಸಹೋದರರು ಸೆಪ್ಟೆಂಬರ್ 12ರಂದು ದೂರು ದಾಖಲಿಸಿದ್ದಾರೆ.

‘ಸ್ವಚ್ಛತೆಯೇ ಸೇವೆ’ ಅಭಿಯಾನ



ಬೆಂಗಳೂರು: ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮದಡಿ ಬಿಬಿಎಂಪಿ ವತಿಯಿಂದ ‘ಸ್ವಚ್ಛತೆಯೇ ಸೇವೆ- 2024: ಸ್ವಭಾವ ಸ್ವಚ್ಛತೆ, ಸಂಸ್ಕಾರ ಸ್ವಚ್ಛತೆ’ ಅಭಿಯಾನವನ್ನು ನಗರದಾದ್ಯಂತ ಹಮ್ಮಿಕೊಳ್ಳಲಾಗಿದೆ.

ರಾಷ್ಟ್ರಪಿತ ಮಹಾತ್ಮ ಗಾಂಧಿಯವರ 155ನೇ ಜನ್ಮ ವರ್ಷಾಚರಣೆ ಸಂದರ್ಭದಲ್ಲಿ, ಎಲ್ಲ ವಾರ್ಡ್‌ಗಳಲ್ಲಿ ಸ್ವಚ್ಛತೆಯೇ ಸೇವೆ ಅಭಿಯಾನ ಆಯೋಜಿಸಲಾಗಿದೆ. ಈ ಅಭಿಯಾನದಲ್ಲಿ ನಾಗರಿಕರು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಪಾಲಿಕೆ ಅಧಿಕಾರಿಗಳು, ಮಾರ್ಷಲ್‌ಗಳು, ಪೌರಕಾರ್ಮಿಕರು, ಎನ್‌ಜಿಒಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಜೊತೆಗೂಡಿವೆ.

ಜೊತೆಗೆ ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಲ್ಲಿ ಸ್ವಚ್ಛತೆಯ ಕುರಿತು ಅರಿವು ಮೂಡಿಸಲಾಗುತ್ತಿದೆ. ಪ್ರತಿಜ್ಞಾ ವಿಧಿ ಬೋಧಿಸಲಾಗುತ್ತಿದೆ. ವಲಯ ಆಯುಕ್ತರು, ವಲಯ ಜಂಟಿ ಆಯುಕ್ತರ ನೇತೃತ್ವದಲ್ಲಿ ಸ್ವಚ್ಛತಾ ಶ್ರಮದಾನ, ಜಾಗೃತಿ ಜಾಥಾ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಪಾದಚಾರಿ ಮಾರ್ಗಗಳಲ್ಲಿ ಕಸ ಎಸೆದು ‘ಬ್ಲ್ಯಾಕ್ ಸ್ಪಾಟ್’ ಆಗಿರುವ ಸ್ಥಳಗಳನ್ನು ಸ್ವಚ್ಛಗೊಳಿಸಿ ರಂಗೋಲಿ ಬಿಡಿಸಿ ಮತ್ತೆ ಆ ಸ್ಥಳದಲ್ಲಿ ಕಸ ಹಾಕದಂತೆ ಜಾಗೃತಿ ಮೂಡಿಸಲಾಗುತ್ತಿದೆ.

ಭಾರತ ಸರ್ಕಾರ
ಹಣಕಾಸು ಸಚಿವಾಲಯ
ಹಣಕಾಸು ಸೇವೆಗಳ ಇಲಾಖೆ
ಸಾಲಗಳ ವಸೂಲಾತಿ ನ್ಯಾಯಾಧಿಕರಣ–1 (ಕರ್ನಾಟಕ)
ಟೆಲಿಫೋನ್ ಹೌಸ್, ರಾಜಭವನ ರಸ್ತೆ, ಬೆಂಗಳೂರು–560001

ಒಎ ನಂ. 338/2014 ರಲ್ಲಿನ ಆರ್.ಸಿ. ನಂ. 14168/2018
ಮೆ. ಪೃಥ್ವಿ ಅಸೆಟ್ ರಿಕನ್‌ಸ್ಟ್ರಕ್ಷನ್ & ಸೆಕ್ಯುರಿಟೈಸೇಶನ್ ಕಂಪನಿ ಲಿಮಿಟೆಡ್.,
ಕಚೇರಿ ವಿಳಾಸ: ನಂ. 1–55, 4ನೇ ಮಹಡಿ, ರಾಜಾ ಪ್ರಸಾದಮು, ಮಸೀದಿ ರಸ್ತೆ, ಕೊಂಡಾಪುರ, ಹೈದರಾಬಾದ್–500084. **...ಸರ್ಟಿಫಿಕೇಟ್ ಹಿಡುವಳಿದಾರರು**
ವಿರುದ್ಧ
ಮೆ. ಪಿ.ಎಸ್.ಎನ್.ಮೈನ್ಸ್ & ಮಿನರಲ್ಸ್ ಹಾಗೂ ಇನ್ನಿತರರು **...ಸರ್ಟಿಫಿಕೇಟ್ ಸಾಲಗಾರರು**
ಇ–ಹರಾಜು (26.09.2024 ರಂದು ನಿಗದಿತ) ಮುಂದೂಡಿಕೆ ಪ್ರಕಟಣೆ
ದಿನಾಂಕ 26.09.2024 ರಂದು ಆರ್‌ಸಿ ಷೆಡ್ಯೂಲ್ ಸ್ವತ್ತಿನ ಇ–ಹರಾಜು ನಿಗದಿಪಡಿಸಿರುವ ಕುರಿತಂತೆ, ಸದರಿ ಪ್ರಾಧಿಕಾರದಿಂದ 19.08.2024 ರಂದು ಹೊರಡಿಸಲಾಗಿದ್ದ ಮತ್ತು 24.08.2024 ರಂದು ‘ಡೆಕ್ಕನ್ ಹೆರಾಲ್ಡ್’ ಹಾಗೂ ‘ಪ್ರಜಾವಾಣಿ’ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದ, ಮಾರಾಟ ಘೋಷಣೆಗೆ ಸಂಬಂಧಿಸಿದಂತೆ. ಸದರಿ ಮಾರಾಟ ಘೋಷಣೆಯ ಜಾರಿ ಮತ್ತು ಇದಕ್ಕೆ ಸಬಂಧಿತ ನಿಯಮಾವಳಿಗಳಿಗೆ ಪ್ರತಿಯಾಗಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲವು ಡಬ್ಲುಪಿ ನಂ. 25953/2024 (ಜಿಎಂ–ಡಿಆರ್‌ಟಿ) ವಿಷಯದಲ್ಲಿ ಮಂಜೂರು ಮಾಡಿರುವ ಮಧ್ಯಂತರ ತಡೆಯ ಮೇರೆಗೆ, **ಈ ವಿಷಯಕ್ಕೆ ಸಂಬಂಧಿಸಿದಂತೆ 26.09.2024 ರಂದು ನಿಗದಿಪಡಿಸಲಾಗಿದ್ದ ಇ–ಹರಾಜು ಪ್ರಕ್ರಿಯೆಯನ್ನು, ಮುಂದಿನ ಆದೇಶಗಳು ಹೊರಬರುವವರೆಗೆ ರದ್ದುಪಡಿಸಲಾಗಿದೆ.**
ಸೆಪ್ಟೆಂಬರ್ 24, 2024 ರಂದು ನನ್ನ ಕೈಯಾರೆ ಮತ್ತು ಬೆಂಗಳೂರಿನ ಈ ನ್ಯಾಯಾಧಿಕರಣದ ಮೊಹರಿನೊಂದಿಗೆ ನೀಡಲಾಗಿರುತ್ತದೆ.
(ಪಿ.ಹೆಚ್. ಹೇಮಂತಕುಮಾರ್, ಐಆರ್‌ಎಸ್)
ವಸೂಲಾತಿ ಅಧಿಕಾರಿ–2
ಸಾಲ ವಸೂಲಾತಿ ನ್ಯಾಯಾಧಿಕರಣ–1, ಬೆಂಗಳೂರು.

सत्यमेव जयते
(Govt. of India Society)
Ministry of Micro, Small & Medium Enterprises
IDEMI
Organized by IDEMI, Mumbai Ministry of MSME, Govt. of India
Government Certificate course on Export & Import Management
Course Duration -2 Days Course dates-28,29 Sept. 2024 Time: 10.30 am to 5 pm
Venue:IDEMI- MSME DEVELOPMENT INSTITUTE, WEST OF CHORD RD, INDUSTRIAL ESTATE, RAJAJINAGAR, BENGALURU, KARNATAKA-560010
Email ID: training@idemi.org Website : . Idemi.org Ph.:[022] 2405 0301/2/3/4
Content-Full foreign trade policy of Govt. Of India. 2.what are the licenses required for doing import export activities. 3.what are the import export incentives given by the Govt. of India. 4. International commercial terms n payment terms. 5. Import export customs procedures. 6. Import export cost sheet. 7. Freight forwarding activities. 8.how to find out foreign buyer's n how to deal with them.
Course fees for regular Rs. 4000/- + 18 % GST
Course fees for Student Rs. 2500/- + 18 % GST
Scan QR for Registration
For Technical Detalis Contact: 8975769272
For people form IT & Management field, Entrepreneur Students & all general citizens.
After successful completion certificate will be issued
Call for details between 10am to 6pm
Contact – 9019870803, 9403566219, 9270076724, 9481236511

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.
ದೂರವಾಣಿ: +91–80–22977666/276/433/333/282 ಟೆಲಿ–ಫ್ಯಾಕ್ಸ್:080–26534477
ಇ–ಮೇಲ್: director.sjicr@gmail.com / pstodirectorsjicr@gmail.com
ಸಂಖ್ಯೆ: ಎಸ್‌ಜೆಐಸಿಆರ್/ಹಣಕಾಸು/ಎಫ್‌ಡಿ/2024–25 ದಿನಾಂಕ:24.09.2024
ಇ–ಹರಾಜು
ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಏಕ–ಲಕೋಟೆ ಪದ್ಧತಿಯನ್ವಯ ಹೆಚ್ಚುವರಿ ನಿಧಿಯ ಹೂಡಿಕೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಹರಾಜು ಸೂಚನೆ ಸಂಖ್ಯೆ ಮತ್ತು ದಿನಾಂಕ	ವಿವರಗಳು
1	ಎಸ್‌ಜೆಐಸಿಆರ್/2024–25/ ಆಕ್ಷನ್–012 ದಿನಾಂಕ: 24.09.2024	ಒಂದು ವರ್ಷದ ಅವಧಿಗೆ ಎಸ್‌ಜೆಐಸಿಆರ್ ನ ಹೆಚ್ಚುವರಿ ನಿಧಿಯ ಹೂಡಿಕೆಗಾಗಿ ಇ–ಹರಾಜು.

ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು **https://kppp.karnataka.gov.in** ವೆಬ್‌ಸೈಟ್‌ನಿಂದ **ದಿನಾಂಕ : 24.09.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **27.09.2024ರ ಸಂಜೆ 4.00 ಗಂಟೆಯವರೆಗೆ.**
1. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **30.09.2024 ಸಂಜೆ 4:00 ಗಂಟೆಗೆ.**
2. ಇ.ಎಂ.ಡಿ. : **ರೂ. 5,000/–**
3. ಲೈವ್ ಬಿಡ್ಡಿಂಗ್ (ಇ–ಹರಾಜು): **03.10.2024 ರಂದು ಬೆಳಗ್ಗೆ 10:00 ಗಂಟೆಗೆ** ಪ್ರಾರಂಭವಾಗುತ್ತದೆ ಮತ್ತು **ಸಂಜೆ 03:00 ಗಂಟೆಗೆ** ಮುಕ್ತಾಯವಾಗುತ್ತದೆ.
4. ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: **www.jayadevacardiology.com** ನ್ನು ನೋಡಬಹುದು.
5. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ/ಪೂರ್ಣವಾಗಿ ಒಪ್ಪಿಕೊಳ್ಳುವ/ ತಿರಸ್ಕರಿಸುವ / ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/–
ಆರ್ಥಿಕ ಸಲಹೆಗಾರರು.

ಅ.26ರಂದು ‘ಕಲ್ಯಾಣವೃಷ್ಟಿಸ್ತವಃ ಅಭಿಯಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೃಂಗೇರಿಯ ಶಂಕರಾಚಾರ್ಯ ಭಾರತೀತೀರ್ಥ ಸ್ವಾಮೀಜಿ ಅವರು ಸನ್ಯಾಸ ಸ್ವೀಕರಿಸಿದ 50ನೇ ವರ್ಷದ ಸಂದರ್ಭದಲ್ಲಿ ಸುವರ್ಣ ಭಾರತೀ ಹೆಸರಿನಲ್ಲಿ ವೇದಾಂತ ಭಾರತೀ ಹಾಗೂ ಶಾಂಕರ ತತ್ತ್ವಪ್ರಸಾರ ಅಭಿಯಾನದಡಿ ರಾಜ್ಯದಾದ್ಯಂತ ‘ಕಲ್ಯಾಣವೃಷ್ಟಿಸ್ತವಃ’ ಎಂಬ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ವೇದಾಂತ ಭಾರತೀ ಸಂಸ್ಥೆಯ ನಿರ್ದೇಶಕ ಶ್ರೀಧರ ಹೆಗಡೆ ತಿಳಿಸಿದ್ದಾರೆ.

ಅಭಿಯಾನದಲ್ಲಿ ಶಂಕರಭಗವತ್ಪಾದರು ರಚಿಸಿದ ಕಲ್ಯಾಣ ವೃಷ್ಟಿಸ್ತವಃ, ಶಿವಪಂಚಾಕ್ಷರ ನಕ್ಷತ್ರಮಾಲಾಸ್ತೋತ್ರ ಹಾಗೂ ಲಕ್ಷ್ಮೀನರಸಿಂಹ ಕರುಣಾರಸ ಸ್ತೋತ್ರ ಎಂಬ ಮೂರು ಸ್ತೋತ್ರಗಳನ್ನು ಉಚಿತವಾಗಿ ಹೇಳಿಕೊಡಲಾಗುವುದು. ಈಗಾಗಲೇ ಬೆಂಗಳೂರಿನ ಸಹಸ್ರಾರು ಪಾರಾಯಣ ಕೇಂದ್ರಗಳು ಹಾಗೂ ವಿದ್ಯಾಸಂಸ್ಥೆಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚಿನ ಜನರಿಗೆ ಈ ಸ್ತೋತ್ರಗಳನ್ನು ಅಭ್ಯಾಸ ಮಾಡಿಸಲಾಗಿದೆ ಎಂದು ಹೇಳಿದ್ದಾರೆ.

ಅಕ್ಟೋಬರ್ 26ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಕಲ್ಯಾಣವೃಷ್ಟಿಸ್ತವ ಮಹಾಭಿಯಾನ ಶೃಂಗೇರಿ ಜಗದ್ಗುರುಗಳ ನೇತೃತ್ವದಲ್ಲಿ ನಡೆಯಲಿದೆ. ಯಡತೊರೆ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧೀಶರಾದ ಶಂಕರಭಾರತೀ ಮಹಾಸ್ವಾಮೀಜಿ, ಬ್ರಹ್ಮಾನಂದ ಭಾರತೀ ಸ್ವಾಮೀಜಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರುತ್ತಾರೆ ಎಂದು ಹೇಳಿದ್ದಾರೆ.

‘ದಲಿತರ ಮೇಲಿನ ದೌರ್ಜನ್ಯ ಖಂಡಿಸಿ ಎಸ್‌ಎಸ್‌ಡಿ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಲಿತರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಸಮತಾ ಸೈನಿಕ ದಳ(ಎಸ್‌ಎಸ್‌ಡಿ) ನಿರಂತರವಾಗಿ ಹೋರಾಟ ಮಾಡುತ್ತಿದೆ’ ಎಂದು ಎಸ್‌ಎಸ್‌ಡಿ ರಾಷ್ಟ್ರೀಯ ಅಧ್ಯಕ್ಷ ಎಂ. ವೆಂಕಟಸ್ವಾಮಿ ಹೇಳಿದರು.

ಸಮತಾ ಸೈನಿಕ ದಳ ಶತಮಾನೋತ್ಸವದ ಅಂಗವಾಗಿ ಮಂಗಳವಾರ ನಡೆದ ‘ಶತದಿನಗಳ ಸಂಭ್ರಮ ಅಭಿಯಾನ’ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ದೇಶದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೋರಾಟದ ಫಲಾನುಭವಿಗಳೆಲ್ಲರೂ ಎಸ್‌ಎಸ್‌ಡಿ ಸದಸ್ಯರಾಗಿದ್ದರೆ, ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ನಾಪತ್ತೆ ಆಗುತ್ತಿತ್ತು. ಎಲ್ಲ ವರ್ಗದ ಯುವಕರು, ಮಹಿಳೆಯರು ಎಸ್‌ಎಸ್‌ಡಿ ಸದಸ್ಯತ್ವ ಪಡೆದುಕೊಳ್ಳಬೇಕು’ ಎಂದರು.

‘ದೇಶದಲ್ಲಿ ಜಾತಿವಾದಿ, ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ ಮಾಡಲು ಡಾ.ಬಿ.ಆರ್. ಅಂಬೇಡ್ಕರ್ ಅವರು 1924 ಸೆಪ್ಟೆಂಬರ್ 24ರಂದು ಎಸ್‌ಎಸ್‌ಡಿ ಸ್ಥಾಪಿಸಿದ್ದರು. ಇಂದಿಗೆ 100 ವರ್ಷಗಳನ್ನು ಪೂರೈಸಿರುವ ಎಸ್‌ಎಸ್‌ಡಿ ದೇಶದಾದ್ಯಂತ ಹಲವಾರು ಶಾಖೆಗಳನ್ನು ಹೊಂದಿದೆ’ ಎಂದು ಹೇಳಿದರು.

‘ಅಸ್ಪೃಶ್ಯತೆ ಆಚರಣೆಯ ವಿರುದ್ಧ ಎಸ್‌ಎಸ್‌ಡಿ ನಿರಂತರವಾಗಿ ಹೋರಾಟ ಮಾಡುತ್ತಿದೆ. ಮುಂಬರುವ 100 ದಿನಗಳಲ್ಲಿ ರಾಜ್ಯದಾದ್ಯಂತ 100 ಸಮತಾ ಸಮಾವೇಶಗಳನ್ನು ಆಯೋಜಿಸುವ ಮೂಲಕ ಎಸ್‌ಎಸ್‌ಡಿ ಶಕ್ತಿ ಪ್ರದರ್ಶನ ಮಾಡಲಾಗುತ್ತದೆ’ ಎಂದು ಹೇಳಿದರು.

ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್‌ನ ಅಧ್ಯಕ್ಷೆ ಇಂದಿರಾ ಕೃಷ್ಣಪ್ಪ, ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಘಟಕದ ಅಧ್ಯಕ್ಷ ಆರ್‌ಪಿಐ ಸತೀಶ್, ಜಿ. ಗೋವಿಂದಯ್ಯ, ಜಿ.ಸಿ. ವೆಂಕಟರಮಣಪ್ಪ ಉಪಸ್ಥಿತರಿದ್ದರು.

ಸಮತಾ ಸೈನಿಕ ದಳ ಶತಮಾನೋತ್ಸವ ಅಂಗವಾಗಿ ನಡೆದ ಶತದಿನಗಳ ಸಂಭ್ರಮ ಅಭಿಯಾನದ ಉದ್ಘಾಟನೆ ಸಮಾರಂಭದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಲಾಯಿತು. ಎಂ. ವೆಂಕಟಸ್ವಾಮಿ, ಇಂದಿರಾ ಕೃಷ್ಣಪ್ಪ, ಬಿಕ್ಕುಣಿ ಬುದ್ಧಮ್ಮ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

‘ಜೈವಿಕ ಮತ್ತು ಹವಾಮಾನ ಬದಲಾವಣೆ’ ಕುರಿತು ಮೊದಲ ಪ್ರಾದೇಶಿಕ ಕಾಂಗ್ರೆಸ್ ಅಧಿವೇಶನ: ಅತಿಥಿಗಳು: ಉಮಾ ಮಹಾದೇವನ್, ಫ್ರೊಯಿಲಾನ್ ಗ್ರೇಟ್, ಜ್ಯೋತಿ ಮ್ಯಾಪ್ಸೇಕರ್, ಸುಶೀಲಾ ಸೇಬಲ್, ಮುಖ್ಯಭಾಷಣಕಾರರು: ಶಾಲಿನಿ ರಜನೀಶ್, ಆಯೋಜನೆ: ಹಸಿರು ದಳ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 9.30

ಜಿಲ್ಲಾ ಮಟ್ಟದ ಅಂತರ ಕಾಲೇಜು ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ–2024–25: ಉದ್ಘಾಟನೆ: ಮನೋಜ್ ಕುಮಾರ ಕೊಳ್ಳಾ, ಅಧ್ಯಕ್ಷತೆ: ಸಿ. ಪ್ರಶಾಂತ್ ಕುಮಾರ್, ಅತಿಥಿಗಳು: ರಘು ಮರಿಸ್ವಾಮಿ, ಡಬ್ಲ್ಯೂ.ಡಿ. ಅಶೋಕ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು, ಕೆಂಗೇರಿ ಉಪನಗರ, ಬೆಳಿಗ್ಗೆ 9.30

28ನೇ ಘಟಿಕೋತ್ಸವ: ಅತಿಥಿಗಳು: ಅಪ್ರಮೇಯ ರಾಧಾಕೃಷ್ಣ, ಎಂ.ಆರ್. ಆನಂದರಾಮ್, ಪಾರ್ಶ್ವನಾಥ್ ಎಚ್.ವಿ., ಕರಿಸಿದ್ಧಪ್ಪ, ಆಯೋಜನೆ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಸ್ಥಳ: ಹೈ–ಟೆಕ್, ಸಭಾಂಗಣ, ಆರನೇ ಮಹಡಿ, ಅಪೆಕ್ಸ್ ಬ್ಲಾಕ್, ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಳಿಗ್ಗೆ 10.45

ರಫಾಯಲ್ ರಾಜ್ ಅವರ ಶ್ರದ್ಧಾಂಜಲಿ ಸಭೆ: ಭಾಗವಹಿಸುವವರು: ಬೈರಮಂಗಲ ರಾಮೇಗೌಡ, ರಾ.ನಂ. ಚಂದ್ರಶೇಖರ, ವ.ಚ. ಚನ್ನೇಗೌಡ, ಸಂತೋಷ ಹಾನಗಲ್ಲ, ಫಾಲನೇತ್ರ, ಬಿ.ಎಂ. ಗಂಗಣ್ಣ, ಶ್ರ.ದೇ. ಪಾರ್ಶ್ವನಾಥ್, ವೀರಕಪುತ್ರ ಶ್ರೀನಿವಾಸ್, ಗುರುದೇವ ನಾರಾಯಣ ಕುಮಾರ್, ಕಾಣಿಕ್ಯಮೇರಿ ರಫಾಯಲ್ ರಾಜ್, ಆಯೋಜನೆ: ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11

‘ಸ್ವಾಮಿ ವಿವೇಕಾನಂದ ರೋವರ್ಸ್ ತಂಡ, ಕಿತ್ತೂರ ರಾಣಿ ಚೆನ್ನಮ್ಮ ರೇಂಜರ್ಸ್ ತಂಡದ ಉದ್ಘಾಟನೆ: ಅತಿಥಿ: ಜಿತೇಶ್ ಅರುಣ್ ಸೇಠ್, ಅಧ್ಯಕ್ಷತೆ: ಕೆ.ಎಸ್. ಗೋಪಾಲಕೃಷ್ಣ, ರೇಖಾ ಕೌಶಿಕ್ ಪಿ.ಆರ್., ಆಯೋಜನೆ ಮತ್ತು ಸ್ಥಳ: ಬಿಇಎಸ್ ಕಲಾ ಮತ್ತು ವಾಣಿಜ್ಯ ಸಂಜೆ ಕಾಲೇಜು, ಜಯನಗರ ನಾಲ್ಕನೇ ಬ್ಲಾಕ್, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಬೇಸರ

ಶೋಚನೀಯ ಸ್ಥಿತಿಗೆ ಶಿಕ್ಷಣ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ‘ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಮೂಲ ಸೌಲಭ್ಯ ಕಲ್ಪಿಸಿ ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಬದಲು, ಸೀಟು ಮಾರಾಟದ ಮೂಲಕ ಸರ್ಕಾರವೇ ವಿದ್ಯಾರ್ಥಿಗಳನ್ನು ಶೋಚನೀಯ ಸ್ಥಿತಿಗೆ ತಳ್ಳುತ್ತಿದೆ. ಈ ರೀತಿ ಜನರಿಗೆ ಮೋಸ ಮಾಡುತ್ತಿದೆ’ ಎಂದು ಸಾಹಿತಿ ಅಲ್ಲಮಪ್ರಭು ಬೆಟ್ಟದೂರು ಬೇಸರ ವ್ಯಕ್ತಪಡಿಸಿದರು.

ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆ (ಎಐಡಿಎಸ್‌ಒ) ಮಂಗಳವಾರ ಹಮ್ಮಿಕೊಂಡಿದ್ದ ‘ಯುಬಿಡಿಟಿ ಕಾಲೇಜು ಉಳಿಸಿ’ ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಶಾಲೆ–ಕಾಲೇಜುಗಳು ಸಮರ್ಪಕ ಸೌಲಭ್ಯಗಳಿಲ್ಲದೇ ಸೊರಗುತ್ತಿವೆ. ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳದೇ ಶಿಕ್ಷಣ ವ್ಯವಸ್ಥೆಯನ್ನು ಹಾಳು ಮಾಡಲಾಗುತ್ತಿದೆ. ನೂತನ ಶಿಕ್ಷಣ ನೀತಿಯ ವಿರುದ್ಧ ನಡೆದ ಚಳವಳಿಯ ಮಾದರಿಯಲ್ಲಿ ಯುಬಿಡಿಟಿ ಕಾಲೇಜು ರಕ್ಷಣೆಗೆ ಹೋರಾಟ ಮಾಡಬೇಕು’ ಎಂದು ಸಲಹೆ ನೀಡಿದರು.

‘ಸರ್ಕಾರಿ ಕಾಲೇಜುಗಳಲ್ಲಿ ಪೇಮೆಂಟ್ ಕೋಟಾ ಎಂಬ ಕೆಟ್ಟ ಸಂಪ್ರದಾಯ ಆರಂಭಿಸಲಾಗುತ್ತಿದೆ. ಒಂದೇ ತರಗತಿಯಲ್ಲಿ ಓದುವ ವಿದ್ಯಾರ್ಥಿಗಳನ್ನು ಒಡೆದು ಆಳುವ ನೀತಿ ಇದಾಗಿದೆ’ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಎ. ಮುರಿಗೆಪ್ಪ ತಿಳಿಸಿದರು.

‘ರಾಜ್ಯದ ಬಡ ಜನರಿಗಾಗಿ ಸರ್ಕಾರ ಐದು ಗ್ಯಾರಂಟಿಗಳನ್ನು ಅನುಷ್ಠಾನಕ್ಕೆ ತಂದಿದೆ. ಉಚಿತ ಶಿಕ್ಷಣವನ್ನು 6ನೇ ಗ್ಯಾರಂಟಿಯಾಗಿ ರೂಪಿಸಿದರೆ ಅನುಕೂಲ’ ಎಂದರು. ‘ಯುಬಿಡಿಟಿ ಕಾಲೇಜಿನ ದುಃಸ್ಥಿತಿ ಬೇಸರ ಮೂಡಿಸಿದೆ. ರಾಜ್ಯದ ಏಕೈಕ ತಾಂತ್ರಿಕ ವಿಶ್ವವಿದ್ಯಾಲಯ ಕಾಲೇಜು ಪ್ರವೇಶಾತಿಗೆ ಹೆಚ್ಚಿನ ಪ್ರಮಾಣದ ಶುಲ್ಕ ನಿಗದಿ ಮಾಡಿದ್ದು ಸರಿಯಲ್ಲ’ ಎಂದು ಡಿಆರ್‌ಎಂ ವಿಜ್ಞಾನ ಪದವಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಕೆ.ಎಸ್.ಈಶ್ವರಪ್ಪ ಬೇಸರ ವ್ಯಕ್ತಪಡಿಸಿದರು.

‘ಅಹಿಂದ ಪರ ಎಂದು ಹೇಳಿಕೊಳ್ಳುವ ಮುಖ್ಯಮಂತ್ರಿ, ವಿದ್ಯಾರ್ಥಿಗಳ ಕೂಗು ಆಲಿಸಬೇಕು. ಶಾಸಕ ಶಾಮನೂರು ಶಿವಶಂಕರಪ್ಪ ಇತ್ತ ಗಮನ ಹರಿಸಬೇಕು’ ಎಂದರು.

ಯುಬಿಡಿಟಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಸುರೇಶ್ ಚಂದ್ರ ಮೋಹನ್, ಎಐಡಿಎಸ್‌ಒ ರಾಜ್ಯ ಘಟಕದ ಖಜಾಂಚಿ ಸುಭಾಷ್ ಬೆಟ್ಟದಕೊಪ್ಪ, ಕಾರ್ಯದರ್ಶಿ ಮಹಾಂತೇಶ್, ಜಿಲ್ಲಾ ಘಟಕದ ಅಧ್ಯಕ್ಷೆ ಪೂಜಾ ನಂದಿಹಳ್ಳಿ, ಕಾರ್ಯದರ್ಶಿ ಟಿ.ಎಸ್.ಸುಮನ್ ಇದ್ದರು.

ದಾವಣಗೆರೆಯಲ್ಲಿ ಮಂಗಳವಾರ ಆಯೋಜಿಸಿದ್ದ ‘ಯುಬಿಡಿಟಿ ಉಳಿಸಿ’ ಪ್ರತಿಭಟನಾ ಸಮಾವೇಶದಲ್ಲಿ ನಿವೃತ್ತ ಪ್ರಾಂಶುಪಾಲ ಸುರೇಶ ಚಂದ್ರಮೋಹನ್ ಮಾತನಾಡಿದರು —ಪ್ರಜಾವಾಣಿ ಚಿತ್ರ

‘ಸಸ್ಯ ಸಂರಕ್ಷಣೆ’ ಸಮ್ಮೇಳನ ಇಂದಿನಿಂದ

ಬೆಂಗಳೂರು: ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ (ಐಐಎಚ್‌ಆರ್) ಇದೇ 25ರಿಂದ 27ವರೆಗೆ ತೋಟಗಾರಿಕೆಯಲ್ಲಿ ಸಸ್ಯ ಸಂರಕ್ಷಣೆ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ ನಡೆಯಲಿದೆ.

ನಿಧನ ವಾರ್ತೆ

ಶಿವಾನಂದ ಬಾಗಲಕೋಟ

ಬೆಂಗಳೂರು: ಮಲ್ಲತ್ತಹಳ್ಳಿಯ ಎನ್‌ಜಿಇಎಫ್ ಲೇಔಟ್ ನಿವಾಸಿ ಶಿವಾನಂದ ಬಾಗಲಕೋಟ (49) ಸೋಮವಾರ ರಾತ್ರಿ ನಿಧನರಾದರು.

ವಚನಜ್ಯೋತಿ ಬಳಗದ ಕಾರ್ಯಕಾರಿ ಸದಸ್ಯರಾಗಿದ್ದ ಶಿವಾನಂದ ಅವರು, ಗಾಯಕಿ ಮೀನಾಕ್ಷಿ ಮೇಟಿಯವರ ಸೋದರ.ಅಂತ್ಯಕ್ರಿಯೆಯು ಮಂಗಳವಾರ ಸಂಜೆ ನಡೆಯಿತು.

ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಅನ್ಸಾರಿ ನಗರ, ನವದೆಹಲಿ – 110029, ವೆಬ್: www.aiims.edu
ಪ್ರಕಟಣೆ
ಜಾಹೀರಾತು ಸಂ. ಎಐಐಎಂಎಸ್/ನವದೆಹಲಿ/ಫಾಕ್.ರೆಕ್ಟ್/2024/2 ದಿನಾಂಕ: 17.09.2024
ಎಐಐಎಂಎಸ್, ನವದೆಹಲಿ ಇವರಲ್ಲಿ ವಿವಿಧ ವಿಭಾಗಗಳಲ್ಲಿ ಗುತ್ತಿಗೆ ಆಧಾರದ ಮೇರೆಗೆ ಅಸಿಸ್ಟಂಟ್ ಪ್ರೊಫೆಸರ್ ಹುದ್ದೆಗಳ ನೇಮಕಾತಿ ಪ್ರಕಟಣೆ
ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಎಐಐಎಂಎಸ್) ನವದೆಹಲಿ ಇವರು, ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ನವದೆಹಲಿ ಇವರಲ್ಲಿನ ವಿವಿಧ ವಿಭಾಗಗಳಲ್ಲಿ ಗುತ್ತಿಗೆ ಆಧಾರದ ಮೇರೆಗೆ ವಿವಿಧ ವಿಭಾಗಗಳ ಅಸಿಸ್ಟಂಟ್ ಪ್ರೊಫೆಸರ್ ಹುದ್ದೆಗಳ ನೇಮಕಾತಿಗಾಗಿ ಅರ್ಹ ಭಾರತೀಯ ನಾಗರಿಕರಿಂದ/ಅನ್ವಯಿಕ ಕಾಯ್ದೆ/ನಿಯಮಗಳ ಅಡಿಯಲ್ಲಿ ಅವಕಾಶವುಳ್ಳ ಇನ್ನಿತರ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.
ಸದರಿ ಹುದ್ದೆಗಳಿಗೆ ಸಂಬಂಧಿತ ಲಭ್ಯವಿರುವ ಹುದ್ದೆಗಳು, ನಿರ್ದಿಷ್ಟ ನೇಮಕಾತಿ ನಿಯಮಗಳು ಮತ್ತು ಸಾಮಾನ್ಯ ಷರತ್ತು ಹಾಗೂ ನಿಬಂಧನೆಗಳ ಕುರಿತಾದ ವಿವರಗಳಿಗಾಗಿ ನೀವು ಎಐಐಎಂಎಸ್–ನವದೆಹಲಿ ಸಂಸ್ಥೆಯ ಕೆಳಕಂಡ ಎರಡು ವೆಬ್‌ಸೈಟ್‌ಗಳಲ್ಲಿ ಯಾವುದೇ ವೆಬ್‌ಸೈಟ್‌ನ್ನು ಸಂದರ್ಶಿಸಬಹುದು. www.aiimsexams.ac.in, www.aiims.edu
ಈ ಕುರಿತಂತೆ, ಭವಿಷ್ಯದ ಯಾವುದೇ ಮಾಹಿತಿಗಾಗಿ, ದಯವಿಟ್ಟು ಈ ಸಂಸ್ಥೆಯ www.aiimsexams.ac.in ಮತ್ತು www.aiims.edu ವೆಬ್‌ಸೈಟ್‌ಗಳಲ್ಲಿರುವ “ನೋಟಿಸ್” ಮತ್ತು “ರಿಕ್ರೂಟ್ಮೆಂಟ್” ಟ್ಯಾಬ್‌ಗಳನ್ನು ನಿಯಮಿತವಾಗಿ ಪರಿಶೀಲಿಸುತ್ತಿರಿ.
ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಆರಂಭಿಕ ದಿನಾಂಕ 21.09.2024
ಆನ್‌ಲೈನ್ ಅರ್ಜಿ ಸಲ್ಲಿಕೆಯ ಮುಕ್ತಾಯ ದಿನಾಂಕ 05.10.2024
CBC 17112/11/0034/2425 ನಿರ್ದೇಶಕರು

41 ವೃತ್ತಗಳಲ್ಲಿ ಹೊಸ ತಂತ್ರಜ್ಞಾನದ ಸಿಗ್ನಲ್ ಅಳವಡಿಕೆ • ಇನ್ನೂ 124 ಸ್ಥಳಗಳಲ್ಲಿ ಬರಲಿವೆ ಎಐ ಸಿಗ್ನಲ್

ಸಿಗ್ನಲ್‌ಗಳಿಗೆ 'ಎಐ' ಸ್ಪರ್ಶ: ದಟ್ಟಣೆ ಆಧರಿಸಿ ನಿಶಾನೆ

• ಖಲೀಲಅಹ್ಮದ ಶೇಖ

ಬೆಂಗಳೂರು: ನಗರದ ಪ್ರಮುಖ ವೃತ್ತಗಳು ಮತ್ತು ರಸ್ತೆಗಳಲ್ಲಿ ಸಿಗ್ನಲ್‌ಗಳ ಅಸಮರ್ಪಕ ನಿರ್ವಹಣೆಯೇ ಸಂಚಾರ ದಟ್ಟಣೆ ಹೆಚ್ಚಳದ ಸಮಸ್ಯೆಗೆ ಪ್ರಮುಖ ಕಾರಣವಾಗಿದೆ. ಪ್ರತಿ ಸಿಗ್ನಲ್‌ಗೂ ಕಾಲಮಿತಿ ಅಳವಡಿಸಿ ವಾಹನ ಸಂಚಾರ ನಿಯಂತ್ರಣ ಮಾಡುವ ಹಳೆಯ ವ್ಯವಸ್ಥೆಯ ಬದಲಿಗೆ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿಕೊಂಡು ಆಯಾ ರಸ್ತೆಗಳಲ್ಲಿನ ವಾಹನ ದಟ್ಟಣೆಯನ್ನು ಗ್ರಹಿಸಿ ಹಸಿರು ನಿಶಾನೆ ನೀಡುವ 'ಅಡ್ಯಾಪ್ಟಿವ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಮ್' (ಎಟಿಸಿಎಸ್)ನ ಪ್ರಾಯೋಗಿಕ ಅನುಷ್ಠಾನ ಬಹುತೇಕ ಯಶಸ್ವಿಯಾಗಿದೆ.

ಎಟಿಸಿಎಸ್ ಬಳಕೆಯಿಂದ ಸಂಚಾರ ದಟ್ಟಣೆ ತಗ್ಗಿಸುವುದು ಸಾಧ್ಯವಾಗಲಿದೆ ಎಂಬ ಭರವಸೆ ಮೂಡಿದ ಬೆನ್ನಲ್ಲೇ ಈ ವ್ಯವಸ್ಥೆಯನ್ನು ನಗರದ ಇನ್ನಷ್ಟು ಕಡೆ ಅಳವಡಿಸಲು ಬೆಂಗಳೂರು ನಗರ ಸಂಚಾರ ಪೊಲೀಸರು ಮತ್ತು ನಗರ ಭೂ ಸಾರಿಗೆ ನಿರ್ದೇಶನಾಲಯ (ಡಲ್ಟ್) ಮುಂದಾಗಿವೆ.

ಐಟಿ ಸಿಟಿ, ಉದ್ಯಾನ ನಗರಿ ಖ್ಯಾತಿಯ ಬೆಂಗಳೂರು, ಸಂಚಾರ ದಟ್ಟಣೆ ನಗರಿಯಾಗಿ ಮಾರ್ಪಟ್ಟಿದೆ. ಹೊರವರ್ತುಲ ರಸ್ತೆಗಳು, ಪ್ರಮುಖ ರಸ್ತೆಗಳು ಹಾಗೂ ವೃತ್ತಗಳಲ್ಲಿ ದಟ್ಟಣೆ ಸಾಮಾನ್ಯವಾಗಿದೆ. ನಿತ್ಯ ಕೆಲಸಕ್ಕೆ ಹೋಗುವ ಜನ ವಾಹನ ದಟ್ಟಣೆಯಲ್ಲಿ ಸಿಲುಕಿ ಪರದಾಡುತ್ತಿದ್ದಾರೆ.

ಹಳೆಯ ಮಾದರಿಯ ಸಿಗ್ನಲ್‌ಗಳ ನಿರ್ವಹಣೆಯಲ್ಲಿ ಅಂದಾಜಿನ ಆಧಾರದಲ್ಲಿ ಕಾಲಮಿತಿ ಅಳವಡಿಸಲಾಗುತ್ತದೆ. ಇದರಿಂದ ದಟ್ಟಣೆಯ ರಸ್ತೆಗಳಲ್ಲಿ ಸಂಚರಿಸುವವರಿಗೆ ನಿತ್ಯವೂ ಸಮಸ್ಯೆ ಕಟ್ಟಿಟ್ಟ ಬುತ್ತಿ. ಇದೇ ಕಾರಣಕ್ಕೆ ನಗರದ ಪ್ರಮುಖ ವೃತ್ತಗಳಲ್ಲಿ ಎಐ ಚಾಲಿತ ಎಟಿಸಿಎಸ್ ಸಿಗ್ನಲ್ ವ್ಯವಸ್ಥೆ ಜಾರಿಗೊಳಿಸಲಾಗಿದೆ. ನಗರದಲ್ಲಿ ಹೆಚ್ಚು ದಟ್ಟಣೆಯಾಗುವ ರಸ್ತೆಗಳಲ್ಲಿ ದೀರ್ಘ ಕಾಲ ಹಸಿರು ಬಣ್ಣದ ಸಿಗ್ನಲ್‌ಗಾಗಿ ವಾಹನ ಸವಾರರು ಕಾಯುತ್ತಿದ್ದರು. ಈಗ ಎಐ ಚಾಲಿತ ಸ್ಮಾರ್ಟ್ ಸಿಗ್ನಲ್‌ಗಳಲ್ಲಿ 'ವೆಹಿಕಲ್ ಆಕ್ಯುಯೇಟೆಡ್ ಕಂಟ್ರೋಲ್' (ವಿಎಸಿ) ತಂತ್ರಜ್ಞಾನದ ಬಳಕೆಯಿಂದಾಗಿ ಕಾಯುವಿಕೆಯ ಸಮಯ ತಗ್ಗಲಿದೆ.

ಬಸವನಗುಡಿ ನ್ಯಾಷನಲ್ ಕಾಲೇಜು ಜಂಕ್ಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಐ ತಂತ್ರಜ್ಞಾನ ಆಧಾರಿತ ಎಟಿಸಿಎಸ್ ಟ್ರಾಫಿಕ್ ಸಿಗ್ನಲ್ ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ.

'ವಾಹನಗಳ ದಟ್ಟಣೆ ಆಧರಿಸಿ ಸ್ವಯಂಚಾಲಿತ ಸಿಗ್ನಲ್ ನಿರ್ವಹಣೆ ತಂತ್ರಜ್ಞಾನ (ಎಟಿಸಿಎಸ್) ವ್ಯವಸ್ಥೆಯನ್ನು ನಗರದಲ್ಲಿ ಜಾರಿಗೊಳಿಸಲಾಗಿದೆ. ವೃತ್ತಗಳಿಗೆ ಹೊಂದಿಕೊಂಡಿರುವ ಎಲ್ಲ ರಸ್ತೆಗಳಲ್ಲಿ ಸಾಲುಗಟ್ಟಿ ನಿಲ್ಲುವ ವಾಹನಗಳ ದಟ್ಟಣೆಯನ್ನು ಕ್ಯಾಮೆರಾಗಳ ಮೂಲಕ ಎಟಿಸಿಎಸ್ ವ್ಯವಸ್ಥೆ ಗ್ರಹಿಸಿ, ಹಸಿರು ಸಿಗ್ನಲ್ ನೀಡಿ ಮುಂದಕ್ಕೆ ಕಳುಹಿಸಲಿದೆ' ಎಂದು ಯೋಜನೆ ಅನುಷ್ಠಾನದ ಜವಾಬ್ದಾರಿ ನಿರ್ವಹಿಸುತ್ತಿರುವ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಕಡಿಮೆ ಸಮಯದಲ್ಲಿ ಒಂದು ಜಂಕ್ಷನ್‌ನಿಂದ ಮತ್ತೊಂದು ಜಂಕ್ಷನ್‌ಗೆ ವಾಹನಗಳು ಸಂಚರಿಸಲು ಈ ನೂತನ ತಂತ್ರಜ್ಞಾನ ನೆರವಾಗಲಿದೆ. ಪ್ರತಿ ಸಿಗ್ನಲ್‌ನಲ್ಲಿ 10 ಸೆಕೆಂಡ್ ಸಮಯ ಉಳಿಸಿದರೆ 10 ಸಿಗ್ನಲ್ ದಾಟುವ ಹೊತ್ತಿಗೆ 100 ಸೆಕೆಂಡ್ ಸಮಯ ಉಳಿತಾಯವಾಗುತ್ತದೆ. ಸಂಚಾರ ಸಮಯ ಉಳಿಸುವ ಜೊತೆಗೆ ಇಂಧನವನ್ನೂ ಉಳಿಸಬಹುದು' ಎಂದು ಸಂಚಾರ ಪೊಲೀಸರೊಬ್ಬರು ತಿಳಿಸಿದರು.

₹53 ಕೋಟಿ ವೆಚ್ಚದಲ್ಲಿ ನಗರದ 165 ವೃತ್ತಗಳಲ್ಲಿ ಎಟಿಸಿಎಸ್ ತಂತ್ರಜ್ಞಾನ ಆಧಾರಿತ ಸಿಗ್ನಲ್‌ಗಳನ್ನು ಅಳವಡಿಸುವ ಯೋಜನೆ ರೂಪಿಸಲಾಗಿದೆ ಎಂದರು.

'ಟ್ಯಾಗೋರ್ ಪಾರ್ಕ್ ಜಂಕ್ಷನ್, ವಿಶ್ವೇಶ್ವರಪುರ ಕಾಲೇಜಿನ ಜಂಕ್ಷನ್, ಪೈ ವಿಸ್ತಾ ಕೆ.ಆರ್. ರಸ್ತೆ, ಜಯನಗರ 4ನೇ ಮುಖ್ಯರಸ್ತೆಯ 40ನೇ ಕ್ರಾಸ್ ಹಾಗೂ 36ನೇ ಕ್ರಾಸ್, ಜಯನಗರದ ನ್ಯೂ ಡಯಾಗೊನಲ್ ರಸ್ತೆ, ಜಯನಗರ 4ನೇ ಮುಖ್ಯರಸ್ತೆಯ ಒಂಬತ್ತನೇ ಕ್ರಾಸ್‌ನಲ್ಲಿ ಹೊಸ ಸಿಗ್ನಲ್‌ಗಳನ್ನು ಅಳವಡಿಸಲಾಗಿದ್ದು, ಉಳಿದ ಪ್ರದೇಶಗಳಲ್ಲಿ ಇರುವ ಸಿಗ್ನಲ್‌ಗಳನ್ನು ಉನ್ನತೀಕರಿಸಲಾಗಿದೆ' ಎಂದರು.

ನೂತನ ಸಿಗ್ನಲ್‌ಗಳ ಅಳವಡಿಕೆ: 165 ವೃತ್ತಗಳಲ್ಲಿ ಎಟಿಸಿಎಸ್ ವ್ಯವಸ್ಥೆಯನ್ನು ಅಳವಡಿಸಿ ನಿರ್ವಹಣೆ ಮಾಡುವ ಜವಾಬ್ದಾರಿಯನ್ನು ಸಿ-ಡಾಕ್ ಕಂಪನಿಗೆ ವಹಿಸಲಾಗಿದೆ. ಕಂಪನಿ ಅಧಿಕಾರಿಗಳು, ಸ್ಥಳೀಯ ಕಾರ್ಮಿಕರೊಂದಿಗೆ ನೂತನ ಸಿಗ್ನಲ್‌ಗಳನ್ನು ಅಳವಡಿಸುತ್ತಿದ್ದಾರೆ.

ನಗರದಲ್ಲಿರುವ ವಾಹನಗಳ ಸಂಖ್ಯೆ (2023ರ ಡಿಸೆಂಬರ್ 31)

ದ್ವಿಚಕ್ರ ವಾಹನಗಳು	75,77,541
ಲಘು ವಾಹನಗಳು	23,51,437
ಆಟೊ ರಿಕ್ಷಾಗಳು	3,19,111
ಭಾರಿ ಸಾರಿಗೆ ವಾಹನಗಳು	2,65,943
ಭಾರಿ ಸರಕು ವಾಹನಗಳು	2,72,303
ಇತರೆ	6,41,996
ಒಟ್ಟು	1,14,28,331

ಎಟಿಸಿಎಸ್ ಕಾರ್ಯನಿರ್ವಹಣೆ ಹೇಗೆ?

'ಸಿಗ್ನಲ್ ಬಳಿಯ ರಸ್ತೆಗಳಲ್ಲಿ ಸಾಲುಗಟ್ಟಿ ನಿಲ್ಲುವ ವಾಹನಗಳ ದಟ್ಟಣೆ ಆಧರಿಸಿ ಹಸಿರು ದೀಪ ಬೆಳಗಿಸುವ ತಂತ್ರಜ್ಞಾನವೇ ಎಟಿಸಿಎಸ್. ಇದು ದಿನದ 24 ಗಂಟೆಯೂ ಕಾರ್ಯ ನಿರ್ವಹಿಸಲಿದೆ' ಎಂದು ಸಂಚಾರ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ವೃತ್ತಗಳಿಗೆ ಹೊಂದಿಕೊಂಡಿರುವ ಎಲ್ಲ ರಸ್ತೆಗಳಲ್ಲಿ ಸಾಲುಗಟ್ಟಿ ನಿಲ್ಲುವ ವಾಹನಗಳ ದಟ್ಟಣೆಯನ್ನು ಕ್ಯಾಮೆರಾಗಳ ಮೂಲಕ ಎಟಿಸಿಎಸ್ ವ್ಯವಸ್ಥೆ ಗ್ರಹಿಸಲಿದೆ. ಯಾವ ರಸ್ತೆಯಲ್ಲಿ ಹೆಚ್ಚು ವಾಹನಗಳು ಇವೆಯೋ, ಅಂಥ ಮಾರ್ಗದ 'ಹಸಿರು' ಸಿಗ್ನಲ್ ನೀಡಿ ಮುಂದಕ್ಕೆ ಕಳುಹಿಸಲಿದೆ. ನಿಗದಿತ ಸಮಯಕ್ಕೂ ಮೊದಲೇ ರಸ್ತೆ ಖಾಲಿಯಾದರೆ, 'ಕೆಂಪು' ಸಿಗ್ನಲ್ ನೀಡಿ ಬೇರೆ ರಸ್ತೆಯಲ್ಲಿರುವ ವಾಹನಗಳ ಸಂಚಾರಕ್ಕೆ 'ಹಸಿರು' ಸಿಗ್ನಲ್ ನೀಡಲಿದೆ' ಎಂದರು.

ಬಸವನಗುಡಿ ನ್ಯಾಷನಲ್ ಕಾಲೇಜು ಜಂಕ್ಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಐ ತಂತ್ರಜ್ಞಾನ ಆಧಾರಿತ ಎಟಿಸಿಎಸ್ ಟ್ರಾಫಿಕ್ ಸಿಗ್ನಲ್

'ಕೇವಲ ಒಂದೇ ವೃತ್ತದ ವಾಹನಗಳ ದಟ್ಟಣೆಯನ್ನು ಈ ವ್ಯವಸ್ಥೆ ಅಳೆಯುವುದಿಲ್ಲ. ಬದಲಿಗೆ, ಅಕ್ಕ-ಪಕ್ಕದಲ್ಲಿರುವ ವೃತ್ತಗಳ ವಾಹನ ದಟ್ಟಣೆಯನ್ನೂ ಗ್ರಹಿಸಲಿದೆ. ಒಂದು ವೃತ್ತದ ದಟ್ಟಣೆಯಿಂದ ಮತ್ತೊಂದು ವೃತ್ತದ ದಟ್ಟಣೆ ಹೆಚ್ಚಾಗದಂತೆ ಸಿಗ್ನಲ್‌ಗಳ ನಿರ್ವಹಣೆ ಮಾಡಲಿದೆ. ಹೀಗಾಗಿ, ದಟ್ಟಣೆ ನಿಯಂತ್ರಣಕ್ಕೆ ಬರುವ ಭರವಸೆ ಇದೆ' ಎಂದು ಹೇಳಿದರು.

'ವರ್ಷಾಂತ್ಯದೊಳಗೆ ಎಲ್ಲ ಕಡೆ ಎಐ ಸಿಗ್ನಲ್'



'ಬೆಂಗಳೂರು ನಗರದ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ನಿರಂತರ ಹೊಸ ಪ್ರಯೋಗ ನಡೆಯುತ್ತಿದೆ. ಇದರ ಭಾಗವಾಗಿ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧರಿಸಿದ ಸಂಚಾರ ನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದೆ. ಡಿಸೆಂಬರ್ ಅಂತ್ಯದ ವೇಳೆಗೆ ಬೆಂಗಳೂರು ನಗರದಲ್ಲಿ ಬಹುತೇಕ ಜಂಕ್ಷನ್‌ಗಳಲ್ಲಿ ಎಐ ಚಾಲಿತ ಟ್ರಾಫಿಕ್ ಸಿಗ್ನಲ್‌ಗಳು ಕಾರ್ಯನಿರ್ವಹಿಸಲಿವೆ' ಎಂದು ಜಂಟಿ ಪೊಲೀಸ್ ಕಮಿಷನರ್ (ಸಂಚಾರ ವಿಭಾಗ) ಎಂ.ಎನ್.ಅನುಚೇತ್ ಹೇಳಿದರು.

'ನಗರದ 41 ಜಂಕ್ಷನ್‌ಗಳಲ್ಲಿ ಎಐ ಎಟಿಸಿಎಸ್ ತಂತ್ರಜ್ಞಾನ ಅನುಷ್ಠಾನಗೊಳಿಸಲಾಗಿದೆ. ವಾಹನ ಸವಾರರು ಈ ಸಿಗ್ನಲ್‌ಗಳಲ್ಲಿ ಹೆಚ್ಚು ಸಮಯ ಕಾಯುವ ಸಮಸ್ಯೆ ದೂರವಾಗಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

₹53 ಕೋಟಿ
ಯೋಜನೆಯ ಒಟ್ಟು ವೆಚ್ಚ

41
ಜಂಕ್ಷನ್‌ಗಳಲ್ಲಿ ಎಐ ಆಧಾರಿತ ಸಿಗ್ನಲ್ ಕಾರ್ಯಾಚರಣೆ

165
ಜಂಕ್ಷನ್‌ಗಳಲ್ಲಿ ಎಐ ಸಿಗ್ನಲ್ ಅಳವಡಿಸುವ ಯೋಜನೆ

ಜನರು ಹೀಗಂತಾರೆ...

ಹಳೆಯ ವ್ಯವಸ್ಥೆಯಡಿ ಸಿಗ್ನಲ್‌ಗಳಲ್ಲಿ ನಿಗದಿಪಡಿಸಿದ ಸಮಯದವರೆಗೂ ಕಾಯಬೇಕು. ಆದರೆ, ಎಐ ಆಧಾರಿತ ಸಿಗ್ನಲ್‌ಗಳನ್ನು ಅಳವಡಿಕೆ ಮಾಡಿರುವುದರಿಂದ ಕಾಯುವ ಸಮಯ ಉಳಿತಾಯವಾಗುತ್ತದೆ. ಸಂಚಾರ ದಟ್ಟಣೆಗೆ ಕಡಿವಾಣ ಬೀಳುವ ಭರವಸೆ ಇದೆ.

ಪ್ರೀತಿ, ಉತ್ತರಹಳ್ಳಿ

ಬಸವನಗುಡಿ, ಕೆ.ಆರ್. ಮಾರುಕಟ್ಟೆ, ಕಿಮ್ಸ್ ವೃತ್ತಗಳಲ್ಲಿ ಹೊಸ ಸಿಗ್ನಲ್‌ಗಳ ಅಳವಡಿಕೆಯಿಂದ ಸಂಚಾರ ನಿರ್ವಹಣೆ ಸುಗಮವಾಗಿ ನಡೆಯುತ್ತಿದೆ.

ಶಿವಾ, ಆಟೊ ಚಾಲಕ

ನಗರದ ದಟ್ಟಣೆಗೆ ಪರಿಹಾರ ಒದಗಿಸುವ ಪರ್ಯಾಯ ವ್ಯವಸ್ಥೆಗಾಗಿ ಹಲವು ವರ್ಷಗಳಿಂದ ಹುಡುಕಾಟ ನಡೆಸಲಾಗುತ್ತಿತ್ತು. ಈಗ ಎಐ ಆಧಾರಿತ ಈ ತಂತ್ರಜ್ಞಾನದಿಂದ ಸಮಸ್ಯೆಗೆ ಪರಿಹಾರ ಸಿಗುವ ಭರವಸೆ ಮೂಡಿದೆ.

ದೀಪಕ್, ಐಟಿ ಉದ್ಯೋಗಿ



ವಾಹನಗಳ ದಟ್ಟಣೆ ಆಧರಿಸಿ ಸ್ವಯಂಚಾಲಿತ ಸಿಗ್ನಲ್ ನಿರ್ವಹಣೆ ತಂತ್ರಜ್ಞಾನ ವಿಎಸಿ ಸಿಗ್ನಲ್‌ಗಳಲ್ಲಿದೆ. ಇದರಿಂದ, ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆಯಾಗಲಿದೆ.

ರಾಜೇಶ್, ದ್ವಿಚಕ್ರ ವಾಹನ ಸವಾರ

ತ್ರಿಪುರಾ ನಿವಾಸಿಯಿಂದ ₹ 21 ಲಕ್ಷ ಮೌಲ್ಯದ ಚಿನ್ನಾಭರಣ, ವಾಚ್ ವಶ

ಐಷಾರಾಮಿ ವಿಲ್ಲಾಗಳಲ್ಲಿ ಕಳ್ಳತನ; ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಐಷಾರಾಮಿ ವಿಲ್ಲಾಗಳಲ್ಲಿ ಕಳವು ಮಾಡುತ್ತಿದ್ದ ಆರೋಪಿಯನ್ನು ಕೊತ್ತನೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಮಿತ್ ದೇಬಾರಿಯಾ

ತ್ರಿಪುರಾದ ಅಮಿತ್ ದೇಬಾರಿಯಾ (22) ಎಂಬುವವರನ್ನು ಬಂಧಿಸಿ, ₹21 ಲಕ್ಷ ಮೌಲ್ಯದ 170 ಗ್ರಾಂ ಚಿನ್ನಾಭರಣ, ವಿವಿಧ ಕಂಪನಿಗಳ 32 ವಾಚ್‌ಗಳು, 3,900 ಅಮೆರಿಕನ್ ಡಾಲರ್ ಹಾಗೂ ಐದು ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಆರೋಪಿ ಬಂಧನದಿಂದ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ ಒಂಬತ್ತು ಪ್ರಕರಣಗಳು ಪತ್ತೆಯಾಗಿವೆ.

ಕೊತ್ತನೂರು ಠಾಣೆ ಪೊಲೀಸರು ವಶಪಡಿಸಿಕೊಂಡಿರುವ ವಸ್ತುಗಳನ್ನು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ವೀಕ್ಷಿಸಿದರು

ಕೆ.ನಾರಾಯಣಪುರ ವಿಲ್ಲಾ ನಿವಾಸಿಯೊಬ್ಬರು ಮನೆಯ ಮಹಡಿ ಬಾಗಿಲು ಹಾಕಲು ಮರೆತು, ನಿದ್ರೆಗೆ ಜಾರಿದ್ದರು. ವಾಚ್, ಮೊಬೈಲ್, ಪರ್ಸ್ ಊಟದ ಟೇಬಲ್ ಮೇಲೆ ಇರಿಸಿದ್ದರು. ಮಾರನೇ ದಿನ ಬೆಳಿಗ್ಗೆ ನೋಡಿದಾಗ ವಸ್ತುಗಳು ಕಳವಾಗಿದ್ದವು. ಅವರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಲಾಯಿತು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆ ವೇಳೆ ದೊರೆತ ಸುಳಿವು ಆಧರಿಸಿ ಆರೋಪಿಯನ್ನು ಬಂಧಿಸಿ, ಕಳವು ಮಾಡಿದ್ದ ವಸ್ತುಗಳನ್ನು ವಶಪಡಿಸಿಕೊಳ್ಳಲಾಯಿತು ಎಂದು ಪೊಲೀಸರು ಹೇಳಿದ್ದಾರೆ.

'ನಗರದ ಐಷಾರಾಮಿ ವಿಲ್ಲಾಗಳಲ್ಲಿ ಕಳ್ಳತನ ಮಾಡುತ್ತಿದ್ದುದನ್ನು ಆರೋಪಿಯು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ. ಆದಿವಾಸಿ ಸಮುದಾಯಕ್ಕೆ ಸೇರಿರುವ ಅಮಿತ್, ಏಳು ವರ್ಷದ ಹಿಂದೆ ನಗರಕ್ಕೆ ಬಂದು ಸಣ್ಣಪುಟ್ಟ ಕೆಲಸ ಮಾಡಿಕೊಂಡಿದ್ದ. ಇತ್ತೀಚೆಗೆ ಕೊತ್ತನೂರಿನಲ್ಲಿ ನೀರಿನ ಟ್ಯಾಂಕರ್‌ಗೆ ನೀರು ತುಂಬಿಸುವ ಕೆಲಸ ಮಾಡುತ್ತಿದ್ದ. ನಿರ್ಮಾಣ ಹಂತದ ಕಟ್ಟಡಗಳಲ್ಲಿ ರಾತ್ರಿ ವೇಳೆ ತಂಗುತ್ತಿದ್ದ' ಎಂದು ಪೊಲೀಸರು ಹೇಳಿದ್ದಾರೆ.

'ಆರೋಪಿ ಅಮಿತ್ ಊಟಕ್ಕಾಗಿ ವಿಲ್ಲಾಗಳಿಗೆ ರಾತ್ರಿ ವೇಳೆ ನುಗ್ಗುತ್ತಿದ್ದ. ಅಡುಗೆ ಮನೆಗೆ ತೆರಳಿ ಹೊಟ್ಟೆ ತುಂಬಾ ಊಟ ಮಾಡಿದ ಬಳಿಕ ಕೈಗೆ ಸಿಕ್ಕ ವಸ್ತುಗಳು, ನಗದು, ಚಿನ್ನಾಭರಣ ಕಳವು ಮಾಡುತ್ತಿದ್ದ. ಕದ್ದ ವಸ್ತುಗಳನ್ನು ನಿರ್ಮಾಣ ಹಂತದ ಕಟ್ಟಡಗಳಲ್ಲಿ ಬಚ್ಚಿಡುತ್ತಿದ್ದ' ಎಂದು ತಿಳಿಸಿದ್ದಾರೆ.

ಗೇಟ್‌ಗಳ ಗುಣಮಟ್ಟದ ವರದಿಗೆ ಬಿಬಿಎಂಪಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಕೆರೆಗಳು, ಆಟದ ಮೈದಾನಗಳು, ರುದ್ರಭೂಮಿ, ಸ್ಮಶಾನ ಮತ್ತು ವಿದ್ಯುತ್ ಚಿತಾಗಾರಗಳಲ್ಲಿ ಸಾರ್ವಜನಿಕ ಪ್ರವೇಶ ದ್ವಾರಗಳಲ್ಲಿ ಅಳವಡಿಸಲಾಗಿರುವ ಗೇಟ್‌ಗಳ ಗುಣಮಟ್ಟವನ್ನು ತುರ್ತಾಗಿ ಪರಿಶೀಲಿಸಿ ವರದಿ ಸಲ್ಲಿಸಲು ಎಲ್ಲ ಮುಖ್ಯ ಎಂಜಿನಿಯರ್ ಹಾಗೂ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ಗೇಟ್‌ಗಳ ಚಿತ್ರ ಹಾಗೂ ಜಿಪಿಎಸ್ ಮಾಹಿತಿಯೊಂದಿಗಿನ ವರದಿಯನ್ನು ಮೂರು ದಿನಗಳಲ್ಲಿ ಸಲ್ಲಿಸುವಂತೆ ಮಂಗಳವಾರ ಆದೇಶಿಸಲಾಗಿದೆ.

ಬಾಲಕನ ಕುಟುಂಬಕ್ಕೆ ₹5 ಲಕ್ಷ

ಬೆಂಗಳೂರು: ಮಲ್ಲೇಶ್ವರದ ರಾಜಾಶಂಕರ್ ಆಟದ ಮೈದಾನದಲ್ಲಿ ಕಬ್ಬಿಣದ ಗೇಟ್ ಬಿದ್ದು ಮೃತಪಟ್ಟ ಬಾಲಕ ನಿರಂಜನ್ ಅವರ ಕುಟುಂಬಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ₹5 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಕಾಮಗಾರಿ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿರುವ ಸಹಾಯಕ ಎಂಜಿನಿಯರ್ ಶ್ರೀನಿವಾಸ್ ರಾಜು ಅವರನ್ನು ಅಮಾನತು ಮಾಡಲಾಗಿದೆ. ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ಕೆ. ಶಾಂತಲಾ, ದೇವರಾಜು, ಬೇಬಿ ಆಯೇಷಾ ಹುಸೇನ್ ಅವರನ್ನು ಅಮಾನತುಗೊಳಿಸಲು ಸೂಚಿಸಲಾಗಿದೆ. ಅಲ್ಲದೆ, ಕಾರ್ಯಪಾಲಕ ಎಂಜಿನಿಯರ್ ಎಲ್.ವೆಂಕಟೇಶ್ ಅವರಿಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದೆ ಎಂದು ಪ್ರಕಟಣೆಯಲ್ಲಿ ಶಿವಕುಮಾರ್ ತಿಳಿಸಿದ್ದಾರೆ. ಆಟದ ಮೈದಾನದ ಸಂಪೂರ್ಣ ಕಾಮಗಾರಿಯ ಕುರಿತು ತನಿಖೆ ನಡೆಸಲು ಹಿರಿಯ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಲಾಗಿದೆ. ಒಂದು ವಾರದೊಳಗೆ ಪರಿಶೀಲಿಸಿ, ಸಂಪೂರ್ಣ ವರದಿ ನೀಡುವಂತೆ ತಿಳಿಸಲಾಗಿದೆ ಎಂದು ಹೇಳಿದ್ದಾರೆ.

'ಸವಲತ್ತು ಕೊಡದಿದ್ದರೆ ನ್ಯಾಯಾಲಯಕ್ಕೆ ದೂರು'

ಪ್ರಜಾವಾಣಿ ವಾರ್ತೆ

ದರ್ಶನ್

ಬಳ್ಳಾರಿ: 'ನಟ ದರ್ಶನ್‌ಗೆ ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ಸೌಲಭ್ಯ ಒದಗಿಸದೇ ನ್ಯಾಯಾಲಯಕ್ಕೆ ದೂರು ನೀಡುತ್ತೇವೆ. ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡುವ ಬಗ್ಗೆಯೂ ಚಿಂತನೆ ನಡೆಸಲಾಗುತ್ತದೆ' ಎಂದು ಅವರ ವಕೀಲರು ಹೇಳಿದ್ದಾರೆ.

ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ದರ್ಶನ್ ಅವರನ್ನು ಮಂಗಳವಾರ ಭೇಟಿಯಾದ ವಕೀಲ ಸುನೀಲ್ ಮಾಧ್ಯಮಗಳೊಂದಿಗೆ ಮಾತನಾಡಿದರು. 'ದರ್ಶನ್‌ಗೆ ಬೆನ್ನು ನೋವಿದೆ. 2021ರ ಜೈಲು ಕೈಪಿಡಿ ಪ್ರಕಾರ ಕೈದಿಗಳಿಗೆ ಮೆಡಿಕಲ್ ಬೆಡ್ ಮತ್ತು ದಿಂಬು ಒದಗಿಸಲು ಅವಕಾಶವಿದೆ. ವೈದ್ಯಕೀಯ ಕಾರಣಕ್ಕಾಗಿ ಹಾಸಿಗೆ-ದಿಂಬು ನೀಡಲು ಮನವಿ ಮಾಡಿದ್ದೇವೆ' ಎಂದು ತಿಳಿಸಿದರು.

'ಕೈದಿಗಳಿಗೆ ಮೂಲಸೌಲಭ್ಯ ನೀಡಬೇಕು. ಮಾಧ್ಯಮಗಳಲ್ಲಿ ವರದಿಯಾಗುತ್ತದೆ ಎಂಬ ಕಾರಣಕ್ಕೆ ಸೌಲಭ್ಯ ತಿರಸ್ಕರಿಸುವಂತಿಲ್ಲ. ಈ ವಿಚಾರವನ್ನೂ ಅಧಿಕಾರಿಗಳಿಗೆ ತಿಳಿಸಿದ್ದೇವೆ. ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನಿಸುವುದಾಗಿ ಅವರು ಹೇಳಿದ್ದಾರೆ. ನಮ್ಮ ಕೋರಿಕೆ ತಿರಸ್ಕರಿಸಿದರೆ ನ್ಯಾಯಾಲಯದ ಗಮನಕ್ಕೂ ತರುತ್ತೇವೆ' ಎಂದರು.

ದರ್ಶನ್ ಜಾಮೀನು ಅರ್ಜಿ ಸೆಷನ್ ನ್ಯಾಯಾಲಯದಲ್ಲಿ ಸೆ.27ರಂದು ವಿಚಾರಣೆಗೆ ಬರಲಿದೆ. ಅಲ್ಲಿ ನಿರಾಕರಿಸಿದರೆ ಹೈಕೋರ್ಟ್‌ಗೆ ಹೋಗುತ್ತೇವೆ ಎಂದೂ ಅವರು ತಿಳಿಸಿದರು.

ಇನ್ನು ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿರುವ ಜೈಲು ಅಧಿಕಾರಿಗಳು, 'ಜೈಲಿನಲ್ಲಿ ವೈದ್ಯರಿದ್ದಾರೆ. ಸಮಸ್ಯೆ ಬಗ್ಗೆ ಹೇಳಿಕೊಂಡರೆ ಸೂಕ್ತ ಪರಿಹಾರ ಸೂಚಿಸುತ್ತಾರೆ. ಒಂದು ವೇಳೆ ಮೆಡಿಕಲ್ ಬೆಡ್ ಅಗತ್ಯವೆನಿಸಿದರೆ ಕೊಡಲಾಗುವುದು. ಆದರೆ, ದರ್ಶನ್ ಅವರಿಂದ ಈವರೆಗೆ ಕೋರಿಕೆಯೇ ಬಂದಿಲ್ಲ. ಆರೋಗ್ಯ ಸಮಸ್ಯೆ ಬಗ್ಗೆ ಅವರು ಹೇಳಿಕೊಂಡಿಲ್ಲ. ಹೀಗಿದ್ದಾಗ ನೇರವಾಗಿ ಪರಿಹಾರ ಕೊಡಲು ಹೇಗೆ ಸಾಧ್ಯ?' ಎಂದರು.

'ಜೈಲು ಕೈಪಿಡಿಯಲ್ಲಿ ಏನಿದೆಯೋ ಅವುಗಳನ್ನು ಈಗಾಗಲೇ ನೀಡಲಾಗಿದೆ. ನ್ಯಾಯಾಲಯ ಏನು ಹೇಳುತ್ತದೋ ಅದನ್ನು ನಾವು ಪಾಲಿಸುತ್ತೇವೆ' ಎಂದು ಸ್ಪಷ್ಟಪಡಿಸಿದರು.

ಹಾಸಿಗೆ ದಿಂಬಿನ ಜತೆಗೆ, ಕುರ್ಚಿ ಬೇಕೆಂದು ದರ್ಶನ್ ಕೇಳುತ್ತಿರುವುದಾಗಿ ಅಧಿಕಾರಿಗಳು ಹೇಳಿದ್ದಾರೆ.

ಸಂಜ್ಞಾ ಭಾಷೆಯಲ್ಲಿ ಪೊಲೀಸ್ ಕಮಿಷನರ್ ಸುದ್ದಿಗೋಷ್ಠಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ ಅವರು ಸೋಮವಾರ ನಡೆಸಿದ ಸುದ್ದಿಗೋಷ್ಠಿಯ ವಿವರಗಳನ್ನು ಅಂತರರಾಷ್ಟ್ರೀಯ ಸಂಜ್ಞಾ ಭಾಷಾ ದಿನದ ಅಂಗವಾಗಿ ನಿರೂಪಕಿಯೊಬ್ಬರು ಸಂಜ್ಞೆಗಳಲ್ಲಿ ವಿವರಿಸಿದರು.

ಸುದ್ದಿಗೋಷ್ಠಿಯ ಮಾಹಿತಿಗಳನ್ನು ವಿ-ಶೇಷ್ ಸ್ವಯಂ ಸೇವಾ ಸಂಸ್ಥೆಯ ನಿರೂಪಕಿ ಮೋಕ್ಷಾ ಕುಮಾರಿ ಅವರು ಸಂಜ್ಞಾ ಭಾಷೆಯಲ್ಲಿ ವಿವರಿಸಿದರು. ಸಂಜ್ಞಾ ಭಾಷೆಯ ಕುರಿತು ಸ್ವಯಂ ಸೇವಾ ಸಂಸ್ಥೆ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ನಗರದ ಎಲ್ಲಾ ವಿಭಾಗಗಳ ಡಿಸಿಪಿಗಳು ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಭಾಗಿಯಾಗಿದ್ದರು.

'ಜನರ ಜಾತಿ, ಧರ್ಮ, ಲಿಂಗ ಹಾಗೂ ದೈಹಿಕ ನ್ಯೂನತೆಗಳ ಆಧಾರದಲ್ಲಿ ತಾರತಮ್ಯ ಮಾಡದೆ ನಗರದ ಎಲ್ಲ ಜನರನ್ನು ರಕ್ಷಿಸುವ ಜವಾಬ್ದಾರಿ ಪೊಲೀಸ್ ಇಲಾಖೆ ಮೇಲಿದೆ. ಇಲಾಖೆ ನೀಡುವ ಮಾಹಿತಿಗಳು ಎಲ್ಲ ವರ್ಗದ ಜನರನ್ನು ತಲುಪಬೇಕು. ಆ ನಿಟ್ಟಿನಲ್ಲಿ ಎಲ್ಲ ವರ್ಗಗಳ ಜನರ ಅಹವಾಲುಗಳನ್ನು ಅರ್ಥೈಸಿಕೊಳ್ಳುವುದು ಹಾಗೂ ಸಂವಹನ ಸಾಧಿಸುವ ಉದ್ದೇಶದಿಂದ ಅಂತರರಾಷ್ಟ್ರೀಯ ಸಂಜ್ಞಾ ಭಾಷಾ ದಿನದ (ಸೆಪ್ಟೆಂಬರ್ 23) ಕಾರಣ ಈ ಪ್ರಯತ್ನ ಮಾಡಲಾಗಿದೆ' ಎಂದು ದಯಾನಂದ ಹೇಳಿದರು.



ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರ ಸುದ್ದಿಗೋಷ್ಠಿಯಯನ್ನು ವಿ-ಶೇಷ್ ಸ್ವಯಂ ಸೇವಾ ಸಂಸ್ಥೆಯ ನಿರೂಪಕಿ ಮೋಕ್ಷಾ ಕುಮಾರಿ ಅವರು ಸಂಜ್ಞಾ ಭಾಷೆಯಲ್ಲಿ ವಿವರಿಸಿದರು

ತಲೆಯ ಮೇಲೆ ಕಲ್ಲು ಹಾಕಿ ಕಾರ್ಮಿಕನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀನಗರದಲ್ಲಿ ಕಾರ್ಮಿಕರೊಬ್ಬರ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಲಾಗಿದ್ದು, ಈ ಸಂಬಂಧ ಹನುಮಂತನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಜಿತ್ ಆರ್ಮುಗಂ(35) ಕೊಲೆಯಾದವರು.

'ತಮಿಳುನಾಡಿನ ಅಜಿತ್ ಅವರು ಆರು ತಿಂಗಳ ಹಿಂದಷ್ಟೇ ನಗರಕ್ಕೆ ಬಂದಿದ್ದರು. ಶ್ರೀನಗರದ ಬಾಡಿಗೆ ಮನೆಯಲ್ಲಿ ಅವರು ನೆಲಸಿದ್ದರು. ಮಂಗಳವಾರ ಸಂಜೆ ಅವರನ್ನು ನಿರ್ಮಾಣ ಹಂತದ ಕಟ್ಟಡಕ್ಕೆ ಕರೆದೊಯ್ದು ದುಷ್ಕರ್ಮಿಗಳು, ಕೊಲೆ ಮಾಡಿ ಪರಾರಿ ಆಗಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕೊಲೆಯಾದ ವ್ಯಕ್ತಿಯ ಪರಿಚಯಸ್ಥರೇ ಕೃತ್ಯ ಎಸಗಿರುವ ಶಂಕೆಯಿದ್ದು, ಆರೋಪಿಗಳಿಗೆ ಶೋಧ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ರಾಸಾಯನಿಕ ಎರಚಿದ್ದ ಪ್ರಕರಣ ಆರೋಪಿಗೆ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೌಚಾಲಯ ಶುಚಿಗೊಳಿಸುವ ರಾಸಾಯನಿಕವನ್ನು ಯುವಕನ ಮೇಲೆ ಎರಚಿ ಗಾಯಗೊಳಿಸಿದ ಪ್ರಕರಣದ ಸಂಬಂಧ ತನಿಖೆ ನಡೆಸುತ್ತಿರುವ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು, ಆರೋಪಿ ಪತ್ತೆಗಾಗಿ ತನಿಖೆ ಚುರುಕುಗೊಳಿಸಿದ್ದಾರೆ.

ಗಾಯಗೊಂಡಿರುವ, ವೃಷಭಾವತಿ ನಗರದ ನಿವಾಸಿ ನಾಗೇಶ್ ಕೊಂಡಾ(21) ಅವರಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ. ನಾಗೇಶ್ ಅವರ ಎಡಕಣ್ಣು, ಮುಖ ಹಾಗೂ ತುಟಿಗೆ ಸುಟ್ಟ ಗಾಯವಾಗಿದೆ.

ಅವರು ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾರ್ಖಾನೆಯೊಂದರಲ್ಲಿ ಫಿಟ್ಟರ್ ಆಗಿ ನಾಗೇಶ್ ಕೆಲಸ ಮಾಡುತ್ತಿದ್ದರು. ಭಾನುವಾರ ಕೆಲಸಕ್ಕೆ ರಜೆ ಇದ್ದ ಕಾರಣ ವೈನ್ ಸ್ಟೋರ್‌ಗೆ ಬಂದು ಮದ್ಯ ಸೇವಿಸಿ, ಊಟ ಮುಗಿಸಿ ಮನೆಗೆ ಹೊರಟಿದ್ದರು. ಈ ವೇಳೆ ಮದ್ಯದಂಗಡಿ ಬಳಿ ಬಂದ ದುಷ್ಕರ್ಮಿ, ನಾಗೇಶ್ ಮುಖಕ್ಕೆ ರಾಸಾಯನಿಕ ಎರಚಿ ಪರಾರಿಯಾಗಿದ್ದ.

ನಾಗೇಶ್ ಅವರು ಈ ಹಿಂದೆ ವೈಟ್‌ಫೀಲ್ಡ್‌ನ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅವರು ವಾಸವಿದ್ದ ಮನೆಯ ಎದುರೇ ಯುವತಿಯೊಬ್ಬರು ವಾಸಿಸುತ್ತಿದ್ದರು. ಆಕೆಯ ಜತೆಗೆ ನಾಗೇಶ್ ಅವರು ಫೋನ್‌ನಲ್ಲಿ ಮಾತುಕತೆ ನಡೆಸುತ್ತಿದ್ದರು. ಈ ವಿಷಯ ತಿಳಿದು ಯುವತಿ ಕಡೆಯ ವ್ಯಕ್ತಿಯೇ ರಾಸಾಯನಿಕ ಎರಚಿರುವ ಸಾಧ್ಯತೆಯಿದೆ. ಆರೋಪಿಯ ಬಗ್ಗೆ ಸುಳಿವು ಸಿಕ್ಕಿದ್ದು ಶೀಘ್ರದಲ್ಲೇ ಬಂಧಿಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುಬ್ರಮಣ್ಯೇಶ್ವರ ಬ್ಯಾಂಕ್‌ಗೆ ₹8.83 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸುಬ್ರಮಣ್ಯೇಶ್ವರ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್ 2023–24ನೇ ಸಾಲಿನಲ್ಲಿ ₹ 8.83 ಕೋಟಿ ನಿವ್ವಳ ಲಾಭ ಗಳಿಸಿದೆ ಎಂದು ಬ್ಯಾಂಕಿನ ಸಂಸ್ಥಾಪಕ ಅಧ್ಯಕ್ಷ ಕೆ.ಎಂ. ರಂಗಧಾಮ ಶೆಟ್ಟಿ ಮತ್ತು ಉಪಾಧ್ಯಕ್ಷ ಡಿ.ಆರ್. ವಿಜಯಸಾರಥಿ ತಿಳಿಸಿದರು.

ಬ್ಯಾಂಕ್‌ನ ಸರ್ವ ಸದಸ್ಯರ ಸಭೆಯಲ್ಲಿ ಅವರು ಮಾಹಿತಿ ನೀಡಿದರು. ಬ್ಯಾಂಕ್ ಇತ್ತೀಚೆಗೆ ಸುವರ್ಣ ಮಹೋತ್ಸವ ಆಚರಿಸಿಕೊಂಡಿದೆ, 2020-21ರಲ್ಲಿ ಬ್ಯಾಂಕ್ ₹22.38 ಲಕ್ಷ ಲಾಭ ಗಳಿಸಿತ್ತು. ಈ ಬಾರಿ ಲಾಭದ ಪ್ರಮಾಣದಲ್ಲಿ ಗಣನೀಯ ಏರಿಕೆಯಾಗಿದೆ ಎಂದು ವಿವರಿಸಿದರು.

'ಲೆಕ್ಕ ಪರಿಶೋಧನೆಯಲ್ಲಿ ಬ್ಯಾಂಕ್ ಅನ್ನು 'ಎ' ವಿಭಾಗದಲ್ಲಿ ವರ್ಗೀಕರಿಸಲಾಗಿದೆ. ನಿವ್ವಳ ಅನುತ್ಪಾದಕ ಆಸ್ತಿ (ಎನ್‌ಪಿಎ) ಶೇಕಡ 6ಕ್ಕಿಂತ ಕಡಿಮೆ ಇರಬೇಕೆಂಬ ನಿಯಮ ಇದೆ. ನಮ್ಮ ಬ್ಯಾಂಕ್‌ನ ಎನ್‌ಪಿಎ ಶೇ 3ರ ಮಿತಿಯಲ್ಲಿದೆ' ಎಂದರು.

ನಿರ್ದೇಶಕರಾದ ಸಿ.ಎಲ್. ವೆಂಕಟಾಚಲಪತಿ, ಪಿ. ರುದ್ರಮೂರ್ತಿ, ಸತ್ಯಮೂರ್ತಿ, ನಂಜೇಗೌಡ, ಎಂ.ಕೆ. ಸುರೇಶ್ ಬಾಬು, ಮಹಾಲಕ್ಷ್ಮಿ, ಅನ್ನಪೂರ್ಣಮ್ಮ, ಜಯಲಕ್ಷ್ಮಿ ಜೆ. ತೋಟಗೆರೆ, ರವೀಂದ್ರ ಪಿ.ಕೆ., ರವಿ ಕೆ., ಎಚ್. ಮಾರುತಿ, ಪ್ರಧಾನ ವ್ಯವಸ್ಥಾಪಕ ಕೆ.ಎನ್. ಕೃಷ್ಣಯ್ಯಶೆಟ್ಟಿ, ಸಲಹೆಗಾರ ಬಿ.ಆರ್. ನಾಗರಾಜ್ ಉಪಸ್ಥಿತರಿದ್ದರು.

ಹುಡುಗಿಯ ವಿಚಾರಕ್ಕೆ ಜಗಳ: ಸಂಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ

ಸ್ನೇಹಿತನ ಕೊಲೆ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆದ್ದಲಹಳ್ಳಿಯಲ್ಲಿ ಇತ್ತೀಚೆಗೆ ನಡೆದಿದ್ದ ಕೊಲೆ ಪ್ರಕರಣದ ಆರೋಪಿಯನ್ನು ಸಂಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವರುಣ್ ಕೊಲೆಯಾದ ಯುವಕ. ಕೊಲೆ ಪ್ರಕರಣ ಸಂಬಂಧ ಉಡುಪಿಯ ಕಿದಿಯೂರು ಗ್ರಾಮದ ದಿವೇಶ್ ಹೆಗಡೆ(24) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ. ಸೆ.21ರಂದು ಬೆಳಿಗ್ಗೆ 8.45ರ ಸುಮಾರಿಗೆ ವರುಣ್ ಅವರ ಕೊಲೆಯಾಗಿತ್ತು.

ವರುಣ್

ದಿವೇಶ್

'ಗೆದ್ದಲಹಳ್ಳಿಯ 14ನೇ ಕ್ರಾಸ್‌ನ ವಿಸ್ತಾರ ಅಪಾರ್ಟ್‌ಮೆಂಟ್ ಹಿಂಭಾಗ ವರುಣ್ ಹಾಗೂ ಆರೋಪಿ ದಿವೇಶ್ ಅವರು ಗಲಾಟೆ ಮಾಡಿಕೊಳ್ಳುತ್ತಿದ್ದರು. ಬಳಿಕ, ಆರೋಪಿ ವರುಣ್‌ನನ್ನು ನೆಲಕ್ಕೆ ಬೀಳಿಸಿ ಕಲ್ಲು ಎತ್ತಿಹಾಕಿ ನಂತರ ಇಟ್ಟಿಗೆಯಿಂದ ತಲೆಗೆ ಹೊಡೆದು ಕೊಲೆ ಮಾಡಿದ್ದ. ತಾಂತ್ರಿಕ ಸಾಕ್ಷ್ಯ ಹಾಗೂ ಬಾತ್ಮೀದಾರರು ನೀಡಿದ ಮಾಹಿತಿ ಆಧರಿಸಿ ಸಂಜಯನಗರದ ಇಸ್ರೊ ರಸ್ತೆಯಲ್ಲಿರುವ ಸೌಂದರ್ಯ ಉದ್ಯಾನದ ಬಳಿ ಆರೋಪಿಯನ್ನು ಬಂಧಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಕೊಲೆಯಾದ ಯುವಕ, ಆರೋಪಿ ಹಾಗೂ ಆರೋಪಿಯ ಸ್ನೇಹಿತೆ ಮೂವರೂ ಶಾಲಾ ದಿನಗಳಿಂದಲೂ ಸ್ನೇಹಿತರು. ಆರೋಪಿ ದಿವೇಶ್ ಸ್ನೇಹಿತೆಯನ್ನು ಪ್ರೀತಿಸುತ್ತಿದ್ದ. ವರುಣ್ ಬೇರೆ ಯುವತಿಯನ್ನು ಪ್ರೀತಿಸುತ್ತಿದ್ದರೂ, ಆರೋಪಿಯ ಸ್ನೇಹಿತೆಯೊಂದಿಗೆ ತುಂಬಾ ಸಲುಗೆಯಿಂದ ಇದ್ದ. ಸೆ.20ರಂದು ವರುಣ್ ಜನ್ಮದಿನಾಚರಣೆ ಇತ್ತು. ಕೋರಮಂಗಲದ ಪಬ್‌ನಲ್ಲಿ ಮೂವರು ಸೇರಿ ಪಾರ್ಟಿ ಮಾಡಿದ್ದರು. ಪಾರ್ಟಿ ವೇಳೆ ಕೊಲೆಯಾದ ವರುಣ್ ಹಾಗೂ ಆರೋಪಿ ಪ್ರೀತಿಸುತ್ತಿದ್ದ ಹುಡುಗಿ ಸಲುಗೆಯಿಂದ ಇದ್ದರು. ಇದನ್ನು ಕಂಡ ಆರೋಪಿ ಬೇಸರ ಪಟ್ಟುಕೊಂಡು ಕೊಲೆಗೆ ಸಂಚು ರೂಪಿಸಿದ್ದ. ಇದೇ ವಿಚಾರಕ್ಕೆ ಸೆ.21ರಂದು ಇಬ್ಬರ ಮಧ್ಯೆ ಗಲಾಟೆ ನಡೆದಿತ್ತು. ಆಗ ಕಲ್ಲಿನಿಂದ ಜಜ್ಜಿ ವರುಣ್‌ನನ್ನು ಕೊಲೆ ಮಾಡಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು. ಸಂಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭಾರತೀಯ ಸಾಮಾಜಿಕ ಸ್ವಾಸ್ಥ್ಯ ಸಂಘ (ಅಭಯಾಶ್ರಮ)
ವಿಲ್ಸನ್ ಗಾರ್ಡನ್, ಬೆಂಗಳೂರು –560027

ದಿನಾಂಕ: 19.07.2024ರ ಮಕ್ಕಳ ಕಲ್ಯಾಣ ಸಮಿತಿ–2, ಬೆಂಗಳೂರು ನಗರ ಜಿಲ್ಲಾ ಕಛೇರಿಯ ಆದೇಶದ ಮೇರೆಗೆ ಈ ಕೆಳಕಂಡ ಮಕ್ಕಳು ನಮ್ಮ ಸಂಸ್ಥೆಯ ಪಾಲನೆಯಲ್ಲಿದ್ದು ಇವರ ತಂದೆ/ ತಾಯಿ ಅಥವಾ ಇತರೆ ಸಂಬಂಧಿಕರ ಬಗ್ಗೆ ನಮ್ಮಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ. ಆದ್ದರಿಂದ ಈ ಮಕ್ಕಳ ಬಗ್ಗೆ ಯಾವುದೇ ಮಾಹಿತಿ (ಸೂಕ್ತ ದಾಖಲೆ ಇದ್ದಲ್ಲಿ ನಮ್ಮನ್ನು ಕೂಡಲೇ ಸಂಪರ್ಕಿಸಬೇಕಾಗಿ ಸಾರ್ವಜನಿಕರಲ್ಲಿ ವಿನಂತಿ. (ದೂರವಾಣಿ ಸಂಖ್ಯೆ: 8296943192, 7899958621 & 08022220834)

ಗೌರಿ
ಜನ್ಮ ದಿನಾಂಕ 02–09–2008, ತಂದೆ: ದೇವಸಗಾಯಮ್ ತಾಯಿ: ಮೇರಿ, ಆರೋಗ್ಯಸ್ಥಿತಿ–ಉತ್ತಮ, ಗುರುತು– ಎಡಭಾಗದ ಕೈತೋಳಿನಲ್ಲಿ ಕಪ್ಪು ಮಚ್ಚೆ, ದಾಖಲಾದ ದಿನಾಂಕದಿಂದ ಪ್ರಸ್ತುತ: 27–06–2023

ಜಮುನಾಶ್ರೀ
ಜನ್ಮ ದಿನಾಂಕ 23–06–2007, ತಂದೆ: ಸುನಿಲ್, ತಾಯಿ: ಕೇಸರಿ, ಆರೋಗ್ಯಸ್ಥಿತಿ–ಉತ್ತಮ, ಗುರುತು– ಬಲಭಾಗದ ಕಿವಿಯ ಹಿಂದೆ ಕಪ್ಪು ಮಚ್ಚೆ, ದಾಖಲಾದ ದಿನಾಂಕದಿಂದ ಪ್ರಸ್ತುತ: 15–06–2019

ವಿದ್ಯಾಶ್ರೀ
ಜನ್ಮ ದಿನಾಂಕ 09–02–2008 ತಂದೆ: ಕೆ.ಎನ್. ಮುನಿಸ್ವಾಮಿ, ತಾಯಿ: ಗಿರಿಜ, ಆರೋಗ್ಯಸ್ಥಿತಿ–ಉತ್ತಮ, ಗುರುತು– ಮೂಗಿನ ಎಡಭಾಗದಲ್ಲಿ ಕಪ್ಪು ಮಚ್ಚೆ, ದಾಖಲಾದ ದಿನಾಂಕದಿಂದ ಪ್ರಸ್ತುತ: 15–06–2019

ಐಶ್ವರ್ಯ
ಜನ್ಮ ದಿನಾಂಕ 10–08–2015, ತಂದೆ:ಡಾರ್ವಿನ್, ತಾಯಿ: ಮಂಜುಳ, ಆರೋಗ್ಯಸ್ಥಿತಿ–ಉತ್ತಮ, ಗುರುತು– ಬಲಭಾಗದ ಕೆನ್ನೆಯ ಮೇಲೆ ಗಾಯದ ಗುರುರು, ದಾಖಲಾದ ದಿನಾಂಕದಿಂದ ಪ್ರಸ್ತುತ: 06–04–2021

‘ಅಧ್ಯಾತ್ಮದ ಅನುಭಾವ ಎಲ್ಲರಿಗೂ ದಕ್ಕುವಂತಹದ್ದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಧ್ಯಾತ್ಮದ ಅನುಭಾವವನ್ನು ದಕ್ಕಿಸಿಕೊಳ್ಳಲು ಮನಸ್ಸು, ಬುದ್ಧಿ ಹದಗೊಂಡು ಸಿದ್ಧರಾಗಬೇಕು. ಆಗ ಮಾತ್ರ ಅದರ ನಿಗೂಢತೆಯ ಪದರಗಳನ್ನು ಪ್ರವೇಶಿಸಬಹುದು. ಅದರ ಅಂತರ್ಯ ಅರಿಯಲು ಮತ್ತು ವಿಹರಿಸಲು ಸಾಧ್ಯ’ ಎಂದು ಗುರು ಸಕಲಮಾ ಹೇಳಿದರು.

ನಗರದ ಗಾಯನ ಸಮಾಜದಲ್ಲಿ ‘ಹಿಮಾಲಯದ ಋಷಿಗಳ ದಿವ್ಯ ಸಂದೇಶಗಳು ಸಕಾಲಿಕ ಮತ್ತು ಕಾಲಾತೀತ’ ಆತ್ಮಕಥನ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಪ್ರಯತ್ನ ಮತ್ತು ನಿರಂತರ ಸಾಧನೆಯ ಮೂಲಕ ಯಾರು ಬೇಕಾದರೂ ಅಧ್ಯಾತ್ಮದ ಉನ್ನತ ಸ್ಥಿತಿಯನ್ನು ತಲುಪಲು ಸಾಧ್ಯ. ಇದಕ್ಕೆ ಜಾತಿ, ಧರ್ಮ, ಲಿಂಗಬೇಧವಿಲ್ಲ’ ಎಂದು ಅವರು ತಿಳಿಸಿದರು.

‘ಸದಾ ಬಹಿರ್ಮುಖಿಯಾಗಿ ವ್ಯವಹರಿಸುವ ನಾವು ಅಂತರ್ಮುಖಿಯಾಗಿ ನಮ್ಮೊಳಗೇ ಪಯಣಿಸಬೇಕು. ಅದು ಭಿನ್ನಲೋಕವನ್ನೇ ತೆರೆದುಕೊಡುತ್ತದೆ’ ಎಂದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಅಹಲ್ಯಾ ಶರ್ಮ ಮಾತನಾಡಿ, ‘ಅಧ್ಯಾತ್ಮ, ಶ್ರೀವಿದ್ಯೆ, ತಂತ್ರ ಮಾರ್ಗದ ಬಗ್ಗೆ ಜನರಲ್ಲಿ ತಪ್ಪು ಕಲ್ಪನೆಗಳಿವೆ. ಸರಿಯಾದ ರೀತಿಯಲ್ಲಿ ಅರ್ಥೈಸಿದಾಗ, ಆತ್ಮ ವಿಕಸನಕ್ಕೆ ಅದ್ಭುತ ಮಾರ್ಗ ಎಂಬ ಅರಿವು ಮೂಡುತ್ತದೆ’ ಎಂದರು. ನಟಿ ಪ್ರಿಯಾಂಕಾ ಉಪೇಂದ್ರ ಮಾತನಾಡಿದರು.

ಮೃತ ಚಂದ್ರಶೇಖರನ್ ಪತ್ನಿಗೆ ₹25 ಲಕ್ಷ ಪರಿಹಾರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಲೆಕ್ಕಾಧಿಕಾರಿಯಾಗಿದ್ದ ಮೃತ ಪಿ.ಚಂದ್ರಶೇಖರನ್ ಅವರ ಪತ್ನಿಗೆ ₹25 ಲಕ್ಷ ಪರಿಹಾರದ ಚೆಕ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ವಿತರಿಸಿದರು.

ಮುಖ್ಯಮಂತ್ರಿಗಳ ನಿವಾಸ ‘ಕಾವೇರಿ’ಯಲ್ಲಿ ಚಂದ್ರಶೇಖರ್ ಅವರ ಪತ್ನಿ ಕವಿತಾ ಮತ್ತು ಮಕ್ಕಳು ಚೆಕ್ ಪಡೆದುಕೊಂಡರು. ಈ ಪ್ರಕರಣದಲ್ಲಿ ವಿಶೇಷ ತನಿಖಾ ತಂಡವು ದೋಷಾರೋಪ ಪಟ್ಟಿ ಸಲ್ಲಿಸಿರುವ ಕಾರಣ, ದೌರ್ಜನ್ಯ ತಡೆ ಕಾಯ್ದೆ ಅನುಸಾರವೂ ಪ್ರತ್ಯೇಕ ಪರಿಹಾರ ನೀಡಲಿದ್ದು, ₹8.25 ಲಕ್ಷ ಮಂಜೂರು ಮಾಡಲಾಗಿದೆ ಎಂದು ಮುಖ್ಯಮಂತ್ರಿ ಕಚೇರಿ ಪ್ರಕಟಣೆ ತಿಳಿಸಿದೆ.

ರಾಜ್ಯದ ಪ್ರಥಮ ಅನಿಲ ವಿದ್ಯುತ್ ಸ್ಥಾವರ ಲೋಕಾರ್ಪಣೆ: ಸಿ.ಎಂ. ಸಿದ್ದರಾಮಯ್ಯ

ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಆದ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕದ ಕೆಪಿಸಿಎಲ್ ಯೋಜನಾ ಪ್ರದೇಶದಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸ್ಥಾಪಿಸಿರುವ ರಾಜ್ಯದ ಮೊಟ್ಟ ಮೊದಲ 370 ಮೆಗಾವಾಟ್ ಸಾಮರ್ಥ್ಯದ ಅನಿಲ ಆಧಾರಿತ ಯಲಹಂಕ ಸಂಯುಕ್ತ ವಿದ್ಯುತ್ ಸ್ಥಾವರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಇಂಧನ ಸಚಿವ ಕೆ.ಜೆ.ಜಾರ್ಜ್ ಮಂಗಳವಾರ ಲೋಕಾರ್ಪಣೆ ಮಾಡಿದರು.

ನಂತರ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಈ ಸ್ಥಾವರ ಉದ್ಘಾಟನೆ ಮೂಲಕ ಭವಿಷ್ಯದ ಬೇಡಿಕೆಗೆ ಅಗತ್ಯ ವಿದ್ಯುತ್ ಉತ್ಪಾದನೆಯತ್ತ ಮಹತ್ವದ ಹೆಜ್ಜೆ ಇಟ್ಟಿದ್ದೇವೆ’ ಎಂದರು.

‘ವಿದ್ಯುತ್ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧ್ಯವಾಗದಿದ್ದರೆ ಆರ್ಥಿಕ ಪ್ರಗತಿ ಸಾಧ್ಯವಿಲ್ಲ. ವಿದ್ಯುತ್ ಉತ್ಪಾದನೆಯಲ್ಲಿ ಸ್ವಾಲಂಬನೆ ಸಾಧಿಸದಿದ್ದಲ್ಲಿ ಜಿಡಿಪಿ ಬೆಳವಣಿಗೆಯೂ ಆಗುವುದಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಗುಣಮಟ್ಟದ ವಿದ್ಯುತ್ ಪೂರೈಕೆ ಜತೆಗೆ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಆದ್ಯತೆ ನೀಡುತ್ತದೆ’ ಎಂದು ಹೇಳಿದರು.

‘ಕಳೆದ ವರ್ಷ ರಾಜ್ಯದಲ್ಲಿ ತೀವ್ರ ಬರಗಾಲವಿದ್ದರೂ ಸಮರ್ಪಕ ವಿದ್ಯುತ್ ಪೂರೈಸುವಲ್ಲಿ ಯಶಸ್ವಿಯಾಗಿದ್ದೇವೆ. ಆದರೂ ಭವಿಷ್ಯದ ಬೇಡಿಕೆಯನ್ನು ಮುಂದಿಟ್ಟುಕೊಂಡು 2030ರ ವೇಳೆಗೆ ಈಗಿರುವ 34,639 ಸಾವಿರ ಮೆಗಾವಾಟ್ ವಿದ್ಯುತ್ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯವನ್ನು 60 ಸಾವಿರ ಮೆಗಾವಾಟ್‌ಗೆ ಹೆಚ್ಚಿಸಲು ಬಜೆಟ್‌ನಲ್ಲಿ ಘೋಷಿಸಿದ್ದು, ಅದಕ್ಕೆ ತಕ್ಕಂತೆ ಯೋಜನೆ ರೂಪಿಸಲಾಗುತ್ತದೆ ಎಂದು ತಿಳಿಸಿದರು.

ಛತ್ತೀಸಗಡದ ಗೋದ್ನಾದಲ್ಲಿ 1600 ಮೆಗಾವಾಟ್ ಸಾಮರ್ಥ್ಯದ ಉಷ್ಣ ವಿದ್ಯುತ್ ಸ್ಥಾವರ, ಶರಾವತಿಯಲ್ಲಿ 2,000 ಮೆಗಾವಾಟ್, ವಾರಾಹಿಯಲ್ಲಿ 1500 ಮೆಗಾವಾಟ್ ಪಂಪ್ಡ್ ಸ್ಟೋರೇಜ್ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದರ ಜತೆಗೆ ಸೌರ ಮತ್ತು ಪವನ ವಿದ್ಯುತ್ ಉತ್ಪಾದನೆಗೂ ಆದ್ಯತೆ ನೀಡಲಾಗುವುದು ಎಂದರು.

ಕುಸುಮ್‌ಗೆ ನನ್ನ ಯೋಜನೆಯೇ ಪ್ರೇರಣೆ: ‘ಹಿಂದೆ ಈ ಸ್ಥಳದಲ್ಲಿದ್ದ ಡೀಸೆಲ್ ವಿದ್ಯುತ್ ಘಟಕ ಸ್ಥಗಿತಗೊಳಿಸಿ, ಅಧುನಿಕ ತಂತ್ರಜ್ಞಾನದ ಅನಿಲ ಸ್ಥಾವರ ಸ್ಥಾಪಿಸಲಾಗಿದೆ. ಪಾವಗಡ ಸೋಲಾರ್ ಪಾರ್ಕ್ ಮಾಡಿದ್ದು ಇತಿಹಾಸ. ಕೃಷಿ ಪಂಪ್‌ಸೆಟ್‌ಗಳಿಗೆ ಸೋಲಾರ್ ವಿದ್ಯುತ್ ಪೂರೈಸುವ ಯೋಜನೆಗೆ ಅಡಿಪಾಯ ಹಾಕಿದ್ದೇ ನಾವು. ಅದನ್ನು ಈಗ ಕೇಂದ್ರ ‘ಕುಸುಮ್’ ಎಂದು ಹೆಸರಿಟ್ಟು ಜಾರಿಗೊಳಿಸಿದೆ. ಮೇಕೆದಾಟು ಯೋಜನೆ ಪೂರ್ಣಗೊಂಡರೆ ಅದರಿಂದ 400 ಮೆಗಾವಾಟ್ ಉತ್ಪಾದನೆ ಸಾಧ್ಯ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಇಂಧನ ಸಚಿವ ಕೆ.ಜೆ.ಜಾರ್ಜ್ ಮಾತನಾಡಿ, ‘ರಾಜ್ಯದ ಪ್ರಥಮ ಅನಿಲ ವಿದ್ಯುತ್ ಸ್ಥಾವರದ ಉದ್ಘಾಟನೆ ದಿನವನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕು. ಸರ್ಕಾರದ ಇಚ್ಛಾಶಕ್ತಿಯಿಂದಷ್ಟೇ ಮುಚ್ಚಿದ ಘಟಕವನ್ನು ಪುನರ್ ಸ್ಥಾಪಿಸಲು ಸಾಧ್ಯ’ ಎಂದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ್, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಗೋವಿಂದರಾಜ್, ನಸೀರ್ ಅಹ್ಮದ್, ಶಾಸಕ ಎಸ್.ಆರ್. ವಿಶ್ವನಾಥ್, ಶಾಸಕ ಅಜಯ್ ಸಿಂಗ್, ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಥೋಡ್, ಬಿಎಚ್‌ಇಎಲ್ ಅಧ್ಯಕ್ಷ ಕೊಪ್ಪು ಸದಾಶಿವಮೂರ್ತಿ, ಗೇಲ್ ಅಧ್ಯಕ್ಷ ಸಂದೀಪ್ ಕುಮಾರ್ ಗುಪ್ತ, ಕೆಇಆರ್‌ಸಿ ಸದಸ್ಯರಾದ ಜಾವೇದ್ ಅಖ್ತರ್, ಜಗದೀಶ್, ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಪಾಲ್ಗೊಂಡಿದ್ದರು.

ಅನಿಲ ಆಧಾರಿತ ಯಲಹಂಕ ಸಂಯುಕ್ತ ವಿದ್ಯುತ್ ಸ್ಥಾವರವನ್ನು ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಇಂಧನ ಸಚಿವ ಕೆ.ಜೆ.ಜಾರ್ಜ್, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗವಹಿಸಿದ್ದರು.

ವೈಸಿಸಿಪಿಪಿ ಸಿಬ್ಬಂದಿಗೆ ₹5 ಸಾವಿರ ಬೋನಸ್

ಯಲಹಂಕ ಸಂಯುಕ್ತ ಆವರ್ತ ವಿದ್ಯುತ್ ಸ್ಥಾವರದ ಎಲ್ಲಾ ಉದ್ಯೋಗಿಗಳಿಗೆ ₹5 ಸಾವಿರ ಬೋನಸ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ.

ಹಿಂದೆ ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರ ಲೋಕಾರ್ಪಣೆ ಸಂದರ್ಭದಲ್ಲಿ ಅಲ್ಲಿನ ಉದ್ಯೋಗಿಗಳಿಗೆ ಬೋನಸ್ ನೀಡಲಾಗಿತ್ತು. ಅದೇ ಮಾದರಿಯಲ್ಲಿ ಈ ಸ್ಥಾವರದ ಉದ್ಯೋಗಿಗಳಿಗೂ ಬೋನಸ್ ನೀಡುವುದಾಗಿ ಕೆಪಿಸಿ ಎಲ್ ಅಧ್ಯಕ್ಷನಾಗಿ ಘೋಷಿಸುತ್ತಿದ್ದೇನೆ ಎಂದರು.

ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ತಯಾರಿಸಿರುವ ಲಘು ವಾಣಿಜ್ಯ ವಾಹನ (ಎಲ್‌ಸಿವಿ) ‘ವೀರೋ’ ಅನ್ನು ಬೆಂಗಳೂರಿನ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ಬಿಡುಗಡೆ ಮಾಡಲಾಯಿತು. ಕಂಪನಿಯ ಪ್ರಾದೇಶಿಕ ಸರ್ವಿಸ್ ಮ್ಯಾನೇಜರ್ ಪ್ರಹ್ಲಾದ್ ಕುಲಕರ್ಣಿ, ಪ್ರಾದೇಶಿಕ ಮಾರಾಟ ವಿಭಾಗದ ಮ್ಯಾನೇಜರ್ ಜಾಸ್ಲಿನ್ ಜೈಸನ್ ಹಾಗೂ ವಾಣಿಜ್ಯ ವಾಹನಗಳ ವಿಭಾಗದ (ಕರ್ನಾಟಕ) ಮುಖ್ಯಸ್ಥರಾದ ಶೋರ ಪಾಟೀಲ ಇದ್ದರು

ಮಯೂರ, ಸುಧಾ ಓದಿರಿ

ಅಬಕಾರಿ ಕಚೇರಿಯಲ್ಲಿ ‘ಗಾಂಜಾ’ ಸಿಗರೇಟ್

ಒಂದನೇ ಪುಟದಿಂದ...

‘ಅಧಿಕಾರಿಗಳು, ನೌಕರರು ಕಚೇರಿಯಲ್ಲೇ ಮದ್ಯ ಸೇವಿಸಿರುವ ಸಾಧ್ಯತೆ ಇದೆ. ಕೆಲವು ಬಾಟಲಿಗಳು ಪೂರ್ತಿ ಖಾಲಿಯಾಗಿದ್ದು, ಕೆಲವು ಬಾಟಲಿಗಳಲ್ಲಿ ಅಲ್ಪ–ಸ್ವಲ್ಪ ಮದ್ಯ ಉಳಿದಿತ್ತು. ಯಶವಂತಪುರ ಕಚೇರಿಯಲ್ಲಿ ಮೂರ್ತಿ ಎಂಬಾತನ ಬ್ಯಾಗ್‌ನಲ್ಲಿ ಒಂದು ಬಾಟಲಿ ಮದ್ಯ ಇತ್ತು. ಆ ಬಗ್ಗೆ ಕೇಳಿದರೆ, ‘ನನ್ನ ಸ್ನೇಹಿತ ಈ ಬಾಟಲಿ ಕೊಟ್ಟಿದ್ದ. ಅದನ್ನು ಬ್ಯಾಗ್‌ನಲ್ಲೇ ಇಟ್ಟುಕೊಂಡಿದ್ದೆ’ ಎಂದ. ಆ ಎಲ್ಲ ಬಾಟಲಿಗಳು, ಗಾಂಜಾ ಮತ್ತು ಗಾಂಜಾ ತುಂಬಿದ್ದ ಸಿಗರೇಟ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಈ ಬಗ್ಗೆ ವಿವರಣೆ ನೀಡುವಂತೆ ಸೂಚಿಸಲಾಗಿದೆ’ ಎಂದು ಅವರು ಮಾಹಿತಿ ನೀಡಿದರು.

‘ಎರಡೂ ಕಡೆ ಹಲವು ಅಧಿಕಾರಿಗಳು ಕಚೇರಿಯಲ್ಲಿ ಇರಲಿಲ್ಲ. ಕರೆ ಸ್ವೀಕರಿಸಲಿಲ್ಲ, ಬದಲಿಗೆ ಫೋನ್ ಸ್ವಿಚ್ ಆಫ್ ಮಾಡಿಕೊಂಡರು. ಯಶವಂತಪುರ ಕಚೇರಿಯಲ್ಲಿ ಹಿರಿಯ ಅಧಿಕಾರಿಗಳು ಕಚೇರಿಗೆ ಬರಲೇ ಇಲ್ಲ’ ಎಂದು ಅವರು ಮಾಹಿತಿ ನೀಡಿದರು.

ಎಲ್ಲ ಕಚೇರಿಗಳಲ್ಲಿ ಶೋಧಕಾರ್ಯ ಮುಂದುವರೆದಿದ್ದು, ವರದಿ ಬಂದ ನಂತರ ಅಧಿಕಾರಿಗಳನ್ನು ವಿಚಾರಣೆಗೆ ಕರೆಸಲಾಗುತ್ತದೆ ಎಂದು ಲೋಕಾಯುಕ್ತವು ಮಾಹಿತಿ ನೀಡಿದೆ.

ಯಶವಂತಪುರದ ಕಚೇರಿಯಲ್ಲಿ ಪತ್ತೆಯಾದ ಮದ್ಯದ ಬಾಟಲಿಗಳು

ಸ್ಕೂಟರ್ ಡಿಕ್ಕಿಯಲ್ಲಿ ₹1 ಲಕ್ಷ

‘ಶೋಧದ ವೇಳೆ ಬ್ಯಾಟರಾಯನಪುರ ಅಬಕಾರಿ ಕಚೇರಿಯಲ್ಲಿ ₹2 ಲಕ್ಷ ನಗದು ಪತ್ತೆಯಾಗಿದೆ. ಇದರಲ್ಲಿ ₹ 1 ಲಕ್ಷ ನಗದು ಕಚೇರಿ ಸಿಬ್ಬಂದಿಗೆ ಸೇರಿದ ಸ್ಕೂಟರ್‌ನ ಡಿಕ್ಕಿಯಲ್ಲಿ ಇತ್ತು’ ಎಂದು ಉಪ ಲೋಕಾಯುಕ್ತರು ಮಾಹಿತಿ ನೀಡಿದರು.

‘ಇದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳು ಯಾವುದೇ ಮಾಹಿತಿ ನೀಡಿಲ್ಲ. ದಾಖಲೆಗಳೂ ಇಲ್ಲ. ನಗದು ವಶಕ್ಕೆ ಪಡೆದಿದ್ದು, ವಿವರಣೆ ನೀಡಲು ಸೂಚಿಸಲಾಗಿದೆ’ ಎಂದರು. ‘ಎರಡೂ ಕಡೆ ಲೋಕಾಯುಕ್ತಕ್ಕೆ ಸಂಬಂಧಿಸಿದ ಫಲಕಗಳನ್ನು ಪ್ರದರ್ಶಿಸಿಲ್ಲ. ಸಾರ್ವಜನಿಕರು ದೂರು ನೀಡಲು ಅಗತ್ಯ ಸಂಪರ್ಕ ಸಂಖ್ಯೆ ಪ್ರದರ್ಶಿಸಿಲ್ಲ. ಈ ಬಗ್ಗೆಯೂ ವಿವರಣೆ ಕೇಳಲಾಗಿದೆ’ ಎಂದರು.

ಸುದ್ದಿ 2 ನಿಮಿಷ

ದೇವನಹಳ್ಳಿಯಲ್ಲಿ ಬಹು ಕೌಶಲ ಅಭಿವೃದ್ಧಿ ಕೇಂದ್ರ: ಮುನಿಯಪ್ಪ ಮನವಿ

ನವದೆಹಲಿ: ಯುವಜನರಿಗೆ ಕೌಶಲ ತರಬೇತಿ ನೀಡಲು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಬಹು ಕೌಶಲ ತರಬೇತಿ ಕೇಂದ್ರ ಸ್ಥಾಪಿಸಬೇಕು ಎಂದು ಆಹಾರ ಹಾಗೂ ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಅವರು ಕೇಂದ್ರ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಮನವಿ ಮಾಡಿದರು.

ಮಂಗಳವಾರ ಇಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಮುನಿಯಪ್ಪ, ‘ಗ್ರಾಮಾಂತರ ಜಿಲ್ಲೆಯಲ್ಲಿ 45 ಸಾವಿರ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳಿವೆ. ಈ ಕೈಗಾರಿಕೆಗಳಲ್ಲಿ ಸುಮಾರು ನಾಲ್ಕು ಲಕ್ಷ ಮಂದಿ ಕೆಲಸ ಮಾಡುತ್ತಿದ್ದಾರೆ. ಆದರೆ, ಜಿಲ್ಲೆಯ ಯುವಜನರಿಗೆ ಕೌಶಲ ತರಬೇತಿ ಸಿಗುತ್ತಿಲ್ಲ. ಹೀಗಾಗಿ, ಬಹು ಕೌಶಲ ಅಭಿವೃದ್ಧಿ ಕೇಂದ್ರ ಸ್ಥಾಪಿಸಬೇಕು’ ಎಂದು ಅಭಿಪ್ರಾಯಪಟ್ಟರು.

ನಾವು ತರಳಬಾಳು ಪೀಠದ ಅಪ್ಪಟ ಭಕ್ತರು: ಬಿ.ಸಿ. ಪಾಟೀಲ

ಬೆಂಗಳೂರು: ‘ನಾವು ತರಳಬಾಳು ಪೀಠದ ಅಪ್ಪಟ ಭಕ್ತರು. ಆದರೆ ಅಲ್ಲಿನ ಕೆಲವು ಧೋರಣೆಗಳಿಗೆ ನಮ್ಮ ವಿರೋಧವಿದೆ’ ಎಂದು ಮಾಜಿ ಸಚಿವ ಬಿ.ಸಿ.ಪಾಟೀಲ ಮಂಗಳವಾರ ಹೇಳಿದರು.

ನಗರದ ಅರಮನೆ ಮೈದಾನದಲ್ಲಿ ನಡೆದ ‘ತರಳಬಾಳು ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಶ್ರದ್ಧಾಂಜಲಿ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ನಾವು ಮಠದಿಂದ ಒಂದು ಪೈಸೆ ಬಯಸುವುದಿಲ್ಲ. ಭಕ್ತರಲ್ಲಿ ವಿಷ ಬೀಜ ಬಿತ್ತುವವರನ್ನು ಸಂಪೂರ್ಣವಾಗಿ ಕೈಬಿಡಬೇಕು’ ಎಂದು ಒತ್ತಾಯಿಸಿದರು.

‘ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಅವರು ಸ್ವಾತಂತ್ರ್ಯ ಪೂರ್ವದಲ್ಲಿ ಹಳ್ಳಿ–ಹಳ್ಳಿಗಳಲ್ಲಿ ಶಾಲೆಗಳನ್ನು ಪ್ರಾರಂಭಿಸಿದ್ದರು. ಗ್ರಾಮೀಣ ಹೆಣ್ಣುಮಕ್ಕಳು ವಿದ್ಯಾವಂತರಾಗಬೇಕು ಎನ್ನುವುದು ಅವರ ಆಶಯವಾಗಿತ್ತು. ಆದರೆ ಇಂದು ಆ ಶಾಲೆಗಳು ಮುಚ್ಚಿ ಹೋಗುವ ಪರಿಸ್ಥಿತಿಯಲ್ಲಿವೆ’ ಎಂದು ಆತಂಕ ವ್ಯಕ್ತಪಡಿಸಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್ ಮಾತನಾಡಿ, ‘ಗುರುಗಳು, ಪೀಠಾಧ್ಯಕ್ಷರು ಸ್ಥಾವರಗಳಿಗೆ ಅಂಟಿಕೊಳ್ಳಬಾರದು ಎನ್ನುವುದಕ್ಕೆ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ ಉತ್ತಮ ಉದಾಹರಣೆಯಾಗಿದ್ದರು. ವೇದ ಉಪನಿಷತ್ತುಗಳಲ್ಲಿ ಉತ್ತಮ ವಿಚಾರಧಾರೆಗಳಿವೆ. ಆದರೆ ಅವುಗಳನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಲೋಪಗಳಾಗಿವೆ’ ಎಂದು ಹೇಳಿದರು.

ಮೈಸೂರು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಜಿ. ಸದಾನಂದಯ್ಯ, ಅಣಬೇರು ರಾಜಣ್ಣ, ಸಿದ್ಧಪ್ಪ ಉಪಸ್ಥಿತರಿದ್ದರು.

ಪ್ಯಾರಾಲಿಂಪಿಕ್ಸ್ ವಿಜೇತರ ಪೋಸ್ಟ್‌ಕಾರ್ಡ್

ಬೆಂಗಳೂರು: ಫ್ರಾನ್ಸ್‌ನಲ್ಲಿ ನಡೆದ ಪ್ಯಾರಾಲಿಂಪಿಕ್ಸ್– 2024ರ ಪದಕ ವಿಜೇತರ ಪೋಸ್ಟ್‌ಕಾರ್ಡ್‌ಗಳನ್ನು ಅಂಚೆ ಇಲಾಖೆ ಸೆಪ್ಟೆಂಬರ್ 25ರಂದು ಬಿಡುಗಡೆ ಮಾಡಲಿದೆ.

ಆಗಸ್ಟ್ 28ರಿಂದ ಸೆಪ್ಟೆಂಬರ್ 8ರವರೆಗೆ ನಡೆದ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತವು ಒಟ್ಟು 28 ಪದಕಗಳನ್ನು ಗಳಿಸಿತ್ತು. ಈ ಸಂದರ್ಭದ ಸವಿನೆನಪಿಗಾಗಿ ಪದಕ ವಿಜೇತರ ಪೋಸ್ಟ್‌ಕಾರ್ಡ್‌ಗಳನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದು ಮುಖ್ಯ ಪೋಸ್ಟ್ ಮಾಸ್ಟರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Engg/ Production Technical

WANTED SERVICE ENGINEERS, Diploma Mech./ ITI with 1- 2 years of experience in Servicing, Assembling of Blowers, Compressors, Pumps, any Machines. KAY International Pvt. Ltd. Ph: 080- 41571217. Email your Resumes to: bangalore@kayblowers.com

REQUIRED DIPLOMA CIVIL ENGINEER FOR BUILDING CIVIL & INTERIOR WORKS AT BENGALURU 9448396682

Teachers/ Professors

TRAINED POST/GRADUATE TEACHERS FOR HIGH SCHOOL ENGLISH, MATHS(PCM) KANNADA. NAVODAYA VIDYANIKETHANA, #19, Dinnur Main Road, RT-Nagar, Bangalore-32. 9343247885 080-23334266 navodayavidyanikethna222@gmail.com .

SILICON CITY COLLEGE
AUTONOMOUS (A Unit of MJ Education Trust)
Autonomous Re-Accredited By NAAC with 'A' Grade
Approved by AICTE, New Delhi, Recognised under Section 2(f) & 12(B) by UGC, Affiliated to Bengaluru North University
#26/2 Ravindra Layout, K R Puram, Bengaluru 560036, Karnataka.
PH: 8147093466, 8147093467, 7411072259
Email: : chairman@siliconcitycollege.ac.in, www.siliconcitycollege.ac.in
Walk-in-Interview — Empowerment Through Knowledge
Faculty Positions: Director-School of Management Studies
Dean, Assistant / Associate / Professor in Commerce, Management, Computer Science, English & Physical Education.
Research Director | Chief Security Officer
Front Office Executive
Minimum 5 years of teaching experience is mandatory.
Candidates may attend walk-in-interview and present a demo along with their testimonials, resume and recent photograph on Saturday 28th Septemebr & Sunday 29th September 2024 from 10AM to 3PM.

WANTED TEACHERS FOR PRIMARY KANNADA, SOCIAL SCIENCE ABDUL BARI'S HIGH SCHOOL Near Coles Park 9353111888

Drivers

HAEID @ RAJAJINAGAR REQUIRES Experienced Auto-transmission CAR DRIVER. Immediate placement. CONTACT: +91 6366443134

General

WANTED-GRADUATE OFFICE-EXECUTIVES for`Office`and Marketing (Dental Equipments Pvt.Ltd Company) with`or`without experience,only Female's- with MBA,Computer Knowledge &`Good`English, Hindi Communications skills.Contact: 9341223410/ 9844016274

Marketing & Sales

M/S.UNIWORLD HYDRAULICS Reqd. Male DIPLOMA MECHANICAL for MARKETING EXECUTIVE with 2 years exp.`in Hydraulic Field. Contact: 9731110163/ 9740393670.

Office Boys/ Peon

WANTED OFFICE BOY + CAR CLEANER with 2 wheeler DL. Immediate Placement. CONTACT: HAEID @ +916366443134

Accounts & Finance

REQUIRED URGENTLY Senior Accountant with experience about GST/ TDS/ PF/ESI/ EXPORT, and Accountant Assistant for an established trust in Bengaluru. E-Mail: drrtrust@yahoo.com Mob: 9686566803/ 8050531430

ACCOUNTANT REQUIRED Qualification: Graduate Male/Female with 2-3 years of Accounts experience in any Pvt.Ltd Company Skills: Preparing financial documents such as invoices, bills, accounts payable, receivable and Statutory. Software: Tally, M.S.Office, Word. Location- Yeshwanthpur, Bangalore. Competitive Salary and benefits will be offered. Email- am24kanika@gmail.com Contact- 9035012058

Wanted

WANTED FEMALE Office Assistant any Degree, Good Communication Skills English & Hindi Salary 18000/- to 20000/- in Rajajinagar: 9108458798/ 9845579620

EDUCATION
To Place your Classified Ads Contact:
9845114560

DH Classifieds More value, more impact — DECCAN HERALD — ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752 | 080-45557163/164
*Conditions apply

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

HEBBAL FURNISHED Office Space 4450 Sqft With 65 Workstations 5 Cabins 1 Conference room Ample Parking in Prime Building for Rent 85/- Per sqft call us at 9341000005

Industrial And Factory

AT TUMKUR Industrial Shed for Rent 12000 sqft with/ without large open area, with Power, Water, ready to occupy at Antharasanahalli Industrial Area. Contact: 9535477360, 080-28360561 purchase@vetrilindia.in

RENT, 6100 sqft with Power at Peenya 4th Phase. Call: 9535477360, 080-28360561 purchase@vetrilindia.in

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189 (AGENTS WELCOME)

AUTOMOTIVE

Four Wheelers Selling

Toyota

TOYOTA CRYSTA 2024 Model For Sale, 11,500 Kms Used, V Version Attitude Black, Price Rs.27.27 Lakhs. Contact No.+91 9036051000

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PUBLIC NOTICE

PUBLIC NOTICE

The general public at large is hereby given Notice that HIMLITE CONTROLS PRIVATE LIMITED (CIN: U31909KA1989PTC010244), a company incorporated under the Companies Act, 1956, having its registered office at Plot No. 26/B1, Veerasandra Industrial Area Anekal Taluk, Bangalore, Karnataka, India, 560100, through its shareholders, is negotiating to SELL / TRANSFER 100% of the paid up share capital to a prospective purchaser, along with consequent change in the management of the said company, i.e., HIMLITE CONTROLS PRIVATE LIMITED. Further, the aforesaid Company also owns immoveable property more specifically described in the SCHEDULE here in below:

SCHEDULE

All that piece of land known as Plot No. 26-B-1 in Veerasandra Industrial Area, situated in Survey No. 29 & 30 of Veerasandra Village, Attibele Hobli, Anekal Taluk, Bangalore district, Karnataka admeasuring 2020 sq. meters or thereabouts and bounded as follows, that is to say:
On or towards the North by: Plot No. 13;
On or towards the South by: Road;
On or towards the East by: Plot No. 26-B-2;
On or towards the West by: 26A.

Therefore, any person(s) having any right, title, claim, objections, encumbrances or demand of any nature in respect of the sale/ transfer of 100% of the paid up share capital of the said Company AND / OR in respect of the above referred property as mentioned in the SCHEDULE or part thereof by way of sale, exchange, mortgage, charge, gift, maintenance, inheritance, possession, lease, tenancy, lien, license, hypothecation, transfer of title or beneficial interest under any trust right of prescription or pre-emption under any agreement or other disposition or under any decree, order or award or otherwise claiming, howsoever, are hereby requested to make the same known in writing together with supporting documents of such claim(s) to the undersigned at their office at Hafed Warehouse Complex Lawrence Road Industrial Area adjacent DTC Wazirpur Depot, Ring Road, Delhi North West – 110034, India within a period of 14 days of the present publication hereof. Should no objections or claims be received within the prescribed period, the purchaser will proceed with the acquisition of the 100% of the paid-up share capital of the said Company, HIMLITE CONTROLS PRIVATE LIMITED, without any further reference to such claims and/ or objections, which shall be deemed to have been waived and/ or relinquished.

Place: Bangalore
Date: 25/09/2024
Sd/-
M: 9319758666
Email: work.infinte@gmail.com

PERSONAL

Change of Name

I, CHEVULAMANOJ KUMAR R/at No.39, 11th Cross, Vinyaka layout, Near AmityShelters, Kodipalya, Kengeri, P.O.Chudenapura, Bangalore- 560060 have changed myname to MANOJ KUMAR.R.C.H vide affidavit dated: 24/9/2024 Before NotaryOnkarappa.N.R Bangalore.

I, MOHAMMED ALTHAMASH AHMED, R/a 52 near Masjid Nandi Village and Post Chickballapur Taluk 562103, have changed my name to MOHAMMED ALTHAMUSH AHMED, vide affidavit dated 19.09.2024 before Notary K.H. Venkatappa, Chickballapur.

I, SHARATH S S/O G Sudhakaran born on 29/02/1996 R/O IDSMT Layout Dandeli, have changed my name to Sharath Sudhakaran vide affidavit dated 14/07/2024 at Dandeli sworn before Notary Vittal Hegde.

CONNECT

SAMPOORN Empowering Artisans
Vastrabhushana ವಸ್ತ್ರಭೂಷಣ
Exclusive Collection Handwoven Silks and Cottons
Sept 25th-30th — Starts Today!
11 am to 9 pm
Sindhoora Convention Center
Near JP Nagar Metro Station, JP Nagar 1st Phase, Outer Ring Road, Bangalore
Ph - 8553836868,9880414045

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

VIDYA NIKETAN SCHOOL
No.30, Kempapura, Hebbal, Bangalore-560 024.
(www.vidyaniketanhebbal.org)
Application forms to the ISC program at Vidya Niketan School for the academic year June 2025 will be available in the school office (9:00 am -2:00 pm) from Wednesday, 25 September 2024 to Tuesday, 1 October 2024.
Courses offered:
Science, Commerce and Humanities.

ಶ್ರೀ. ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ

ತೆಲುಗು ಮತ್ತು ಮಹಾರಾಷ್ಟ್ರ ರಾಜ್ಯಗಳ ಪ್ರಮುಖ ಆಸ್ಪತ್ರೆ ಸರಣಿ ಇದೀಗ ನಮ್ಮ ಬೆಂಗಳೂರಿನಲ್ಲಿ ಲಭ್ಯ

MEDICOVER
HOSPITALS
WHITEFIELDS

ಉದ್ಘಾಟಕರು

ಶ್ರೀ. ಡಿ.ಕೆ. ಶಿವಕುಮಾರ್

ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ

ದಿನಾಂಕ: ಸೆಪ್ಟಂಬರ್ 25, 2024
ಸಮಯ: ಬೆಳಗ್ಗೆ 11:30 ಗಂಟೆ

ವಿಶೇಷ ಅತಿಥಿಗಳು

ಶ್ರೀ. ಸತೀಶ್ ಜಾರಕಿಹೊಳಿ
ಮಾನ್ಯ ಪಿಡಬ್ಲ್ಯುಡಿ ಸಚಿವರು

ಶ್ರೀ. ದಿನೇಶ್ ಗುಂಡು ರಾವ್
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಗೌರವಾನ್ವಿತ ಅತಿಥಿಗಳು

ಶ್ರೀ. ಬಸವರಾಜ ಬೊಮ್ಮಾಯಿ
ಸಂಸದರು–ಹಾವೇರಿ, ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ

ಶ್ರೀಮತಿ. ಮಂಜುಳಾ ಅರವಿಂದ ಲಿಂಬಾವಳಿ
ಶಾಸಕಿ – ಮಹದೇವಪುರ

ಶ್ರೀ. ಎನ್.ಎ. ಹ್ಯಾರಿಸ್
ಶಾಸಕರು – ಶಾಂತಿನಗರ

ಆಹ್ವಾನ ನೀಡಿದವರು

ಡಾ. ಜಿ. ಅನಿಲ್ ಕೃಷ್ಣ
ಚೇರ್ಮನ್ & ವ್ಯವಸ್ಥಾಪಕ ನಿರ್ದೇಶಕರು
ಮೆಡಿಕವರ್ ಹಾಸ್ಪಿಟಲ್ಸ್

ಡಾ. ರಕ್ಷಿತ್ ಪಳಲೋಚನಾ
ಬಿಇ (ಮೆಕ್ಯಾನಿಕಲ್), ಪಿಜಿಡಿಎಂಎಸ್,
ಪಿಹೆಚ್‌ಡಿ – ಇಮ್ಯುನಾಲಜಿ & ಜೆನೆಟಿಕ್ಸ್ (ಆಂಕಾಲಜಿ)

ಡಾ. ಎ. ಶರತ್ ರೆಡ್ಡಿ
ಕಾರ್ಯಕಾರಿ ನಿರ್ದೇಶಕರು
ಮೆಡಿಕವರ್ ಹಾಸ್ಪಿಟಲ್ಸ್

ಶ್ರೀ. ಪಿ ಹರಿಕೃಷ್ಣ
ಕಾರ್ಯಕಾರಿ ನಿರ್ದೇಶಕರು
ಮೆಡಿಕವರ್ ಹಾಸ್ಪಿಟಲ್ಸ್

ಡಾ. ಎ. ಆರ್. ಕೃಷ್ಣಪ್ರಸಾದ್
ನಿರ್ದೇಶಕರು
ಮೆಡಿಕವರ್ ಹಾಸ್ಪಿಟಲ್ಸ್

ಮೆಡಿಕವರ್ ಬೆಂಗಳೂರು ವಿಶೇಷತೆಗಳು

- 100+ ಪರಿಣಿತ ವೈದ್ಯರು
- ವಿಶ್ವದರ್ಜೆ ಕ್ಯಾಥ್‌ಲ್ಯಾಬ್, ರೊಬೊಟಿಕ್ಸ್, ಎಂಆರ್‌ಐ, ಸಿಟಿ & ಆಪರೇಶನ್ ಥಿಯೇಟರ್ಸ್ ಇತ್ಯಾದಿ.,
- 30+ ಸ್ಪೆಷಾಲಿಟಿಗಳು
- ***** ಆಸ್ಪತ್ರೆ, ವ್ಯಕ್ತಿಗತ ಆರೈಕೆ
- ವಿಮೆ ಹಾಗೂ ಟಿಪಿಎ ಜೊತೆಗೆ ಕ್ಯಾಶ್‌ಲೆಸ್ ಅಡ್ಮಿಷನ್
- 200 ಕಾರ್ ಪಾರ್ಕಿಂಗ್ ಸೌಲಭ್ಯ

ಮೆಡಿಕವರ್ ವೈಶಿಷ್ಟ್ಯತೆಗಳು

- 13 Countries
- 40+ Hospitals
- 7000+ Beds
- 3000+ ICU Beds
- 200+ Operation Theatres
- 2 Crore + Patients Treated
- 1700+ Doctors
- 45000+ Employees

ಮೆಡಿಕವರ್ ಹಾಸ್ಪಿಟಲ್ಸ್ ನೆಟ್‌ವರ್ಕ್ – ಭಾರತ: ಕರ್ನಾಟಕ | ತೆಲಂಗಾಣ | ಆಂಧ್ರಪ್ರದೇಶ | ಮಹಾರಾಷ್ಟ್ರ | 12 ಯುರೋಪಿಯನ್ ದೇಶಗಳಾದ್ಯಂತ ಆರೋಗ್ಯ ಸೇವೆಗಳನ್ನು ನೀಡಲಾಗುತ್ತಿದೆ

ರಾಜಕೀಯ ನಾಯಕರು ಹೇಳಿದ್ದೇನು?

ಬಿ.ಎಸ್.ಯಡಿಯೂರಪ್ಪ ಅವರು ಪೋಕ್ಸೊ ಪ್ರಕರಣದ ಆರೋಪಿ. ಸಿದ್ದರಾಮಯ್ಯ ರಾಜೀನಾಮೆ ಕೇಳಲು ವಿಜಯೇಂದ್ರ ಅವರಿಗೆ ನೈತಿಕತೆ ಇಲ್ಲ. ಮೊದಲು ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿ
ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ

ಕಾಂಗ್ರೆಸ್ ಪಕ್ಷದ ಡಿಎನ್‌ಎಯಲ್ಲೇ ಭ್ರಷ್ಟಾಚಾರ ಇದೆ. ಸಿದ್ದರಾಮಯ್ಯ ಅವರೂ ಇದಕ್ಕೆ ಹೊರತಾಗಿಲ್ಲ. ನಿಯಮಗಳನ್ನು ಗಾಳಿಗೆ ತೂರಿ ಅವರು ಅಧಿಕಾರ ದುರುಪಯೋಗ ಮಾಡಿದ್ದಾರೆ. ನೈತಿಕತೆ ಕಳೆದುಕೊಂಡಿರುವ ಸಿದ್ದರಾಮಯ್ಯ ರಾಜೀನಾಮೆ ನೀಡುವಂತೆ ರಾಹುಲ್ ಸೂಚಿಸಬೇಕು
ಪ್ರಲ್ಹಾದ ಜೋಶಿ, ಕೇಂದ್ರ ಆಹಾರ ಸಚಿವ

ತಮ್ಮ ಜೀವನ ತೆರೆದ ಪುಸ್ತಕ ಎಂದು ಸಿದ್ದರಾಮಯ್ಯ ಪದೇ ಪದೇ ಹೇಳಿಕೆ ನೀಡಿದ್ದಾರೆ. ಆ ಪುಸ್ತಕ ಈಗ ಎಲ್ಲಿ ಕಳೆದು ಹೋಗಿದೆ ಎಂಬುದು ಗೊತ್ತಿಲ್ಲ. ಹೈಕೋರ್ಟ್ ಆದೇಶ ಗೌರವಿಸಿ ರಾಜೀನಾಮೆ ನೀಡಬೇಕು .
ವಿ.ಸೋಮಣ್ಣ, ಕೇಂದ್ರ ರೈಲ್ವೆ ಹಾಗೂ ಜಲಶಕ್ತಿ ಖಾತೆ ರಾಜ್ಯ ಸಚಿವ

ಸಿದ್ದರಾಮಯ್ಯ ಅವರು ಸಾಂವಿಧಾನಿಕ ಹುದ್ದೆಯಲ್ಲಿದ್ದು ಪತ್ನಿ ಹೆಸರಿನಲ್ಲಿ 14 ನಿವೇಶನಗಳನ್ನು ಪಡೆದಿದ್ದಾರೆ. ರಾಜ್ಯಪಾಲರ ವಿರುದ್ಧ ರಾಜಕೀಯ ಪ್ರೇರಿತ ದುರುದ್ದೇಶದ ಆರೋಪ ಮಾಡಿರುವ ಅವರು ಹುದ್ದೆಯಲ್ಲಿ ಯಾವುದೇ ಕಾರಣಕ್ಕೂ ಮುಂದುವರಿಯಬಾರದು
ಶೋಭಾ ಕರಂದ್ಲಾಜೆ, ಕೇಂದ್ರ ಕಾರ್ಮಿಕ ಖಾತೆ ರಾಜ್ಯ ಸಚಿವೆ

ಬಿಜೆಪಿ ಹೋರಾಟಕ್ಕೆ ಅರ್ಥವಿಲ್ಲ. ಹೈಕೋರ್ಟ್ ತನಿಖೆಗೆ ಆದೇಶ ನೀಡಿದೆ ಅಷ್ಟೇ. ತನಿಖೆಯಾಗಲಿ. ತಪ್ಪು ಕಂಡುಬಂದರೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕಾಗುತ್ತದೆ
ಸತೀಶ ಜಾರಕಿಹೊಳಿ, ಸಚಿವ, ಲೋಕೋಪಯೋಗಿ ಇಲಾಖೆ

ಪತ್ನಿ ಹೆಸರಲ್ಲಿ ಮಾಡಿದ 14 ಸೈಟ್‌ಗಳನ್ನು ಸರ್ಕಾರಕ್ಕೆ ಹಸ್ತಾಂತರಿಸಿ ಎಂದು ಹೇಳಿದ್ದೆ. ತಿಳಿಗೇಡಿಗಳ ಸಲಹೆ ನೆಚ್ಚಿಕೊಂಡರು. ಹಾಗಾಗಿ ಅವರಿಗೆ ಈ ಪರಿಸ್ಥಿತಿ ಬಂದಿದೆ. ನೀವು ಕಳಪೆ ರಾಜಕಾರಣಿಗಳನ್ನು ಅನುಸರಿಸಬೇಡಿ. ರಾಜೀನಾಮೆ ನೀಡಿ
ಪ್ರತಾಪ್ ಸಿಂಹ, ಮಾಜಿ ಸಂಸದ

ಈ ಪ್ರಕರಣದ ಹಿಂದೆ ಷಡ್ಯಂತ್ರ ಇದೆ. ಬಿಜೆಪಿ ಮತ್ತು ಜೆಡಿಎಸ್‌ನವರ ರಾಜಕೀಯ ಕುತಂತ್ರದ ಭಾಗ ಇದು. ಸರ್ಕಾರಕ್ಕೆ ಮುಜುಗರ ಉಂಟುಮಾಡುವ ಉದ್ದೇಶದಿಂದ ಎಲ್ಲ ಪ್ರಯತ್ನ ಮಾಡಿದ್ದಾರೆ. ನಾವು ಕಾನೂನು ಹೋರಾಟ ಮುಂದುವರಿಸುತ್ತೇವೆ
ಡಾ.ಎಂ.ಸಿ.ಸುಧಾಕರ, ಉನ್ನತ ಶಿಕ್ಷಣ ಸಚಿವ

ಮುಡಾ: ತೀರ್ಪಿಗೆ 2 ವಾರ ತಡೆ ನೀಡಲು ನಿರಾಕರಿಸಿದ ನ್ಯಾ. ನಾಗಪ್ರಸನ್ನ

ತನಿಖೆ ಅಗತ್ಯ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಸ್ಸಂಶಯವಾಗಿ ಪ್ರಕರಣದ ತನಿಖೆಯ ಅಗತ್ಯವಿದೆ' ಎಂದು ಪ್ರತಿಪಾದಿಸಿರುವ ಹೈಕೋರ್ಟ್, ಸಿದ್ದರಾಮಯ್ಯ ವಿರುದ್ಧದ ತನಿಖೆಗೆ ಮಂಜೂರಾತಿ ನೀಡಿರುವ ರಾಜ್ಯಪಾಲರ ಆದೇಶವನ್ನು ಎತ್ತಿಹಿಡಿದಿದೆ.

'ರಾಜ್ಯಪಾಲರ ಆದೇಶವನ್ನು ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ (ಪಿಸಿ ಕಾಯ್ದೆ) ಕಲಂ 17ಎ ಅಡಿಯಲ್ಲಿ ನಿರ್ಬಂಧಿತವಾಗಿ ಓದಬೇಕಿದೆಯೇ ಹೊರತು ಬಿಎನ್‌ಎಸ್‌ಎಸ್ ಕಲಂ 218ರ ಅಡಿಯಲ್ಲಿನ ಪ್ರಾಸಿಕ್ಯೂಷನ್‌ಗೆ ಅನುಮೋದನೆ ನೀಡಿರುವ ಆದೇಶವಾಗಿ ಅಲ್ಲ. ಮುಖ್ಯಮಂತ್ರಿ ವಿರುದ್ಧ ಪೊಲೀಸ್ ತನಿಖೆಗೆ ಸೀಮಿತವಾಗಿ ರಾಜ್ಯಪಾಲರು ಪೂರ್ವಾನುಮತಿ ನೀಡಿ ರುವುದನ್ನು ಪರಿಗಣಿಸಬೇಕಿದೆ' ಎಂದು ಕಾಯ್ದಿರಿಸಿದ್ದ ತೀರ್ಪು ಪ್ರಕಟಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸ್ಪಷ್ಟಪಡಿಸಿದೆ.

'ತೀರ್ಪಿನ ಕುರಿತು ಮೇಲ್ಮನವಿ ಸಲ್ಲಿಸಲಾಗುವುದು. ಅದಕ್ಕಾಗಿ ಎರಡು ವಾರ ನಿಮ್ಮ ತೀರ್ಪಿಗೆ ತಡೆ ನೀಡಬೇಕು' ಎಂಬ ಮುಖ್ಯಮಂತ್ರಿಗಳ ಪರ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರ ಮನವಿಯನ್ನು ನ್ಯಾಯಮೂರ್ತಿ ಅವರು ತಿರಸ್ಕರಿಸಿದರು.

ತೀರ್ಪಿನ ಮುಖ್ಯಾಂಶಗಳು:

- ಸಾಮಾನ್ಯ ಸಂದರ್ಭಗಳಲ್ಲಿ ರಾಜ್ಯಪಾಲರು ಸಂವಿಧಾನದ 163ನೇ ವಿಧಿಯಂತೆ ಸಚಿವ ಸಂಪುಟದ ನೆರವು ಮತ್ತು ಸಲಹೆಯ ಮೇರೆಗೆ ಕಾರ್ಯ ನಿರ್ವಹಿಸಬೇಕು. ಆದರೆ, ಅಸಾಧಾರಣ ಸಂದರ್ಭಗಳಲ್ಲಿ ಅವರು ಸ್ವತಂತ್ರ ನಿರ್ಧಾರಗಳನ್ನು ಕೈಗೊಳ್ಳಬಹುದು. ಪ್ರಸ್ತುತ ಪ್ರಕರಣವು ಅಂತಹ ಒಂದು ವಿನಾಯಿತಿಯನ್ನು ಹೊಂದಿದ ಪ್ರಕರಣವಾಗಿದೆ. ರಾಜ್ಯಪಾಲರು ಸ್ವತಂತ್ರ ವಿವೇಚನೆಯಿಂದ ತನಿಖೆಗೆ ನೀಡಿರುವ ಆದೇಶದಲ್ಲಿ ಯಾವುದೇ ದೋಷ ಕಂಡುಬರುವುದಿಲ್ಲ.
- ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 17ಎ ಅಡಿ (ತನಿಖೆಗೆ) ಅನುಮತಿ ನೀಡುವುದಕ್ಕೂ ಮೊದಲು ವಿಚಾರಣೆ ಆಲಿಸಬೇಕು ಎಂಬುದು ಕಡ್ಡಾಯವಲ್ಲ. ಹಾಗೆ ಆಲಿಸಲು ಬಯಸುವುದು ರಾಜ್ಯಪಾಲರಿಗೆ ಬಿಟ್ಟ ವಿಚಾರವಾಗಿರುತ್ತದೆ.
- ರಾಜ್ಯಪಾಲರು ಆತುರಾತುರವಾಗಿ ನಿರ್ಧಾರ ಕೈಗೊಂಡಿದ್ದಾರೆ ಎನ್ನುವುದು ಅವರ ಆದೇಶವನ್ನು ದೋಷಯುಕ್ತವಾಗಿಸಿಲ್ಲ. ಆದೇಶವು ಕಲಂ 17ಎ ಗೆ ಮಾತ್ರವೇ ಸೀಮಿತವಾಗಿರುವಂತಹುದಾಗಿದೆ.
- ಹಾಲಿ ಪ್ರಕರಣದಲ್ಲಿ ಯಾರೋ ಹೊರಗಿನವರು ಫಲಾನುಭವಿಗಳಾಗಿದ್ದಾರೆ ಎಂಬುದಿಲ್ಲ. ಬದಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕುಟುಂಬ ವರ್ಗದವರೇ ಫಲಾನುಭವಿಗಳಾಗಿದ್ದಾರೆ. ಹೀಗಾಗಿ ಖಂಡಿತವಾಗಿಯೂ ಇದು ತನಿಖೆಗೆ ಅಗತ್ಯವಾದ ಪ್ರಕರಣ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಮುಖಂಡರು ಮತ್ತು ಬೆಂಬಲಿಗರು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು

'ಅಧಿಕಾರ ದುರುಪಯೋಗ ಸ್ಪಷ್ಟ'

'ಅರ್ಜಿದಾರರು ಅಧಿಕಾರ ಸ್ಥಾನದಲ್ಲಿ ಇಲ್ಲದಿದ್ದರೆ ಇಷ್ಟೊಂದು ಪ್ರಮಾಣದ ಅನುಕೂಲಗಳು ಅವರಿಗೆ ಆಗುತ್ತಿರಲಿಲ್ಲ. ಆದ್ದರಿಂದ ದೂರುದಾರರು; ನಾನು ಸಹಿ ಹಾಕಿಲ್ಲ, ನಾನು ಶಿಫಾರಸು ಮಾಡಿಲ್ಲ, ಅಥವಾ ತೀರ್ಮಾನ ತೆಗೆದುಕೊಂಡಿಲ್ಲ ಎಂಬ ವಾದ ಮಾಡಿದರೆ ಅದನ್ನು ಒಪ್ಪಲಾಗದು. ಇಲ್ಲಿ ಲಾಭ ಪಡೆದವರು ಸಿದ್ದರಾಮಯ್ಯ ಅವರ ಪತ್ನಿಯೇ ಆಗಿದ್ದಾರೆ. ಅದೇ ರೀತಿ ದೂರುದಾರರು, ಮುಡಾ ₹62 ಕೋಟಿ ನೀಡಿದರೆ ಜಮೀನನ್ನು ವಾಪಾಸು ನೀಡುತ್ತೇನೆ ಎಂದು ಬಹಿರಂಗವಾಗಿ ಹೇಳಿದ್ದಾರೆ. ತನ್ನ ಪತ್ನಿಯ ಜೀವನದಲ್ಲಿ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಸಿದ್ದರಾಮಯ್ಯ ಅವರಿಗೆ ಅರಿವಿರಲಿಲ್ಲ ಎಂಬುದನ್ನು ಒಪ್ಪಲಾಗದು. ಮೇಲ್ನೋಟಕ್ಕೆ ಅರ್ಜಿದಾರರು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಿರುವುದು, ಪ್ರಭಾವ ಬಳಸಿರುವುದು ಕಂಡು ಬರುತ್ತದೆ' ಎಂದು ನ್ಯಾಯಪೀಠ ಹೇಳಿದೆ.

ಸಿ.ಎಂ ಕುಟುಂಬಕ್ಕೆ ಲಾಭ

'ಈ ಪ್ರಕರಣಕ್ಕೆ ತನಿಖೆ ಬೇಡ ಎಂದಾದರೆ, ಇನ್ನು ಯಾವ ಪ್ರಕರಣದ ಬಗ್ಗೆ ತನಿಖೆ ನಡೆಸಬಹುದು ಎಂಬುದು ಅರ್ಥವಾಗುವುದಿಲ್ಲ. ಇಲ್ಲಿ ಫಲಾನುಭವಿಗಳು ಅಪರಿಚಿತ ರಲ್ಲ, ಮುಖ್ಯಮಂತ್ರಿ ಅವರ ಕುಟುಂಬವೇ ಲಾಭ ಪಡೆದಿದೆ' ಎಂದು ನ್ಯಾಯಪೀಠ ಹೇಳಿದೆ.

ಸುದ್ದಿ 2 ನಿಮಿಷ

ತಪ್ಪು ಮಾಡಿದ್ದರೆ ನ್ಯಾಯಾಲಯ ತೀರ್ಪು ಕೊಡುತ್ತದೆ: ಎಚ್‌ಡಿಕೆ

ಮಂಡ್ಯ: 'ಸಿ.ಎಂ ಪ್ರಾಸಿಕ್ಯೂಶನ್ ಕುರಿತು ಪ್ರತಿಕ್ರಿಯಿಸುವುದಿಲ್ಲ. ಕಾನೂನು ಬಾಹಿರ ಚಟುವಟಿಕೆ ಮಾಡಿದ್ದರೆ, ನ್ಯಾಯಾಲಯ ತೀರ್ಪು ಕೊಡುತ್ತದೆ' ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಆದಿಚುಂಚನಗಿರಿ ಕ್ಷೇತ್ರದಲ್ಲಿ ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿ, 'ಬಿಜೆಪಿ ಹಮ್ಮಿಕೊಂಡಿದ್ದ ಮೈಸೂರು ಪಾದಯಾತ್ರೆಗೆ ನಾನೂ ಹೋಗಿದ್ದೆ, ಜನರನ್ನು ಜಾಗೃತರನ್ನಾಗಿಸುವ ಕೆಲಸ ಮಾಡಿದ್ದೇನೆ. ನನ್ನ ನೈತಿಕತೆ ಏನು ಅನ್ನೋದು ಸಾಬೀತಾಗಲಿ. ಯಾವುದೇ ತೀರ್ಮಾನವಾಗದಿದ್ದರೂ ನನ್ನನ್ನು ಒಂದು ಪ್ರಕರಣದಲ್ಲಿ ಆರೋಪಿಯಾಗಿಸುತ್ತಿದ್ದಾರೆ. ಅವೆಲ್ಲಾ ಮುಗಿಯಲಿ, ನಂತರ ಮಾತನಾಡುತ್ತೇನೆ' ಎಂದರು.

'ನನ್ನ ವಿರುದ್ಧ ಷಡ್ಯಂತ್ರ ನಡೆಯುತ್ತಿರುವ ಬಗ್ಗೆ ಇನ್ನೂ ಅನುಮಾನವಿದೆ. ನಾನು ಕೇಂದ್ರ ಸಚಿವನಾಗಿರುವುದನ್ನು ಕೆಲವರಿಗೆ ಸಹಿಸಲಾಗುತ್ತಿಲ್ಲ. ನಾಲ್ಕೈದು ಮಂದಿ ಬೀಡಾಡಿ ಮಂತ್ರಿಗಳು ಆರೋಪ ಮಾಡಿದ್ದು, ಅವರಿಗೆ ಉತ್ತರ ಕೊಡುವ ಅಗತ್ಯವಿಲ್ಲ' ಎಂದರು.



ಸಿ.ಎಂ ರಾಜೀನಾಮೆ ನೀಡಲಿ: 'ಹೈಕೋರ್ಟ್ ಸತ್ಯ ಎತ್ತಿ ಹಿಡಿದಿದ್ದು, ಆದೇಶ ಸ್ವಾಗತಿಸುತ್ತೇವೆ. ಪಾರದರ್ಶಕ ತನಿಖೆ ನಡೆಯಲಿ. ಸಿ.ಎಂ ಕೈವಾಡ, ಅಧಿಕಾರ ದುರ್ಬಳಕೆ ಸ್ಪಷ್ಟವಾಗಿದೆ. ಸಿದ್ದರಾಮಯ್ಯ ರಾಜೀನಾಮೆಗೆ ಜನ ಆಗ್ರಹಿಸುತ್ತಿದ್ದಾರೆ' ಎಂದು ಶಾಸಕ ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಹಲವೆಡೆ ಬಿಜೆಪಿ ಪ್ರತಿಭಟನೆ

ಬೆಂಗಳೂರು: ಸಿದ್ದರಾಮಯ್ಯ ಅವರ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಬೆಂಗಳೂರು, ಮಂಡ್ಯ, ಕೊಪ್ಪಳ, ಬಾಗಲಕೋಟೆ ಸೇರಿ ಹಲವೆಡೆ ಪ್ರತಿಭಟನೆ ನಡೆಸಿದರು.

ಬೆಂಗಳೂರಿನಲ್ಲಿ ಪಕ್ಷದ ಕಚೇರಿ ಬಳಿಯೇ ಪ್ರತಿಭಟನೆ ನಡೆಸಿದ ಬಿಜೆಪಿನಾಯಕರು,ಸಿದ್ದರಾಮಯ್ಯಅವರುಸಂವಿಧಾನ,ಪ್ರಜಾಪ್ರಭುತ್ವ, ನ್ಯಾಯಾಂಗಕ್ಕೆ ಗೌರವ ಕೊಡುವುದಾದರೆ ಕೂಡಲೇ ರಾಜೀನಾಮೆ ನೀಡಿ ತನಿಖೆಯನ್ನು ಎದುರಿಸಬೇಕು ಎಂದು ಒತ್ತಾಯಿಸಿದರು.

ವಿಧಾನಪರಿಷತ್ ವಿರೋಧ ಪಕ್ಷದ ಸಚೇತಕ ಎನ್.ರವಿಕುಮಾರ್ ಮಾತನಾಡಿ, 'ಪಾರ್ವತಿ ಮೇಡಂ ಅವರು ನಿಮ್ಮ ಪತ್ನಿ. ಪತ್ನಿ ಮಾಡಿದ ವ್ಯವಹಾರಕ್ಕೂ ತಮಗೂ ಸಂಬಂಧವಿಲ್ಲ ಎಂಬುದನ್ನು ಹೇಳಲು ಸಾಧ್ಯವಿಲ್ಲ. ನೈತಿಕ ಹೊಣೆಗಾರಿಕೆ ನಿಮ್ಮದೇ ಆಗಿದೆ' ಎಂದರು.

ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಮಾತನಾಡಿ, 'ಕುರ್ಚಿ ಉಳಿಸಿಕೊಳ್ಳಲು ಭಂಡತನದಿಂದ ಪ್ರಯತ್ನ ಮಾಡಿದವರ ಇತಿಹಾಸ ಏನಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಿ. ಕರ್ನಾಟಕ ರಾಜ್ಯದ ಗೌರವ ಉಳಿಸುವ ದೃಷ್ಟಿಯಿಂದ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿ' ಎಂದು ಒತ್ತಾಯಿಸಿದರು.

'ಗ್ಯಾರಂಟಿ'ಗಳ ಜಾರಿಯ ಸರ್ಕಾರ ಸಹಿಸದ ವಿಪಕ್ಷ: ಸಿ.ಎಂ

'ಬಿಜೆಪಿ– ಜೆಡಿಎಸ್ ಸಂಚು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ- ಜೆಡಿಎಸ್‌ನವರ ಸಂಚು, ಒಳ ಸಂಚು, ರಾಜಭವನ ದುರುಪಯೋಗಕ್ಕೆ ನಾನು ಹೆದರುವುದಿಲ್ಲ. ರಾಜ್ಯದ ಜನ, ಪಕ್ಷದ ಹೈಕಮಾಂಡ್, ಶಾಸಕರು, ಸಚಿವರು, ಕಾರ್ಯಕರ್ತರು ನನ್ನೊಂದಿಗಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಹೈಕೋರ್ಟ್ ತೀರ್ಪು ಹೊರಬಿದ್ದ ಬಳಿಕ ಗೃಹ ಕಚೇರಿ ಕೃಷ್ಣಾದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಂಪುಟ ಸಹೋದ್ಯೋಗಿಗಳ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾನೂನು ತಜ್ಞರ ಜೊತೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ' ಎಂದರು.

'ನಾವು ವಿಧಾನಸಭೆ ಚುನಾವಣೆಯಲ್ಲಿ 136 ಸ್ಥಾನಗಳನ್ನು ಗೆದ್ದ ಬಳಿಕ ಬಿಜೆಪಿಯವರು 'ಆಪರೇಷನ್ ಕಮಲ' ಮಾಡಲು ಪ್ರಯತ್ನಿಸಿದರು. ದುಡ್ಡು ಕೊಟ್ಟು ಶಾಸಕರನ್ನು ಖರೀದಿಸಲು ಯತ್ನಿಸಿದರು. ಆದರೆ, ನಮ್ಮ ಶಾಸಕರು ದುಡ್ಡಿನ ಆಸೆಗೆ ಬಿದ್ದಿಲ್ಲ. ಹೀಗಾಗಿ, ಅವರ ಯತ್ನ ವಿಫಲವಾಯಿತು. ಬಡವರ ಪರವಾದ ನಮ್ಮ ಕಾರ್ಯಕ್ರಮಗಳನ್ನು ಅವರು ವಿರೋಧಿಸಿದರು. ಅವರು ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಭದ್ರಗೊಳಿಸಿ, ನನಗೆ ಕಪ್ಪು ಮಸಿ ಬಳಿಯುವ ದುರಾಲೋಚನೆ ಮಾಡಿದ್ದಾರೆ' ಎಂದು ಕಿಡಿಕಾರಿದರು.

'ಇಡೀ ದೇಶದಲ್ಲಿ ಮಾಡಿದ ರೀತಿ ಕರ್ನಾಟಕದಲ್ಲೂ ಕಾಂಗ್ರೆಸ್ ಸರ್ಕಾರವನ್ನು ಅಲುಗಾಡಿಸಲು ಬಿಜೆಪಿಯವರು ಯತ್ನಿಸುತ್ತಿದ್ದಾರೆ. ನಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಸಂಚು ಮಾಡುತ್ತಿದ್ದಾರೆ. ಬಿಜೆಪಿ ಯಾವತ್ತೂ ಸಂಪೂರ್ಣ ಬಲದಲ್ಲಿ ಅಧಿಕಾರಕ್ಕೆ ಬಂದಿಲ್ಲ. ಅವರು ಅಧಿಕಾರಕ್ಕೆ ಬಂದಿದ್ದು ಹಿಂಬಾಗಿಲಿನಿಂದ, ಹಣ ಬಲದಿಂದ, ಆಪರೇಷನ್ ಕಮಲದ ಮೂಲಕ' ಎಂದು ವಾಗ್ದಾಳಿ ನಡೆಸಿದರು.

'ಕೋರ್ಟ್ ತೀರ್ಪು ನಿಮಗೆ ತೃಪ್ತಿ ತಂದಿದೆಯೇ' ಎಂಬ ಪ್ರಶ್ನೆಗೆ, 'ಇದೊಂದು ಕಾನೂನಾತ್ಮಕ ಹೋರಾಟ. ಈ ಬಗ್ಗೆ ಕಾನೂನು ತಜ್ಞರೊಂದಿಗೆ ಚರ್ಚಿಸಿ ಪ್ರತಿಕ್ರಿಯಿಸುತ್ತೇನೆ' ಎಂದರು.

ಇದೇ ವೇಳೆ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಇದು ಬಿಜೆಪಿ- ಜೆಡಿಎಸ್‌ನ ಕುತಂತ್ರ. ಅವರ ಕುತಂತ್ರಕ್ಕೆ ನಮ್ಮ ಸರ್ಕಾರ ಜಗ್ಗುವುದಿಲ್ಲ, ಬಗ್ಗುವುದಿಲ್ಲ' ಎಂದರು.

'ಪಿಸಿ ಕಾಯ್ದೆಯಡಿ ತನಿಖೆಗೆ ಸೀಮಿತ'

'ರಾಜ್ಯಪಾಲರ ಅನುಮತಿಯಲ್ಲಿರುವ ಭ್ರಷ್ಟಾಚಾರ ಕಾಯ್ದೆಯ ಸೆಕ್ಷನ್ 17 ಎ ಅಡಿ ತನಿಖೆಗೆ ಮಾತ್ರ ನ್ಯಾಯಮೂರ್ತಿ ಅವರು ಸೀಮಿತಗೊಳಿಸಿದ್ದಾರೆ. ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

'ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ತೀರ್ಪು ನೀಡಿರುವ ಹೈಕೋರ್ಟ್, ಬಿಎನ್‌ಎಸ್‌ಎಸ್ ಪ್ರಕಾರ 218 ಹಾಗೂ ಪಿಸಿ ಕಾಯ್ದೆ 19ರಂತೆ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿರುವುದನ್ನು ನ್ಯಾಯಮೂರ್ತಿಯವರು ತಿರಸ್ಕರಿಸಿದ್ದಾರೆ' ಎಂದರು.

ಹೈಕೋರ್ಟ್ ವಿಭಾಗೀಯ ಪೀಠದಲ್ಲಿ, ಸುಪ್ರೀಂ ಕೋರ್ಟ್‌ನಲ್ಲೂ ಕಾನೂನು ಹೋರಾಟ ಮಾಡುತ್ತೇವೆ. ರಾಜ್ಯಪಾಲರು ರಾಜಕೀಯವಾಗಿ ತೆಗೆದುಕೊಂಡ ನಿರ್ಧಾರವಿದು
ಕೃಷ್ಣ ಬೈರೇಗೌಡ, ಕಂದಾಯ ಸಚಿವ

'ಕುರ್ಚಿಗೆ ಅಂಟಿ ಕೂತರೆ ಕಳಂಕ'

ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು: ಅಶೋಕ

ಪ್ರಜಾವಾಣಿ ವಾರ್ತೆ

ಆರ್. ಅಶೋಕ

ಬೆಂಗಳೂರು: 'ನನ್ನ ಬದುಕು ತೆರೆದ ಪುಸ್ತಕ, ಒಂದೂ ಕಪ್ಪು ಚುಕ್ಕೆ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೊಂಡಿದ್ದರು. ಈಗ ಹೈಕೋರ್ಟ್ ತೀರ್ಪಿನ ಬಳಿಕವೂ ರಾಜೀನಾಮೆ ನೀಡದೇ ಕುರ್ಚಿಗೆ ಅಂಟಿಕೊಂಡು ಕುಳಿತರೆ, ಅದು ಅವರೇ ಹೇಳಿಕೊಳ್ಳುವ ಕಳಂಕರಹಿತ ರಾಜಕೀಯ ಬದುಕಿಗೆ ಹಾಗೂ ಜನರಿಗೆ ಮಾಡುವ ಅಪಮಾನ, ಅದೇ ಪರಮ ಕಳಂಕ ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಮುಡಾ ಪ್ರಕರಣದ ಸಂಬಂಧ ತನಿಖೆಗೆ ಒಪ್ಪಿಗೆ ನೀಡಿದ ರಾಜ್ಯಪಾಲರ ಕ್ರಮವನ್ನು ಎತ್ತಿ ಹಿಡಿದ ಹೈಕೋರ್ಟ್ ತೀರ್ಪಿನ ಕುರಿತು ಅವರು ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿ, 'ಇದು ಸತ್ಯಕ್ಕೆ ಹಾಗೂ ಬಿಜೆಪಿ ಹೋರಾಟಕ್ಕೆ ಸಿಕ್ಕಿರುವ ಜಯ' ಎಂದು ವ್ಯಾಖ್ಯಾನಿಸಿದರು.

'ಸಿದ್ದರಾಮಯ್ಯ ಅವರ ಹಿಂದಿನ ಅವಧಿಯಲ್ಲಿ ಸಚಿವ ಕೆ.ಜೆ.ಜಾರ್ಜ್ ಮತ್ತು ಸಂತೋಷ್ ಲಾಡ್ ವಿರುದ್ಧ ಆರೋಪ ಕೇಳಿ ಬಂದಾಗ ಕೂಡಲೇ ರಾಜೀನಾಮೆ ಪಡೆಯಲಾಗಿತ್ತು. ಈ ಅವಧಿಯಲ್ಲಿ ಬಿ.ನಾಗೇಂದ್ರ ರಾಜೀನಾಮೆ ನೀಡಿದ್ದಾರೆ. ಅವರಿಗೊಂದು ಕಾನೂನು ಮತ್ತು ತಮಗೆ ಬೇರೆಯದೇ ಕಾನೂನು ಎಂಬ ಧೋರಣೆ ಸಿದ್ದರಾಮಯ್ಯ ಅವರ ಮನಸ್ಸಿನಲ್ಲಿದೆ. ಕಾನೂನು ಎಲ್ಲರಿಗೂ ಒಂದೇ ಎಂಬುದನ್ನು ಅರ್ಥ ಮಾಡಿಕೊಳ್ಳಲಿ' ಎಂದರು.

'ನಾನೊಬ್ಬ ಸಂವಿಧಾನ ತಜ್ಞ, ಕಾನೂನು ತಜ್ಞ ಎಂದು ಹೇಳಿಕೊಳ್ಳುವ 'ಲಾಯರ್' ಸಿದ್ದರಾಮಯ್ಯ ಅವರಿಗೆ ಕಾನೂನಿನ ಮೇಲೆ, ಸಂವಿಧಾನದ ಮೇಲೆ ಕಿಂಚಿತ್ತಾದರೂ ಗೌರವ ಇದ್ದರೆ ಅಧಿಕಾರದಲ್ಲಿ ಮುಂದುವರಿಯಬಾರದು' ಎಂದು ಹೇಳಿದರು.

'ಬಿಜೆಪಿ ಹೋರಾಟಕ್ಕೆ ಸಂದ ಜಯ'

ವಿಜಯೇಂದ್ರ

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬ ಭಾಗಿಯಾಗಿರುವ ಮುಡಾ ಹಗರಣದ ಬಗ್ಗೆ ತನಿಖೆ ಆಗಬೇಕು ಎಂದು ಆಗ್ರಹಿಸಿ ಬಿಜೆಪಿ ಮತ್ತು ಜೆಡಿಎಸ್ ನಡೆಸಿದ ಹೋರಾಟಕ್ಕೆ ಮೊದಲ ಜಯ ಸಿಕ್ಕಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

'ರಾಜ್ಯಪಾಲರ ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದಿದ್ದು, ಸಿದ್ದರಾಮಯ್ಯ ಅವರ ಅರ್ಜಿಯನ್ನು ವಜಾ ಮಾಡಿದೆ. ಆದ್ದರಿಂದ, ಸಿದ್ದರಾಮಯ್ಯ ಅವರು ಹೈಕೋರ್ಟ್‌ನ ತೀರ್ಪನ್ನು ಗೌರವಿಸಿ, ಗೌರವಯುತವಾಗಿ ಮುಖ್ಯಮಂತ್ರಿ ಸ್ಥಾನಕ್ಕೆ ಕೂಡಲೇ ರಾಜೀನಾಮೆ ಕೊಡಬೇಕು' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ಹೈಕೋರ್ಟ್‌ನಲ್ಲಿ ಸುದೀರ್ಘವಾದ ಮತ್ತು ಪ್ರತಿವಾದ ನಡೆದ ಬಳಿಕವೇ ತೀರ್ಪು ಹೊರಬಿದ್ದಿದೆ. ರಾಜ್ಯಪಾಲರು ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಶನ್‌ಗೆ ಅನುಮತಿ ಕೊಟ್ಟಿರುವುದನ್ನು ಸಮರ್ಥಿಸಿದೆ. ರಾಜ್ಯಪಾಲರನ್ನು ಕೇಂದ್ರ ಸರ್ಕಾರದ ಏಜೆಂಟ್ ಎಂದು ಹೇಳಿದ್ದ ಮಾತನ್ನು ಕಾಂಗ್ರೆಸ್ ಹಿಂದಕ್ಕೆ ಪಡೆಯಬೇಕು' ಆಗ್ರಹಿಸಿದರು.

'ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಭ್ರಷ್ಟಾಚಾರದ ಕಳಂಕ ಹೊತ್ತ ಸಿದ್ದರಾಮಯ್ಯ ಅಧಿಕಾರದಲ್ಲಿ ಮುಂದುವರಿಯುವುದು ಸರಿಯಲ್ಲ. ಅವರು ಹಗರಣದ ನೈತಿಕ ಹೊಣೆ ಹೊರಲೇಬೇಕು' ಎಂದು ಹೇಳಿದರು.

'ರಾಜೀನಾಮೆ ಕೊಡಲ್ಲ: ಎಚ್‌ಡಿಕೆ ಕೊಟ್ಟರೇ?'

ಒಂದನೇ ಪುಟದಿಂದ...

'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ (ಬಿಎನ್‌ಎಸ್‌ಎಸ್ ಕಾಯ್ದೆ) 218ರ ಅಡಿ ಹೈಕೋರ್ಟ್ ಆದೇಶ ಮಾಡಿಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

ಕುಮಾರಸ್ವಾಮಿಗೆ ಅನ್ವಯ ಆಗುವುದಿಲ್ಲವೇ?: 'ಮುಖ್ಯಮಂತ್ರಿ ರಾಜೀನಾಮೆ ಕೇಳುವುದಿಲ್ಲ' ಎಂಬ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 'ಅವರ (ಕುಮಾರಸ್ವಾಮಿ) ಮೇಲೆ ಎಫ್‌ಐಆರ್ ದಾಖಲಾಗಿದ್ದು, ಅವರು ಜಾಮೀನಿನ ಮೇಲೆ ಇದ್ದಾರೆ. ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ ಅವರು ಸಚಿವರಾಗಿದ್ದಾರಲ್ಲವೇ? ಅವರು ರಾಜೀನಾಮೆ ಕೊಟ್ಟಿದ್ದಾರೆಯೇ? ನಾನು ರಾಜೀನಾಮೆ ನೀಡಬೇಕೆಂಬ ಬಿಜೆಪಿಯವರ ಬೇಡಿಕೆ ಅವರಿಗೂ ಅನ್ವಯ ಆಗುವುದಿಲ್ಲವೇ? ತನಿಖೆ ಹಂತದಲ್ಲಿಯೇ ರಾಜೀನಾಮೆ ಕೊಡುವ ಬಗ್ಗೆ ಕುಮಾರಸ್ವಾಮಿಯವರನ್ನು ಕೇಳಿ' ಎಂದರು.

'ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ನನ್ನ ಮೇಲಷ್ಟೇ ಅಲ್ಲ, ಇಡೀ ದೇಶದ ವಿರೋಧ ಪಕ್ಷಗಳ ವಿರುದ್ಧ ಸೇಡಿನ ರಾಜಕೀಯ ಮಾಡುತ್ತಿದೆ' ಎಂದು ದೂರಿದರು.

'ಹೈಕೋರ್ಟ್ ತೀರ್ಪು ನಾನು ಪೂರ್ತಿಯಾಗಿ ಓದಿಲ್ಲ. ಮಾಧ್ಯಮಗಳಲ್ಲಿ ಬಂದಿರುವುದನ್ನು ಮಾತ್ರ ಓದಿದ್ದೇನೆ. ತೀರ್ಪು ಪೂರ್ತಿ ಓದಿದ ಬಳಿಕ ಮತ್ತೆ ಪ್ರತಿಕ್ರಿಯೆ ನೀಡುತ್ತೇನೆ' ಎಂದೂ ಮುಖ್ಯಮಂತ್ರಿ ತಿಳಿಸಿದರು.

ಸಿದ್ದರಾಮಯ್ಯ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಅವರ ವಿರುದ್ಧ ತನಿಖೆ ಆರಂಭಿಸಬೇಕು. ಇಲ್ಲದಿದ್ದರೆ ರಾಜ್ಯದ ಜನ ಮುಖ್ಯಮಂತ್ರಿ ಮೇಲೆ ನಂಬಿಕೆ ಕಳೆದುಕೊಳ್ಳಲಿದ್ದಾರೆ
ಜಗದೀಶ ಶೆಟ್ಟರ, ಸಂಸದ, ಬೆಳಗಾವಿ

ದೂರುದಾರರಿಂದ ಕೇವಿಯಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಹೈಕೋರ್ಟ್ ನೀಡಿರುವ ತೀರ್ಪು ಪ್ರಶ್ನಿಸಿ ಮುಖ್ಯಮಂತ್ರಿ ಸುಪ್ರೀಂ ಕೋರ್ಟ್ ಮೆಟ್ಟಿಲೇರುವ ಸೂಚನೆ ಸಿಗುತ್ತಿದ್ದಂತೆ, ದೂರುದಾರರು ಸುಪ್ರೀಂ ಕೋರ್ಟ್‌ಗೆ ಕೇವಿಯಟ್ ಅರ್ಜಿ ಸಲ್ಲಿಸಿದ್ದಾರೆ.

ದೂರದಾರರ ಪೈಕಿ, ವಕೀಲ ಟಿ.ಜೆ. ಅಬ್ರಹಾಂ, 'ಸುಪ್ರೀಂ ಕೋರ್ಟ್‌ನಲ್ಲಿ ಮಂಗಳವಾರವೇ ಕೇವಿಯಟ್ ಸಲ್ಲಿಸಿದ್ದೇವೆ' ಎಂದು ತಿಳಿಸಿದರು. ಮತ್ತೊಬ್ಬ ದೂರುದಾರ ಪ್ರದೀಪ್ ಕುಮಾರ್, 'ನಾನು ಈಗಾಗಲೇ ಹೈಕೋರ್ಟ್‌ಗೆ ಕೇವಿಯಟ್ ಸಲ್ಲಿಸಿದ್ದೇನೆ. ಅಲ್ಲದೆ, ಆನ್‌ಲೈನ್ ಮೂಲಕ ಸುಪ್ರೀಂ ಕೋರ್ಟ್‌ಗೂ ಕೇವಿಯಟ್ ಅರ್ಜಿ ಹಾಕಿದ್ದೇನೆ. ನನಗೆ ಸಿಕ್ಕಿದ ಮಾಹಿತಿ ಪ್ರಕಾರ ಅವರು (ಮುಖ್ಯಮಂತ್ರಿ) ಹೈಕೋರ್ಟ್ ವಿಭಾಗೀಯ ಪೀಠಕ್ಕೆ ಬುಧವಾರ ಮೇಲ್ಮನವಿ ಸಲ್ಲಿಸಲಿದ್ದಾರೆ. ನಾವು ಕೂಡಾ ಕೋರ್ಟ್‌ಗೆ ಹಾಜರಾಗಲು ಸಿದ್ಧತೆ ನಡೆಸಿದ್ದೇವೆ' ಎಂದು ಹೇಳಿದರು.

ಮತ್ತೊಬ್ಬ ದೂರುದಾರ ಸ್ನೇಹಮಯಿ ಕೃಷ್ಣ, 'ಅವರು (ಮುಖ್ಯಮಂತ್ರಿ) ಮೇಲಿನ ಕೋರ್ಟ್‌ಗಳಿಗೆ ಹೋದರೆ, ನಾನೂ ಹೋರಾಟ ಮುಂದುವರೆಸುತ್ತೇನೆ' ಎಂದರು.

ಮುಡಾದಲ್ಲಿನ ಭ್ರಷ್ಟಾಚಾರ ಮುಚ್ಚಿಕೊಳ್ಳಲು ಸಿದ್ದರಾಮಯ್ಯ ನಡೆಸಿದ್ದ ಕುತಂತ್ರಗಳಿಗೆ ಹೈಕೋರ್ಟ್ ಆದೇಶ ಕಪಾಳಮೋಕ್ಷ ಮಾಡಿದಂತಾಗಿದೆ
ಅರವಿಂದ ಬೆಲ್ಲದ, ವಿಧಾನಸಭೆ ವಿರೋಧಪಕ್ಷದ ಉಪನಾಯಕ

ಕಾನೂನು ತಜ್ಞರು ಏನಂತಾರೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ವಿರುದ್ಧದ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ನೀಡುವ ಆದೇಶದ ಆಧಾರದಲ್ಲಿ ತನಿಖೆಯ ವ್ಯಾಪ್ತಿ ಮತ್ತು ಸ್ವರೂಪ ನಿರ್ಧಾರವಾಗುತ್ತದೆ ಎನ್ನುತ್ತಾರೆ ಕಾನೂನು ತಜ್ಞರು.

ಮೂವರು ವ್ಯಕ್ತಿಗಳು ಸಲ್ಲಿಸಿರುವ ಅರ್ಜಿಗಳು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಮುಂದೆ ಬರಲಿದೆ. 'ಸಿದ್ದರಾಮಯ್ಯ ವಿರುದ್ಧ ಯಾವುದೇ ಸಾಕ್ಷ್ಯಗಳಿಲ್ಲ ಎಂದು ವಿಶೇಷ ನ್ಯಾಯಾಲಯಕ್ಕೆ ಅನಿಸಿದರೆ, ಅವರ ವಿರುದ್ಧ ತನಿಖೆಗೆ ಆದೇಶಿಸಲು ನಿರಾಕರಿಸಬಹುದು. ಆ ರೀತಿ ಆದರೆ ಅವರಿಗೆ ಅನುಕೂಲವಾಗುತ್ತದೆ' ಎನ್ನುತ್ತಾರೆ ಹಿರಿಯ ವಕೀಲ ಕೆ.ವಿ.ಧನಂಜಯ.

'ವಿಶೇಷ ನ್ಯಾಯಾಲಯವು ಇದಕ್ಕೆ ವ್ಯತಿರಿಕ್ತವಾಗಿಯೂ ಆದೇಶ ನೀಡಬಹುದು. ಅವರು ಸರ್ಕಾರದ ಉನ್ನತ ಹುದ್ದೆಗಳಲ್ಲಿ ಇದ್ದಾಗಷ್ಟೇ ಅವರ ಪತ್ನಿಯ ಜಮೀನಿಗೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳು ನಡೆದಿವೆ ಎಂಬುದನ್ನು ನ್ಯಾಯಾಧೀಶರು ಪರಿಗಣಿಸಿದರೆ, ಸಿದ್ದರಾಮಯ್ಯ ಮತ್ತು ಈ ಎಲ್ಲ ಪ್ರಕ್ರಿಯೆಗಳನ್ನು ನಡೆಸಿದವರ ವಿರುದ್ಧವೂ ತನಿಖೆಗೆ ಆದೇಶಿಸಬಹುದು' ಎಂದರು.

'ಇಂತಹವರ ವಿರುದ್ಧವೇ ತನಿಖೆ ಮಾಡಿ ಎಂದು ಸೂಚಿಸದೆ, ತನಿಖೆ ನಡೆಸಿ ಎಂದೂ ಆದೇಶಿಸುವ ಸಾಧ್ಯತೆ ಇದೆ. ಆಗ ದೂರಿನಲ್ಲಿ ಉಲ್ಲೇಖಿಸಿರುವ ಎಲ್ಲರ ವಿರುದ್ಧವೂ ತನಿಖೆ ನಡೆಸಬಹುದು' ಎಂಬುದು ಹಿರಿಯ ವಕೀಲ ಅಶೋಕ ಹಾರನಹಳ್ಳಿ ಅವರ ಅಭಿಪ್ರಾಯ.

'ತನಿಖೆ ನಡೆದು, ಅದರ ಆಧಾರದಲ್ಲಿ ದೋಷಾರೋಪ ಪಟ್ಟಿ ದಾಖಲಿಸಬೇಕಾಗುತ್ತದೆ. ಆದರೆ ದೋಷಾರೋಪ ಪಟ್ಟಿ ಸಲ್ಲಿಸಿ, ವಿಚಾರಣೆ ಆರಂಭಿಸಲು ಲೋಕಾಯುಕ್ತ ಪೊಲೀಸರು ಮತ್ತೆ ರಾಜ್ಯಪಾಲರಿಂದ ಅನುಮತಿ ಪಡೆಯಬೇಕಾಗುತ್ತದೆ' ಎನ್ನುತ್ತಾರೆ ಹಿರಿಯ ವಕೀಲ ಬಿ.ವಿ. ಆಚಾರ್ಯ.

'ವಾಲ್ಮೀಕಿ ಹಗರಣ: ಸಿಬಿಐ ತನಿಖೆಯೇ ಸೂಕ್ತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ಯಾಂಕಿಂಗ್ ವಲಯದ ಪ್ರಾಮಾಣಿಕತೆಯನ್ನು ಖಾತ್ರಿಪಡಿಸಬೇಕಾದರೆ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬಹುಕೋಟಿ ಮೊತ್ತದ ದುರ್ಬಳಕೆ ಆರೋಪದ ಪ್ರಕರಣವನ್ನು ಸಿಬಿಐಗೆ ತನಿಖೆಗೆ ವಹಿಸುವ ಅಗತ್ಯವಿದೆ' ಎಂದು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾವನ್ನು ಹೈಕೋರ್ಟ್‌ನಲ್ಲಿ ಪ್ರತಿನಿಧಿಸುತ್ತಿರುವ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಬಲವಾಗಿ ಪ್ರತಿಪಾದಿಸಿದರು.

'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಪ್ರಕರಣವನ್ನು ಸಿಬಿಐ ತನಿಖೆಗೆ ವರ್ಗಾಯಿಸಬೇಕು' ಎಂದು ಕೋರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಯೂನಿಯನ್ ಬ್ಯಾಂಕ್ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ಆರ್. ವೆಂಕಟರಮಣಿ, 'ತನಿಖೆ ನಡೆಸುವಂತೆ ಕೋರಿ ಬ್ಯಾಂಕ್ ಸಿಬಿಐಗೆ ಪತ್ರ ಬರೆದಿತ್ತು. ದೂರು ದಾಖಲಾಗಿದ್ದು, ಸಿಬಿಐ ತನಿಖೆ ಕೈಗೆತ್ತಿಕೊಂಡಂತಾಗಿದೆ. ಹೀಗಾಗಿ, ಬ್ಯಾಂಕುಗಳ ಹಿತದೃಷ್ಟಿಯಿಂದ ಕೋಟ್ಯಂತರ ರೂಪಾಯಿ ದುರುಪಯೋಗ ಆರೋಪದ ಇಂತಹ ತನಿಖೆಯನ್ನು ಸಿಬಿಐಗೆ ವಹಿಸುವುದು ಅವಶ್ಯ ಇದೆ' ಎಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ರಾಜ್ಯ ಸರ್ಕಾರದ ಪರ ಹಿರಿಯ ವಕೀಲ ಬಿ.ವಿ.ಆಚಾರ್ಯ ಮತ್ತು ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿ.ಜಿ. ಭಾನುಪ್ರಕಾಶ್, 'ಅರ್ಜಿಯ ಸಿಂಧುತ್ವದ ಬಗ್ಗೆ ಪ್ರಾಥಮಿಕ ಪ್ರಶ್ನೆ ಇದೆ. ಏಕೆಂದರೆ ಇದು ರಾಜ್ಯ ಮತ್ತು ಕೇಂದ್ರ ಸರ್ಕಾರದ ಮಧ್ಯದ ವ್ಯಾಜ್ಯ' ಎಂದರು.

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರ್.ಸಿ.ಹೆಚ್. ಘಟಕ ಬಳ್ಳಾರಿ ಜಿಲ್ಲೆ.
ದೂರವಾಣಿ: 08392-273739. Email: rchobellary@gmail.com

ಸಂಖ್ಯೆ:ಎನ್‌ಹೆಚ್‌ಎಂ/ಆರ್.ಸಿ.ಹೆಚ್/ನೇಮಕಾತಿ/339/2024-25 ದಿನಾಂಕ :21/09/2024

ಪತ್ರಿಕಾ ಪ್ರಕಟಣೆ

ವಿಷಯ : 2024-25 ನೇ ಸಾಲಿನ ಎನ್.ಹೆಚ್.ಎಂ./ಎನ್.ಯು.ಹೆಚ್.ಎಂ. ಮತ್ತು ಪಿ.ಎಂ.ಅಭೀಮ್ ಕಾರ್ಯಕ್ರಮಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಉಲ್ಲೇಖ:- ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಕಡತ ಟಿಪ್ಪಣಿ ಅನುಮೋದನೆ ದಿನಾಂಕ 14/08/2024.

ಈ ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಎನ್.ಹೆಚ್.ಎಂ./ಎನ್.ಯು.ಹೆಚ್.ಎಂ. ಮತ್ತು ಪಿ.ಎಂ.ಅಭೀಮ್ ಕಾರ್ಯಕ್ರಮಗಳ ಬಳ್ಳಾರಿ ಜಿಲ್ಲೆಯಲ್ಲಿ 2024-25 ನೇ ಸಾಲಿಗೆ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಈ ಕೆಳಗೆ ಸೂಚಿಸಿದ ದಿನಾಂಕ ಮತ್ತು ಸ್ಥಳಗಳಲ್ಲಿ ಅರ್ಜಿಗಳನ್ನು ಪಡೆಯಹುದು.

1.ಖಾಲಿ ಇರುವ ಗುತ್ತಿಗೆ ಆಧಾರದ ಎನ್.ಹೆಚ್.ಎಂ./ಎನ್.ಯು.ಹೆಚ್.ಎಂ. ಮತ್ತು ಪಿ.ಎಂ.ಅಭೀಮ್ ಕಾರ್ಯಕ್ರಮದ ಹುದ್ದೆಗಳ ವಿವರ, ವಿದ್ಯಾರ್ಹತೆ, ಕೆಲಸದ ಅನುಭವ, ವೇತನ, ಮೀಸಲಾತಿ ಹಾಗೂ ವಯೋಮಿತಿ ಮಾಹಿತಿಯನ್ನು Ballari.nic.in ವೆಬ್ ಸೈಟ್‌ನಿಂದ ಪಡೆಯಲು ತಿಳಿಸಿದೆ.
2.ಅರ್ಜಿಯನ್ನು ದಿನಾಂಕ 23/09/2024ರ ರಿಂದ 03/10/2024 ರ ಸಂಜೆ 05:00 ಗಂಟೆಯವರೆಗೆ Ballari.nic.in ವೆಬ್ ಸೈಟ್‌ನಿಂದ ಡೌನ್‌ಲೋಡ್ ಮಾಡಬಹುದು ಅಥವಾ ಕಛೇರಿ ವೇಳೆಯಲ್ಲಿ (ರಜಾ ದಿನಗಳನ್ನು ಹೊರತುಪಡಿಸಿ) ಜಿಲ್ಲಾ ಆರ್.ಸಿ.ಹೆಚ್.ಅಧಿಕಾರಿಗಳ ಕಛೇರಿ, ಜಿಲ್ಲಾ ಆಸ್ಪತ್ರೆ ಆವರಣ, ಅನಂತಪುರ ರಸ್ತೆ, ಬಳ್ಳಾರಿ ಇಲ್ಲಿ ಪಡೆಯಬಹುದು.
3.ನಿಗದಿತ ಭರ್ತಿ ಮಾಡಿದ ಅರ್ಜಿ ನಮೂನೆಯೊಂದಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಸ್ವಯಂ ದೃಢೀಕರಿಸಿ ವಿದ್ಯಾರ್ಹತೆ, ಅನುಭವ ಹಾಗೂ ಇತರೆ ಅಗತ್ಯ ದೃಢೀಕೃತ ದಾಖಲಾತಿಗಳೊಂದಿಗೆ ದಿನಾಂಕ:- 04/10/2024 ರಂದು ಬೆಳಗ್ಗೆ 9:30 ಕ್ಕೆ ಜಿಲ್ಲಾ ಆರೋಗ್ಯ ಮತ್ತು ಕು.ಕ.ಅಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಮೂಲ ದಾಖಲಾತಿ ಪರಿಶೀಲನೆಗೆ ತಪ್ಪದೆ ಹಾಜರಾಗಬೇಕು.
4.ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ದಿನಾಂಕ 19/10/2024ರಂದು ಬೆಳಗ್ಗೆ 11:00 ಗಂಟೆಗೆ ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು ಇವುಗಳಲ್ಲಿ ಯಾವುದಾದರು ಆಕ್ಷೇಪಣೆಗಳಿದ್ದಲ್ಲಿ ದಿನಾಂಕ 23/10/2024ರ ಸಂಜೆ 5:00 ರೊಳಗೆ ಸಲ್ಲಿಸತಕ್ಕದ್ದು.
5.ಜಿಲ್ಲಾ ಆರೋಗ್ಯ ಸಂಘ ಬಳ್ಳಾರಿ ತೀರ್ಮಾನಿಸಿದಂತೆ ಸದರಿ ಪತ್ರಿಕಾ ಪ್ರಕಟಣೆ ಮಾಡಲಾಗದ ಸಂದರ್ಭದಲ್ಲಿ ಕಾಯ್ದಿರಿಸಲಾದ ಹೆಚ್ಚುವರಿ ಪಟ್ಟಿಯನ್ನು (ವೇಟಿಂಗ್ ಲೀಸ್ಟ್) ಒಂದು ವರ್ಷದ ಮದ್ಯಾಂತರದಲ್ಲಿ ಖಾಲಿಯಾಗುವ ಹುದ್ದೆಗಳಿಗೆ ಸದರಿ ಕಾಯ್ದಿರಿಸಿದ ಪಟ್ಟಿಯಿಂದ ಅರ್ಹ ಅಭ್ಯರ್ಥಿಗಳನ್ನು ಮೆರಿಟ್ ಕಂ ರೋಸ್ಟರ್ ಮೂಲ ಭರ್ತಿ ಮಾಡಲಾಗುವುದು.

ಆಯ್ಕೆಯನ್ನು ಕರ್ನಾಟಕ ಸರ್ಕಾರದ ಸಾಮಾನ್ಯ ನೇಮಕಾತಿ ಮಾರ್ಗಸೂಚಿಯಂತೆ ರೋಸ್ಟರ್ ಹಾಗೂ ಮೆರಿಟ್ ಆಧಾರದ ಮೇಲೆ 371ಜೆ ಮತ್ತು ನಾನ್ 371ಜೆ ಹಾಗೂ ಒಳ ಮೀಸಲಾತಿಯನ್ನು ಪರಿಗಣಿಸಿ ನೇಮಕ ಮಾಡಲಾಗುವುದು. ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಹಾಗೂ ಕಡಿಮೆ ಮಾಡುವ ಅಧಿಕಾರವನ್ನು ಆಯ್ಕೆ ಸಮಿತಿ ಕಾಯ್ದಿರಿಸಿಕೊಂಡಿರುತ್ತದೆ. ನೇಮಕಾತಿಗೆ ಸಂಬಂಧಿಸಿದಂತೆ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ, ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9449843102 ಅನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/-ಸದಸ್ಯ ಕಾರ್ಯದರ್ಶಿಗಳು
ಜಿಲ್ಲೆ ಆರೋಗ್ಯ ಮತ್ತು ಕು.ಕ. ಸಂಘ, ಬಳ್ಳಾರಿ

ಸಹಿ/-ಉಪಾಧ್ಯಕ್ಷರು,
ಜಿಲ್ಲೆ ಆರೋಗ್ಯ ಮತ್ತು ಕು.ಕ. ಸಂಘ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/465/ಕೆಎಸ್‌ಎಂಸಿಎ/2024-25

'ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ'

ಮುಖ್ಯಮಂತ್ರಿ ಬೆನ್ನಿಗೆ ಹೈಕಮಾಂಡ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಜನಪರ ಸರ್ಕಾರವನ್ನು ಅಸ್ಥಿರಗೊಳಿಸಲು ಯತ್ನ: ಕೆ.ಸಿ.ವೇಣುಗೋಪಾಲ್
- 'ರಾಜ್ಯಪಾಲರನ್ನು ದುರ್ಬಳಕೆ ಮಾಡಿಕೊಂಡು ಷಡ್ಯಂತ್ರ'

ನವದೆಹಲಿ: ಮುಡಾ ಹಗರಣದಲ್ಲಿ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದ ಹೊರತಾಗಿಯೂ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆನ್ನಿಗೆ ನಿಲ್ಲಲು ಕಾಂಗ್ರೆಸ್ ಹೈಕಮಾಂಡ್ ತೀರ್ಮಾನಿಸಿದೆ. 'ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ' ಎಂದು ಪಕ್ಷದ ರಾಷ್ಟ್ರೀಯ ನಾಯಕರು ಪುನರುಚ್ಚರಿಸಿದ್ದಾರೆ.

'ಕಾಂಗ್ರೆಸ್ ಸರ್ಕಾರವನ್ನು ಅಸ್ಥಿರಗೊಳಿಸುವ ಮತ್ತು ಹಿಂದುಳಿದ ವರ್ಗದಿಂದ ಬಂದ ಮುಖ್ಯಮಂತ್ರಿಯನ್ನು ಪದಚ್ಯುತಗೊಳಿಸಲು ಬಿಜೆಪಿ ಪ್ರಯತ್ನಿಸುತ್ತಿದೆ. ಮುಖ್ಯಮಂತ್ರಿ ವಿರುದ್ಧ ನಿರಂತರ ಪಿತೂರಿ ನಡೆಯುತ್ತಿದೆ. ಕರ್ನಾಟಕದಲ್ಲಿ 'ಗ್ಯಾರಂಟಿ' ಯೋಜನೆಗಳು ಜಾರಿಗೆ ಬಂದ ನಂತರ ಸಿದ್ದರಾಮಯ್ಯ ಜನಪ್ರಿಯತೆ ಹೆಚ್ಚಿದೆ. ಇದು ಬಿಜೆಪಿಯ ಭೀತಿಗೆ ಕಾರಣವಾಗಿದೆ. ಈ ಕಾರಣಕ್ಕೆ ರಾಜ್ಯಪಾಲರನ್ನು ದುರ್ಬಳಕೆ ಮಾಡಿಕೊಂಡು ಕೇಂದ್ರ ಸರ್ಕಾರ ಷಡ್ಯಂತ್ರಗಳನ್ನು ನಡೆಸುತ್ತಿದೆ. ಇದರ ವಿರುದ್ಧ ಹೋರಾಟ ಮಾಡಲಾಗುವುದು' ಎಂದು ಹೈಕಮಾಂಡ್ ಮೂಲಗಳು ತಿಳಿಸಿವೆ.

'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಬಿಜೆಪಿ ಮುಖಂಡರಾದ ಮುರುಗೇಶ ನಿರಾಣಿ, ಜನಾರ್ದನ ರೆಡ್ಡಿ ಹಾಗೂ ಶಶಿಕಲಾ ಜೊಲ್ಲೆ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ಲೋಕಾಯುಕ್ತರು ಪ್ರಸ್ತಾವ ಸಲ್ಲಿಸಿ ವರ್ಷಗಳೇ ಕಳೆದಿವೆ. ಆದರೆ, ರಾಜ್ಯಪಾಲರು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ. ಇದು ರಾಜ್ಯಪಾಲರ ಪಕ್ಷಪಾತದ ನಿಲುವಿಗೆ ಪುರಾವೆ' ಎಂದು ನಾಯಕರೊಬ್ಬರು ಹೇಳಿದರು.

'ದೆಹಲಿ ಮುಖ್ಯಮಂತ್ರಿಯಾಗಿದ್ದ ಅರವಿಂದ ಕೇಜ್ರಿವಾಲ್ ಅವರನ್ನು ಅಬಕಾರಿ ನೀತಿ ಇ.ಡಿ. ಅಧಿಕಾರಿಗಳು ಬಂಧಿಸಿದರು. ಆದರೆ, ಕೇಜ್ರಿವಾಲ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿಲ್ಲ. ಮುಖ್ಯಮಂತ್ರಿಗೆ ರಾಜೀನಾಮೆ ನೀಡಲು ಸೂಚಿಸುವ ಮೂಲಕ ಬಿಜೆಪಿ ಖೆಡ್ಡಾಕ್ಕೆ ಬೀಳಲು ನಾವು ಸಿದ್ಧರಿಲ್ಲ' ಎಂದು ಅವರು ತಿಳಿಸಿದರು.

'ಹರಿಯಾಣ ವಿಧಾನಸಭಾ ಚುನಾವಣೆಗೆ ಕೆಲವೇ ದಿನಗಳು ಉಳಿದಿವೆ. ಮಹಾರಾಷ್ಟ್ರ, ಜಾರ್ಖಂಡ್ ಹಾಗೂ ದೆಹಲಿ ವಿಧಾನಸಭೆಗೆ ಕೆಲವೇ ತಿಂಗಳಲ್ಲಿ ಚುನಾವಣೆ ನಡೆಯಲಿದೆ. ಇಂತಹ ಸಮಯದಲ್ಲಿ ರಾಜೀನಾಮೆ ಪಡೆದರೆ ತಪ್ಪು ಸಂದೇಶ ರವಾನೆಯಾಗಲಿದೆ. ಬಿಜೆಪಿಗೆ ಚುನಾವಣಾ ಅಸ್ತ್ರ ನೀಡಿದಂತಾಗುತ್ತದೆ' ಎಂದು ವ್ಯಾಖ್ಯಾನಿಸಿದರು.

'ಮುಡಾ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಗಳಿಂದ ಕಾಂಗ್ರೆಸ್ ಸರ್ಕಾರಕ್ಕೆ ಹಾಗೂ ಸಿದ್ದರಾಮಯ್ಯ ಅವರ ವ್ಯಕ್ತಿತ್ವಕ್ಕೆ ಕಳಂಕ ತಟ್ಟಿರುವುದು ನಿಜ' ಎಂದು ಅವರು ಒಪ್ಪಿಕೊಂಡರು.

'ವಿನಮ್ರ ಹಿನ್ನೆಲೆ ಹಾಗೂ ಸರಳ ವ್ಯಕ್ತಿತ್ವದ ನಾಯಕನ ಜನಪರ ಸರ್ಕಾರವನ್ನು ಅಸ್ಥಿರಗೊಳಿಸಲು ರಾಜ್ಯಪಾಲರು ಶಕ್ತಿಮೀರಿ ಪ್ರಯತ್ನಿಸುತ್ತಿದ್ದಾರೆ' ಎಂದು ಆರೋಪಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, 'ರಾಜ್ಯ ಸರ್ಕಾರ ಸದೃಢವಾಗಿದೆ. ನಮ್ಮ ಸರ್ಕಾರ ಜನರ ಮಾತು ಕೇಳುತ್ತದೆಯೇ ಹೊರತು ದೆಹಲಿಯ ದಬ್ಬಾಳಿಕೆಯ ನುಡಿಗಳನ್ನಲ್ಲ' ಎಂದರು.

ಸಂಕ್ಷಿಪ್ತ ಸುದ್ದಿ

ಪರಮಶಿವಮೂರ್ತಿಗೆ ಸೋದೆ ಸದಾಶಿವರಾಯ ಪ್ರಶಸ್ತಿ

ಶಿರಸಿ: ಸೋಂದಾ ಇತಿಹಾಸೋತ್ಸವ ಮತ್ತು ಸೋದೆ ಸದಾಶಿವರಾಯ ಪ್ರಶಸ್ತಿ ಪ್ರದಾನ ಸಮಾರಂಭ ಸಮಿತಿ ನೀಡುವ ರಾಜ್ಯಮಟ್ಟದ 'ಸೋದೆ ಸದಾಶಿವರಾಯ ಪ್ರಶಸ್ತಿ'ಗೆ ಹಂಪಿ ಕನ್ನಡ ವಿಶ್ವ ವಿದ್ಯಾಲಯದ ಕುಲಪತಿ ಹಾಗೂ ಸಂಶೋಧಕ ಡಿ.ವಿ.ಪರಮಶಿವಮೂರ್ತಿ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹10 ಸಾವಿರ ನಗದು, ಶಾಲು, ಹಾರ, ಸ್ಮರಣಿಕೆ ವಿಶೇಷವಾಗಿ ಸೋದೆ ಸದಾಶಿವರಾಯ ಪೇಟವನ್ನು ಒಳಗೊಂಡಿರುತ್ತದೆ. ಸೋಂದಾ ಇತಿಹಾಸೋತ್ಸವ ಮತ್ತು ರಾಜ್ಯ ಮಟ್ಟದ ಇತಿಹಾಸ ಸಮ್ಮೇಳನ ಹಾಗೂ ಸೋದೆ ಸದಾಶಿವರಾಯ ಪ್ರಶಸ್ತಿ ಪ್ರದಾನ ಸಮಾರಂಭ ಅಕ್ಟೋಬರ್ 19 ಹಾಗೂ 20ರಂದು ಶಿರಸಿಯ ಸಮೀಪದ ಸೋಂದಾದ ಸ್ವಾದಿ ಜೈನಮಠದಲ್ಲಿ ನಡೆಯಲಿದೆ.

'ಅ.19ರಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಮತ್ತು ಸ್ವಾದಿ ಜೈನಮಠದ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿ ಸಾನ್ನಿಧ್ಯ ದಲ್ಲಿ ಪ್ರಶಸ್ತಿ ಪ್ರದಾನ ನೆರವೇರಲಿದೆ. ಸಮ್ಮೇಳನದ ಅಧ್ಯಕ್ಷರನ್ನಾಗಿ ಹಿರಿಯ ಇತಿಹಾಸ ಸಂಶೋಧಕಿ ವಸುಂಧರಾ ಫಿಲಿಯೋಜರ್ ಅವರನ್ನು ಆಯ್ಕೆ ಮಾಡಲಾಗಿದೆ' ಎಂದು ಸಮಿತಿ ತಿಳಿಸಿದೆ.

ಮಕ್ಕಳಿಗೆ ಇಂದಿನಿಂದ ವಾರಕ್ಕೆ ಆರು ಮೊಟ್ಟೆ

ಬೆಂಗಳೂರು: ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ 56 ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜತೆಗೆ ಸೆ.25ರಿಂದ ವಾರದ ಆರು ದಿನ ಮೊಟ್ಟೆ ಪೂರೈಸಲಾಗುತ್ತದೆ.

ಯಾದಗಿರಿ ಜಿಲ್ಲೆ ಅರಕೇರಾ ಕೆ. ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಮಕ್ಕಳಿಗೆ ಬೇಯಿಸಿದ ಮೊಟ್ಟೆ ನೀಡುವ ಮೂಲಕ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಚಾಲನೆ ನೀಡಲಿದ್ದಾರೆ.

ಸರ್ಕಾರ ಎರಡು ದಿನ ಮೊಟ್ಟೆ ಪೂರೈಸಿದರೆ, ಉಳಿದ ನಾಲ್ಕು ದಿನ ಅಜೀಂ ಪ್ರೇಮ್‌ಜಿ ಫೌಂಡೇಷನ್ ನೀಡಲಿದೆ. ಮೂರು ವರ್ಷ ಪೂರೈಸಲು ₹1,500 ಕೋಟಿ ನೆರವು ನೀಡಲು ಶಾಲಾ ಶಿಕ್ಷಣ ಇಲಾಖೆ ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಷನ್ ನಡುವೆ ಜುಲೈನಲ್ಲಿ ಒಪ್ಪಂದ ಮಾಡಿಕೊಳ್ಳಲಾಗಿತ್ತು.

ದ್ವಾರಕೀಶ್ ನೆನಪಿನಲ್ಲಿ ದಸರಾ ಚಲನಚಿತ್ರೋತ್ಸವ

ಮೈಸೂರು: ಈ ಬಾರಿಯ ದಸರಾ ಚಲನಚಿತ್ರೋತ್ಸವವನ್ನು ನಟ, ನಿರ್ದೇಶಕ ದ್ವಾರಕೀಶ್ ನೆನಪಿಗೆ ಮೀಸಲಿಡಲಾಗಿದೆ. ಗುರುಶಿಷ್ಯರು, ಮೇಯರ್ ಮುತ್ತಣ್ಣ ಹಾಗೂ ಪ್ರಚಂಡ ಕುಳ್ಳ ಚಿತ್ರಗಳ ಪ್ರದರ್ಶನವಿದ್ದು, ಉತ್ಸವವು ಅಕ್ಟೋಬರ್ 4ರಿಂದ 10ರವರೆಗೆ ನಡೆಯಲಿದೆ.

ದ್ವಾರಕೀಶ್

'ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಅ. 3ರಂದು ಬೆಳಿಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದು, ದ್ವಾರಕೀಶ್ ಪುತ್ರ ಯೋಗೀಶ್ ಅವರನ್ನು ಸನ್ಮಾನಿಸಲಾಗುವುದು' ಎಂದು ದಸರಾ ಚಲನಚಿತ್ರೋತ್ಸವ ಸಮಿತಿ ಉಪ ವಿಶೇಷಾಧಿಕಾರಿಯೂ ಆದ ಡಿಸಿಎಫ್ ಕೆ.ಎನ್.ಬಸವರಾಜು, ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 'ಜಯಲಕ್ಷ್ಮಿಪುರಂನ ಹ್ಯಾಬಿಟೇಟ್ ಮಾಲ್‌ನಲ್ಲಿರುವ 'ಡಿಆರ್‌ಸಿ'ಯ ಒಂದು ಪರದೆ ಹಾಗೂ ಇಟ್ಟಿಗೆಗೂಡಿನ ಮಾಲ್ ಆಫ್ ಮೈಸೂರ್‌ನ 'ಐನಾಕ್ಸ್'ನ ಮೂರು ಪರದೆಗಳಲ್ಲಿ 117 ಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದ್ದು, ಬೆಂಗಳೂರು ಚಲನಚಿತ್ರೋತ್ಸವದಲ್ಲಿ ಆಯ್ಕೆಯಾಗಿದ್ದ ಚಿತ್ರಗಳೂ ಇವೆ' ಎಂದರು.

ನೀಟ್, ಸಿಇಟಿ: ಎರಡನೇ ಸುತ್ತಿನ ಅವಧಿ ವಿಸ್ತರಣೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ (ಸಿಇಟಿ, ನೀಟ್) ಎರಡನೇ ಸುತ್ತಿನಲ್ಲಿ ಸೀಟು ಹಂಚಿಕೆಯಾದವರು ಕಾಲೇಜಿಗೆ ಪ್ರವೇಶ ಪಡೆಯಲು ಸೆ. 28ರವರೆಗೆ ಅವಕಾಶ ನೀಡಲಾಗಿದೆ.

ಸಿಇಟಿ ವಿದ್ಯಾರ್ಥಿಗಳಿಗೆ 'ಚಾಯ್ಸ್' ದಾಖಲಿಸಲು ಸೆ. 26ರವರೆಗೆ, ಶುಲ್ಕ ಪಾವತಿ ಮತ್ತು ದಾಖಲೆ ಸಲ್ಲಿಸಲು 27ರವರೆಗೆ ಅವಧಿ ವಿಸ್ತರಿಸಲಾಗಿದೆ. ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸ್‌ಗಳಿಗೆ ಚಾಯ್ಸ್ ದಾಖಲಿಸಲು ಅವಕಾಶ ಇಲ್ಲ. ಆದರೆ, ಶುಲ್ಕ ಪಾವತಿ, ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು ಪ್ರವೇಶ ಪಡೆಯಲು ಸೆ. 27 ಮತ್ತು 28 ಕೊನೆಯ ದಿನವಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

2030ರ ವೇಳೆಗೆ ಶೇ 50ರಷ್ಟು ಅಪಘಾತ ಕಡಿಮೆ ಮಾಡುವ ಗುರಿ: ಮುಖ್ಯಮಂತ್ರಿ

ಪ್ರಮುಖ ಹೆದ್ದಾರಿಗಳಲ್ಲಿ 'ಸ್ಮಾರ್ಟ್ ಸಿಸ್ಟಂ'

ಪ್ರಜಾವಾಣಿ ವಾರ್ತೆ

ಬೆಂಗಳೂರಿನಲ್ಲಿ ಮಂಗಳವಾರ ಆಯೋಜಿಸಿದ್ದ 'ಸೇಫ್' ವಾರ್ಷಿಕ ಸಮ್ಮೇಳನದಲ್ಲಿ ಅತ್ತಿಬೆಲೆ ಸರ್ಕಾರಿ ಮಾದರಿ ಪ್ರಾಥಮಿಕ ಬಾಲಕರ ಶಾಲೆ ವಿದ್ಯಾರ್ಥಿಗಳು ಸಂಚಾರ ನಿಯಮಗಳ ಬಗ್ಗೆ ಜಾಗೃತಿ ಮೂಡಿಸಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಬೆಂಗಳೂರು: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ 'ಸ್ಮಾರ್ಟ್ ಸಿಸ್ಟಂ' ಅಳವಡಿಕೆಯಿಂದ ಅಪಘಾತಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದ್ದು, ರಾಜ್ಯದ ಪ್ರಮುಖ ರಸ್ತೆಗಳು ಮತ್ತು ಹೆದ್ದಾರಿಗಳಲ್ಲೂ ಈ ವ್ಯವಸ್ಥೆಯನ್ನು ಅಳವಡಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭಾರತೀಯ ಆಟೊಮೊಬೈಲ್ ತಯಾರಕರ ಒಕ್ಕೂಟ 'ನಮ್ಮ ರಸ್ತೆಗಳು ನಮ್ಮ ಜವಾಬ್ದಾರಿ' ವಿಚಾರದ ಮೇಲೆ ಮಂಗಳವಾರ ಹಮ್ಮಿಕೊಂಡಿದ್ದ ವಾರ್ಷಿಕ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

'ಸ್ಮಾರ್ಟ್ ಸಿಸ್ಟಂ' (ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿ ಸಂಚಾರ ನಿಯಮ ಉಲ್ಲಂಘನೆಯನ್ನು ಪತ್ತೆ ಹಚ್ಚುವುದು) ಅಳವಡಿಸುವ ಜೊತೆಗೆ, ಪಾದಚಾರಿಗಳು, ಸೈಕಲ್ ಸವಾರರು, ವಾಹನ ಸವಾರರು ಸೇರಿದಂತೆ ಪ್ರತಿಯೊಬ್ಬ ರಿಗೂ ರಸ್ತೆಗಳು ಸುರಕ್ಷಿತವಾಗಿರುವುದನ್ನು ಖಾತ್ರಿಪಡಿಸುವುದು ನಮ್ಮ ಗುರಿ ಎಂದು ಹೇಳಿದರು.

ಕಳೆದ ವರ್ಷ ದೇಶದಲ್ಲಿ 1.68 ಲಕ್ಷಕ್ಕೂ ಹೆಚ್ಚು ರಸ್ತೆ ಅಪಘಾತಗಳು ಸಂಭವಿಸಿ, ಸಾವು–ನೋವು ಉಂಟಾಗಿದೆ. ಅಪಘಾತಗಳಿಂದ ಉಂಟಾಗುವ ಜೀವಹಾನಿಯು ಜನರ ಜೀವನ ಮತ್ತು ಜೀವನೋಪಾಯದ ಮೇಲೆ ಪರಿಣಾಮ ಬೀರುತ್ತದೆ. ಮೂಲಸೌಕರ್ಯ ಅಭಿವೃದ್ಧಿ, ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಮೂಲಕ ರಸ್ತೆ ಅಪಘಾತಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗುವುದು ಎಂದರು.

ಮುಂದಿನ ಎರಡು ವರ್ಷಗಳಲ್ಲಿ ಐದು ಸಾವಿರ ಎಲೆಕ್ಟ್ರಿಕ್ ಬಸ್‌ಗಳನ್ನು ಖರೀದಿಸಲು ಯೋಜಿಸಿದ್ದೇವೆ. ಇದರಿಂದ ಗಾಳಿಯ ಗುಣಮಟ್ಟ ಸುಧಾರಿಸುತ್ತದೆ

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

'ವರ್ಷದಿಂದ ವರ್ಷಕ್ಕೆ ರಸ್ತೆ ಅಪಘಾತಗಳ ಸಂಖ್ಯೆ ಕಡಿಮೆ ಆಗಲಿದೆ ಎಂಬ ವಿಶ್ವಾಸ ಇದೆ. 2030ರ ವೇಳೆಗೆ ಶೇಕಡ 50ರಷ್ಟು ಕಡಿಮೆ ಮಾಡುವ ಗುರಿ ಹೊಂದಿದ್ದೇವೆ' ಎಂದು ಹೇಳಿದರು.

ಮೂರು ಕೋಟಿ ವಾಹನ: ದೇಶದಲ್ಲಿ ಜನಸಂಖ್ಯೆ, ವಾಹನ ಸಂಖ್ಯೆ ಎರಡೂ ಹೆಚ್ಚುತ್ತಿವೆ. ಅಂತರರಾಷ್ಟ್ರೀಯ ರಸ್ತೆ ಸುರಕ್ಷತೆ ಮಾದರಿ ನಮ್ಮಲ್ಲೂ ಬರಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಭಿಪ್ರಾಯಪಟ್ಟರು.

'ಪ್ರತೀ ನಾಗರಿಕನೂ ಸ್ವಂತ ವಾಹನ ಹೊಂದುವ ಕನಸು ಕಂಡಿರುತ್ತಾನೆ. ಶೇಕಡಾ 30ರಿಂದ 35ರಷ್ಟು ಜನ ಮಾತ್ರ ಸಾರ್ವಜನಿಕ ಸಾರಿಗೆ ಬಳಸುತ್ತಿದ್ದಾರೆ. ಕರ್ನಾಟಕದಲ್ಲಿ ಮೂರು ಕೋಟಿ ವಾಹನಗಳಿವೆ. ಬೆಂಗಳೂರಿನ ಜನಸಂಖ್ಯೆ 1.50 ಕೋಟಿ ಇದ್ದರೆ, ವಾಹನ ಸಂಖ್ಯೆ 1.04 ಕೋಟಿಯಿದೆ. ಸಂಚಾರ ದಟ್ಟಣೆ ನಿವಾರಣೆಗೆ ಪೆರಿಫೆರಲ್ ರಿಂಗ್ ರೋಡ್ ಹಾಗೂ ಸುರಂಗ ರಸ್ತೆ ನಿರ್ಮಾಣಕ್ಕೆ ಸರ್ಕಾರ ಮುಂದಾಗಿದೆ' ಎಂದು ಹೇಳಿದರು.

ಟಾಟಾ ಮೋಟರ್ಸ್ ಗ್ಲೋಬಲ್ ಹೆಡ್ ಮತ್ತು ಸೇಫ್ ಅಧ್ಯಕ್ಷ ಸುಶಾಂತ್ ನಾಯ್ಕ್, ಉಪಾಧ್ಯಕ್ಷ ಅಲೋಕ್ ಜೇಟ್ಲಿ, ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್.ವಿ. ಪ್ರಸಾದ್ ಹಾಜರಿದ್ದರು.

ಐಎಸ್ ಸಂಚು: ಶಂಕಿತರ ವಿರುದ್ಧ ದೋಷಾರೋಪ ಪಟ್ಟಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಮುಸಾವೀರ್

ತಾಹಾ

ಬೆಂಗಳೂರು: 'ದಿ ರಾಮೇಶ್ವರ ಕೆಫೆ'ಯಲ್ಲಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿತರಾಗಿರುವ ಶಂಕಿತ ಉಗ್ರರಾದ ಮುಸಾವೀರ್ ಹುಸೇನ್ ಶಾಜೀದ್ ಹಾಗೂ ಅಬ್ದುಲ್ ಮಥೀನ್ ಅಹ್ಮದ್ ತಾಹಾ ವಿರುದ್ಧ ಬೆಂಗಳೂರಿನಲ್ಲಿರುವ ರಾಷ್ಟ್ರೀಯ ತನಿಖಾ ದಳದ ವಿಶೇಷ ನ್ಯಾಯಾಲಯಕ್ಕೆ ಮಂಗಳವಾರ ಎನ್‌ಐಎ ಮತ್ತೊಂದು ದೋಷಾರೋಪ ಪಟ್ಟಿ ಸಲ್ಲಿಸಿದೆ.

'ಶಿವಮೊಗ್ಗ ಮಾದರಿಯ ಐಎಸ್ ಸಂಚು ಪ್ರಕರಣ'ದಲ್ಲಿಯೂ ಈ ಇಬ್ಬರು ಶಂಕಿತರ ಪಾತ್ರವಿರುವುದು ತನಿಖೆಯಿಂದ ದೃಢಪಟ್ಟಿದೆ ಎಂಬುದಾಗಿ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ. ಶಿವಮೊಗ್ಗ ಮಾದರಿ ಪ್ರಕರಣದಲ್ಲಿ ಇದುವರೆಗೂ 10 ಮಂದಿಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಬೆಂಗಳೂರಿನ ಅಲ್–ಹಿಂದ್ ಐಎಸ್ ಮಾದರಿ ಪ್ರಕರಣದಲ್ಲೂ ಅಬ್ದುಲ್ ಮತೀನ್ ಅಹ್ಮದ್ ತಾಹಾ ಹಾಗೂ ಮಸ್ಸಾವೀರ್ ಹುಸೇನ್ ಶಾಜಿಬ್ ವಿರುದ್ಧ (ರಾಮೇಶ್ವರ ಕೆಫೆ ಸ್ಫೋಟ ಪ್ರಕರಣ) ಎನ್‌ಐಎ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯವರಾದ ಇಬ್ಬರು ಶಂಕಿತರು, ಇಸ್ಲಾಮಿಕ್ ಸ್ಟೇಟ್ (ಐಎಸ್) ಭಯೋತ್ಪಾದಕ ಸಂಘಟನೆಯ ಜತೆ ನಂಟು ಹೊಂದಿದ್ದರು. ಸಿರಿಯಾದಲ್ಲಿ ಐಎಸ್ ವಶದಲ್ಲಿರುವ ಪ್ರದೇಶಕ್ಕೆ ವಲಸೆ ಹೋಗಲು ಈ ಹಿಂದೆ ಪ್ರಯತ್ನಿಸಿದ್ದರು. ಮುಸ್ಲಿಂ ಯುವಕರನ್ನು ಪ್ರಚೋದಿಸಿ ಐಎಸ್ ಸಿದ್ಧಾಂತದತ್ತ ಸೆಳೆಯುವ ಕೆಲಸ ಮಾಡುತ್ತಿದ್ದರು' ಎಂದು ತನಿಖಾ ಮೂಲಗಳು ತಿಳಿಸಿವೆ.

'ಭಾರತದಲ್ಲಿ ಭಯೋತ್ಪಾದನೆ ಚಟುವಟಿಕೆಗೆ ಸಂಚು ರೂಪಿಸುವುದು, ತನ್ನ ಸಂಘಟನೆಗೆ ಮುಸ್ಲಿಂ ಯುವಕರ ನೇಮಕ, ಭಯೋತ್ಪಾದಕ ಕೃತ್ಯಗಳಿಗೆ ನಿಧಿ ಸಂಗ್ರಹ, ಭಾರತೀಯ ರಾಷ್ಟ್ರಧ್ವಜ ಸುಡುವುದು, ಪ್ರಯೋಗ ಸ್ಫೋಟ ಸೇರಿದಂತೆ ಮತ್ತಿತರ ಹಿಂಸಾತ್ಮಕ ಚಟುವಟಿಕೆಗಳಲ್ಲಿ ಶಂಕಿತರು ಭಾಗಿಯಾಗಿದ್ದರು. 2022ರ ಸೆಪ್ಟೆಂಬರ್ 19ರಂದು ಶಿವಮೊಗ್ಗ ಜಿಲ್ಲೆಯ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಆರೋಪಿಗಳ ಸಂಚಿನ ಕುರಿತು ಪ್ರಕರಣ ದಾಖಲಾಗಿತ್ತು. ಈ ಪ್ರಕರಣದ ತನಿಖೆಯನ್ನು ಎನ್‌ಐಎಗೆ ವರ್ಗಾವಣೆ ಮಾಡಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

'ಶಿವಮೊಗ್ಗದ ಪ್ರಕರಣದ ತನಿಖೆ ನಡೆಸುತ್ತಿರುವ ಎನ್‌ಐಎ, ಮೂರನೇ ಪ್ರಾಥಮಿಕ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ' ಎಂದು ತನಿಖಾಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಮಳವಳ್ಳಿ ತಾಲ್ಲೂಕಿನ ಮಲಿಯೂರು ಗ್ರಾಮದ ಮಹಾಲಕ್ಷ್ಮಿ ಅವರ ಮನೆಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಸೋಮವಾರ ರಾತ್ರಿ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು

ಸರ್ಕಾರ ಮೈಕ್ರೊ ಫೈನಾನ್ಸ್ ನಿಷೇಧಿಸಲಿ: ನಾಗಲಕ್ಷ್ಮಿ

ಪ್ರಜಾವಾಣಿ ವಾರ್ತೆ

ಮಳವಳ್ಳಿ (ಮಂಡ್ಯ ಜಿಲ್ಲೆ): 'ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್‌ಗಳಿಂದ ಜನರಿಗೆ ಕಿರುಕುಳ ಹೆಚ್ಚುತ್ತಿರುವುದರಿಂದ, ಅವುಗಳನ್ನು ಬಂದ್ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನ ಸೆಳೆಯುವೆ' ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ತಿಳಿಸಿದರು.

ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ, ತಾಲ್ಲೂಕಿನ ಮಲಿಯೂರಿನ ಮಹಾಲಕ್ಷ್ಮಿ ಅವರ ಮನೆಗೆ ಭೇಟಿ ನೀಡಿ, ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದ ಬಳಿಕ ಅವರು ಮಾತನಾಡಿ, 'ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘದಿಂದ ಸಾಲ ಪಡೆದಿದ್ದ ಮಹಾಲಕ್ಷ್ಮಿಯವರು, ಸಿಬ್ಬಂದಿಯ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಅವರ ಕುಟುಂಬಕ್ಕೆ ಪರಿಹಾರ ಕೊಡಬೇಕು. ಮೈಕ್ರೊ ಫೈನಾನ್ಸ್ ನಿಷೇಧಿಸಬೇಕು' ಎಂದು ಆಗ್ರಹಿಸಿದರು.

'ಕೇಂದ್ರ ಮತ್ತು ರಾಜ್ಯ ಸರ್ಕಾರ ಬಡವರ ಕಲ್ಯಾಣಕ್ಕಾಗಿ ಹಲವು ಯೋಜನೆಗಳನ್ನು ರೂಪಿಸಿದ್ದರೂ ಮೈಕ್ರೊ ಫೈನಾನ್ಸ್‌ಗಳ ಹಾವಳಿಯಿಂದ ಅವು ವಿಫಲವಾಗುತ್ತಿವೆ. ಗ್ರಾಮ ಪಂಚಾಯಿತಿಗಳು ಜನರಲ್ಲಿ ಜಾಗೃತಿ ಮೂಡಿಸಬೇಕು. ಸಾಲ ಮರುಪಾವತಿಗೆ ಹೆದರಿ ಯಾರೂ ಆತ್ಮಹತ್ಯೆ ಮಾಡಿಕೊಳ್ಳಬಾರದು. ಅಂಥ ಘಟನೆ ನಡೆದರೆ ಪೊಲೀಸರು ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡು, ಕ್ರಮ ಕೈಗೊಳ್ಳಬೇಕು' ಎಂದು ಸೂಚಿಸಿದರು.

'ಗೃಹಿಣಿ ಆತ್ಮಹತ್ಯೆ ಪ್ರಕರಣದ ಹಿನ್ನೆಲೆಯಲ್ಲಿ ಕೈಗೊಂಡ ಕ್ರಮಗಳ ಕುರಿತು ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯಿತಿ ಸಿಇಒ ಜತೆ ಶೀಘ್ರ ಸಭೆ ನಡೆಸಲಾಗುವುದು' ಎಂದ ಅವರು, ಪಿಎಸ್‌ಐ ಡಿ.ರವಿಕುಮಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ರಾಜಮೂರ್ತಿ, ಸಹಕಾರ ಸಂಘಗಳ ಸಹಾಯಕ ನಿಬಂಧಕಿ ಕೆ.ಅನಿತಾ ಅವರಿಂದ ಮಾಹಿತಿ ಪಡೆದರು.

ಹೊರರಾಜ್ಯದಲ್ಲಿ ಆರೋಪಿಗೆ ಶೋಧ

ಬೆಂಗಳೂರು: ವೈಯಾಲಿಕಾವಲ್‌ನಲ್ಲಿ ನಡೆದಿದ್ದ ಮಹಾಲಕ್ಷ್ಮಿ (29) ಅವರ ಕೊಲೆ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು, ಆರೋಪಿಗಾಗಿ ಒಡಿಶಾ, ಜಾರ್ಖಂಡ್ ಹಾಗೂ ಪಶ್ಚಿಮ ಬಂಗಾಳ ರಾಜ್ಯದ ಗಡಿಪ್ರದೇಶಗಳಲ್ಲಿ ಶೋಧ ನಡೆಸಿದ್ದಾರೆ.

'ಕೃತ್ಯ ಎಸಗಿದ ಬಳಿಕ ಆರೋಪಿ ಹೊರರಾಜ್ಯಕ್ಕೆ ಪರಾರಿಯಾಗಿರುವ ಮಾಹಿತಿ ಕೇಂದ್ರ ವಿಭಾಗದ ಪೊಲೀಸರಿಗೆ ಸಿಕ್ಕಿದ್ದು, ಅದನ್ನು ಆಧರಿಸಿ ತನಿಖೆ ಚುರುಕುಗೊಳಿಸಿದ್ದಾರೆ' ಎಂದು ಮೂಲಗಳು ಖಚಿತ ಪಡಿಸಿವೆ.

'ಆರೋಪಿ, ಮಹಾಲಕ್ಷ್ಮಿ ಅವರ ದೇಹವನ್ನು 52 ತುಂಡುಗಳಾಗಿ ಕತ್ತರಿಸಿ ಫ್ರಿಜ್‌ನಲ್ಲಿ ಇರಿಸಿದ್ದ. ಶಿವಾಜಿನಗರದ ಬೌರಿಂಗ್ ಆಸ್ಪತ್ರೆಯ ವೈದ್ಯರು ಕೊಲೆಯಾದ ಮಹಿಳೆಯ ದೇಹದ ತುಂಡುಗಳನ್ನು ಜೋಡಿಸಿ ಎರಡು ತಾಸು ಮರಣೋತ್ತರ ಪರೀಕ್ಷೆ ನಡೆಸಿದ್ದರು. ಮರಣೋತ್ತರ ಪರೀಕ್ಷೆಯ ಪ್ರಾಥಮಿಕ ಮಾಹಿತಿಯನ್ನಷ್ಟೇ ವೈದ್ಯರು, ತನಿಖಾಧಿಕಾರಿಗಳಿಗೆ ನೀಡಿದ್ದಾರೆ. ಎರಡು ದಿನಗಳಲ್ಲಿ ಸಂಪೂರ್ಣ ವರದಿ ಸಿದ್ಧವಾಗಲಿದೆ' ಎಂದು ಮೂಲಗಳು ತಿಳಿಸಿವೆ.

'ಮಹಾಲಕ್ಷ್ಮಿಯ ಎದೆ ಮತ್ತು ಹೊಟ್ಟೆಯ ಭಾಗಕ್ಕೆ ಚುಚ್ಚಿರುವ ಆರೋಪಿ ಬಳಿಕ ಮೃತದೇಹವನ್ನು ತುಂಡರಿಸಿದ್ದಾನೆ. ನಂತರ, ಫ್ರಿಜ್‌ನಲ್ಲಿ ಇರಿಸಿದ್ದಾನೆ. ಕೊಲೆಗೂ ಮುನ್ನ ಆಕೆಯ ಪ್ರಜ್ಞೆ ತಪ್ಪಿಸಲಾಗಿತ್ತೆ? ಅಥವಾ ವಿಷಪ್ರಾಶನ ಮಾಡಿ ಕೊಲೆ ಮಾಡಲಾಗಿತ್ತೆ ಎಂಬುದನ್ನು ಪತ್ತೆ ಹಚ್ಚಲು ಹೊಟ್ಟೆ ಹಾಗೂ ಕರುಳಿನ ಭಾಗವನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನಿಸಲಾಗಿದೆ. ಎಫ್‌ಎಸ್‌ಎಲ್ ವರದಿ ಬರುವುದು ವಿಳಂಬವಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಆಸ್ಪತ್ರೆಗಳಲ್ಲಿ ಭದ್ರತಾ ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲ್ಕತ್ತದ ಆರ್.ಜಿ.ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದ ಹಿಂಸಾತ್ಮಕ ಘಟನೆಯ ನಂತರ ಎಚ್ಚೆತ್ತುಕೊಂಡಿರುವ ಆರೋಗ್ಯ ಸಚಿವಾಲಯವು, ಎಲ್ಲ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿ ರಕ್ಷಣೆಗೆ ಭದ್ರತೆ ಕೈಗೊಳ್ಳುವಂತೆ ಮಾರ್ಗಸೂಚಿಗಳನ್ನು ಹೊರಡಿಸಿದೆ.

ಈ ಮಾರ್ಗಸೂಚಿ ಪಾಲಿಸುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಶಿವಕುಮಾರ್ ಕೆ.ಬಿ. ಸುತ್ತೋಲೆ ಹೊರಡಿಸಿದ್ದಾರೆ.

ಎಲ್ಲ ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಜಿಲ್ಲಾ ಮತ್ತು ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ, ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳು ಹಾಗೂ ಆಸ್ಪತ್ರೆಗಳ ಆವರಣದಲ್ಲಿ ಇಂಗ್ಲಿಷ್ ಮತ್ತು ಸ್ಥಳೀಯ ಭಾಷೆಯಲ್ಲಿ ಕಾನೂನು ನಿಬಂಧನೆಗಳನ್ನು ಜನರಿಗೆ ಕಾಣುವಂತೆ ಪ್ರದರ್ಶಿಸಲು ಸೂಚಿಸಿದ್ದಾರೆ.

ನಿಬಂಧನೆ ಏನು?: ಆರೋಗ್ಯ ಸೇವೆಯ ಸಿಬ್ಬಂದಿ ಮೇಲೆ ಹಲ್ಲೆ ನಡೆಸುವುದು ಅಥವಾ ಆಸ್ತಿಗೆ ಹಾನಿ ಮಾಡುವುದನ್ನು ನಿಷೇಧಿಸಲಾಗಿದೆ. ಉದ್ದೇಶಪೂರ್ವಕ ಅವಮಾನ ಮಾಡುವಂತಿಲ್ಲ. ಯಾವುದೇ ಹಿಂಸಾತ್ಮಕ ಕೃತ್ಯ ಎಸಗಿದರೆ ಮೂರರಿಂದ ಏಳು ವರ್ಷ ಜೈಲು, ₹25 ಸಾವಿರದಿಂದ ₹2 ಲಕ್ಷದವರೆಗೆ ದಂಡ ವಿಧಿಸಲಾಗುತ್ತದೆ. ಅವಮಾನ ಮಾಡಿದರೆ ಮೂರು ತಿಂಗಳು ಜೈಲು, ₹10 ಸಾವಿರ ದಂಡ ವಿಧಿಸಲಾಗುತ್ತದೆ. ಹಾನಿ ಮಾಡಿದರೆ ಅದರ ನಷ್ಟವನ್ನು ಆರೋಪಿಗಳಿಂದ ಭರಿಸಲಾಗುತ್ತದೆ.

ಸಮಿತಿ: ಎಲ್ಲ ಆಸ್ಪತ್ರೆಗಳಲ್ಲಿ ಭದ್ರತಾ ಸಮಿತಿ ಮತ್ತು ಹಿಂಸೆ ತಡೆ ಸಮಿತಿ ರಚಿಸಬೇಕು. ಸಮಿತಿಯಲ್ಲಿ ವೈದ್ಯಕೀಯ ಅಧೀಕ್ಷಕರು, ಡೀನ್, ನಿರ್ದೇಶಕರು/ಜಿಲ್ಲಾ ಶಸ್ತ್ರ ಚಿಕಿತ್ಸಕರು, ಮುಖ್ಯ ವೈದ್ಯಕೀಯ ಅಧಿಕಾರಿ, ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಇವರಲ್ಲಿ ಯಾರಾದರೂ ಒಬ್ಬರು ಸಮಿತಿಯಲ್ಲಿರಬೇಕು. ಸ್ಥಾನಿಕ ವೈದ್ಯಾಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿರಬೇಕು. ಮಹಿಳಾ ವೈದ್ಯರು, ಕಿರಿಯ ವೈದ್ಯರು, ಭದ್ರತಾ ಮೇಲ್ವಿಚಾರಕರು, ಆಸ್ಪತ್ರೆಯ ನಿರ್ವಹಣಾ ಸಿಬ್ಬಂದಿ ಸದಸ್ಯರಾಗಿರಬೇಕು.

ಪ್ರವೇಶ ನಿಯಂತ್ರಣ: ಪ್ರಮುಖ ಆಸ್ಪತ್ರೆ ಪ್ರದೇಶಗಳಿಗೆ ಪ್ರವೇಶವನ್ನು ನಿಯಂತ್ರಿಸಲು ಸಾರ್ವಜನಿಕರಿಗೆ ಮತ್ತು ರೋಗಿಗಳ ಪರಿಚಾರಕರಿಗೆ ಪ್ರವೇಶ ಪಾಸ್ ನೀಡಬೇಕು. ಸಂಜೆ 4.30ರ ನಂತರ ಆಸ್ಪತ್ರೆಗಳಿಗೆ ಒಂದು ಪ್ರವೇಶ ದ್ವಾರದಲ್ಲಿ ಮಾತ್ರ ಪ್ರವೇಶ ಇರಬೇಕು. ಎಲ್ಲ ಪ್ರವೇಶದ್ವಾರಗಳಲ್ಲಿ ಭದ್ರತಾ ಸಿಬ್ಬಂದಿ ಇರಬೇಕು. ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ರಾತ್ರಿ 12ರಿಂದ ಮುಂಜಾನೆ 4ರವರೆಗೆ ಪೊಲೀಸ್ ಗಸ್ತು ಇರಬೇಕು. 24X7 ಮಾನವಸಹಿತ ಭದ್ರತಾ ನಿಯಂತ್ರಣ ಕೊಠಡಿ ಸ್ಥಾಪಿಸಬೇಕು.

ಲೈಂಗಿಕ ಕಿರುಕುಳ ತಡೆಗಟ್ಟುವಿಕೆ: ಆಸ್ಪತ್ರೆಗಳಲ್ಲಿ ಲೈಂಗಿಕ ಕಿರುಕುಳ ತಪ್ಪಿಸಲು ಆಂತರಿಕ ಸಮಿತಿ ರಚಿಸಬೇಕು. ಈ ಸಮಿತಿಯು ಕಿರುಕುಳ ಅಥವಾ ಹಲ್ಲೆಯ ಘಟನೆಗಳನ್ನು ದಾಖಲಿಸಲು ಎರಡು ತಿಂಗಳಿಗೊಮ್ಮೆ ಪರಾಮರ್ಶೆ ನಡೆಸಬೇಕು. ಕುಂದುಕೊರತೆಗಳನ್ನು ಪರಿಹರಿಸಬೇಕು ಎಂದು ಆಯುಕ್ತರು ಸೂಚಿಸಿದ್ದಾರೆ.

ಅ.5ರವರೆಗೆ ಎಸ್ಐಟಿ ವಶಕ್ಕೆ ಮುನಿರತ್ನ

ಒಂದನೇ ಪುಟದಿಂದ...

ಈ ಪ್ರಕರಣವೂ ಸೇರಿದಂತೆ ವೈಯಾಲಿಕಾವಲ್ ಠಾಣೆಯಲ್ಲಿ ದಾಖಲಾಗಿದ್ದ ಜಾತಿ ನಿಂದನೆ ಹಾಗೂ ಕೊಲೆ ಬೆದರಿಕೆ ಪ್ರಕರಣದ ತನಿಖೆಯನ್ನೂ ಎಸ್‌ಐಟಿಗೆ ವರ್ಗಾವಣೆ ಮಾಡಿ ಸರ್ಕಾರ ಆದೇಶಿಸಿತ್ತು.

'ಮೂರು ಪ್ರಕರಣಗಳ ವಿಚಾರಣೆಗಾಗಿ ಆರೋಪಿಯನ್ನು ಕಸ್ಟಡಿಗೆ ಪಡೆದುಕೊಂಡಿದೆ. ಸಿಐಡಿ (ಆರ್ಥಿಕ ಅಪರಾಧಗಳು) ಎಡಿಜಿಪಿ ಬಿ.ಕೆ.ಸಿಂಗ್ ನೇತೃತ್ವದ ಎಸ್‌ಐಟಿ ತಂಡವು ಮುನಿರತ್ನ ಅವರ ವಿಚಾರಣೆ ನಡೆಸಲಿದೆ' ಎಂದು ಮೂಲಗಳು ತಿಳಿಸಿವೆ.

'ವಿಚಾರಣೆ ಗಾಗಿ ವಶಕ್ಕೆ ನೀಡುವಂತೆ ಮನವಿ ಸಲ್ಲಿಸಲಾಗಿತ್ತು. ಅ.5ರ ವರೆಗೆ ಆರೋಪಿಯನ್ನು ವಿಚಾರಣೆ ನಡೆಸಲು ನ್ಯಾಯಾಲಯವು ಅವಕಾಶ ನೀಡಿದೆ. ಸಿಐಡಿ ಕಚೇರಿಯಲ್ಲೇ ಆರೋಪಿಗೆ ಪ್ರಶ್ನೆಗಳನ್ನು ಕೇಳಿ, ಹೇಳಿಕೆ ದಾಖಲು ಮಾಡಿಕೊಳ್ಳಲಾಗುವುದು. ಅಲ್ಲದೇ ಆರೋಪಿಯನ್ನು ಕರೆದೊಯ್ದು ಸ್ಥಳ ಮಹಜರು ನಡೆಸಲಾಗುವುದು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

2 ಸಾವಿರ ಹೆಕ್ಟೇರ್ ಬೆಳೆ ನಷ್ಟ, ಗರ್ಭಗುಡಿಯ ಒಳಗೆ ನೀರು

ವಿಜಯಪುರ: ಭಾರಿ ಮಳೆ; 57 ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ವಿಜಯಪುರ ಜಿಲ್ಲೆಯ ತಿಕೋಟಾ ತಾಲ್ಲೂಕಿನ ಕಳ್ಳಕವಟಗಿ ಗ್ರಾಮದ ಸಂಗಮನಾಥ ಹಳ್ಳ ಮಳೆಯಿಂದ ತುಂಬಿ ಸೇತುವೆ ಮೇಲೆ ನೀರು ಹರಿಯಿತು ಪ್ರಜಾವಾಣಿ ಚಿತ್ರ: ಜಿ.ಎಸ್. ಪರಮೇಶ್ವರ್

ವಿಜಯಪುರ: ವಿಜಯಪುರ ನಗರ ಮತ್ತು ಜಿಲ್ಲೆಯ ವಿವಿಧೆಡೆ ಸೋಮವಾರ ರಾತ್ರಿ ನಿರಂತರ ಸುರಿದ ಭಾರಿ ಮಳೆಗೆ ಜನ ಜೀವನ ಅಸ್ತವ್ಯಸ್ತವಾಗಿದ್ದು, ಅಪಾರ ಪ್ರಮಾಣದ ಹಾನಿಯಾಗಿದೆ. ತಿಕೋಟಾ ತಾಲ್ಲೂಕಿನ ಕಳ್ಳಕವಟಗಿ ಗ್ರಾಮದ ಸಂಗಮನಾಥ ದೇವಾಲಯದ ಗರ್ಭಗುಡಿಯ ಒಳಗೆ ನೀರು ನುಗ್ಗಿದ್ದರಿಂದ ಪೂಜಾ ಕಾರ್ಯ ಮಂಗಳವಾರ ಸ್ಥಗಿತವಾಗಿತ್ತು.

ಜಿಲ್ಲೆಯಲ್ಲಿ 57 ಮನೆಗಳು ಭಾಗಶಃ ಹಾನಿಗೀಡಾಗಿವೆ. ಅಂದಾಜು 2,000 ಹೆಕ್ಟೇರ್ ಬೆಳೆ ಹಾನಿಯಾಗಿದೆ. ಯಾವುದೇ ಜೀವಹಾನಿ ಸಂಭವಿಸಿಲ್ಲ ಎಂದು ಜಿಲ್ಲಾಧಿಕಾರಿ ಟಿ.ಭೂಬಾಲನ್ ತಿಳಿಸಿದ್ದಾರೆ.

ವಿಜಯಪುರದಲ್ಲಿ 15.8 ಸೆಂ.ಮೀ ಮಳೆ: ವಿಜಯಪುರ ನಗರದಲ್ಲಿ 15.8 ಸೆಂ.ಮೀ. ಮಳೆಯಾಗಿದೆ. ವಿಜಯಪುರ ತಾಲ್ಲೂಕಿನ ತೊರವಿ 10.2, ತಿಕೋಟಾ ತಾಲ್ಲೂಕಿನ ಕೊಟ್ಯಾಳ 13.9, ತಾಜಾಪುರ 11.1, ಸಿದ್ದಾಪುರ(ಕೆ) 9.3, ಬಸವನ ಬಾಗೇವಾಡಿ ತಾಲ್ಲೂಕಿನ ಉಕ್ಕಲಿ 11.2, ಇಟಗಿ 10.1, ದಿಂಡವಾರ 10.5, ಮುದ್ದೇಬಿಹಾಳ ತಾಲ್ಲೂಕಿನ ಕವಲಗಿಯಲ್ಲಿ 9.1 ಸೆಂ.ಮೀ. ಮಳೆಯಾಗಿರುವುದಾಗಿ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮಾಹಿತಿ ನೀಡಿದೆ.

ಜಮಖಂಡಿ(ಬಾಗಲಕೋಟೆ ಜಿಲ್ಲೆ): ನಗರ ಹಾಗೂ ಗ್ರಾಮೀಣ ಭಾಗದಲ್ಲಿ ರಾತ್ರಿ ಸುರಿದ ಧಾರಾಕಾರ ಮಳೆಗೆ ನೂರಾರು ಮನೆಗಳಿಗೆ ನೀರು ನುಗ್ಗಿ, ತಾಲ್ಲೂಕಿನಲ್ಲಿ 11 ಮನೆಗಳು ಬಿದ್ದಿವೆ.

ನಗರದ ನೆಲಮಹಡಿಯಲ್ಲಿರುವ ಸರ್ವೋದಯ ಕಿವುಡ ಮತ್ತು ಮೂಕ ಮಕ್ಕಳ ವಸತಿ ನಿಲಯ ಹಾಗೂ ಹಳೆ ಕೆಎಲ್ಇ ಆಸ್ಪತ್ರೆಯ ಕೆಳಗಿನ ನೆಲಮಹಡಿಯಲ್ಲಿನ ಬಾಲಕಿಯರ ವಸತಿನಿಲಯಕ್ಕೆ ನೀರು ನುಗ್ಗಿ ವಿದ್ಯಾರ್ಥಿಗಳು ಪರದಾಡಿದರು. ಪಠ್ಯಪುಸ್ತಕಗಳು, ಸಾಮಗ್ರಿಗಳು ನೀರಿನಲ್ಲಿ ತೊಯ್ದುಹೋದವು.

ರಬಕವಿ ಬನಹಟ್ಟಿಯಲ್ಲಿ ಸೋಮವಾರ ರಾತ್ರಿ 5.6.ಸೆಂ.ಮೀ ಮಳೆ ದಾಖಲಾಗಿದೆ. ನಗರದ ಬಹಳಷ್ಟು ತಗ್ಗು ಪ್ರದೇಶದಲ್ಲಿರುವ ಮನೆಗಳಿಗೆ ನೀರು ನುಗ್ಗಿತ್ತು.

ಭಟ್ಕಳ ವರದಿ (ಉತ್ತರ ಕನ್ನಡ): ತಾಲ್ಲೂಕಿನಲ್ಲಿ ಸೋಮವಾರ ರಾತ್ರಿಯಿಂದ ಮಂಗಳವಾರ ನಸುಕಿನವರೆಗೆ ಸುರಿದ ಧಾರಾಕಾರ ಮಳೆಗೆ ತಗ್ಗು ಪ್ರದೇಶಗಳು ಜಲಾವೃತಗೊಂಡು ಹಲವು ಮನೆಗಳಿಗೆ ನೀರು ನುಗ್ಗಿದೆ. ಕೆಲವೆಡೆ ಮನೆ ಕುಸಿದಿವೆ. ತಾಲ್ಲೂಕಿನಲ್ಲಿ ಮಳೆಯ ಆರ್ಭಟ ಮುಂದುವರಿದಿದ್ದು, ತಾಲ್ಲೂಕು ಆಡಳಿತ ಮುಂಜಾಗ್ರತಾ ಕ್ರಮ ವಹಿಸಿದೆ.

ಗಣಪತಿ ವಿಸರ್ಜನೆ ವೇಳೆ ಚಾಕು ಇರಿತ; ನಾಲ್ವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಗಣೇಶ ಮೂರ್ತಿ ವಿಸರ್ಜನೆಯ 17ನೇ ದಿನದ ಮೆರವಣಿಗೆ ವೇಳೆ ಸೋಮವಾರ ರಾತ್ರಿ ಇಲ್ಲಿ ಎರಡು ಗುಂಪುಗಳ ನಡುವಿನ ಜಗಳ ವಿಕೋಪಕ್ಕೆ ಹೋಗಿ, ಒಬ್ಬ ಯುವಕನಿಗೆ ಚಾಕುವಿನಿಂದ ಇರಿಯಲಾಗಿದ್ದು, ಘಟನೆಯಲ್ಲಿ ನಾಲ್ವರಿಗೆ ಗಾಯಗಳಾಗಿವೆ.

ಚಾಕು ಇರಿತಕ್ಕೆ ಒಳಗಾದ ಗಂಗಾವತಿಯ ಶಿವಕುಮಾರ್ (38) ಅವರನ್ನು ಚಿಕಿತ್ಸೆಗಾಗಿ ಹುಬ್ಬಳ್ಳಿಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಣೇಶ್, ಮಂಜುನಾಥ ಹಾಗೂ ಸಾಗರ್ ಎನ್ನುವವರ ಮೇಲೆ ಹಲ್ಲೆಯಾಗಿದೆ. ಚಾಕು ಇರಿದಿದ್ದು ಯಾರು ಎಂಬುದು ನಿಖರವಾಗಿ ತಿಳಿದುಬಂದಿಲ್ಲ.

'ವೈಯಕ್ತಿಕ ಕಾರಣಕ್ಕಾಗಿ ನಡೆದ ಜಗಳದಲ್ಲಿ ಚಾಕು ಇರಿಯಲಾಗಿದ್ದು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ಧಿ ತಿಳಿಸಿದ್ದಾರೆ.

ಯುವಕ ಸಾವು: ಗಣಪತಿ ವಿಸರ್ಜನೆಯ ಮೆರವಣಿಗೆ ಮುಗಿಸಿಕೊಂಡು ಮನೆಗೆ ವಾಪಸ್ ಹೋಗುವಾಗ ತಾಲ್ಲೂಕಿನ ವಡ್ಡರಹಟ್ಟಿ ಕ್ಯಾಂಪ್ ಸಮೀಪ ನಡೆದ ರಸ್ತೆ ಅಪಘಾತದಲ್ಲಿ ಕೊಪ್ಪಳ ತಾಲ್ಲೂಕಿನ ಹುಲಿಗಿ ಸಮೀಪದ ಶಿವಪುರ ಗ್ರಾಮದ ನವೀನ್ ಕುಮಾರ್ (27) ಮೃತಪಟ್ಟಿದ್ದಾರೆ.

ಪ್ರತಾಪ್ ಸಿಂಹ ವಿರುದ್ಧ ಪ್ರಕರಣ

ಯಾದಗಿರಿ: ಧಾರ್ಮಿಕ ಭಾವನೆಗಳಿಗೆ ಅಘಾತವನ್ನುಂಟು ಮಾಡುವ ಉದ್ದೇಶದಿಂದ ದ್ವೇಷ ಮತ್ತು ಗಲಭೆಗೆ ಪ್ರಚೋದನೆ ನೀಡುವ ಭಾಷಣ ಮಾಡಿದ ಆರೋಪದಡಿ ಮೈಸೂರು–ಕೊಡಗು ಮಾಜಿ ಸಂಸದ ಪ್ರತಾಪ್ ಸಿಂಹ ಸೇರಿ ಐವರ ವಿರುದ್ಧ ಶಹಾಪುರ ಪೊಲೀಸ್ ಠಾಣೆಯಲ್ಲಿ ಸೋಮವಾರ ಪ್ರಕರಣ ದಾಖಲಾಗಿದೆ.

ಸೆಪ್ಟೆಂಬರ್ 21ರಂದು ಶಹಾಪುರ ನಗರದಲ್ಲಿ ಹಿಂದೂ ಮಹಾಗಣಪತಿ ವಿಸರ್ಜನೆ ಹಾಗೂ ಮೆರವಣಿಗೆ ವೇಳೆ ಪ್ರತಾಪ್ ಸಿಂಹ ಅವರು 'ಹಿಂದೂಗಳು ತಮ್ಮನ್ನು ತಾವು ರಕ್ಷಣೆ ಮಾಡಿಕೊಳ್ಳಲು ಮುಸ್ಲಿಮರು ಯಾವ ರೀತಿ ಪೆಟ್ರೋಲ್ ಬಾಂಬ್, ತಲವಾರ್ ತೋರಿಸುತ್ತಾರೋ, ಕಲ್ಲು ತೂರಾಟ ಮಾಡುತ್ತಾರೋ ಅದೇ ರೀತಿ ನೀವು ಕೂಡ ಸನ್ನದ್ಧರಾಗಿ ಮೆರವಣಿಗೆಗೆ ಹೋಗಿ' ಎಂದು ಭಾಷಣ ಮಾಡಿದ್ದರು. ಪ್ರಚೋದನೆ ಮಾಡಿದ ಕಾರಣಕ್ಕೆ ಕಲಂ 299, 192, ಬಿಎನ್‌ಎಸ್–2023ರ ಅಡಿಯಲ್ಲಿ ಪಿಎಸ್‌ಐ ಶಾಮಸುಂದರ್ ಪ್ರಕರಣ ದಾಖಲಿಸಿದ್ದಾರೆ.

ಕಾರ್ಯಕ್ರಮದ ಆಯೋಜಕರಾದ ಕರಣ್ ಚಂದ್ರಶೇಖರ್ ಸುಬೇದಾರ್, ಶಿವಕುಮಾರ್ ಭೀಮರಾಯ ಶಿರವಾಳ, ಗುರುರಾಜ್ ಈರಣ್ಣ ಕಾಮಾ, ನಾಗಭೂಷಣ ತಿಪ್ಪಣ್ಣ ಕುಂಬಾರ ವಿರುದ್ಧವೂ ಪ್ರಕರಣ ದಾಖಲಾಗಿದೆ.

ಉದ್ಯೋಗ ವಾಣಿ

ಭಾರತ್ ಎಲೆಕ್ಟ್ರಾನಿಕ್ಸ್ भारत इलेक्ट्रॉनिक्स BHARAT ELECTRONICS
QUALITY, TECHNOLOGY, INNOVATION

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

(ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಸಂಸ್ಥೆಗೆ ತನ್ನ ಬೆಂಗಳೂರು, ಗಾಜಿಯಾಬಾದ್, ಪಂಚಕುಲ ಮತ್ತು ಹೈದರಾಬಾದ್ ಘಟಕಗಳಿಗೆ ಈ ಕೆಳಕಂಡ ಸಂರಕ್ಷಣಾ ಅಧಿಕಾರಿಗಳ ಅವಶ್ಯಕತೆ ಇದೆ.

ಹುದ್ದೆ	ಹುದ್ದೆಗಳ ಸಂಖ್ಯೆ	ಮೀಸಲಾತಿ ವಿಧ	ವಿದ್ಯಾರ್ಹತೆ ಮತ್ತು ಅನುಭವ
ಸಂರಕ್ಷಣೆ ಅಧಿಕಾರಿ	07	ಸಾಮಾನ್ಯ - 03 ಇ.ಹಿ.ವ. - 02 ಪ.ಜಾ. - 01 ಪ.ಪಂ. - 01	ಭಾರತೀಯ ಭೂಸೇನೆಯಿಂದ ಕ್ಯಾಪ್ಟನ್ ಶ್ರೇಣಿಯ ಎಸ್‌ಎಸ್‌ಸಿ ಅಧಿಕಾರಿ / ನೌಕಾ ಪಡೆ / ವಾಯು ಸೇನೆಯಿಂದ ಸಮಾಂತರ ಶ್ರೇಣಿ / ಕೇಂದ್ರೀಯ ಅರೆ ಸೈನಿಕ ಸಂಘಟನೆಗಳಿಂದ (ಸಿಎಪಿಎಫ್) ಪ್ರಥಮ ಶ್ರೇಣಿಯ ರಾಜಪತ್ರಿತ ಅಧಿಕಾರಿ
ಸಹಾಯಕ ಸಂರಕ್ಷಣೆ ಅಧಿಕಾರಿ			ಭೂಸೇನೆ / ನೌಕಾಪಡೆ / ವಾಯುಸೇನೆ / ಕೇಂದ್ರೀಯ ಅರೆ ಸೈನಿಕ ಸಂಘಟನೆಗಳನ್ನು (ಸಿಎಪಿಎಫ್) ನಿರ್ಗಮಿಸುವ ಸಮಯದಲ್ಲಿ ಜೆ.ಸಿ.ಒ ಶ್ರೇಣಿಯಲ್ಲಿ ಕಾರ್ಯ ನಿರ್ವಹಿಸಿರಬೇಕು

ವಿವರಣಾತ್ಮಕ ಜಾಹೀರಾತಿಗೆ ನಮ್ಮ ಅಧಿಕೃತ ವೆಬ್‌ಸೈಟ್ www.bel-india.in "careers page" ಅನ್ನು ವೀಕ್ಷಿಸಿ

'Har Ek Kaam Desh Ke Naam'

MANAPPURAM RITI JEWELRY
WANTED

Manappuram Riti Jewelry, a leading chain of Jewellery Showrooms in South India, is looking for the following personnel for its showrooms at HSR Layout (Karnataka).

- **Showroom Manager**
  Candidates should have minimum 10 years of experience in a similar field.
- **Sales Man / Sales Girl**
  Candidates should have 0-2 years of experience in a similar field.
- **Sales Man / Sales Girl (Trainee)**
  Freshers can also apply.
- **Field Executives**
  Candidates should have 0-2 years of experience in a similar field.
- **Goldsmith**
  Candidates should have minimum 15 years of experience in a similar field.

WALK-IN INTERVIEW
Date: 4th & 5th October 2024
Time: 11:00 AM to 4:00 PM
Venue: The HSR club, President lounge 2nd Floor CA site No.12, 22nd Cross, 3rd Sector, HSR Layout, Bangalore - 560 102
LOCATION

Riti JEWELRY DESIGNS OF DESIRE
MANAPPURAM JEWELLERS LTD

94822 35510, 93882 20560
jobs@manappuramjewellery.com

P.E.S.COLLEGE OF ENGINEERING
MANDYA-571401, Karnataka
(An Autonomous Institution under Visveswaraya Technological University, Belagavi, Aided by the Govt.of Karnataka)
Phone No.08232-220043, 238683, 238042, Fax 08232-222075

No. PES/EST/2024-25/ 24-09-2024

EMPLOYMENT NOTIFICATION

Applications are invited from the eligible candidates to fill up the post of Asst. Professors in the Department of Electronics & Communication Engg (Un-aided) under Direct Recruitment. Application Form shall be obtained from the office of the undersigned during working hours in person, on payment of **Rs.1000/-** or in the form of Demand Draft drawn in favour of the Principal, P.E.S.College of Engineering, Mandya. The duly filled in application along with attested copies of other testimonials and other certificates should be submitted to the undersigned on or before **09-10-2024 at 5.00 p.m.** Applications received after the due date will not be considered.

Qualification: B.E/B.Tech and M.E/M.Tech in the relevant branch with First Class or equivalent in any one of the Degrees.

PG Specialisation: 1. VLSI design and Embedded systems 2. Digital Electronics and Communication 3. Digital Communication and Networking 4. Signal Processing 5. Control System 6. Power Electronics 7. Electrical Power Systems 8. Microelectronics 9. Artificial Intelligence

Scale of Pay: According to AICTE norms and P.E.T Rules.

General conditions:
1) Mere submission of application is not a right for appointment
2) The application cover should be superscribed.
3) Selected candidates should reside in the headquarters during their service
4) The right of filling up of the posts is left to the discretion of the Management.
The interview date for eligible candidates will be intimated in due course.

Sd/- Dr. H.M.Nanjundaswamy PRINCIPAL
Sd/- (K.S.Vijay Anand) CHAIRMAN, GC

ತಂತ್ರಜ್ಞಾನ



ಆಟೊಮೊಬೈಲ್ ಲೋಕದ ದಿಕ್ಕು ಬದಲಿಸಬಲ್ಲ

6 ಸ್ಟ್ರೋಕ್ ಎಂಜಿನ್

ಜಯಸಿಂಹ ಆರ್.

ವಿಶ್ವದ ಬಹುತೇಕ ದೇಶಗಳು ಮತ್ತು ವಾಹನ ತಯಾರಕಾ ಕಂಪನಿಗಳು ವಿದ್ಯುತ್ ಚಾಲಿತ ವಾಹನಗಳತ್ತ (ಇವಿ) ಹೊರಳುತ್ತಿವೆ. ಕಡಿಮೆ ನಿರ್ವಹಣಾ ವೆಚ್ಚ, ಪ್ರತ್ಯಕ್ಷವಾಗಿ ಶೂನ್ಯ ವಾಯುಮಾಲಿನ್ಯದ ಕಾರಣದಿಂದ ಇವಿಗಳಿಗೆ ಒತ್ತು ನೀಡಲಾಗುತ್ತಿದೆ. ಹೀಗೆ ಇಡೀ ಜಗತ್ತು ಇವಿ ಮತ್ತು ಇವಿ ತಂತ್ರಜ್ಞಾನವನ್ನು ಸುಧಾರಿಸುವುದರತ್ತ ಗಮನ ಹರಿಸುತ್ತಿದ್ದರೆ, ಅಲ್ಲೊಂದು-ಇಲ್ಲೊಂದು ಕಂಪನಿಗಳು ಪೆಟ್ರೋಲ್-ಡೀಸೆಲ್ ಎಂಜಿನ್‌ಗಳ ಕಾರ್ಯಕ್ಷಮತೆಯನ್ನು ಸುಧಾರಿಸಲು ಗಮನ ಹರಿಸುತ್ತಿವೆ. ಇದರ ಮಧ್ಯೆ ಇಡೀ ಇವಿ ಲೋಕಕ್ಕೆ ಸೆಡ್ಡು ಹೊಡೆಯಬಲ್ಲಂಥ ಎಂಜಿನ್ ತಂತ್ರಜ್ಞಾನವನ್ನು ಪೋರ್ಶೆ ಕಂಪನಿ ರೂಪಿಸಿದೆ.

ತಾನು ಅಭಿವೃದ್ಧಿಪಡಿಸಿರುವ '6 ಸ್ಟ್ರೋಕ್' ಎಂಜಿನ್‌ನ ತಂತ್ರಜ್ಞಾನಕ್ಕೆ ಹಕ್ಕು ಸ್ವಾಮ್ಯ ಪಡೆಯಲು ಕಂಪನಿಯು ಅಮೆರಿಕದಲ್ಲಿ ಈಚೆಗೆ ಅರ್ಜಿ ಸಲ್ಲಿಸಿದೆ. ಈ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ ಕಂಪನಿ ಪೋರ್ಶೆ ಎಂದಾಕ್ಷಣ, 'ಇದು ಅತಿ ಶ್ರೀಮಂತರ ಕಾರು ಕಂಪನಿ. ಸಾಮಾನ್ಯರಿಗೆ ಇದರಿಂದ ಉಪಯೋಗವೇನು' ಎಂದು ಮೂಗು ಮುರಿಯುವ ಪ್ರತಿಕ್ರಿಯೆ ವ್ಯಕ್ತವಾಗಿದ್ದೇ ಹೆಚ್ಚು. ಈ ತಂತ್ರಜ್ಞಾನದ ಹೆಗ್ಗಳಿಕೆಗಳನ್ನು ನೋಡುವುದರ ಜತೆಗೆ, ಅದು ಸಿರಿವಂತರ ಕಾರು ಕಂಪನಿ ಎಂಬ ಆಕ್ಷೇಪಕ್ಕೂ ಉತ್ತರ ಕಂಡುಕೊಳ್ಳುವುದು ಹೆಚ್ಚು ಸಮಂಜಸವಾದೀತು.



ಪೆಟ್ರೋಲ್ ಮತ್ತು ಡೀಸೆಲ್ ಎಂಜಿನ್‌ಗಳ ಕಾರ್ಯವಿಧಾನದಲ್ಲಿ ಎರಡು ಪ್ರಮುಖ ಮೂಲ ಮಾದರಿಗಳಿವೆ. ಒಂದು '2 ಸ್ಟ್ರೋಕ್' ಮತ್ತು ಇನ್ನೊಂದು '4 ಸ್ಟ್ರೋಕ್'. ಈ ಎರಡೂ ತಂತ್ರಜ್ಞಾನಗಳು ಅಭಿವೃದ್ಧಿಯಾಗಿದ್ದು 1870-1880ರ ಮಧ್ಯೆ. ಅಂದರೆ ಸುಮಾರು 150 ವರ್ಷಗಳ ಹಿಂದೆ. ಅಲ್ಲಿಂದ ಇಲ್ಲಿಯವರೆಗೆ ಈ ತಂತ್ರಜ್ಞಾನಗಳನ್ನು ಹಲವು ಹಂತಗಳಲ್ಲಿ ಸುಧಾರಿಸಲಾಗಿದೆ. ಅವುಗಳ ಶಕ್ತಿ, ಕಾರ್ಯಕ್ಷಮತೆ ಮತ್ತು ವಾಯುಮಾಲಿನ್ಯ ಕುಗ್ಗಿಸಲು ಟರ್ಬೋಚಾರ್ಜಿಂಗ್, ಸೂಪರ್‌ಚಾರ್ಜಿಂಗ್, ಡೈರೆಕ್ಟ್ ಇಂಜೆಕ್ಷನ್ ಮೊದಲಾದ ಅತ್ಯಾಧುನಿಕ ತಾಂತ್ರಿಕತೆಗಳನ್ನು ಬಳಸಿಕೊಳ್ಳಲಾಗಿದೆ. ಈಗ 2 ಸ್ಟ್ರೋಕ್ ಮತ್ತು 4 ಸ್ಟ್ರೋಕ್ ಎಂಜಿನ್ ತಂತ್ರಜ್ಞಾನದಲ್ಲಿ ಮತ್ತಷ್ಟು ಸುಧಾರಣೆ ಸಾಧ್ಯವೇ ಇಲ್ಲ ಎಂಬ ಹಂತಕ್ಕೆ ಬಂದು ನಿಂತಿದ್ದೇವೆ. ಇದರ ಮಧ್ಯೆಯೇ 4 ಸ್ಟ್ರೋಕ್ ಎಂಜಿನ್ ಅನ್ನೇ ಸಂಪೂರ್ಣವಾಗಿ ಜಲಜನಕದಿಂದ ಕೆಲಸ ಮಾಡುವಂತೆ ಮಾರ್ಪಡಿಸಲು ವಾಹನ ತಯಾರಕಾ ಕಂಪನಿಗಳು ಸಾವಿರಾರು ಕೋಟಿ ವಿನಿಯೋಗಿಸಿವೆ.

ಇವೆಲ್ಲವುಗಳ ಮಧ್ಯೆ ಆಟೊಮೊಬೈಲ್ ಉದ್ಯಮದ ದಿಕ್ಕನ್ನೇ ಬದಲಿಸಬಲ್ಲ '6 ಸ್ಟ್ರೋಕ್' ತಂತ್ರಜ್ಞಾನವನ್ನು ಪೋರ್ಶೆ ಅಭಿವೃದ್ಧಿಪಡಿಸಿದೆ. 2 ಸ್ಟ್ರೋಕ್ ಎಂಜಿನ್ ಒಂದು ಸುತ್ತು ತಿರುಗಲು ಅದರ ಪಿಸ್ಟನ್ ಮೇಲಕ್ಕೆ ಒಂದು ಬಾರಿ, ಕೆಳಕ್ಕೆ ಒಂದು ಬಾರಿ ಓಡಾಡುತ್ತದೆ. 4 ಸ್ಟ್ರೋಕ್ ಎಂಜಿನ್ ಒಂದು ಸುತ್ತು ತಿರುಗಲು ಅದರ ಪಿಸ್ಟನ್ ಮೇಲಕ್ಕೆ ಎರಡು ಬಾರಿ, ಕೆಳಕ್ಕೆ ಎರಡು ಬಾರಿ ಓಡಾಡುತ್ತದೆ. 2 ಸ್ಟ್ರೋಕ್‌ಗಿಂತ, 4 ಸ್ಟ್ರೋಕ್ ಎಂಜಿನ್ ಕಾರ್ಯಕ್ಷಮತೆ ಹೆಚ್ಚು. ಇದೇ ರೀತಿ 6 ಸ್ಟ್ರೋಕ್ ಎಂಜಿನ್ ಒಂದು ಸುತ್ತು ತಿರುಗಲು ಅದರ ಪಿಸ್ಟನ್ ಮೇಲಕ್ಕೆ ಮೂರು ಬಾರಿ, ಕೆಳಕ್ಕೆ ಮೂರು ಬಾರಿ ಓಡಾಡುತ್ತದೆ. ಹೀಗಾಗಿ 2 ಸ್ಟ್ರೋಕ್ ಮತ್ತು 4 ಸ್ಟ್ರೋಕ್ ಎಂಜಿನ್‌ಗಳಿಗಿಂತ 6 ಸ್ಟ್ರೋಕ್ ಎಂಜಿನ್‌ನ ಕಾರ್ಯಕ್ಷಮತೆ ಹೆಚ್ಚು ಇರಲಿದೆ.

ಮೇಲಿನ ವಿವರಣೆ ತೀರಾ ತಾಂತ್ರಿಕಮಟ್ಟದ್ದಾಯಿತು. ಇದನ್ನೇ ಸರಳ ಭಾಷೆಯಲ್ಲಿ, ಉದಾಹರಣೆಗಳ ಮೂಲಕ ಗಮನಿಸೋಣ. 80-90ರ ದಶಕದವರಿಗೆ ಯಮಾಹ ಆರ್‌ಎಕ್ಸ್ 100 ಬೈಕ್ ಗೊತ್ತಿರಲೇಬೇಕು. ಕಿವಿಗಡಚಿಕ್ಕುವಂತಹ ಶಬ್ದ, ಮೈನವಿರೇಳಿಸುವಂತಹ ವೇಗದ ಈ ಬೈಕ್‌ನಲ್ಲಿ ಇದ್ದದ್ದು 2 ಸ್ಟ್ರೋಕ್ 98 ಸಿ.ಸಿಯ ಎಂಜಿನ್. ಈ ಎಂಜಿನ್ 11-12 ಬಿಎಚ್‌ಪಿ ಶಕ್ತಿ ಉತ್ಪಾದಿಸುತ್ತಿತ್ತು. ಆದರೆ ಪ್ರತಿ ಲೀಟರ್ ಪೆಟ್ರೋಲ್‌ಗೆ 40 ಕಿ.ಮೀ.ನ ಆಸುಪಾಸಿನಷ್ಟು ಮೈಲೇಜ್ ನೀಡುತ್ತಿತ್ತು. ಆದರಿಂದಾಗುತ್ತಿದ್ದ ವಾಯುಮಾಲಿನ್ಯವೂ ಹೆಚ್ಚು.

ಅದೇ 90ರ ದಶಕದಲ್ಲಿ ಹೀರೊ ಹೊಂಡಾ ಕಂಪನಿಯ ಸಿಡಿ 100, ನಂತರದಲ್ಲಿ ಸ್ಪ್ಲೆಂಡರ್ ಬೈಕ್‌ಗಳು ಮಾರುಕಟ್ಟೆಗೆ ಬಂದವು. ಈ ಬೈಕ್‌ಗಳಲ್ಲಿ ಇದ್ದದ್ದು 4 ಸ್ಟ್ರೋಕ್ ತಂತ್ರಜ್ಞಾನದ 99 ಸಿ.ಸಿ.ಯ ಎಂಜಿನ್. ಈ ಎಂಜಿನ್ 7 ಬಿಎಚ್‌ಪಿಯಷ್ಟು ಶಕ್ತಿ ಉತ್ಪಾದಿಸಿದರೂ, ಪ್ರತಿ ಲೀಟರ್ ಪೆಟ್ರೋಲ್‌ಗೆ 70-80 ಕಿ.ಮೀ. ನಷ್ಟು ದೂರ ಕ್ರಮಿಸುತ್ತಿದ್ದವು. ಜತೆಗೆ ಇವುಗಳಿಂದಾಗುತ್ತಿದ್ದ ಶಬ್ದ ಮಾಲಿನ್ಯ ಮತ್ತು ವಾಯುಮಾಲಿನ್ಯದ ಪ್ರಮಾಣವೂ ಕಡಿಮೆ.

ಒಂದೇ ಅಳತೆಯ ಸಿಲಿಂಡರ್ ಹೊಂದಿದ್ದರೂ 4 ಸ್ಟ್ರೋಕ್ ಎಂಜಿನ್ ಉತ್ಪಾದಿಸುವ ಶಕ್ತಿಗಿಂತ ದುಪ್ಪಟ್ಟು ಶಕ್ತಿಯನ್ನು 2 ಸ್ಟ್ರೋಕ್ ಎಂಜಿನ್ ಉತ್ಪಾದಿಸುತ್ತದೆ. ಆದರೆ 2 ಸ್ಟ್ರೋಕ್ ಎಂಜಿನ್ ನೀಡುವ ಇಂಧನ ದಕ್ಷತೆಗಿಂತ 4 ಸ್ಟ್ರೋಕ್ ಎಂಜಿನ್‌ನ ಇಂಧನ ದಕ್ಷತೆ ದುಪ್ಪಟ್ಟು. ಶಕ್ತಿಯಲ್ಲಿ ಕುಂದಿತು ಎನ್ನುವುದನ್ನು ಬಿಟ್ಟರೆ ಇಂಧನ ದಕ್ಷತೆ, ಶಬ್ದ ಮಾಲಿನ್ಯ, ವಾಯು ಮಾಲಿನ್ಯ, ನಿರ್ವಹಣಾ ವೆಚ್ಚ ಎಲ್ಲದರಲ್ಲೂ 4 ಸ್ಟ್ರೋಕ್ ಎಂಜಿನ್‌ನ ಕ್ಷಮತೆಯೇ ಹೆಚ್ಚು. 2 ಸ್ಟ್ರೋಕ್ ಮತ್ತು 4 ಸ್ಟ್ರೋಕ್ ತಂತ್ರಜ್ಞಾನದ ಎಂಜಿನ್‌ಗಳಲ್ಲಿ ಇಷ್ಟೊಂದು ವ್ಯತ್ಯಾಸವಿದೆಯೆಂದರೆ, 4 ಸ್ಟ್ರೋಕ್ ಮತ್ತು 6 ಸ್ಟ್ರೋಕ್ ಎಂಜಿನ್‌ಗಳ ನಡುವೆ ಕ್ಷಮತೆಯ ವ್ಯತ್ಯಾಸ ಎಷ್ಟಿರಬಹುದು ಎಂಬುದನ್ನು ಯಾರು ಬೇಕಾದರೂ ಊಹಿಸಬಹುದು. 4 ಸ್ಟ್ರೋಕ್ ಎಂಜಿನ್‌ನ ಇಂಧನ ದಕ್ಷತೆಗಿಂತ, 6 ಸ್ಟ್ರೋಕ್ ಎಂಜಿನ್‌ನ ಇಂಧನ ದಕ್ಷತೆ ಒಂದು ಪಟ್ಟನಷ್ಟಾದರೂ ಹಿಗ್ಗಲಿದೆ. ಪರಿಣಾಮವಾಗಿ ಅದರ ಶಬ್ದ ಮಾಲಿನ್ಯ ಮತ್ತು ವಾಯುಮಾಲಿನ್ಯ ಗಣನೀಯ ಮಟ್ಟದಲ್ಲಿ ಕುಗ್ಗಲಿದೆ. ಹೀಗಾಗಿಯೇ ಇದನ್ನು ಆಟೊಮೊಬೈಲ್ ಉದ್ಯಮದ ದಿಕ್ಕು ಬದಲಿಸಬಲ್ಲ ಅನ್ವೇಷಣೆ/ತಂತ್ರಜ್ಞಾನ ಎಂದಿದ್ದು.

ಇನ್ನು ಪೋರ್ಶೆ ಕೇವಲ ಐಷಾರಾಮಿ ಸ್ಪೋರ್ಟ್ಸ್ ಕಾರುಗಳಿಗಾಗಿ ಮಾತ್ರ ಎಂಜಿನ್ ತಯಾರಿಸುವುದಿಲ್ಲ. ಯೂರೋಪ್‌ನ ಸಣ್ಣ-ಪುಟ್ಟ ಕಾರು ತಯಾರಕಾ ಕಂಪನಿಗಳ ಚಿಕ್ಕ ಕಾರುಗಳಿಗೆ (ಟಾಟಾ ಟಿಯಾಗೊ, ಮಾರುತಿ ಸ್ವಿಫ್ಟ್‌ನಂತಹ) 1,000 ಸಿ.ಸಿಯ, 1,200 ಸಿ.ಸಿಯ ಎಂಜಿನ್‌ಗಳನ್ನು ತಯಾರಿಸಿಕೊಡುತ್ತದೆ. ತನ್ನ ಎಂಜಿನ್ ತಂತ್ರಜ್ಞಾನವನ್ನು ಇತರ ಕಂಪನಿಗಳಿಗೂ ಮಾರಾಟ ಮಾಡುತ್ತದೆ. ಹೀಗಾಗಿ ಕೆಲವೇ ವರ್ಷಗಳಲ್ಲಿ 6 ಸ್ಟ್ರೋಕ್ ಎಂಜಿನ್ ಜನ ಸಾಮಾನ್ಯರ ಕಾರುಗಳಿಗೂ ಬರಲಿದೆ ಎಂದು ನಿರೀಕ್ಷಿಸಲಾಗಿದೆ.

ಎಐ ಪರಿಸರಕ್ಕೆ ಶಾಪವೇ?

ಸೂರ್ಯನಾರಾಯಣ ವಿ.

ತಂತ್ರಜ್ಞಾನ ದೈತ್ಯ ಕಂಪನಿ ಮೈಕ್ರೋಸಾಫ್ಟ್, ಇತ್ತೀಚೆಗೆ ಅಮೆರಿಕದ ವಿದ್ಯುತ್ ಸರಬರಾಜು ಕಂಪನಿ ಕಾನ್‌ಸ್ಟಲೇಷನ್ ಎನರ್ಜಿಯೊಂದಿಗೆ ಒಪ್ಪಂದವನ್ನು ಮಾಡಿಕೊಂಡಿದೆ. ಐದು ವರ್ಷಗಳ ಹಿಂದೆ ಮುಚ್ಚಲಾಗಿದ್ದ ತ್ರೀ ಮೈಲ್ ಐಲ್ಯಾಂಡ್‌ನಲ್ಲಿರುವ ಪರಮಾಣು ಸ್ಥಾವರದ ಒಂದನೇ ಘಟಕದಿಂದ ನಿರಂತರವಾಗಿ ವಿದ್ಯುತ್ ಪೂರೈಸುವುದಕ್ಕೆ ಸಂಬಂಧಿಸಿದ ಒಪ್ಪಂದ ಇದು. ಇಲ್ಲಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ಮೈಕ್ರೋಸಾಫ್ಟ್ ತನ್ನ ಕೃತಕ ಬುದ್ಧಿಮತ್ತೆ (ಎಐ) ಮತ್ತು ಕ್ಲೌಡ್ ಸೇವೆಗಳನ್ನು ವಿಸ್ತರಿಸುವುದಕ್ಕೆ ಬಳಸಲಿದೆ. ಕಂಪನಿ ಹೊಂದಿರುವ ಬೃಹತ್ ಡೇಟಾ ಸೆಂಟರ್‌ಗಳಿಗೆ ಹೆಚ್ಚಿನ ವಿದ್ಯುತ್ ಅವಶ್ಯಕತೆ ಇದ್ದು, ಸ್ಥಳೀಯ ವಿದ್ಯುತ್ ಕಂಪನಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಪೂರೈಸಲು ಸಾಧ್ಯವಾಗದಿರುವುದರಿಂದ ಕಂಪನಿ ಈ ಒಪ್ಪಂದ ಮಾಡಿಕೊಂಡಿದೆ.

ಮೈಕ್ರೋಸಾಫ್ಟ್ ಮಾತ್ರ ಅಲ್ಲ, ಗೂಗಲ್ ಸೇರಿದಂತೆ ಜಗತ್ತಿನಾದ್ಯಂತ ಇರುವ ತಂತ್ರಜ್ಞಾನ ಹಾಗೂ ಇತರ ಕಂಪನಿಗಳು ಕೂಡ ಎಐ ತಂತ್ರಜ್ಞಾನವನ್ನು ಭಾರಿ ಪ್ರಮಾಣದಲ್ಲಿ ವಿಸ್ತರಿಸುತ್ತಿದ್ದು, ಅದಕ್ಕಾಗಿ ದೊಡ್ಡ ದೊಡ್ಡ ಸರ್ವರ್‌ಗಳು, ಡೇಟಾ ಸೆಂಟರ್‌ಗಳನ್ನು ಸ್ಥಾಪಿಸುತ್ತಿವೆ. ಇವುಗಳು ಭಾರಿ ಪ್ರಮಾಣದಲ್ಲಿ ವಿದ್ಯುತ್ ಬಳಸಲಿವೆ.

ಕೃತಕ ಬುದ್ಧಿಮತ್ತೆಯು ತಂತ್ರಜ್ಞಾನ ಜಗತ್ತಿಗೆ ಪ್ರವೇಶಿಸಿದ ಸಂದರ್ಭ, ಅಪಾಯಕಾರಿ ಮಟ್ಟಕ್ಕೆ ಹೋಗುತ್ತಿರುವ ಹವಾಮಾನ ಬದಲಾವಣೆ ತಡೆಗೆ ಎಐಯನ್ನು ಪರಿಣಾಮಕಾರಿಯಾಗಿ ಬಳಸಬಹುದು ಎಂಬ ಅಭಿಪ್ರಾಯಗಳು ವ್ಯಕ್ತವಾಗಿದ್ದವು. ತಂತ್ರಜ್ಞಾನ ಕ್ಷೇತ್ರದಲ್ಲಿ ಎಐ ಕ್ರಾಂತಿ ಸೃಷ್ಟಿ ಮಾಡುತ್ತಿದ್ದಂತೆಯೇ, ಅದರಿಂದ ಪರಿಸರದ ಮೇಲಾಗುವ ಪರಿಣಾಮಗಳು, ಹವಾಮಾನ ಬದಲಾವಣೆ ಬಿಕ್ಕಟ್ಟನ್ನು ಅದು ಮತ್ತಷ್ಟು ಹೆಚ್ಚಿಸಬಹುದು ಎಂಬ ಚರ್ಚೆಗಳು ಶುರುವಾಗಿವೆ.

ಎಐ ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಕೆನಡಾದ ಕಂಪ್ಯೂಟರ್ ವಿಜ್ಞಾನಿ, ಸಂಶೋಧಕಿ ಸಾಶಾ ಲುಚೋನಿ ಅವರು ಕೆಲವು ದಿನಗಳ ಹಿಂದೆ ಎಐನಿಂದ ಹವಾಮಾನ ಬದಲಾವಣೆ ಮೇಲಾಗುವ ಪರಿಣಾಮಗಳ ಬಗ್ಗೆ ಜಗತ್ತಿನ ಗಮನ ಸೆಳೆದಿದ್ದಾರೆ. ಅಮೆರಿಕದ ನಿಯತಕಾಲಿಕ 'ಟೈಮ್' ಮಾಡಿರುವ ಪಟ್ಟಿಯ ಪ್ರಕಾರ, ಎಐ ಜಗತ್ತಿನ ಅತ್ಯಂತ ಪ್ರಭಾವಿಶಾಲಿ 100 ಮಂದಿಯಲ್ಲಿ ಸಾಶಾ ಕೂಡ ಒಬ್ಬರು. ಎಐ ತಂತ್ರಜ್ಞಾನವು ಪರಿಸರದ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಅವರೀಗ ಜಾಗೃತಿ ಮೂಡಿಸುತ್ತಿದ್ದಾರೆ.

ಉತ್ಪಾದಕ ಕೃತಕ ಬುದ್ಧಿಮತ್ತೆ ಅಥವಾ ಜನರೇಟಿವ್ ಎಐ ಇಂಟರ್‌ನೆಟ್‌ನಲ್ಲಿ ಮಾಹಿತಿ ಹುಡುಕಿ ನೀಡಲು, ಸಾಮಾನ್ಯ ಇಂಟರ್‌ನೆಟ್ ಸರ್ಚ್ ಎಂಜಿನ್ ಬಳಸುವುದಕ್ಕಿಂತ 30 ಪಟ್ಟು ಹೆಚ್ಚು ವಿದ್ಯುತ್ ಅನ್ನು ಬಳಸುತ್ತದೆ ಎಂದು ಹೇಳಿರುವ ಸಾಶಾ, ಇಂಟರ್‌ನೆಟ್‌ನಲ್ಲಿ ಮಾಹಿತಿಯನ್ನು ಜಾಲಾಡಲು ಜನರೇಟಿವ್ ಎಐ ಬಳಸುವುದಕ್ಕೆ ಬೇಸರವನ್ನೂ ವ್ಯಕ್ತಪಡಿಸಿದ್ದಾರೆ. ಎಐ ಪ್ರೋಗ್ರಾಂಗಳನ್ನು ರೂಪಿಸಿರುವ ಕಂಪ್ಯೂಟರ್ ಭಾಷಾ ಮಾದರಿಗಳ ಕಾರ್ಯನಿರ್ವಹಣೆಗೆ ಅಗಾಧ ಸಾಮರ್ಥ್ಯದ ಸರ್ವರ್‌ಗಳು ಬೇಕಾಗುತ್ತವೆ. ಇವು ಹೆಚ್ಚು ವಿದ್ಯುತ್ ಬಳಸುತ್ತವೆ ಎಂಬುದು ಅವರ ವಾದ. ಅಂತರರಾಷ್ಟ್ರೀಯ ಇಂಧನ ಸಂಸ್ಥೆಯ ಪ್ರಕಾರ, 2022ರಲ್ಲಿ ಎಐ ಮತ್ತು ಕ್ರಿಪ್ಟೋಕರೆನ್ಸಿ ವಲಯಗಳು 460 ಟೆರಾ ವ್ಯಾಟ್ ಗಂಟೆಗಳಷ್ಟು ವಿದ್ಯುತ್ ವ್ಯಯಿಸಿವೆ. ಅಂದರೆ, ಜಾಗತಿಕವಾಗಿ ಉತ್ಪಾದನೆಯಾಗುವ ಒಟ್ಟು ವಿದ್ಯುತ್‌ನಲ್ಲಿ ಶೇ 2ರಷ್ಟನ್ನು ಈ ಎರಡು ಕ್ಷೇತ್ರಗಳು ಬಳಸಿವೆ!

ಗೋಲ್ಡ್‌ಮನ್ ಸ್ಯಾಚ್ಸ್ ಇತ್ತೀಚೆಗೆ ನಡೆಸಿರುವ ಅಧ್ಯಯನ ಕೂಡ ಸಾಶಾ ಅವರ ವಾದಕ್ಕೆ ಪೂರಕವಾಗಿದೆ. ಅದರ ಪ್ರಕಾರ, ಚಾಟ್‌ಜಿಪಿಟಿಯಲ್ಲಿ ನಾವು ಒಂದು ಪ್ರಶ್ನೆ ಕೇಳಿದರೆ, ಅದು ಅಂತರಜಾಲದಲ್ಲಿ ಮಾಹಿತಿ ಹುಡುಕಾಡಿ ಉತ್ತರವನ್ನು ನೀಡಲು ಸಾಂಪ್ರದಾಯಿಕ ಸರ್ಚ್ ಎಂಜಿನ್‌ಗಿಂತ ಸರಾಸರಿ 10 ಪಟ್ಟು ಹೆಚ್ಚು ವಿದ್ಯುತ್ ಖರ್ಚು ಮಾಡುತ್ತದೆ. ತಂತ್ರಜ್ಞಾನ ಕಂಪನಿಗಳಿಗೆ ಸೇರಿದ ಡಾಟಾ ಸೆಂಟರ್‌ಗಳು ಹಲವು ವರ್ಷಗಳಿಂದ ವಿದ್ಯುತ್ ಬಳಕೆಯಲ್ಲಿ ಸ್ಥಿರತೆ ಕಾಯ್ದುಕೊಂಡು ಬರುತ್ತಿದ್ದವು. ಆದರೆ, ಕ್ರಾಂತಿಕಾರಕ ಎಐ ತಂತ್ರಜ್ಞಾನ ಬಳಕೆ ಆರಂಭಗೊಂಡ ಬಳಿಕ ವಿದ್ಯುತ್ ಬಳಕೆ ಹೆಚ್ಚಾಗಿದೆ. 2030ರ ವೇಳೆಗೆ ವಿದ್ಯುತ್ ಬೇಡಿಕೆ ಶೇ 160ರಷ್ಟು ಹೆಚ್ಚಲಿದೆ. ಸದ್ಯ ಡೇಟಾ ಸೆಂಟರ್‌ಗಳು ಜಗತ್ತಿನಾದ್ಯಂತ ಒಟ್ಟಾರೆಯಾಗಿ ಶೇ 1ರಿಂದ 2ರಷ್ಟು ವಿದ್ಯುತ್ ಬಳಸುತ್ತಿವೆ. ಈ ದಶಕದ ಕೊನೆಯ ವೇಳೆಗೆ ಈ ಪ್ರಮಾಣ ಶೇ 3ರಿಂದ ಶೇ 4ಕ್ಕೆ ಏರಬಹುದು ಎಂಬ ಬಗ್ಗೆ ಗೋಲ್ಡ್‌ಮನ್ ಸ್ಯಾಚ್ಸ್ ಅಧ್ಯಯನ ಬೆಳಕು ಚೆಲ್ಲಿದೆ.

ಎಐ ತಂತ್ರಜ್ಞಾನಕ್ಕೂ ಹವಾಮಾನ ಬದಲಾವಣೆಗೂ ಏನು ಸಂಬಂಧ ಎಂದು ಕೇಳಬಹುದು. ಜಗತ್ತಿನಾದ್ಯಂತ ಪರಿಸರಸ್ನೇಹಿಯಾದಂತಹ ಸೌರ, ಪವನ, ಜಲಶಕ್ತಿಗಳಿಂದ ಹೆಚ್ಚೆಚ್ಚು ವಿದ್ಯುತ್ ಉತ್ಪಾದನೆ ಮಾಡಲು ಪ್ರಯತ್ನ ನಡೆಯುತ್ತಿರುವುದು ನಿಜ. ಆದರೆ, ಇವುಗಳಿಂದಲೇ ಪೂರ್ಣ ವಿದ್ಯುತ್ ಬೇಡಿಕೆಯನ್ನು ಈಡೇರಿಸಲು ಸಾಧ್ಯವಾಗುತ್ತಿಲ್ಲ ಎಂಬುದೂ ಅಷ್ಟೇ ಸತ್ಯ. ಕಲ್ಲಿದ್ದಲಿನಂಥ ಪಳೆಯುಳಿಕೆ ಇಂಧನ ಬಳಸಿ ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಇದು ದೊಡ್ಡ ಮಟ್ಟದಲ್ಲಿ ಹಸಿರುಮನೆ ಅನಿಲಗಳನ್ನು ಹೊರಸೂಸುತ್ತದೆ. ಪರಮಾಣು ಶಕ್ತಿ ಬಳಸಿ ವಿದ್ಯುತ್ ಉತ್ಪಾದನೆ ಮಾಡುವಾಗ ಪರಿಸರಕ್ಕೆ ಹೆಚ್ಚು ಹಾನಿಯಾಗುವುದಿಲ್ಲ (ಪರಮಾಣು ಸ್ಥಾವರಗಳು ಇಂಗಾಲವನ್ನು ಹೆಚ್ಚು ಹೊರ ಸೂಸುವುದಿಲ್ಲ) ಎಂದೂ ವಾದಿಸಬಹುದು. ಆದರೆ, ಪರಮಾಣು ವಿದ್ಯುತ್ ಉತ್ಪಾದನೆಗೆ ಬಳಸುವ ಮೂಲವಸ್ತು ಯುರೇನಿಯಂ ಅದಿರನ್ನು ಸಂಗ್ರಹಿಸಲು ನಡೆಸುವ ಗಣಿಗಾರಿಕೆ, ಸಂಸ್ಕರಣಾ ಪ್ರಕ್ರಿಯೆಗಳಿಂದ ಪರಿಸರಕ್ಕೆ ಹಾನಿಯಾಗುತ್ತದೆ. ಕೃತಕಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಸುವಾಗ ಭಾರಿ ಪ್ರಮಾಣದಲ್ಲಿ ವಿದ್ಯುತ್ ವ್ಯಯವಾಗುವುದರಿಂದ ಹೆಚ್ಚೆಚ್ಚು ವಿದ್ಯುತ್ ಉತ್ಪಾದನೆ ಮಾಡಬೇಕಾಗುತ್ತದೆ. ಪರಿಸರಸ್ನೇಹಿ ವಿಧಾನದಲ್ಲಿ ಸಾಧ್ಯವಾಗದಿದ್ದರೆ, ಮತ್ತೆ ಪರಿಸರದ ಮೇಲೆ ವ್ಯತಿರಿಕ್ತ ಪ್ರಭಾವ ಬೀರುವಂತಹ ವಿಧಾನಗಳಲ್ಲೇ ವಿದ್ಯುತ್ ತಯಾರಿಸಬೇಕಾಗುತ್ತದೆ. 2030ರ ವೇಳೆಗೆ ಇಂಗಾಲ ತಟಸ್ಥ (ಇಂಗಾಲ ಹೊರಸೂಸುವಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸುವ) ಗುರಿಯನ್ನು ಸಾಧಿಸುವ ವಾಗ್ದಾನವನ್ನು ಮೈಕ್ರೋಸಾಫ್ಟ್ ಮತ್ತು ಗೂಗಲ್ ಕಂಪನಿಗಳು ನೀಡಿವೆ. ಗೂಗಲ್ ಕಂಪನಿಯ ಹಸಿರುಮನೆ ಅನಿಲ ಉಗುಳುವಿಕೆ ಪ್ರಮಾಣ 2019ಕ್ಕೆ ಹೋಲಿಸಿದರೆ 2023ರಲ್ಲಿ ಶೇ 48ರಷ್ಟು ಹೆಚ್ಚಾಗಿದೆ. ಮೈಕ್ರೋಸಾಫ್ಟ್‌ನ ಪ್ರಮಾಣ 2020ಕ್ಕೆ ಹೋಲಿಸಿದರೆ, 2023ರಲ್ಲಿ ಶೇ 29ರಷ್ಟು ಏರಿಕೆಯಾಗಿದೆ. ಇದಕ್ಕೆ ಕೃತಕ ಬುದ್ಧಿಮತ್ತೆ ಕಾರಣ. ಭವಿಷ್ಯದಲ್ಲಿ ಹವಾಮಾನ ಬದಲಾವಣೆಯ ಬಿಕ್ಕಟ್ಟನ್ನು ತೀವ್ರಗೊಳಿಸಲಿದೆ ಎಂಬುದು ಸಾಶಾ ಅವರ ಪ್ರತಿಪಾದನೆ.

ಏನಿದು ಜನರೇಟಿವ್ ಎಐ?

ಕೃತಕ ಬುದ್ಧಿಮತ್ತೆಯ ಇನ್ನೊಂದು ರೂಪವೇ ಜನರೇಟಿವ್ ಎಐ. ಇದು ಲೇಖನ, ಚಿತ್ರಗಳು, ಸಂಗೀತ, ಧ್ವನಿ, ಮತ್ತು ವಿಡಿಯೊಗಳಂತಹ ಹೊಸ ವಿಷಯಗಳನ್ನು (ಕಂಟೆಂಟ್) ಸೃಷ್ಟಿಸುತ್ತದೆ. ಇಂಟರ್‌ನೆಟ್‌ನ ದತ್ತಾಂಶಗಳ ಸಾಗರದಲ್ಲಿ ಅಗಾಧ ಪ್ರಮಾಣದಲ್ಲಿರುವ ಮಾಹಿತಿಗಳನ್ನು ಹೆಕ್ಕಿ ತೆಗೆದು, ಅದನ್ನು ಅತ್ಯಂತ ವ್ಯವಸ್ಥಿತ ಮತ್ತು ಸಮಗ್ರವಾಗಿ ಕಟ್ಟಿಕೊಡುವ ಕೆಲಸವನ್ನು ಜನರೇಟಿವ್ ಎಐ ಮಾಡುತ್ತದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ವಿದ್ಯುಚ್ಛಕ್ತಿ ಪ್ರವಾಹದ ಕಾಂತೀಯ ಪರಿಣಾಮಗಳು

1) ದಂಡ ಕಾಂತದ ಸುತ್ತ ಕಾಂತೀಯ ಬಲರೇಖೆಗಳನ್ನು ಎಳೆಯಿರಿ

ಉತ್ತರ:-

2) ಕಾಂತೀಯ ಬಲರೇಖೆಗಳ ಗುಣಗಳನ್ನು ಪಟ್ಟಿ ಮಾಡಿ

ಉತ್ತರ:- ಕಾಂತೀಯ ಬಲರೇಖೆಗಳ ಗುಣಗಳು

(1) ಕಾಂತೀಯ ಬಲರೇಖೆಗಳು ಆವೃತ ಜಾಲಗಳಾಗಿವೆ

(2) ಯಾವುದೇ ಎರಡು ಕಾಂತೀಯ ಬಲರೇಖೆಗಳು ಒಂದನ್ನೊಂದನ್ನು ಛೇದಿಸುವುದಿಲ್ಲ.

(3) ಕಾಂತೀಯ ರೇಖೆಗಳ ಸಾಂದ್ರತೆಯು ಹೆಚ್ಚಾಗಿದ್ದಲ್ಲಿ ಕಾಂತಕ್ಷೇತ್ರದ ಬಲವು ಹೆಚ್ಚಾಗಿರುತ್ತದೆ.

3) ಎರಡು ಕಾಂತೀಯ ಬಲ ರೇಖೆಗಳು ಒಂದನ್ನೊಂದು ಛೇದಿಸುವುದಿಲ್ಲ ಏಕೆ?

ಉತ್ತರ:- ಎರಡು ಕಾಂತೀಯ ಬಲರೇಖೆಗಳು ಒಂದನ್ನೊಂದು ಛೇದಿಸುವುದೇ ಇಲ್ಲ. ಇದು ಅಸಂಭವ ಹಾಗೆ ಛೇದಿಸಬೇಕಾದರೆ ಛೇದಿಸುವ ಬಿಂದುವಿನಲ್ಲಿ ಕಾಂತವು (ದಿಕ್ಸೂಚಿ) ಎರಡು ದಿಕ್ಕುಗಳನ್ನು ನಿರ್ದೇಶಿಸುತ್ತದೆ ಎಂಬ ಅರ್ಥ ಬರುತ್ತದೆ. ಇದು ಸಂಭವನೀಯವಲ್ಲ.

4) ಮೇಜಿನ ಸಮತಲದ ಮೇಲಿರುವ ಒಂದು ವೃತ್ತಾಕಾರದ ವಾಹಕ ಸುರುಳಿಯನ್ನು ಪರಿಗಣಿಸಿ. ಸುರುಳಿಯಲ್ಲಿ ವಿದ್ಯುತ್ ಪ್ರವಾಹವು ಪ್ರದಕ್ಷಿಣಾಕಾರವಾಗಿ ಪ್ರವಹಿಸುವಂತಿರಲಿ. ಬಲಗೈ ನಿಯಮ ಅನ್ವಯಿಸಿ ಸುರುಳಿಯ ಒಳಭಾಗ ಮತ್ತು ಹೊರಭಾಗದಲ್ಲಿ ಕಾಂತಕ್ಷೇತ್ರದ ದಿಕ್ಕನ್ನು ಕಂಡುಹಿಡಿಯಿರಿ.



ಉತ್ತರ:- ಈ ಪ್ರಯೋಗದಲ್ಲಿ ಒಳಭಾಗದಲ್ಲಿ ಕಾಂತಕ್ಷೇತ್ರದ ದಿಕ್ಕು ಸುರುಳಿಯಲ್ಲಿ ಅಂದರೆ ಮೇಲಿನ ಒಳಗಡೆ ಇರುತ್ತವೆ, ಇದೇ ರೀತಿ ಹೊರಭಾಗದಲ್ಲಿ ಸುರುಳಿಯಿಂದ ಹೊರಗೆ ಅಂದರೆ ಮೇಲಿನ ಹೊರಗಡೆ ಕಾಂತಕ್ಷೇತ್ರವು ಇರುತ್ತದೆ.

5) ಕೊಟ್ಟಿರುವ ಪ್ರದೇಶದಲ್ಲಿನ ಕಾಂತಕ್ಷೇತ್ರವು ಏಕರೂಪವಾಗಿದೆ. ಇದನ್ನು ಪ್ರತಿನಿಧಿಸುವ ಚಿತ್ರವನ್ನು ರಚಿಸಿರಿ

ಉತ್ತರ:-



6) ಸರಿಯಾದ ಉತ್ತರವನ್ನು ಆರಿಸಿ. ವಿದ್ಯುತ್ ಪ್ರವಾಹವಿರುವ ಉದ್ದವಾದ ನೇರ ಸೊಲೆನಾಯ್ಡ್‌ನ ಒಳಭಾಗದಲ್ಲಿನ ಕಾಂತಕ್ಷೇತ್ರವು.

a) ಸೊನ್ನೆ ಆಗಿರುತ್ತದೆ.

b) ನಾವು ಅದರ ತುದಿಯ ಕಡೆಗೆ ಚಲಿಸಿದಂತೆಲ್ಲಾ ಕಡಿಮೆಯಾಗುತ್ತದೆ.

c) ನಾವು ಅದರ ತುದಿಯ ಕಡೆಗೆ ಚಲಿಸಿದಂತೆಲ್ಲಾ ಹೆಚ್ಚಾಗುತ್ತದೆ.

d) ಎಲ್ಲಾ ಬಿಂದುಗಳಲ್ಲೂ ಸಮನಾಗಿರುತ್ತದೆ.

ಉತ್ತರ:- (d) ಎಲ್ಲಾ ಬಿಂದುಗಳಲ್ಲೂ ಸಮನಾಗಿರುತ್ತದೆ

7) ಒಂದು ಪ್ರೊಟಾನ್, ಕಾಂತಕ್ಷೇತ್ರದಲ್ಲಿ ಸ್ವತಂತ್ರವಾಗಿ ಚಲಿಸುವಾಗ ಈ ಕೆಳಗಿನ ಯಾವ ಗುಣವು ಬದಲಾಗುತ್ತದೆ? (ಒಂದಕ್ಕಿಂತ ಹೆಚ್ಚು ಉತ್ತರಗಳು ಇರಬಹುದು)

(a) ರಾಶಿ (b) ಜವ

(c) ವೇಗ (d) ಸಂವೇಗ

ಉತ್ತರ:- (c) ವೇಗ (d) ಸಂವೇಗ

2) ಚಟುವಟಿಕೆ 12.7 ರಲ್ಲಿ ಸಲಾಕೆ ABಯ ಸ್ಥಾನಪಲ್ಲಟವು ಯಾವಾಗ ಬಾಧಿತಗೊಳ್ಳುತ್ತದೆ ಎಂದು ಯೋಚಿಸುವಿರಿ?

(i) ಸಲಾಕೆ ABಯಲ್ಲಿ ವಿದ್ಯುತ್‌ಪ್ರವಾಹವನ್ನು ಹೆಚ್ಚಿಸಿದಾಗ

(ii) ಪ್ರಬಲವಾದ ಕುದುರೆಲಾಳಾಕೃತಿ ಕಾಂತವನ್ನು ಬಳಸಿದಾಗ ಮತ್ತು

(iii) ಸಲಾಕೆ ABಯ ಉದ್ದವನ್ನು ಹೆಚ್ಚಿಸಿದಾಗ

ಉತ್ತರ:- (i) AB ಸಲಾಕೆಯ ಸ್ಥಾನಪಲ್ಲಟ ಹೆಚ್ಚಾಗುತ್ತದೆ.

(ii) ಪ್ರಬಲವಾದ ಕುದುರೆಲಾಳ ಬಳಸಿದಾಗ ಕಾಂತ ಕ್ಷೇತ್ರಗಳ ಬಲ ಹೆಚ್ಚಾಗುತ್ತದೆ

(iii) ಹೆಚ್ಚು ವಿದ್ಯುತ್ಪ್ರವಾಹ ಉಂಟಾಗುತ್ತದೆ.

(ಮುಂದುವರಿಯುವುದು)

II PUC BIOLOGY

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

EVOLUTION

1. Mention some of the differences between Primitive and Modern Atmosphere.

Ans:- The differences between Primitive and Modern Atmosphere are -

Primitive Atmosphere	*Modern Atmosphere*
Chemically, it was reducing in nature.	Chemically, it is oxidizing in nature.
The gaseous mixture mainly consisted of H_2, CH_4 and NH_3	The gaseous mixture mainly consists of N_2 and O_2.
An ozone layer was absent.	An ozone layer is present.
All types of high energy radiations like cosmic rays and UV radiations could reach the earth.	High energy radiations are mostly filtered out by the atmosphere and do not reach the earth.
It was hot.	It has cooled down in the middle strata and moderately warm near the earth.
It favoured chemical reactions that could form organic molecules.	It does not favour formation of organic molecules.

2. Mention some of the differences between Homologous Organs and Analogous Organs.

Ans:- Differences between Homologous Organs and Analogous Organs are -

Homologous Organs	*Analogous Organs*
They differ phenotypically.	They resemble phenotypically.
Internal structure is similar.	There is no similarity in internal structure.
Development stages are similar.	Development stages are quite different.
They develop from similar position over the body.	They develop from different positions over the body.
The organisms having homologous organs are phylogenetically related. Homologous organs show adaptation to different environments.	Organisms having analogous organs are phylogenetically unrelated. They show adaptation in response to similar environment.
They carry out different functions.	They carry out similar function.
They develop in response to adaptive radiation or divergent evolution.	They develop in response to convergent evolution.

3. Mention the differences Between Lamarckism and Neo-Lamarckism.

Ans:- The differences Between Lamarckism and Neo - Lamarckism are -

Lamarckism	*Neo-Lamarckism*
It is the original theory proposed by Lamarck.	It is modification of Lamarck's theory to make it acceptable.
It believes in the presence of an internal vital force in organisms that brings about increase in size & complexity.	It does not mention internal vital force to be any factor for evolution.
Change in environment develops new needs and desires.	Principle of appetency is discarded.
There is a lot of stress on the use and disuse of organs that brings about changes in organisms.	It does not recognize use and disuse of organs to be any major factor in evolution.
Organisms with brain react consciously to changes in environment.	Changes in environment directly influence all types of organisms.
A distinction of somatic and germ cells is not made.	It distinguishes germ cells from somatic cells.
All acquired characters are believed to be inherited.	Only those variations are inherited which affect germ cells directly or indirectly.

4. Mention some of the differences between Somatoplasm and germplasm.

Ans:-

Somatoplasm	*germplasm*
It comprises the body or somatic cells of an organism.	It comprises the reproductive cells of an organism.
It generally does not transmit its traits to the offspring as it takes no part in sexual reproduction.	It transmits its traits to the offspring because the germ cells are involved in sexual reproduction.
It dies with the death of the organism.	It continues generation after generation.
It normally does not give rise to germplasm.	It gives rise to somatoplasm.
The variations developed in somatoplasm are not inherited.	The variations occurring in germ-plasm are passed to the progeny.

5. Penicillin was once called a wonder drug as it could heal most of the bacterial infections. It is no longer used now. Suggest the possible reasons and the conclusion drawn thereof. *(Contd…)*

ಲಡ್ಡು ತಯಾರಿಕೆ: ತಿರುಪತಿ ಅರ್ಚಕರಿಗೆ ಮೈಸೂರಲ್ಲಿ ತರಬೇತಿ

ಪ್ರಜಾವಾಣಿ ವಾರ್ತೆ

ಮೈಸೂರು: ಆಂಧ್ರಪ್ರದೇಶದ ತಿರುಪತಿ ದೇವಾಲಯದ ಅರ್ಚಕರ ತಂಡವೊಂದು ನಗರದಲ್ಲಿರುವ ಸಿಎಫ್‌ಟಿಆರ್‌ಐ (ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ)ಯಲ್ಲಿ ಎರಡು ತಿಂಗಳ ಹಿಂದೆ ಲಡ್ಡು ತಯಾರಿಕೆ ಕುರಿತು ತರಬೇತಿ ಪಡೆದು ತೆರಳಿದೆ.

‘ಸಂಸ್ಥೆಗೆ ತಿರುಪತಿಯಿಂದ 20 ಅರ್ಚಕರ ತಂಡವು ಆಗಮಿಸಿತ್ತು. ಲಡ್ಡು ತಯಾರಿಯಲ್ಲಿ ಅನುಸರಿಸಬೇಕಾದ ವೈಜ್ಞಾನಿಕ ಪ್ರಮಾಣಗಳ ಬಗ್ಗೆ ಅವರಿಗೆ ಮಾಹಿತಿ ನೀಡಲಾಗಿದೆ. ಬಣ್ಣ, ತುಪ್ಪ ಹಾಗೂ ಇತರೆ ಸಾಮಗ್ರಿಯ ಬಳಕೆ ಹಾಗೂ ಲಡ್ಡುವಿನ ಪ್ಯಾಕೇಜಿಂಗ್ ಬಗ್ಗೆ ತರಬೇತಿ ನೀಡಿದ್ದೇವೆ’ ಎಂದು ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದರು.

‘ತಂತ್ರಜ್ಞಾನ ಹಾಗೂ ಸಂಶೋಧನೆಯ ಅವಕಾಶವಿರುವುದರಿಂದ ಸಂಸ್ಥೆಯಲ್ಲಿ ತರಬೇತಿ ನೀಡಲಾಗಿದೆ. ದೇವಾಲಯದಲ್ಲಿ ಲಡ್ಡುವಿಗೆ ಬಳಸಲಾದ ತುಪ್ಪವನ್ನು ಖಾಸಗಿ ಪ್ರಯೋಗಾಲಯದಲ್ಲಿ ಪರೀಕ್ಷಿಸಲಾಗಿದೆ. ನ್ಯಾಯಾಲಯವು ಸರ್ಕಾರಿ ಪ್ರಯೋಗಾಲಯದ ಮೂಲಕ ಪರೀಕ್ಷೆ ಮಾಡಿಸುವ ಸಾಧ್ಯತೆಯಿದ್ದು, ನಮ್ಮ ಸಂಸ್ಥೆಯಲ್ಲಿ ಅದಕ್ಕೆ ಬೇಕಾದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ವಿಶ್ಲೇಷಿಸುವ ಪ್ರಯೋಗಾಲವೂ ಇದೆ’ ಎಂದು ಹೇಳಿದರು.

ಜಾನಪದ ಕಲಾಮೇಳದಲ್ಲಿ ಸಾಧಕರಿಗೆ ‘ಚುಂಚಶ್ರೀ’ ಪ್ರಶಸ್ತಿ ಪ್ರದಾನ

‘ಜಾನಪದ ಬೇರು ಮರೆಯದಿರಿ’

ಪ್ರಜಾವಾಣಿ ವಾರ್ತೆ

ಆದಿಚುಂಚನಗಿರಿ ಮಠದಲ್ಲಿ ಮಂಗಳವಾರ ನಡೆದ ರಾಜ್ಯಮಟ್ಟದ 45ನೇ ಕಾಲಭೈರವೇಶ್ವರ ಜಾನಪದ ಕಲಾಮೇಳದಲ್ಲಿ ಬೆಳಗಾವಿ ಜಿಲ್ಲೆಯ ಮಲ್ಲವ್ವ ಬಸಪ್ಪ ಮೇಗೇರಿ, ಶಿವಮೊಗ್ಗ ಜಿಲ್ಲೆಯ ಹಿರಿಯಣ್ಣ ಹೆಗಡೆ, ಮಂಡ್ಯ ಜಿಲ್ಲೆಯ ರಾಮೇಗೌಡ (ರಾಗೌ) ಹಾಗೂ ಮೈಸೂರು ಜಿಲ್ಲೆಯ ಕೆ.ಪಿ.ಬಸವೇಗೌಡ ಅವರಿಗೆ ‘ಚುಂಚಶ್ರೀ’ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶಾಸಕ ಸಿ.ಎನ್.ಅಶ್ವತ್ಥನಾರಾಯಣ, ಮಾಜಿ ಶಾಸಕ ಕೆ.ಸುರೇಶಗೌಡ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ನಿರ್ಮಲಾನಂದನಾಥ ಸ್ವಾಮೀಜಿ, ಪತ್ರಕರ್ತ ಎಚ್.ಆರ್.ರಂಗನಾಥ್, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹಾಗೂ ವಿವಿಧ ಮಠಾಧೀಶರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ನಾಗಮಂಗಲ (ಮಂಡ್ಯ): ‘ಜಾನಪದವು ಮನುಷ್ಯನ ಬೇರು. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಹೊಸಚಿಗುರು. ಹೊಸಚಿಗುರನ್ನು ಆರಾಧಿಸುವ ಹೊತ್ತಿನಲ್ಲಿ ಬೇರನ್ನು ಮರೆತರೆ ಚಿಗುರು ಹೂವಾಗುವುದಿಲ್ಲ, ಹಣ್ಣಾಗುವುದೂ ಇಲ್ಲ. ಹೀಗಾಗಿ ಜಾನಪದವನ್ನು ಮರೆಯುವಂತಿಲ್ಲ’ ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಮಂಗಳವಾರ ಬಾಲಗಂಗಾಧರನಾಥ ಸ್ವಾಮೀಜಿಯ ವಾರ್ಷಿಕ ಪಟ್ಟಾಭಿಷೇಕ ಮತ್ತು ಗುರು ಸಂಸ್ಮರಣೋತ್ಸವದ ಅಂಗವಾಗಿ ಆಯೋಜಿಸಿದ್ದ ರಾಜ್ಯಮಟ್ಟದ 45ನೇ ಕಾಲಭೈರವೇಶ್ವರ ಜಾನಪದ ಕಲಾಮೇಳದಲ್ಲಿ ‘ಚುಂಚಶ್ರೀ’ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಆಶೀರ್ವಚನ ನೀಡಿದರು.

‘ಓದು, ಗಳಿಕೆ, ಅಧಿಕಾರ ಎಲ್ಲವೂ ತಮಗಾಗಿ ಮಾತ್ರ ಎಂದುಕೊಂಡವರು ನಿಜವಾಗಿಯೂ ಬದುಕಲಿಲ್ಲ. ಸತ್ತ ನಂತರವೂ ಯಾರ ನೆನಪಿನಲ್ಲೂ ಉಳಿಯಲಿಲ್ಲ. ಜನಪದರನ್ನು ಮತ್ತು ಜಾನಪದ ಸಾಹಿತ್ಯವನ್ನು ಮರೆತರೆ ಯಾವುದೇ ಸಮಾಜವು ದೀರ್ಘಕಾಲ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಸಾಧ್ಯವಿಲ್ಲ. ಇಂದಿಗೂ ಜಾನಪದ ಗೀತೆಗಳನ್ನು ಕೇಳಿದರೆ ನೊಂದ ಮನಸ್ಸಿಗೆ ಸಾಂತ್ವನ ಸಿಗುತ್ತದೆ’ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ‘ಆಧುನಿಕ ಜಗತ್ತಿನ ಎಲ್ಲ ಸೌಲಭ್ಯಗಳನ್ನು ಅನುಭವಿಸುತ್ತಿರುವ ನಗರವಾಸಿಗಳಾದ ನಾವು, ಅರಣ್ಯದಲ್ಲಿ ವಾಸಿಸುವ ಬುಡಕಟ್ಟು ಜನರಂತೆ ಸಂತೋಷದ ಜೀವನ ನಡೆಸಲು ಆಗುತ್ತಿಲ್ಲ. ಬದುಕಿರುವಾಗ ಒಳ್ಳೆಯ ಕೆಲಸವನ್ನು ಮಾಡಿದರೆ, ಭಗವಂತನ ಪಾದ ಸೇರುವಾಗ ನೆಮ್ಮದಿ, ಸಾರ್ಥಕತೆ ದೊರೆಯುತ್ತದೆ. ನಮಗೆ ಮೊದಲು ಬೇಕಾಗಿರುವುದು ಮಾನವೀಯತೆ’ ಎಂದರು.

ಚುಂಚಶ್ರೀ ಪ್ರಶಸ್ತಿ ಪ್ರದಾನ: ಶಿಕ್ಷಣ ಕ್ಷೇತ್ರದ ಸೇವೆಗಾಗಿ ಎಚ್.ಡಿ.ಕೋಟೆ ತಾಲ್ಲೂಕಿನ ಹಂಪಾಪುರ ಹೋಬಳಿಯ ಕೊತ್ತಲಗಾಲ ಗ್ರಾಮದ ಕೆ.ಪಿ. ಬಸವೇಗೌಡ, ಸಮಾಜ ಸೇವೆಗಾಗಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕೊಳವಾರ ಗ್ರಾಮದ ಹಿರಿಯಣ್ಣ ಹೆಗಡೆ, ಸಾಹಿತ್ಯ ಮತ್ತು ಜಾನಪದ ಕ್ಷೇತ್ರದ ಸಾಧನೆಗಾಗಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಹಿರೇಗೌಡನದೊಡ್ಡಿಯ ಸಾಹಿತಿ ರಾಮೇಗೌಡ ಹಾಗೂ ಜಾನಪದ ಕ್ಷೇತ್ರದ ಸೇವೆಗಾಗಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಮಲ್ಲವ್ವ ಬಸಪ್ಪ ಮೇಗೇರಿ ಅವರಿಗೆ ₹50 ಸಾವಿರ ನಗದು, ಸ್ಮರಣಿಕೆಯೊಂದಿಗೆ ಈ ಸಾಲಿನ ‘ಚುಂಚಶ್ರೀ’ ಪ್ರಶಸ್ತಿಯನ್ನು ನೀಡಿ ಮಠದ ವತಿಯಿಂದ ಗೌರವಿಸಲಾಯಿತು.

ಅರಣ್ಯ ಭೂಮಿಯಲ್ಲೂ ಅಕ್ರಮ ಮಂಜೂರಾತಿ: ಬಗೆದಷ್ಟೂ ಆಳ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಕಡೂರು ಮತ್ತು ಮೂಡಿಗೆರೆ ತಾಲ್ಲೂಕಿನ ಅಕ್ರಮ ಭೂಮಂಜೂರಾತಿ ಪ್ರಕರಣ ಬಗೆದಷ್ಟೂ ಆಳಕ್ಕೆ ಇಳಿಯುತ್ತಿದೆ. ಸಂರಕ್ಷಿತ ಅರಣ್ಯ, ಪರಿಭಾವಿತ ಅರಣ್ಯ, ಅರಣ್ಯ ಇಲಾಖೆ ಸೆಕ್ಷನ್ 4 ಜಾರಿಗೊಳಿಸಿರುವ ಜಾಗದಲ್ಲೂ ಮಂಜೂರಾತಿ ನೀಡಿರುವುದನ್ನು ಅಕ್ರಮ ಭೂಮಂಜೂರಾತಿ ಬಗ್ಗೆ ತನಿಖೆ ನಡೆಸಿದ ವಿಶೇಷ ತಂಡ ಬಯಲಿಗೆ ಎಳೆದಿದೆ.

ಎರಡೂ ತಾಲ್ಲೂಕುಗಳಲ್ಲಿ ಅಕ್ರಮ ಭೂಮಂಜೂರಾತಿ ಬಗ್ಗೆ ತನಿಖೆ ನಡೆಸಲು 2023ರ ಆಗಸ್ಟ್‌ನಲ್ಲಿ 13 ತಹಶೀಲ್ದಾರರ ತಂಡವನ್ನು ಸರ್ಕಾರ ರಚನೆ ಮಾಡಿತ್ತು. ತನಿಖೆ ನಡೆಸಿರುವ ತಂಡ ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಅರಣ್ಯ ಜಾಗವನ್ನೂ ರೈತರಿಗೆ ಮಂಜೂರು ಮಾಡಿರುವುದನ್ನು ತನಿಖೆಯಲ್ಲಿ ಉಲ್ಲೇಖಿಸಿದೆ.

ಕಡೂರು ತಾಲ್ಲೂಕಿನ ಅಣ್ಣೇಗೆರೆ, ಉಡುಗೆರೆ, ಎಮ್ಮೆದೊಡ್ಡಿ, ಕಂಚುಗಲ್, ಕುಂಕಾನಾಡು, ಕೆ.ಬಸವನಹಳ್ಳಿ, ಕೆ.ಬಿದರೆ, ಗುಂಡುಸಾಗರ, ಮಲ್ಲಾಘಟ್ಟ, ಮುಗಳೀಕಟ್ಟೆ, ಯಗಟಿ, ಸಾಣೇಹಳ್ಳಿಯಲ್ಲಿ ಅರಣ್ಯ ಭೂಮಿ ಇದೆ. ಇದೇ ಸರ್ವೆ ನಂಬರ್‌ಗಳಲ್ಲೂ ಸಾಗುವಳಿದಾರರಿಗೆ ಮಂಜೂರಾತಿ ನೀಡಲಾಗಿದೆ. ಮೂಡಿಗೆರೆ ತಾಲ್ಲೂಕಿನ ಮರಸಣಿಗೆ, ಅಂಗಡಿ, ಅಣಜೂರು, ಜಿ.ಹೊಸಹಳ್ಳಿ, ದೇವವೃಂದ, ಮೇಕನಗದ್ದೆ, ಹೆಗ್ಗರವಳ್ಳಿ, ಹೊಸಕೆರೆ, ಗುತ್ತಿ, ಬಾಳೂರು, ಮಾಳಿಗನಾಡು ಸರ್ವೆ ನಂಬರ್‌ಗಳಲ್ಲೂ ಸಾಗುವಳಿ ಸಕ್ರಮಗೊಳಿಸಲಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಅರಣ್ಯ ಇಲಾಖೆ ನೀಡಿರುವ ವರದಿ ತಾಳೆ ಮಾಡಿದಾಗ ಆಕಾರಬಂದ್ ವಿಸ್ತೀರ್ಣಕ್ಕಿಂತ ಹೆಚ್ಚಿನ ಪ್ರದೇಶ ಅರಣ್ಯ ಎಂದು ಗುರುತಿಸಿರುವ 185 ಪ್ರಕರಣ, ಆಕಾರಬಂದ್‌ನಂತೆ ಪೂರ್ಣ ವಿಸ್ತೀರ್ಣ ಅರಣ್ಯ ಎಂದು ಗುರುತಿಸಿರುವ 50 ಪ್ರಕರಣ, ಅರ್ಜಿ ವಹಿಯನ್ನು ತಿದ್ದುಪಡಿ ಮಾಡಿರುವ 9 ಪ್ರಕರಣ ಗಳನ್ನು ಗುರುತಿಸಲಾಗಿದೆ. ಕೆಲವು ಸರ್ವೆ ನಂಬರ್‌ಗಳನ್ನು ದಿಶಾಂಕ್ ತಂತ್ರಾಂಶದಲ್ಲಿ ಪರಿಶೀಲಿಸಿ ಉಪಗ್ರಹ ನಕ್ಷೆ ನೋಡಿದಾಗ ಅರಣ್ಯ ಜಾಗದಲ್ಲೂ ಸಾಗುವಳಿ ಮಾಡುತ್ತಿರುವುದು ಗೊತ್ತಾಗಿದೆ ಎಂದು ವರದಿ ತಿಳಿಸಿದೆ.

‘ಅನೇಕ ಸರ್ವೆ ನಂಬರ್‌ಗಳಲ್ಲಿ ಆಕಾರಬಂದ್ ವಿಸ್ತೀರ್ಣಕ್ಕಿಂತ ಹೆಚ್ಚಿನ ವಿಸ್ತೀರ್ಣ ಅರಣ್ಯ ಎಂದು ಗುರುತಿಸಿರುವುದು ಕಂಡುಬಂದಿದೆ. ಕೆಲವು ಪ್ರಕರಣಗಳಲ್ಲಿ ಅರಣ್ಯ ಇಲಾಖೆ 50 ವರ್ಷಗಳ ಹಿಂದಿನ ಅಧಿಸೂಚನೆ ತೋರಿಸುತ್ತಿದ್ದು, ಇಷ್ಟು ವರ್ಷ ಕಂದಾಯ ದಾಖಲೆಯಲ್ಲಿ ಇಂಡೀಕರಣ ಮಾಡಿಸಲು ಅರಣ್ಯ ಸಿಬ್ಬಂದಿ ಯಾವುದೇ ಕ್ರಮ ಕೈಗೊಂಡಿಲ್ಲದಿರುವುದು ಜಿಜ್ಞಾಸೆ ಮೂಡಿಸುತ್ತದೆ’ ಎಂದು ವರದಿಯಲ್ಲಿ ತನಿಖಾ ತಂಡ ಉಲ್ಲೇಖಿಸಿದೆ.

‘ಅರಣ್ಯ ಇಲಾಖೆಯೂ ವಿಫಲ’

ಅರಣ್ಯ ಇಲಾಖೆ ತನ್ನ ಭೂಮಿಯನ್ನು ರಕ್ಷಣೆ ಮಾಡಿಕೊಳ್ಳಲು ವಿಫಲವಾಗಿದೆ ಎಂಬುದನ್ನೂ ತನಿಖಾ ತಂಡ ತಿಳಿಸಿದೆ.

ಅರಣ್ಯ ಜಾಗ ಎಂದು ಅಧಿಸೂಚನೆಯಾದ ಬಳಿಕ ಇಲಾಖೆ ತನ್ನ ಸುಪರ್ದಿಯಲ್ಲಿ ಇಟ್ಟುಕೊಳ್ಳಲು, ರಕ್ಷಣೆ ಮಾಡಿಕೊಳ್ಳಲು, ಒತ್ತುವರಿ ತೆರವುಗೊಳಿಸಲು ಪ್ರಯತ್ನಿಸದೆ ಇರುವುದು ಕಂಡು ಬಂದಿದೆ.

‘ಅನಧಿಕೃತ ಮಂಜೂರಾತಿ ಪ್ರಕರಣಗಳ ಮಂಜೂರಾತಿಯನ್ನು ರದ್ದುಪಡಿಸಿ, ವಾಪಸ್ ಪಡೆದುಕೊಳ್ಳಲು ಸಂಬಂಧಿಸಿದ ಪ್ರಾಧಿಕಾರಕ್ಕೆ ಅರಣ್ಯ ಇಲಾಖೆ ಮೇಲ್ಮನವಿ ಸಲ್ಲಿಸಿರುವುದೇ ಕಂಡುಬಂದಿಲ್ಲ. ಆದ್ದರಿಂದ ಅರಣ್ಯ ಇಲಾಖೆಯ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ತೀರ್ಮಾನಿಸಬೇಕಾಗಿದೆ’ ಎಂದು ವರದಿಯಲ್ಲಿ ತನಿಖಾ ತಂಡ ತಿಳಿಸಿದೆ.

ನಿಧನ ವಾರ್ತೆ

ಪಿ.ಬಿ.ಡೆಸಾ

ಮಂಗಳೂರು: ಮಾನವ ಹಕ್ಕುಗಳ ಹೋರಾಟಗಾರ ಪಿ.ಬಿ.ಡೆಸಾ (83) ಅವರು ವಯೋಸಹಜ ಅನಾರೋಗ್ಯದಿಂದ ಮಂಗಳವಾರ ಇಲ್ಲಿ ನಿಧನರಾದರು.

ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಪಿಯುಸಿಎಲ್) ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಅವರು ಕರಾವಳಿಯ ವಿವಿಧ ಸಾಮಾಜಿಕ ಸಂಘಟನೆಗಳ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಬಡವರ, ತುಳಿತಕ್ಕೊಳಗಾದವರ ಪರವಾಗಿ ಧ್ವನಿ ಎತ್ತುತ್ತಿದ್ದರು. ಅನೇಕ ಪೊಲೀಸ್ ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ತರ ಪರವಾಗಿ ಕಾನೂನು ಹೋರಾಟ ನಡೆಸಿದ್ದರು. ಕೋಮುವಾದಿ ರಾಜಕಾರಣದ ವಿರುದ್ಧ ಗಟ್ಟಿ ಧ್ವನಿಯಾಗಿದ್ದರು.

ಅವರಿಗೆ ಪತ್ನಿ ವಿನ್ನಿಫ್ರೆಡ್ ಡೆಸಾ, ಪುತ್ರರಾದ ಪ್ರೇಮ್, ಪ್ರವೀಣ್ ಹಾಗೂ ಪುತ್ರಿಯರಾದ ಪ್ರೀತಿಕಾ, ಪ್ರಿಯಾ ಹಾಗೂ ಮೊಮ್ಮಕ್ಕಳು ಇದ್ದಾರೆ.

ದೇಹದಾನ: ಡೆಸಾ ಅವರ ಇಚ್ಛೆಯಂತೆಯೇ ಅವರ ದೇಹವನ್ನು ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನೆಗಾಗಿ ದಾನ ಮಾಡಲು ಕುಟುಂಬಸ್ಥರು ನಿರ್ಧರಿಸಿದ್ದಾರೆ ಎಂದು ಆಪ್ತ ಮೂಲಗಳು ತಿಳಿಸಿವೆ.

ಸುಧಾ, ಮಯೂರ ಓದಿರಿ

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ
ಬಿ-15, ಸೆಕ್ಟರ್-62 ನೋಯ್ಡಾ, ಗೌತಮ ಬುದ್ಧ ನಗರ, ಉತ್ತರ ಪ್ರದೇಶ-201309

ಆನ್ ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕದ ವಿಸ್ತರಣೆಗೆ ಅಧಿಸೂಚನೆ
ತರಗತಿ VI JNVST 2025

ಆಯ್ಕೆ ಪರೀಕ್ಷೆಯ ಮೂಲಕ ಜವಾಹರ ನವೋದಯ ವಿದ್ಯಾಲಯಗಳಲ್ಲಿ 6 ನೇ ತರಗತಿಯ 2025-26 ನೇ ಸಾಲಿಗೆ ದಾಖಲಾತಿಗಾಗಿ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಆಡಳಿತಾತ್ಮಕ ಕಾರಣದಿಂದಾಗಿ ಆನ್ ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 07 ನೇ ಅಕ್ಟೋಬರ್ 2024 ರ ವರೆಗೆ ಮತ್ತಷ್ಟು ವಿಸ್ತರಿಸಲಾಗಿದೆ. ಅಭ್ಯರ್ಥಿಗಳು http://navodaya.gov.in ಅಥವಾ http://cbseitms.rcil.gov.in/nvs ವೆಬ್ ಸೈಟ್ ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದಾಗಿದೆ.
ಪ್ರವೇಶ ಪರೀಕ್ಷೆಗೆ ನೊಂದಾಯಿಸಿಕೊಂಡಿರುವ ಅಭ್ಯರ್ಥಿಗಳು, ಲಿಂಗ (ಗಂಡು/ಹೆಣ್ಣು), ವರ್ಗ (ಸಾಮಾನ್ಯ/ಒ.ಬಿ.ಸಿ./ಎಸ್.ಸಿ./ಎಸ್.ಟಿ), ಪ್ರದೇಶ (ಗ್ರಾಮೀಣ/ನಗರ), ವಿಕಲಚೇತನ ಹಾಗೂ ಪರೀಕ್ಷಾ ಮಾಧ್ಯಮ, ಇವುಗಳ ಪರಿಷ್ಕರಣೆ ಮಾಡಲು ಆನ್‌ಲೈನ್ ತಿದ್ದುಪಡಿ ವಿಂಡೊ (Window) ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದ ನಂತರ ಎರಡು ದಿನಗಳವರೆಗೆ ತೆರೆದಿರುತ್ತದೆ.

ನವೋದಯ ವಿದ್ಯಾಲಯ ಸಮಿತಿ ಪ್ರಕಟಣೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ, ಮಲ್ಲತ್ತಹಳ್ಳಿ, ಬೆಂಗಳೂರು – 560 056.
ದೂರವಾಣಿ: 080-23183311/12 ಇ-ಮೇಲ್: kbbp-bengaluru@ka.gov.in

ಸಂಖ್ಯೆ: ಕುಭಾಪ್ರಾ/58/ಪ್ರಾ.ಪು.ಟೆಂಡರ್/2024-25 ದಿನಾಂಕ: 25.09.2024

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು ವತಿಯಿಂದ ಪ್ರಾಧಿಕಾರದ ವಿವಿಧ 75 ಪುಸ್ತಕಗಳನ್ನು ಮುದ್ರಿಸುವ ಸಲುವಾಗಿ ಆಫ್‌ಸೆಟ್ ಮುದ್ರಣ ಸೌಲಭ್ಯವುಳ್ಳ ಅರ್ಹ ಮುದ್ರಣಾಲಯಗಳಿಂದ ನಿಗದಿತ ನಮೂನೆಯಲ್ಲಿ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್) ಮೂಲಕ ಎರಡು (2) ಬಿಡ್ ವಿಧಾನದಲ್ಲಿ ಇ-ಟೆಂಡರ್ ಕರೆಯಲಾಗಿದೆ. ಟೆಂಡರ್ ಅಂದಾಜು ಮೊತ್ತ: **ರೂ.90,00,000.00** (ರೂಪಾಯಿ ತೊಂಭತ್ತು ಲಕ್ಷ ಮಾತ್ರ) ಗಳು. ನಿಗದಿಪಡಿಸಿದ ಇಎಂಡಿ ಮೊತ್ತ: **ರೂ.2,25,000.00** ಟೆಂಡರನ್ನು ನಿಗದಿಪಡಿಸಲಾದ ನಮೂನೆಯಲ್ಲಿ ಭರ್ತಿಮಾಡಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸುವುದು. ಟೆಂಡರ್ ಫಾರಂ ಇತರೆ ಷರತ್ತು ಮತ್ತು ನಿಬಂಧನೆಗಳ ಇತ್ಯಾದಿ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in** ಅಂತರ್ಜಾಲದ ಮೂಲಕ ಪಡೆದು ದಿನಾಂಕ: **25.10.2024** ರೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080-23183311/12

ಸಹಿ/- ರಿಜಿಸ್ಟ್ರಾರ್
DIPR/CP/BCPL/2154/2024-25

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ರಿಚ್ ಮಂಡ್ ರಸ್ತೆ (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ), ಬೆಂಗಳೂರು-25
ದೂರವಾಣಿ : 080-25584102 / 25594893
Website: www.ksphc.org e mail : eecontractksphc@gmail.com,
ಸಂಖ್ಯೆ: ಕಾಅ/ಕರಾಪೊವ&ಮೂಸೌಅನಿನಿ/ಕಾಂಟ್ರಾಕ್ಟ್/ಟೆಂಡರ್/07/2024-25/269 ದಿನಾಂಕ: 24.09.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕರಾಪೊವ ಮತ್ತು ಮೂಸೌಅನಿನಿ ಕರ್ನಾಟಕ ಪಾರದರ್ಶಕತೆ 2000 ಕಾಯ್ದೆ ಹಾಗೂ ಸ್ಟಾಂಡರ್ಡ್ ಟೆಂಡರ್ ದಾಖಲಾತಿ ಪ್ರಕಾರ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ **https://kppp.karnataka.gov.in** ಮೂಲಕ ಆನ್‌ಲೈನ್ ಟೆಂಡರ್ ಅನ್ನು ಆಹ್ವಾನಿಸಿದೆ.

1) ಬೆಂಗಳೂರಿನ ಹೆಗ್ಗಡೆನಗರದಲ್ಲಿರುವ ಪೊಲೀಸ್ ವಸತಿ ಗೃಹಗಳಿಗೆ (CAR ಉತ್ತರ) UGD ಕೆಲಸಗಳನ್ನು ಒದಗಿಸುವುದು (ಎರಡು ಟೆಂಡರ್ ಡಾಕ್ಯುಮೆಂಟ್ ವ್ಯವಸ್ಥೆ). ಅಂದಾಜು ಮೊತ್ತ ರೂ.200.00 ಲಕ್ಷಗಳು.
2) ಬಾಗಲಕೋಟೆ ಜಿಲ್ಲೆಯ ಇಳಕಲ್‌ನಲ್ಲಿ ಗ್ರಾಮೀಣ ಪೊಲೀಸ್ ಠಾಣೆ (ಗ್ರೇಡ್-5) ನಿರ್ಮಾಣ. (ಎರಡು ಟೆಂಡರ್ ಡಾಕ್ಯುಮೆಂಟ್ ವ್ಯವಸ್ಥೆ). ಅಂದಾಜು ಮೊತ್ತ ರೂ.194.38 ಲಕ್ಷಗಳು.
3) ವಿಜಯಪುರ ಜಿಲ್ಲೆಯ ಆಲಮೇಲದಲ್ಲಿ ಪೊಲೀಸ್ ಠಾಣೆ (ಗ್ರೇಡ್-4) ನಿರ್ಮಾಣ. (ಎರಡು ಟೆಂಡರ್ ಡಾಕ್ಯುಮೆಂಟ್ ವ್ಯವಸ್ಥೆ). ಅಂದಾಜು ಮೊತ್ತ ರೂ.113.10 ಲಕ್ಷಗಳು.
4) ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿಯಲ್ಲಿ ಗ್ರಾಮೀಣ ಪೊಲೀಸ್ ಠಾಣೆ (ಗ್ರೇಡ್-5) ನಿರ್ಮಾಣ. (ಎರಡು ಟೆಂಡರ್ ಡಾಕ್ಯುಮೆಂಟ್ ವ್ಯವಸ್ಥೆ). ಅಂದಾಜು ಮೊತ್ತ ರೂ.113.10 ಲಕ್ಷಗಳು.

ಆಸಕ್ತ ಅರ್ಹ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇ.ಎಂ.ಡಿ, ಟೆಂಡರ್ ಡಾಕ್ಯುಮೆಂಟ್‌ಗಳು ಇತ್ಯಾದಿ ವಿವರಗಳು **30.09.2024 ರಿಂದ** ಕೆಪಿಪಿ ಪೋರ್ಟಲ್‌ನಲ್ಲಿ ಲಭ್ಯವಿವೆ. ಕರಾಪೊವ ಮತ್ತು ಮೂಸೌಅನಿನಿ ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿದೆ.
ಸೂಚನೆ: ಇನ್ನು ಮುಂದೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ / ಮಾರ್ಪಾಡು ಇದ್ದಲ್ಲಿ ಇದನ್ನು ಕೆಪಿಪಿ ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು.

DIPR/CP/RO2147/AAPL/2024-25 ಸಹಿ/- ಕಾರ್ಯನಿರ್ವಾಹಕ ಅಭಿಯಂತರರು-ಗುತ್ತಿಗೆ

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು-560070.
ಸಂ: ಕಾಅ/ಪಂರಾಇವಿ/ಬೆಂನ/ಎಇ-1/ಟೆಂಡರ್/22/2024-25 ದಿನಾಂಕ: 23.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 22/2024-25
(ದ್ವಿ ಲಕೋಟೆ ಪದ್ಧತಿ) (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ DSERT Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ-ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **01-10-2024 ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ, ಬೆಂಗಳೂರು
DIPR/CP/2152/SPAN/2024-25

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರ ಕಛೇರಿ-3 (BSWML)
1ನೇ ಮಹಡಿ, ಯುಎನ್ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು-560052
ನಂ.: ಡಿಜಿಎಂ-3/(ಬಿಎಸ್‌ಡಬ್ಲ್ಯುಎಂಎಲ್)/ಟೆಂಡರ್-3/ತಿದ್ದುಪಡಿ-01/24-25 ದಿನಾಂಕ: 24.09.2024

ತಿದ್ದುಪಡಿ-1

ವಿಷಯ: ಟೆಂಡರ್ ಅಧಿಸೂಚನೆಯ ವೇಳಾಪಟ್ಟಿ ವಿಸ್ತರಣೆ.
ಉಲ್ಲೇಖ: ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: ಡಿಜಿಎಂ-3/ಬಿಎಸ್‌ಡಬ್ಲ್ಯುಎಂಎಲ್/ಟೆಂಡರ್/03/24-25, ದಿನಾಂಕ: 31.08.2024
ಮೇಲಿನ ವಿಷಯ ಮತ್ತು ಉಲ್ಲೇಖದಂತೆ ಮೇಲಿನ ಟೆಂಡರ್ ಅಧಿಸೂಚನೆಯ ಕಾರ್ಯಕ್ರಮಗಳ ವೇಳಾಪಟ್ಟಿಯನ್ನು ಆಡಳಿತ ಮತ್ತು ತಾಂತ್ರಿಕ ಕಾರಣಗಳಿಂದ ವಿಸ್ತರಿಸಲಾಗಿದೆ. ವೇಳಾಪಟ್ಟಿ / ಇವೆಂಟ್ಸ್‌ನ ಕ್ಯಾಲೆಂಡರ್:

ಕ್ರ. ಸಂ.		ಟೆಂಡರ್ ಅಧಿಸೂಚನೆಯ ಪ್ರಕಾರ	ವಿಸ್ತರಿಸಿದ ದಿನಾಂಕಗಳನ್ನು ದಯವಿಟ್ಟು ಹೀಗೆ ಓದಿ
1	ಅರ್ಹತಾ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	26.09.2024ರ ಸಂಜೆ 4:00 ಗಂಟೆವರೆಗೆ	14.10.2024ರ ಸಂಜೆ 4:00 ಗಂಟೆವರೆಗೆ
2	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	27.09.2024ರ ಸಂಜೆ 4:30 ಗಂಟೆವರೆಗೆ	15.10.2024ರ ಸಂಜೆ 4:30 ಗಂಟೆವರೆಗೆ

ಹೆಚ್ಚಿನ ಮಾಹಿತಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ಗೆ ಭೇಟಿ ನೀಡಿ.
ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು-3, ಬಿಎಸ್‌ಡಬ್ಲ್ಯುಎಂಎಲ್
ವಾಸಾಸಂಇ/ವಾಪ್ರ/ಎಲ್‌ಸಿ/2166/2024-25

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080-26961928 ಫ್ಯಾಕ್ಸ್-080-26961929
ಸಂಖ್ಯೆ: ರಾಗಾವಿ/ಪ್ರೊಕ್/ಸಿಡಿಸಿಎಫ್/106/2024-25 ದಿನಾಂಕ: 23.09.2024

ಇ-ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಪದವಿ ಪ್ರಮಾಣ ಪತ್ರಗಳ ಫೋಲ್ಡರ್ ಮತ್ತು ಫೋಲ್ಡರ್ ಕವರ್ಸ್ ಹಾಗೂ ಇತರೆ ಕವರ್‌ಗಳನ್ನು ಸರಬರಾಜು ಮಾಡಲು ಟೆಂಡರನ್ನು ಆಹ್ವಾನಿಸಿದ್ದಾರೆ. ಸೇವೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಲಗತ್ತಿಸಿರುವ ಉಲ್ಲೇಖಿತ ಷರತ್ತುಗಳಲ್ಲಿ ಒದಗಿಸಲಾಗಿದೆ. **(Tender Reference Number: RGUHSK/2024-25/IND0015/Call-2)**

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	24/09/2024 ಮಧ್ಯಾಹ್ನ 13:30 ಗಂಟೆಗೆ
ಬಿಡ್ ಪೂರ್ವಭಾವಿ ಸಭೆಯ ದಿನಾಂಕ	27/09/2024 ಬೆಳಿಗ್ಗೆ 11:30 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	01/10/2024 ಸಂಜೆ 5:29 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	03/10/2024 ಬೆಳಿಗ್ಗೆ 11:30 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	05/10/2024 ಬೆಳಿಗ್ಗೆ 11:30 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು. ಸಹಿ/-
ಡಿಐಪಿಆರ್/ಎಸ್‌ಐ/2160/2024-25 ಕುಲಸಚಿವರು (ಮೌಲ್ಯಮಾಪನ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಯೋಜನೆ ದಕ್ಷಿಣ, ದಕ್ಷಿಣ ವಲಯ ಕಚೇರಿ, 9ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜಯನಗರ 2ನೇ ಬ್ಲಾಕ್, ಬೆಂಗಳೂರು – 560 011.
ಸಂಖ್ಯೆ:ಕಾಪಾಅಯೋ(ದ)/ಕೆಪಿಪಿಪಿ/ಇ-ಪೋರ್ಟಲ್/08/2024-25ದಿನಾಂಕ:24.09.2024

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಕಂಡ ಸೇವೆಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು
1	ಬೃ.ಬೆಂ.ಮ.ಪಾಲಿಕೆ ದಕ್ಷಿಣ ಕ್ಲಿನಿಕಲ್ ವಿಭಾಗದಲ್ಲಿ ರೆಫೆರಲ್ ಆಸ್ಪತ್ರೆಗಳಿಗೆ ಮತ್ತು ಹೆರಿಗೆ ಕೇಂದ್ರಗಳಿಗೆ ಪ್ಯಾರಾಮೆಡಿಕಲ್ ಸಿಬ್ಬಂದಿಗಳನ್ನು ಒದಗಿಸುವುದು. **ಟೆಂಡರಿಗಿಟ್ಟ ಅಂದಾಜು ಮೊತ್ತ ₹.92,19,432/- ಇಎಂಡಿ ಮೊತ್ತ: ₹.1,84,400/-**

ಟೆಂಡರ್ ವೇಳಾಪಟ್ಟಿ: (1). ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ 14.10.2024ರ ಸಂಜೆ 4:00 ಗಂಟೆಗೆ ಅಥವಾ ಮುಂಚಿತವಾಗಿ. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 30.09.2024ರ ಮಧ್ಯಾಹ್ನ 3:00 ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 14.10.2024ರ ಸಂಜೆ 4:00 ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 16.10.2024ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳಿಗೆ ಅನುಮೋದನೆ ದೊರೆತ ನಂತರ ಅಥವಾ ದಿನಾಂಕ 18.10.2024ರ ಸಂಜೆ 4:30 ಗಂಟೆಗೆ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನೆ ದಕ್ಷಿಣ

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರ ಕಛೇರಿ-3 (BSWML)
1ನೇ ಮಹಡಿ, ಯುಎನ್ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು-560052
ನಂ.: ಡಿಜಿಎಂ-3/(ಬಿಎಸ್‌ಡಬ್ಲ್ಯುಎಂಎಲ್)/ಟೆಂಡರ್-2/ತಿದ್ದುಪಡಿ-01/24-25 ದಿನಾಂಕ: 24.09.2024

ತಿದ್ದುಪಡಿ-1

ವಿಷಯ: ಟೆಂಡರ್ ಅಧಿಸೂಚನೆಯ ವೇಳಾಪಟ್ಟಿ ವಿಸ್ತರಣೆ.
ಉಲ್ಲೇಖ: ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: ಡಿಜಿಎಂ-3/ಬಿಎಸ್‌ಡಬ್ಲ್ಯುಎಂಎಲ್/ಟೆಂಡರ್/02/24-25, ದಿನಾಂಕ: 31.08.2024
ಮೇಲಿನ ವಿಷಯ ಮತ್ತು ಉಲ್ಲೇಖದಂತೆ ಮೇಲಿನ ಟೆಂಡರ್ ಅಧಿಸೂಚನೆಯ ಕಾರ್ಯಕ್ರಮಗಳ ವೇಳಾಪಟ್ಟಿಯನ್ನು ಆಡಳಿತ ಮತ್ತು ತಾಂತ್ರಿಕ ಕಾರಣಗಳಿಂದ ವಿಸ್ತರಿಸಲಾಗಿದೆ. ವೇಳಾಪಟ್ಟಿ / ಇವೆಂಟ್ಸ್‌ನ ಕ್ಯಾಲೆಂಡರ್:

ಕ್ರ. ಸಂ.		ಟೆಂಡರ್ ಅಧಿಸೂಚನೆಯ ಪ್ರಕಾರ	ವಿಸ್ತರಿಸಿದ ದಿನಾಂಕಗಳನ್ನು ದಯವಿಟ್ಟು ಹೀಗೆ ಓದಿ
1	ಅರ್ಹತಾ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ	26.09.2024ರ ಸಂಜೆ 4:00 ಗಂಟೆವರೆಗೆ	14.10.2024ರ ಸಂಜೆ 4:00 ಗಂಟೆವರೆಗೆ
2	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	27.09.2024ರ ಸಂಜೆ 4:30 ಗಂಟೆವರೆಗೆ	15.10.2024ರ ಸಂಜೆ 4:30 ಗಂಟೆವರೆಗೆ

ಹೆಚ್ಚಿನ ಮಾಹಿತಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ಗೆ ಭೇಟಿ ನೀಡಿ.
ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು-3, ಬಿಎಸ್‌ಡಬ್ಲ್ಯುಎಂಎಲ್
ವಾಸಾಸಂಇ/ವಾಪ್ರ/ಎಲ್‌ಸಿ/2165/2024-25

ನಗರಸಭಾ ಕಾರ್ಯಾಲಯ, ಅರಸೀಕೆರೆ.
ದೂ ಸಂ: 08174-232201 ಫ್ಯಾಕ್ಸ್ ನಂ: 08174-233274
ಈ ಮೇಲ್ ವಿಳಾಸ: itstaff_ulb_arasikere@yahoo.com
ವೆಬ್‌ಸೈಟ್ ವಿಳಾಸ: www.arasikeretown.mrc.gov.in
ನಂ:ನ.ಸ.ಅ /ಘ.ವ.ನಿ/ಎಸ್.ಬಿ.ಎಂ2.0/ಎಲ್.ಇ.ಡಿ, ಪೌ.ಕಪಾಟು&ಪ.ನಿ/01/2024-25 ದಿನಾಂಕ :23-09-2024.

-: ಟೆಂಡರ್ ಪ್ರಕಟಣೆ:-

(ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ) ಅರಸೀಕೆರೆ ನಗರಸಭೆ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ನಗರಸಭೆಯ ಶೇ 29.00 ರ ಎಸ್.ಎಫ್.ಸಿ, ಎಸ್ ಬಿ ಎಮ್ ಯೋಜನೆ ಮತ್ತು 2024-25 ನಗರಸಭಾ ನಿಧಿ ಅಡಿಯಲ್ಲಿ, ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದ್ದೇಶ 1999-2000 ಪ್ರಕಾರ ಆಕ್ಟ್ 2000 ನಿಯಮದಂತೆ Karnataka Standard Tender Document -KW1 & KC8 ರ ಪ್ರಕಾರ ದ್ವಿ ಲೋಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಕರ್ನಾಟಕ ಸಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಪೋರ್ಟಲ್:-http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಕ್ರ.ಸಂ.1)ವಿವರ: DMA/2024-25/IND3481 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ): 14.99 2)DMA/2024-25/OW/WORK_INDENT30139 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ): 4.15 3)DMA/2024-25/IND3764 ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ): 12.65 ಹೆಚ್ಚಿನ ವಿವರಗಳನ್ನು www.kppp.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಪೌರಾಯುಕ್ತರು, ನಗರಸಭೆ ಅರಸೀಕೆರೆ/ಸಹಾಯಕ ಕಾರ್ಯಪಾಲಕ ಅಭಿಯಂತರರು(ಪರಿಸರ), ನಗರಸಭೆ ಅರಸೀಕೆರೆ ಈ ಕಛೇರಿಯಲ್ಲಿ ಪಡೆಯಬಹುದು.

ಸಹಿ/-ಅಧ್ಯಕ್ಷರು, ನಗರಸಭೆ, ಅರಸೀಕೆರೆ. ಸಹಿ/- ಪೌರಾಯುಕ್ತರು, ನಗರಸಭೆ, ಅರಸೀಕೆರೆ.
ವಾಸಾಸಂಇ/ಹಿಸನಿ/ಹಾಸನ/483/ಕೆಎಸ್‌ಎಂಸಿಎ/2024-25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿ / ಸರಕುಗಳಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ಕ್ರ. ಸಂ.	ವಿಚಾರಣಾ ಸಂಖ್ಯೆ/ ಕಾಮಗಾರಿಯ ವಿವರ
	ಸಂಖ್ಯೆ: ಮುಇಂವಿ/ಟಿಮತುಪಿ/ಅಇಂ-1/ಇಇಟಿ6/ಕೆಸಿಒ171/65145/2024-25/4093-4114 ದಿನಾಂಕ:24.09.2024
1	**ಕವಿಪ್ರನಿನಿ/2024-25/ ಟಿಎಲ್ /ವರ್ಕ್_ಇಂಡೆಂಟ್1248** ಕೋಲಾರ ಜಿಲ್ಲೆ ಮತ್ತು ತಾಲ್ಲೂಕಿನಲ್ಲಿ 6.355 ಕಿಮೀ ಉದ್ದಕ್ಕೆ ಹಾಲಿಯಿರುವ 220ಕೆವಿ ಕೋಲಾರ ಹೆಚ್‌ವಿಡಿಸಿ (ಪಿಜಿಸಿಐಎಲ್)- ಕೋಲಾರ ಡಿಸಿ ಮಾರ್ಗದಲ್ಲಿನ ಡ್ರೇಕ್ ಕಂಡಕ್ಟರನ್ನು ಹೈ ಪರ್ಫಾರ್ಮೆನ್ಸ್ ಕಂಡಕ್ಟರ್ನೊಂದಿಗೆ (ಹೆಚ್ ಪಿ ಸಿ) ಬದಲಿಸಿ ಮಾರ್ಗವನ್ನು ಬಲಪಡಿಸುವುದು ಮತ್ತು 220/66 ಕೆವಿ ಕೋಲಾರ ಉಪಕೇಂದ್ರದಲ್ಲಿ ಹಾಲಿಯಿರುವ ಪಿಜಿಸಿಐಎಲ್-1 & 2 ಟರ್ಮಿನಲ್ ಬೇಗಳ ಮತ್ತು 400/220 ಕೆವಿ ಪಿಜಿಸಿಐಎಲ್ ಉಪಕೇಂದ್ರದಲ್ಲಿ ಹಾಲಿಯಿರುವ ಕೋಲಾರ-1 & 2 ಟರ್ಮಿನಲ್ ಬೇಗಳ ಮಾರ್ಪಾಡು ಮಾಡುವ ಹಾಗೂ ಕಳಚುವ (Dismantling) ಕಾಮಗಾರಿಗಳನ್ನು ಸಂಪೂರ್ಣ ಟರ್ನ್ ಕೀ ಆಧಾರದ ಮೇಲೆ ನಿರ್ಮಾಣ ಮಾಡುವುದು.
	ಸಂಖ್ಯೆ: ಮುಇಂವಿ(ಟಿಮತುಪಿ)/ಅಇಂವಿ-2/ಇಇಟಿ12ಎನ್/ಕೆಸಿಒ173/2024-25/4136-39 ದಿನಾಂಕ:24.09.2024
2	**KPTCL/2024-25/IND0109** 133 ಸಂಖ್ಯೆಗಳ ಹ್ಯೂಮನ್ ಫೈರ್ ರೆಸ್ಕ್ಯೂ ಶೀಟ್ (Human Fire Rescue Sheet) ಗಳನ್ನು ವಿಶೇಷಣಗಳಿಗೆ ಅನುಗುಣವಾಗಿ ಸರಬರಾಜು ಮಾಡುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ ‘**ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ**’ ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ **26.09.2024 ರಂದು 15.00 ಗಂಟೆ ಅಥವಾ ನಂತರದಿಂದ** ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **28.10.2024 15.00 ಗಂಟೆ.** ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು. ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/- ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, ಕಾವೇರಿ ಭವನ, 3ನೇ ಮಹಡಿ, ಬೆಂಗಳೂರು – 560 009, ದೂರವಾಣಿ : 080-22274744.

ಕರ್ನಾಟಕ ಸರ್ಕಾರ
ಉಪ ನಿರ್ದೇಶಕರು(ಗ್ರಾಕೈ) ರವರ ಕಛೇರಿ,
ಗ್ರಾಮಾಂತರ ಕೈಗಾರಿಕಾ ವಿಭಾಗ, ಜಿಲ್ಲಾ ಪಂಚಾಯತ್, ಎ.ಟಿ.ಐ.ಬಿಲ್ಡಿಂಗ್, ಸ್ಟೇಡಿಯಂ ರೋಡ್, ಚಿತ್ರದುರ್ಗ-577501. ಫೋನ್:08194-295979
ಸಂಖ್ಯೆ:ಉನಿ(ಗ್ರಾಕೈ):ಜಿಪಂಚಿ/ಗ್ರಾಕೈ/ಹೊ.ಯ/ಇ-ಟೆಂಡರ್/2024-25 ದಿನಾಂಕ:23-09-2024

ಟೆಂಡರ್ ಅಧಿಸೂಚನೆ

ಉಪನಿರ್ದೇಶಕರು(ಗ್ರಾಕೈ), ಗ್ರಾಮಾಂತರ ಕೈಗಾರಿಕೆ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಕಛೇರಿಯ ಅನುಮೋದಿತ ಕ್ರಿಯಾಯೋಜನೆಯ ಪ್ರಕಾರ 2024-25ನೇ ಸಾಲಿಗೆ ಜಿಲ್ಲಾ ಉದ್ಯಮ ಕೇಂದ್ರ ಯೋಜನೆಯ ಲೆಕ್ಕಶೀರ್ಷಿಕೆ:2851-00-107-0-27 ಅಡಿಯಲ್ಲಿ ಗ್ರಾಮೀಣ ಭಾಗದ ವೃತ್ತಿನಿರತ ಮಹಿಳಾ ಫಲಾನುಭವಿಗಳಿಗೆ 525 ಹೊಲಿಗೆ ಯಂತ್ರಗಳನ್ನು ತಲಾ ರೂ. 8,000-00 ಮೌಲ್ಯದ ಹೊಲಿಗೆ ಯಂತ್ರಗಳನ್ನು ನೀಡುವ ಕಾರ್ಯಕ್ರಮವಿದ್ದು, ಅವರುಗಳಿಗೆ ಹೊಲಿಗೆ ಯಂತ್ರಗಳನ್ನು ಸರಬರಾಜು ಮಾಡಲು ಅರ್ಹ ಉತ್ಪದಕರಿಂದ/ ಅಧಿಕೃತ ಸರಬರಾಜುದಾರರು/ಸಬ್‌ಡೀಲರ್‌ರಿಂದ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಮೂಲಕ ದರಪಟ್ಟಿಗಳನ್ನಯ ಆಹ್ವಾನಿಸಲಾಗಿದೆ.
ವಿವರ:- (1) ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ IC/2024-25/IND0072 ದಿನಾಂಕ:23-09-2024 (2) ಟೆಂಡರ್ ಅಧಿಸೂಚನೆ ಹೊರಡಿಸಿದ ದಿನಾಂಕ ದಿನಾಂಕ: 23-09-2024 (3) ಟೆಂಡರ್‌ಅವಧಿ ದಿನಾಂಕ:23-09-2024 ರಿಂದ ದಿನಾಂಕ: 10-10-2024 ರವರೆಗೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ) (4) ಇ.ಎಂ.ಡಿ. ಮೊತ್ತ ಇ-ಪ್ರೊಕ್ಯೂರ್‌ಮೆಂಟ್ ಪ್ರಕಾರ ಅಂದಾಜು ರೂ. 1,52,000-00 @ 2.50%ರಂತೆ (5) ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:10-10-2024ರ ಸಂಜೆ 5.00 ಗಂಟೆ ವರೆಗೆ (6) ಮಾದರಿ ಹೊಲಿಗೆಯಂತ್ರ ಇಡುವ ದಿನಾಂಕ 09-10-2024 ಸಂಜೆ 5.00 ಗಂಟೆ ಒಳಗಾಗಿ (7) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 14-10-2024 ಬೆಳಿಗ್ಗೆ 11.00 ಗಂಟೆಗೆ (8) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 16-10-2024 ಬೆಳಿಗ್ಗೆ 11.00 ಗಂಟೆಗೆ
ಮೇಲೆ ತಿಳಿಸಿರುವ ವಿವರಗಳನ್ವಯ ಹಾಗೂ ಕೆಳಕಂಡ ಷರತ್ತುಗಳನ್ವಯ ಐ.ಎಸ್.ಐ. ಮಾರ್ಕ್ ಹೊಂದಿರುವ ಬ್ರಾಂಡೆಡ್ ಹೊಲಿಗೆಯಂತ್ರ ಸರಬರಾಜು ಮಾಡಲು ಇಚ್ಛಿಸಿದ ಅಧಿಕೃತ ಮಾರಾಟಗಾರರು/ತಯಾರಕರು ನಿಗದಿತ ಅವಧಿಯೊಳಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ದಾವಣಗೆರೆ/275/ಕೆಎಸ್‌ಎಂಸಿಎ/2024-25 ಸಹಿ/- ಉಪನಿರ್ದೇಶಕರು (ಗ್ರಾಕೈ), ಗ್ರಾಮಾಂತರ ಕೈಗಾರಿಕಾ ವಿಭಾಗ, ಜಿಲ್ಲಾ ಪಂಚಾಯತ್, ಚಿತ್ರದುರ್ಗ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಐ.ಎಫ್.ಟಿ ಸಂಖ್ಯೆ 07/2024-25 ದಿನಾಂಕ: 21.09.2024

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಹುಣಸೂರು ಲೋಕೋಪಯೋಗಿ ವಿಶೇಷ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೋಕೋಪಯೋಗಿ ಇಲಾಖೆಯಲ್ಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ನೊಂದಾಯಿತ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು “ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್” ನಲ್ಲಿನ ಷರತ್ತುಗಳಿಗನುಗುಣವಾಗಿ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ 10-ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ದಿನಾಂಕ: 21.09.2024 ರಿಂದ ಟೆಂಡರು ದಾಖಲಾತಿಗಳನ್ನು https://kppp.karnataka.gov.in ವೆಬ್ ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರಿಗಿಟ್ಟ ಮೊತ್ತ ಗರಿಷ್ಠ 837.08 ಲಕ್ಷಗಳು ಮತ್ತು ಕನಿಷ್ಟ 11.00 ಲಕ್ಷಗಳು, ಗರಿಷ್ಟ ಇ.ಎಂ.ಡಿ ರೂ.12,55,620/- ಮತ್ತು ಕನಿಷ್ಟ ರೂ.27,500/- ಗುತ್ತಿಗೆ ಕಾಲಾವಧಿ ಗರಿಷ್ಟ 12-ತಿಂಗಳು ಮತ್ತು ಕನಿಷ್ಟ 45-ದಿನಗಳು ಆಗಿರುತ್ತದೆ. ಹಾಗೂ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ ಟೆಂಡರ್ ಅಧಿಸೂಚನೆಯ ಕ್ರ.ಸಂ 1-8 ದಿನಾಂಕ: 30.09.2024 ಮತ್ತು ಕ್ರ.ಸಂ 8-9 ದಿನಾಂಕ: 05.10.2024 ಮತ್ತು ಕ್ರ.ಸಂ 10 ದಿನಾಂಕ: 21.10.2024 ಎಂದು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರು ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು
DIPR/DDMYS-606/KSMCA-406/2024-25

ಲೋಕೋಪಯೋಗಿ ಇಲಾಖೆ, ತುಮಕೂರು
ಕ್ರ.ಸಂ:ಕಾಇಂ:ಲೋಇವಿ:ತುಮ:ಸಇಂ-2: ಟೆಂಡರ್ 18:2024-25 ದಿನಾಂಕ: 23-09-2024

ಟೆಂಡರ್ ಪ್ರಕಟಣೆ ಸಂ. 18/2024-25 ದಿನಾಂಕ 23-09-2024

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 18/2024-25: ದಿನಾಂಕ 23-09-2024ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054 ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳ ನವೀಕರಣ ಮತ್ತು 3054 ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆ ಅಡಿಯಲ್ಲಿ 03 ಕಾಮಗಾರಿಗಳಿಗೆ ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ **ರೂ: 200.69 ಲಕ್ಷ**ಗಳು ಹಾಗೂ ಕನಿಷ್ಠ **3.94 ಲಕ್ಷ**ಗಳು, ಮತ್ತು ಇ.ಎಂ.ಡಿ ಮೊತ್ತ **ರೂ. 3,01,030/-** ಹಾಗೂ **ರೂ. 9850/-** ಅರ್ಹ ಗುತ್ತಿಗೆದಾರರು : 2,3&4 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 3 ರಿಂದ 6 ತಿಂಗಳು, ಹಾಗೂ ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **01-10-2024 ರಂದು 16 ಗಂಟೆ**ಗೆ, ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ದಿನಾಂಕ **24-09-2024 ರಿಂದ 03-10-2024 16.00 ಗಂಟೆ**ವರೆಗೆ ಪಡೆಯಬಹುದಾಗಿದೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **04-10-2024 ರ 16-30 ಗಂಟೆ**ಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: **05-10-2024 ರ 12-00 ಗಂಟೆ**ಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: **www.Kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.

ಸಹಿ/- ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು
DIPR/TUM/RO-23/24-25/Oysters

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಇಂದ್ರಿಯಗಳ ದಾಸನು ದುಃಖದ ದಾಸನೂ ಆಗುತ್ತಾನೆ.
–ಆಲ್ಬರ್ಟ್ ಐನ್‌ಸ್ಟೀನ್

ಆರ್ಥಿಕ ಬಿಕ್ಕಟ್ಟಿನಲ್ಲಿರುವ ಶ್ರೀಲಂಕಾ ಪುನಶ್ಚೇತನಕ್ಕೆ ಒಂದು ಅವಕಾಶ

ಜನತಾ ವಿಮುಕ್ತಿ ಪೆರಮುನ (ಜೆವಿಪಿ) ನೇತೃತ್ವದ ನ್ಯಾಷನಲ್ ಪೀಪಲ್ಸ್ ಪವರ್ ಮೈತ್ರಿಕೂಟದ ನಾಯಕ ಅನುರಾ ಕುಮಾರ ದಿಸನಾಯಕೆ ಅವರು ಶ್ರೀಲಂಕಾದ ಅಧ್ಯಕ್ಷರಾಗಿ ಆಯ್ಕೆ ಆಗಿರುವುದು ಅನಿರೀಕ್ಷಿತವೇನೂ ಅಲ್ಲ. ಎ.ಕೆ.ಡಿ. ಎಂದೇ ಜನಪ್ರಿಯರಾಗಿರುವ ಅನುರಾ ಅವರು 'ವ್ಯವಸ್ಥೆ ಬದಲಾವಣೆ'ಗಾಗಿ ತಮ್ಮನ್ನು ಆಯ್ಕೆ ಮಾಡಿ ಎಂದು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮನವಿ ಮಾಡಿದ್ದರು. ರಾಜಪಕ್ಸ ಸಹೋದರರಾದ ಅಂದಿನ ಅಧ್ಯಕ್ಷ ಗೊಟಬಯ ಮತ್ತು ಅಂದಿನ ಪ್ರಧಾನಿ ಮಹಿಂದ ಅವರು ಅಧಿಕಾರದಿಂದ ಹೊರನಡೆಯಬೇಕಾದ ಸ್ಥಿತಿ ನಿರ್ಮಾಣವಾದ 2022ರಲ್ಲಿ ನಡೆದ ದಂಗೆಯ ಸಂದರ್ಭದಲ್ಲಿಯೇ 'ವ್ಯವಸ್ಥೆ ಬದಲಾವಣೆ'ಯ ಕಹಳೆ ಮೊಳಗಿತ್ತು. ಈ ಇಬ್ಬರ ಉಚ್ಚಾಟನೆಯ ಬಳಿಕ, ನಾಯಕತ್ವದಲ್ಲಿ ನಿಜವಾದ ಬದಲಾವಣೆ ಆಗಬೇಕು ಎಂದು ಜನರು ಬಯಸಿದ್ದರು. ನಿರ್ಗಮಿತ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಅವರು ಜನರು ಬಯಸಿದ್ದ ಬದಲಾವಣೆಯನ್ನು ಪ್ರತಿನಿಧಿಸುತ್ತಿರಲಿಲ್ಲ. ಆರ್ಥಿಕ ಬಿಕ್ಕಟ್ಟಿನಿಂದ ತತ್ತರಿಸಿದ್ದ ಶ್ರೀಲಂಕಾಕ್ಕೆ 290 ಕೋಟಿ ಡಾಲರ್ ಸಾಲ ನೀಡುವಾಗ ಐ.ಎಂ.ಎಫ್. ವಿಧಿಸಿದ್ದ ಕಠಿಣ ಷರತ್ತುಗಳ ಹೊರೆಯನ್ನು ಇಳಿಸುವುದಾಗಿ ಅನುರಾ ಅವರು ಜನರಿಗೆ ಭರವಸೆ ಕೊಟ್ಟಿದ್ದಾರೆ. ಈ ಸಾಲದ ಹೊರೆಯು ಜನರ ಆರ್ಥಿಕ ಮುಗ್ಗಟ್ಟನ್ನು ಇನ್ನಷ್ಟು ಹೆಚ್ಚಿಸಿದೆ. ಈಗ, ಅನುರಾ ಅವರು ತಮ್ಮ ಭರವಸೆಯನ್ನು ಈಡೇರಿಸಬೇಕಾಗಿದೆ. 225 ಸದಸ್ಯ ಬಲದ ಸಂಸತ್ತನ್ನು ವಿಸರ್ಜಿಸುವುದು ಅವರ ಮುಂದಿನ ಹೆಜ್ಜೆ ಆಗಬಹುದು. ಸಂಸತ್ತಿನಲ್ಲಿ ಈಗ ಜೆವಿಪಿ ಹೊಂದಿರುವುದು ಮೂವರು ಸದಸ್ಯರನ್ನು ಮಾತ್ರ. ಅಧ್ಯಕ್ಷರಾಗಿ ಅನುರಾ ಅವರು ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸುವ ಸ್ಪಷ್ಟ ಯೋಜನೆಯನ್ನು ಜನರ ಮುಂದೆ ಇರಿಸಿದ್ದಾರೆ. ಹೆಚ್ಚು ವ್ಯಾಪಕವಾದ ರಾಜಕಾರಣಿಯಂತೆ ಅವರು ಕಾಣಿಸುತ್ತಿದ್ದಾರೆ; ಜೆವಿಪಿಯ ಕ್ರಾಂತಿಕಾರಿ ಎಡಪಂಥೀಯ ನಿಲುವು ಮತ್ತು ಪಕ್ಷದ ಸಿಂಹಳೀಯ ಅಸ್ಮಿತೆ ಈ ಎರಡನ್ನೂ ಅವರು ಬದಿಗೆ ಸರಿಸಿದ್ದಾರೆ.

ಚೀನಾದ ಜೊತೆಗಿನ ಜೆವಿಪಿಯ ಸಂಬಂಧವನ್ನು ಅನುರಾ ಅವರು ಹೇಗೆ ನಿರ್ವಹಿಸಲಿದ್ದಾರೆ ಎಂಬುದರ ಮೇಲೆ ಅವರ ಬಗೆಗಿನ ಭಾರತದ ಗ್ರಹಿಕೆಯು ರೂಪುಗೊಳ್ಳಲಿದೆ

ಜೆವಿಪಿಗೆ ಭಾರತ ವಿರೋಧಿ ನಿಲುವಿನ ಇತಿಹಾಸವೂ ಇದೆ. ಜೊತೆಗೆ ಪಕ್ಷವು ಚೀನಾ ಪರ ವಾಲಿಕೊಂಡಿದೆ. ಈ ಎರಡೂ ಅಂಶಗಳನ್ನು ಜೆವಿಪಿ ಎಂದೂ ಅಡಗಿಸಿಟ್ಟಿಲ್ಲ. ಹಾಗಾಗಿ ಅನುರಾ ಅವರ ಆಯ್ಕೆಯು ಭಾರತದಲ್ಲಿ ಕಳವಳ ಮೂಡಿಸಬಹುದು. ಆದರೆ, ಅನುರಾ ಅವರು ಸೋಮವಾರ ಪ್ರಮಾಣವಚನ ಸ್ವೀಕರಿಸಿದ ಬಳಿಕ ನೀಡಿದ ಹಲವು ಸಂದರ್ಶನಗಳಲ್ಲಿ, ದಕ್ಷಿಣ ಏಷ್ಯಾದ ಅತ್ಯಂತ ದೊಡ್ಡ ಆರ್ಥಿಕ ವ್ಯವಸ್ಥೆ ಮತ್ತು ಅತೀ ಹತ್ತಿರದ ನೆರೆ ದೇಶವಾದ ಭಾರತವು ಶ್ರೀಲಂಕಾಕ್ಕೆ ಎಷ್ಟು ಮುಖ್ಯ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಶ್ರೀಲಂಕಾಕ್ಕೆ ಭಾರತದ ಜೊತೆಗೆ ಭೌಗೋಳಿಕವಾಗಿ ಅಥವಾ ರಾಜಕೀಯವಾಗಿ ಯಾವುದೇ ತಕರಾರು ಇಲ್ಲ ಎಂದೂ ಅವರು ಹೇಳಿದ್ದಾರೆ. ಆರ್ಥಿಕವಾಗಿ ಅವಲಂಬಿತವಾಗಿರುವ ಚೀನಾದ ಜೊತೆಗಿನ ಜೆವಿಪಿಯ ಸಂಬಂಧವನ್ನು ಅನುರಾ ಅವರು ಹೇಗೆ ನಿರ್ವಹಿಸಲಿದ್ದಾರೆ ಎಂಬುದರ ಮೇಲೆ ಅವರ ಬಗೆಗಿನ ಭಾರತದ ಗ್ರಹಿಕೆಯು ರೂಪುಗೊಳ್ಳಲಿದೆ. ಜೊತೆಗೆ ಭಾರತದ ಭದ್ರತಾ ಹಿತಾಸಕ್ತಿಯೂ ಅದನ್ನು ಅವಲಂಬಿಸಿದೆ. ಅನುರಾ ಅವರ ಆಯ್ಕೆ ಆಗುತ್ತಿದ್ದಂತೆಯೇ ಭಾರತವು ಅವರನ್ನು ಸಂಪರ್ಕಿಸಿ ಶುಭ ಹಾರೈಸಿದೆ. ಈ ವರ್ಷದ ಮಾರ್ಚ್‌ನಲ್ಲಿ ಅನುರಾ ಅವರು ಭಾರತಕ್ಕೆ ಬಂದಿದ್ದರು. ಹಾಗಾಗಿ, ಅವರ ಜೊತೆಗೆ ಒಂದು ರೀತಿಯ ಸೌಹಾರ್ದ ಸಂಬಂಧ ಈಗಾಗಲೇ ಸ್ಥಾಪಿತವಾಗಿದೆ.

ಶ್ರೀಲಂಕಾದಲ್ಲಿರುವ ತಮಿಳರ ಹಕ್ಕುಗಳ ಕುರಿತ ಪ್ರಶ್ನೆಯು ತೆರೆದುಕೊಂಡು ಬಹಳ ಕಾಲವೇ ಆಗಿದೆ. ಅದರ ಬದಲಿಗೆ, ದ್ವೀಪರಾಷ್ಟ್ರದ ಮೇಲೆ ಚೀನಾದ ಪ್ರಭಾವವು ಭಾರತಕ್ಕೆ ಹೆಚ್ಚು ಚಿಂತೆಯ ವಿಷಯವಾಗಿದೆ. ಹೊಸ ಸಂವಿಧಾನ ರಚಿಸುವ ಇಂಗಿತವನ್ನು ಅನುರಾ ವ್ಯಕ್ತಪಡಿಸಿದ್ದಾರೆ. ಈ ವಿಚಾರವು ಭಾರತಕ್ಕೆ ಹೆಚ್ಚು ಕಳವಳ ಮೂಡಿಸಬಹುದು. ಶ್ರೀಲಂಕಾದ ಸಂವಿಧಾನಕ್ಕೆ ಭಾರತದ ಒತ್ತಾಸೆ ಮೇರೆಗೆ 1987ರಲ್ಲಿ 13ನೇ ತಿದ್ದುಪಡಿ ಮಾಡಲಾಗಿತ್ತು. ಈ ತಿದ್ದುಪಡಿಯನ್ನು ರದ್ದು ಮಾಡಬೇಕು ಎಂಬ ಬೇಡಿಕೆ ಜೆವಿಪಿ ಸೇರಿ ಹಲವು ವರ್ಗಗಳಿಂದ ಬಂದಿದೆ. ಸಂವಿಧಾನ ಬದಲಾವಣೆಯು ಶ್ರೀಲಂಕಾದಲ್ಲಿ ಭಾರಿ ಕೋಲಾಹಲಕ್ಕೆ ಕಾರಣವಾಗಬಹುದು. ತಮಿಳು ಭಾಷಿಕರ ಜೊತೆಗೆ ಅಧಿಕಾರ ಹಂಚಿಕೆಗೆ ಇರುವ ಏಕೈಕ ಮಾರ್ಗ ಇದಾಗಿದೆ. ಸಂವಿಧಾನದಲ್ಲಿಯೇ ಈ ವಿಚಾರ ಇದ್ದರೂ ಅದನ್ನು ಪೂರ್ಣವಾಗಿ ಜಾರಿಗೊಳಿಸಲು ಇನ್ನೂ ಸಾಧ್ಯವಾಗಿಲ್ಲ. ತಮಿಳು ಭಾಷಿಕರಿಗೆ ಸಂಬಂಧಿಸಿದ ಈ ವಿಚಾರದಲ್ಲಿ ಆಗುವ ಯಾವುದೇ ಬದಲಾವಣೆಯು ತಮಿಳು ಪ್ರಶ್ನೆಯನ್ನು ಮುನ್ನೆಲೆಗೆ ತರುತ್ತದೆ; ಭಾರತದ ಜೊತೆಗಿನ ಸಂಬಂಧದ ಮೇಲೆಯೂ ಇದು ಪರಿಣಾಮ ಬೀರುತ್ತದೆ. ಶ್ರೀಲಂಕಾದ ಜನರು ಅನುರಾ ಅವರನ್ನು ಬಹುಮತದಿಂದ ಆಯ್ಕೆ ಮಾಡಿದ್ದಾರೆ. ಜನರ ಆಯ್ಕೆಯನ್ನು ಭಾರತವು ಗೌರವಿಸಲೇಬೇಕು. ಚಾರಿತ್ರಿಕವಾದ ಈಗಿನ ಪಲ್ಲಟವು ಅತ್ಯಂತ ಶಾಂತಿಯುತ ರೀತಿಯಲ್ಲಿಯೇ ನಡೆದಿದೆ ಎಂಬುದೂ ಗಮನಾರ್ಹ. ಭಾರತ–ಶ್ರೀಲಂಕಾ ಸಂಬಂಧದಲ್ಲಿ ಏರುಪೇರುಗಳು ಕಾಣಿಸಿಕೊಳ್ಳಬಹುದು. ಆದರೆ, ಪರಿಸ್ಥಿತಿಯು ವಿಷಮಗೊಳ್ಳದಂತೆ ರಾಜತಾಂತ್ರಿಕ ದಾರಿಯ ಮೂಲಕ ನೋಡಿಕೊಳ್ಳಬೇಕು.

ಸ್ತ್ರೀಪರವಾದ ತಾತ್ವಿಕತೆಯನ್ನು ಸಾರ್ವಜನಿಕ ಮೌಲ್ಯವಾಗಿಸಬೇಕಾದುದು ಇಂದಿನ ತುರ್ತು

ಸ್ವತಂತ್ರ ಅಸ್ಮಿತೆಗೆ ಬೇಕು ಸಮಾನತೆ

ವಿಶ್ಲೇಷಣೆ

ಸಿ.ಜಿ.ಮಂಜುಳಾ

ಲಿಂಗತಾರತಮ್ಯ ಪ್ರದರ್ಶಿಸಿದ್ದಂತಹ ಪಶ್ಚಿಮ ಬಂಗಾಳ ಸರ್ಕಾರದ ಆರೋಗ್ಯ ಇಲಾಖೆಯ ಸುತ್ತೋಲೆಯ ಬಗ್ಗೆ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಂಗತಿ ಇತ್ತೀಚೆಗೆ ವರದಿಯಾಯಿತು. ಕೋಲ್ಕತ್ತದ ಆರ್.ಜಿ.ಕರ್ ಆಸ್ಪತ್ರೆಯಲ್ಲಿ ಆಗಸ್ಟ್ 9ರಂದು ನಡೆದ ವೈದ್ಯೆಯ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ 10 ದಿನಗಳ ಬಳಿಕ, ವೈದ್ಯೆಯರನ್ನು ರಾತ್ರಿ ಪಾಳಿಯ ಕರ್ತವ್ಯಕ್ಕೆ ನಿಯೋಜಿಸದಿರಲು ಹಾಗೂ ಅವರ ಕೆಲಸದ ಅವಧಿಯನ್ನು 12 ಗಂಟೆಗಳಿಗೆ ಸೀಮಿತಗೊಳಿಸಲು ಸೂಚಿಸಿ ಸರ್ಕಾರ ಸುತ್ತೋಲೆ ಹೊರಡಿಸಿತ್ತು. ಆದರೆ, 'ಸರ್ಕಾರಿ ವೈದ್ಯಕೀಯ ಕಾಲೇಜು ಹಾಗೂ ಆಸ್ಪತ್ರೆಗಳಲ್ಲಿ ಪುರುಷ ವೈದ್ಯರು 36 ಗಂಟೆಗಳ ಕಾಲ ನಿರಂತರವಾಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಮಹಿಳೆಯರ ವಿರುದ್ಧ ಹೇಗೆ ತಾರತಮ್ಯ ಮಾಡುತ್ತೀರಿ?' ಎಂದು ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ಪ್ರಶ್ನಿಸಿತ್ತು.

'ಸುರಕ್ಷತೆಯೊಂದಿಗೆ ಮಹಿಳೆಗೆ ಬೇಕಿರುವುದು ಸಮಾನ ಅವಕಾಶಗಳು. ಮಹಿಳಾ ವೃತ್ತಿಪರರಿಗೆ ರಿಯಾಯಿತಿಗಳು ಬೇಡ. 12 ಗಂಟೆಗಳ ಪಾಳಿ ಇದ್ದಲ್ಲಿ, ಅವರು ಯಾವುದೇ ಜೆಂಡರ್‌ಗೆ ಸೇರಿದ್ದರೂ ಅದು ಎಲ್ಲರಿಗೂ ಅನ್ವಯವಾಗಲಿ' ಎಂಬಂಥ ಸುಪ್ರೀಂ ಕೋರ್ಟ್ ನಿರ್ದೇಶನ ಮಹಿಳೆಯ ಕೆಲಸದ ಹಕ್ಕು ಹಾಗೂ ಆಕೆಯ ಘನತೆಯನ್ನು ಎತ್ತಿ ಹಿಡಿದಿದೆ. 'ಮಹಿಳೆಯರು ಪೈಲಟ್‌ಗಳಾಗಿ, ಸಶಸ್ತ್ರ ಪಡೆಗಳ ಭಾಗವಾಗಿ ತಮ್ಮ ಕರ್ತವ್ಯವನ್ನು ರಾತ್ರಿ ವೇಳೆಯೂ ನಿರ್ವಹಿಸುತ್ತಿರುವಾಗ ಮಹಿಳಾ ವೈದ್ಯರ ಮೇಲೆ ಇಂತಹ ನಿರ್ಬಂಧವನ್ನು ಪ್ರಭುತ್ವ ಹೇಗೆ ತಾನೇ ಹೇರಬಹುದು?' ಎಂಬಂಥ ಸಿಜೆಐ ನೇತೃತ್ವದ ಪೀಠದ ಪ್ರಶ್ನೆ ಸಮಂಜಸವಾದುದು.

ಹೆಣ್ಣನ್ನು ಸಮಾನ ಸಹಜೀವಿಯಾಗಿ ಕಾಣದಂತಹ ಸಂಸ್ಕೃತಿ, ಪರಿಭಾಷೆಗಳೇ ಹೆಣ್ಣಿನ ಮೇಲಿನ ಅಪರಾಧಗಳಿಗೆ ಮೂಲ ಕಾರಣ ಎಂಬುದನ್ನು ಮೊದಲು ಗ್ರಹಿಸಬೇಕಿದೆ. 'ರಾತ್ರಿ ವೇಳೆ ಆಕೆ ಯಾಕೆ ಹೊರಗಿದ್ದಳು? ಅಂತಹ ಬಟ್ಟೆ ಯಾಕೆ ತೊಟ್ಟಿದ್ದಳು?' ಎಂದೆಲ್ಲಾ ಸಂತ್ರಸ್ತೆಯನ್ನೇ ಪ್ರಶ್ನಿಸಿ ದೂರುವಂತಹ ನಮ್ಮ ಸಮಾಜದಲ್ಲಿ, ಪುರುಷನೊಬ್ಬ ಅತ್ಯಾಚಾರಿಯಾಗುವುದಕ್ಕೂ ತಾಯಿಯೇ ಕಾರಣ ಎಂಬುದನ್ನು ಸೂಚ್ಯವಾಗಿ ಹೇಳುವಂತಹ ವಾಟ್ಸ್‌ಆ್ಯಪ್ ಸಂದೇಶವೊಂದನ್ನು ಕೋಲ್ಕತ್ತ ಅತ್ಯಾಚಾರ ಪ್ರಕರಣದ ನಂತರ ಹರಿಯಬಿಡಲಾಗಿತ್ತು. 'ಆತ್ಮೀಯ ಪುರುಷರೇ' ಎಂಬ ಸಂಬೋಧನೆ ಇದ್ದ ಈ ವಾಟ್ಸ್‌ಆ್ಯಪ್ ಸಂದೇಶದಲ್ಲಿ, 'ಮಹಿಳೆಯೊಬ್ಬಳು ನಿಮ್ಮ ಜೊತೆ ಇದ್ದಾಗ ಸುರಕ್ಷಿತ ಭಾವನೆ ಹೊಂದಿದ್ದಲ್ಲಿ ಅಭಿನಂದನೆ. ನಿಮ್ಮ ಅಮ್ಮ, ಸಭ್ಯ ಪುರುಷನೊಬ್ಬನನ್ನು ಬೆಳೆಸಿದ್ದಾಳೆ' ಎಂದು ಅತ್ಯಾಚಾರಿ ಸಂತಾನದ ಹುಟ್ಟಿನ ಹೊಣೆಗಾರಿಕೆಯನ್ನೂ ತಾಯಂದಿರಿಗೇ ವಹಿಸಲಾಗಿತ್ತು.

ಇಂತಹ ಸಂದೇಶಗಳು ಗಂಡಿನ ಅನಿಯಂತ್ರಿತ ಅಹಮಿಕೆ, ಅಟ್ಟಹಾಸವನ್ನು ಪೋಷಿಸುವ ಮನಃಸ್ಥಿತಿಯನ್ನು ಹೊಂದಿರುತ್ತವೆ ಎಂಬುದನ್ನು ಸಮಾಜ ಅರಿತುಕೊಳ್ಳುವುದು ಯಾವಾಗ? ತಾಯ್ತನವನ್ನು ವೈಭವೀಕರಿಸಿ ಅಟ್ಟದ ಮೇಲಿರಿಸುತ್ತಲೇ ಹೆಣ್ಣಿನ ಸ್ವಂತಿಕೆ, ಸ್ವತಂತ್ರ ಅಸ್ಮಿತೆಗಾಗಿ ಆಕೆಯ ಹುಡುಕಾಟ ಹಾಗೂ ಪ್ರತಿಪಾದನೆಗಳಿಗೆ ತಡೆಯೊಡ್ಡುತ್ತಾ ಗಂಡಾಳಿಕೆಯ ಸಮಾಜವನ್ನು ನಿರಂತರಗೊಳಿಸುವ ಹುನ್ನಾರಗಳು ಇವು. ಅಪಾರ ಪ್ರಗತಿ ಸಾಧಿಸಿದ ಈ 21ನೇ ಶತಮಾನದ ತಂತ್ರಜ್ಞಾನದ ಯುಗದಲ್ಲೂ ಇಂತಹ ಮನಃಸ್ಥಿತಿ ಬದಲಾಗಲೇ ಇಲ್ಲ.

ಹೀಗಾಗಿಯೇ ಮಹಿಳಾ ಮುಖ್ಯಮಂತ್ರಿಯನ್ನು ಹೊಂದಿರುವ ಪಶ್ಚಿಮ ಬಂಗಾಳದಂತಹ ಸರ್ಕಾರವೂ ಲಿಂಗ ಅಸಮಾನತೆಯನ್ನು ಪ್ರಚುರಗೊಳಿಸುತ್ತಾ ಮಹಿಳೆಗೆ ಅನುಗ್ರಹಪೂರ್ವಕವೆನಿಸುವ ಸುತ್ತೋಲೆಯನ್ನು ಹೊರಡಿಸುತ್ತದೆ. ಆದರೆ, ಮಹಿಳೆಗೆ ಬೇಕಿರುವುದು ಸುರಕ್ಷತೆ. ಅಂದರೆ ಇದು ಮನುಧರ್ಮ ಶಾಸ್ತ್ರ ಹೇಳುವಂತಹ ರಕ್ಷಣೆಯಲ್ಲ. ಗಂಡಾಳಿಕೆಯ ಮನೋಧರ್ಮದಿಂದ ಕಾಪಾಡುವಂತಹ ಸುರಕ್ಷತೆ ಹಾಗೂ ಸಮಾನತೆ.

ಗಂಡಾಳಿಕೆಯ ಸೊಕ್ಕು, ಹೆಣ್ಣಿನ ಅಸ್ಮಿತೆಯನ್ನು ತುಳಿಯುತ್ತಲೇ ಬಂದಿರುವಂತಹ ಕಥಾನಕಗಳು ಮೌನದ ಪದರಗಳಲ್ಲಿ ಹೂತುಹೋಗಿವೆ. ಹೆಣ್ಣಿನ ಅಸ್ಮಿತೆಯನ್ನು ಹೊಸಕಿಹಾಕಿ ಅಧೀನ ನೆಲೆಗೆ ಹೆಣ್ಣನ್ನು ದೂಡುವಂತಹ ಕಥಾನಕಗಳು ಎಷ್ಟೋ ವರ್ಷಗಳ ನಂತರ ಮೌನದ ಚಿಪ್ಪಿನಿಂದ ಮಾತುಗಳಾಗಿ ಹೊರಹೊಮ್ಮಲು, ಮಲಯಾಳಂ ಸಿನಿಮಾರಂಗದಲ್ಲಿ ಹೆಣ್ಣಿನ ಶೋಷಣೆ ಕುರಿತ ನ್ಯಾಯಮೂರ್ತಿ ಹೇಮಾ ಸಮಿತಿ ವರದಿ ನೆರವಾಗಿದೆ. ರಾಷ್ಟ್ರದ ಮನರಂಜನಾ ಉದ್ಯಮದಲ್ಲಿ ಅಲ್ಲೋಲ ಕಲ್ಲೋಲವನ್ನು ಉಂಟುಮಾಡಿರುವ ಈ ವರದಿಯು ಬಹಿರಂಗಪಡಿಸಿರುವುದು ಸಹ ಹೆಣ್ಣನ್ನು ವೃತ್ತಿಪರ ವ್ಯಕ್ತಿಯನ್ನಾಗಿ ಕಾಣದ ಗಂಡಾಳಿಕೆಯ ಮನಃಸ್ಥಿತಿಯನ್ನೇ.

ಇಂತಹ ಗಂಡಾಳಿಕೆಯ ಮನಃಸ್ಥಿತಿಯು ತಮಾಷೆ, ವ್ಯಂಗ್ಯ, ಲಘು ಮಾತು, ಮೆಚ್ಚುಗೆ, ಮೂದಲಿಕೆ, ನಿಂದನೆಯಲ್ಲಿ ದಿನನಿತ್ಯ ಗೋಚರವಾಗುತ್ತಲೇ ಇರುತ್ತದೆ. ಇದಕ್ಕೀಗ ಮತ್ತೊಂದು ತಾಜಾ ಉದಾಹರಣೆ, ಕರ್ನಾಟಕ ಹೈಕೋರ್ಟ್‌ನ ನ್ಯಾಯಮೂರ್ತಿಯೊಬ್ಬರು ಮಹಿಳಾ ವಕೀಲರನ್ನು ಉದ್ದೇಶಿಸಿ ಹೇಳಿದ ಮಾತು. ಈ ವಿಚಾರವು ಸುಪ್ರೀಂ ಕೋರ್ಟ್ ಗಮನಕ್ಕೆ ಬಂದ ನಂತರ ಈಗ ಆ ನ್ಯಾಯಮೂರ್ತಿ ವಿಷಾದ ವ್ಯಕ್ತಪಡಿಸಿದ್ದಾರೆ. ಆದರೆ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಅನಿಷ್ಟ ಸಂಪ್ರದಾಯಗಳಾಚೆಗೆ, ಸಂವಿಧಾನಬದ್ಧವಾದ ಸಮಾನತೆಯ ತತ್ವವನ್ನು ದಿನ ನಿತ್ಯದ ಅನುಭವವನ್ನಾಗಿಸಲು ನಮ್ಮ ನ್ಯಾಯಾಂಗ ವಹಿಸಬೇಕಾಗಿರುವ ಪಾತ್ರ ದೊಡ್ಡದು. ಹೀಗಾಗಿಯೇ, ಸಾಂವಿಧಾನಿಕ ಮೌಲ್ಯಗಳು, ಆಶಯಗಳಿಗೆ ತದ್ವಿರುದ್ಧವಾದಂತಹ, ಚಾಲ್ತಿಯಲ್ಲಿರುವ ಲಿಂಗತಾರತಮ್ಯದ ಅಥವಾ ಲಿಂಗತ್ವ ಪೂರ್ವಗ್ರಹದ ನುಡಿಗಟ್ಟುಗಳ ಬಳಕೆಯ ವಿರುದ್ಧ ನ್ಯಾಯಾಧೀಶರು ಹಾಗೂ ಕಾನೂನು ವೃತ್ತಿಪರರಿಗೆ ಅರಿವು ಮೂಡಿಸುವಂತಹ 30 ಪುಟಗಳ ಕೈಪಿಡಿಯನ್ನೂ ಹೋದ ವರ್ಷ ಸುಪ್ರೀಂ ಕೋರ್ಟ್ ಬಿಡುಗಡೆ ಮಾಡಿತ್ತು.

ಕೋರ್ಟ್ ಕಲಾಪಗಳ ಮಧ್ಯದ 'ಕಥೆ- ಉಪ ಕಥೆ'ಗಳಲ್ಲಷ್ಟೇ ಇಂತಹ ಲಘು ಧಾಟಿಯ ಲಿಂಗತ್ವ ಅಸೂಕ್ಷ್ಮತೆಯ ಮಾತುಗಳಿರುವುದಿಲ್ಲ. ದ್ವಂದ್ವಾರ್ಥದ ಮಾತುಗಳನ್ನಂತೂ ನಮ್ಮ ಮನರಂಜನೆ ಉದ್ಯಮವು ಜನಪ್ರಿಯ ಸಂಸ್ಕೃತಿಯ ಭಾಗವಾಗಿಸಿಬಿಟ್ಟಿದೆ. ಹೀಗೆ, ಸಂವಿಧಾನಬದ್ಧವಾಗಿ ಹೆಣ್ಣಿಗೆ ನೀಡಲಾಗಿರುವ ಸ್ವಾತಂತ್ರ್ಯ ಹಾಗೂ ಘನತೆಯ ಬದುಕಿನ ಹಕ್ಕು ಎಂಬುದು ಮನೆ ಹಾಗೂ ಸಾರ್ವಜನಿಕ ವಲಯಗಳಲ್ಲಿ ಉಲ್ಲಂಘನೆ ಆಗುತ್ತಲೇ ಸಾಗುತ್ತಿರುವುದಕ್ಕೆ ತಡೆ ಹೇಗೆ ಎಂಬುದು ಪ್ರಶ್ನೆ.

'ನೀನು ಹೆಣ್ಣು, ಅವನು ಗಂಡು… ಏನು ಬೇಕಾದರೂ ಮಾಡಬಹುದು' ಎಂಬಂಥ ಭಾಷೆ ಮೊದಲು ಬದಲಾಗಬೇಕಿದೆ. 'ಹೆಣ್ಣು ಎಂದರೆ ಹೀಗಿರಬೇಕು…' ಎಂದು ನಮ್ಮ ಜನಪ್ರಿಯ ಸಿನಿಮಾಗಳು ಅಥವಾ ಈಗಿನ ಜನಪ್ರಿಯ ಡಿಜಿಟಲ್ ಪ್ರಪಂಚ ಕಟ್ಟಿಕೊಡುತ್ತಿರುವಂತಹ ಚಿತ್ರಣವನ್ನು ಮುರಿದು, ಗಂಡು- ಹೆಣ್ಣು ಸಮಾನ ಸಹಜೀವಿಗಳಾಗಿರುವಂತಹ ಮಾನವೀಯ ಮೌಲ್ಯಗಳ ಕಟ್ಟುವಿಕೆ ಇಂದಿನ ಆದರ್ಶವಾಗಬೇಕಿದೆ ಎಂಬ ಮಾತು ಸವಕಲಾಗಿ ಬಿಡುತ್ತಿದೆಯೇ?

ಅತ್ಯಾಚಾರಿ ಎಲ್ಲೆಡೆ ಇದ್ದಾನೆ. ಹೊತ್ತು-ಗೊತ್ತಿಲ್ಲ. ಮನೆ, ಶಾಲೆ, ಕಚೇರಿ, ಸಾರ್ವಜನಿಕ ಸ್ಥಳ- ಅತ್ಯಾಚಾರಗಳ ನೆಲೆಗಳಾಗುತ್ತಿವೆ. ಅಪ್ಪ, ಸಹೋದರ, ಗೆಳೆಯ, ಗಂಡ, ಸಹೋದ್ಯೋಗಿ, ಬೀದಿಯಲ್ಲಿನ ಅಪರಿಚಿತರು, ಧರ್ಮಗುರುಗಳು, ರಾಜಕಾರಣಿಗಳು, ಕಡೆಗೆ ಕಾಯಬೇಕಾದ ಪೊಲೀಸರೂ ಅತ್ಯಾಚಾರಿಗಳಾಗಿ ಪರಿಣಮಿಸುತ್ತಿರುವುದನ್ನು ನೋಡುತ್ತಿದ್ದೇವೆ. ಇನ್ನು, ಸ್ವತಃ ಕಾನೂನು ರೂಪಿಸುವವರಾಗಿ ಸಂವಿಧಾನದತ್ತ ಹಕ್ಕುಗಳನ್ನು ರಕ್ಷಿಸಬೇಕಾದ ಶಾಸಕರೂ ಹೆಣ್ಣುಮಕ್ಕಳನ್ನು ಕಾಮದ ಆಟಿಕೆಗಳಾಗಿ ಬಳಸಿರುವಂತಹ ಹೀನ ವಿಕೃತಿಗಳ ಆರೋಪಗಳಂತೂ ಅಕ್ಷಮ್ಯ.

ಸ್ವತಂತ್ರ ಚಿಂತನೆ, ನಡವಳಿಕೆ, ಧೋರಣೆಗಳಿರುವ ಹೆಣ್ಣುಮಕ್ಕಳನ್ನು ಅವಮಾನಿಸಿ, ಅವಗಣನೆಗೆ ಒಳಪಡಿಸಿ ಆಕೆಯನ್ನು ಒಂಟಿಯಾಗಿಸುವ ಮೌಲ್ಯಗಳೂ ಗಂಡಾಳಿಕೆಯ ವಿಜೃಂಭಣೆಯೇ. ಈ ಮೌಲ್ಯಗಳನ್ನೇ ಮಹಿಳೆಯರೂ ತಮ್ಮದಾಗಿಸಿಕೊಂಡಿರುವುದು ಸ್ವತಃ ಅನೇಕ ಮಹಿಳೆಯರ ಅರಿವಿಗೂ ನಿಲುಕಿರುವುದಿಲ್ಲ. 2018ರಲ್ಲಿ ಭಾರತದಲ್ಲಿ ಅಲೆಯೆಬ್ಬಿಸಿದ #ಮೀಟೂ ಆಂದೋಲನದಲ್ಲಿ ಅನುಭವಗಳನ್ನು ಹಂಚಿಕೊಂಡ ಮಹಿಳೆಯರು ತಂತಮ್ಮ ವೃತ್ತಿಗಳಲ್ಲಿ ಅವಕಾಶಗಳನ್ನೇ ಕಳೆದುಕೊಳ್ಳಬೇಕಾದದ್ದು ಇಂತಹ ಗಂಡಾಳಿಕೆಯ ಮನಃಸ್ಥಿತಿಯಿಂದಾಗಿಯೇ. ಈ ಬಗೆಯ ಸಾಮಾಜಿಕ ಧೋರಣೆಗಳು ಪಲ್ಲಟವಾಗಿ ಸ್ತ್ರೀಪರವಾದ ಸ್ವತಂತ್ರ ತಾತ್ವಿಕತೆಯನ್ನು ಸಾರ್ವಜನಿಕ ಮೌಲ್ಯವಾಗಿಸಬೇಕಾದುದು ಇಂದಿನ ತುರ್ತು. ಇಲ್ಲದಿದ್ದಲ್ಲಿ ಕುಸ್ತಿಪಟುಗಳ ಕಣ್ಣೀರು, ಚಿತ್ರರಂಗದ ತಾರೆಯರ ಅಸಹಾಯಕತೆಯಂತಹ ಕಥಾನಕಗಳು ಮುಂದುವರಿಯುತ್ತವೆ. 'ನಿರ್ಭಯಾ'–'ಅಭಯಾ', 'ಖೈರ್ಲಾಂಜಿ'–'ಹಾಥರಸ್', 'ಶ್ರದ್ಧಾ'–'ಮಹಾಲಕ್ಷ್ಮಿ'ಯಂತಹ ಪ್ರಕರಣಗಳು ಮರುಕಳಿಸುತ್ತಲೇ ಇರುತ್ತವೆ.

ಚುರುಮುರಿ

ಸಾಮೂಹಿಕ ಚುನಾವಣೆ

• ಮಣ್ಣೆ ರಾಜು

'ಒಂದು ದೇಶ, ಒಂದು ಚುನಾವಣೆ ಎಂಬುದು ಒಂದೇ ಮದ್ವೆ ಊಟದ ಖರ್ಚಿನಲ್ಲಿ ಹತ್ತಾರು ಮದುವೆ ಮಾಡಿ ಮುಗಿಸುವ ಸಾಮೂಹಿಕ ವಿವಾಹದಂತೆ ಅಲ್ವೇನ್ರೀ?' ಸುಮಿ ಕೇಳಿದಳು.

'ಹೌದು, ಪಂಚಾಯಿತಿಯಿಂದ ಪಾರ್ಲಿಮೆಂಟ್‌ವರೆಗಿನ ಎಲ್ಲಾ ಚುನಾವಣೆಗಳನ್ನು ಒಂದೇ ಬಾರಿಗೆ ನಡೆಸಿದರೆ ಖರ್ಚು, ರಿಸ್ಕು ಕಮ್ಮಿಯಂತೆ. ಸಾಮೂಹಿಕ ಚುನಾವಣೆ ಎನ್ನುವುದು ಒಂದೇ ಕಲ್ಲಿನಲ್ಲಿ ಹತ್ತಾರು ಹಕ್ಕಿ ಹೊಡೆಯುವ ಜಾಣತನವಂತೆ!' ಅಂದ ಶಂಕ್ರಿ.

'ದುಂದುವೆಚ್ಚಕ್ಕೆ ಕಡಿವಾಣ ಹಾಕಲು ಸಾಮೂಹಿಕ ಪದ್ಧತಿ ಉತ್ತಮ'.

'ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಪರೀಕ್ಷೆಗಳನ್ನು ಒಮ್ಮೆಗೇ ನಡೆಸುವ ಸಾಮೂಹಿಕ ಪರೀಕ್ಷಾ ಪದ್ಧತಿ ಜಾರಿಯಾಗಬಹುದು'.

'ಪರೀಕ್ಷೆಯಲ್ಲಿ ಒಂದು ಕೊಶ್ಚನ್ ಪೇಪರ್‌ಗೇ ಉತ್ತರ ಬರೆಯಲು ಮಕ್ಕಳು ಕಣ್ಣುಬಾಯಿ ಬಿಡುತ್ತವೆ. ಮತಗಟ್ಟೆಯಲ್ಲಿ ಒಮ್ಮೆಗೇ ಹಲವು ಅಭ್ಯರ್ಥಿಗಳ ಹಣೆಬರಹ ಬರೆಯಬೇಕಾದ ಮತದಾರರಿಗೆ ಗೊಂದಲ ಆಗಿಬಿಡೋದಿಲ್ವೇ?'

'ಶಾಲಾ ಮಕ್ಕಳು ಐದಾರು ಸಬ್ಜೆಕ್ಟ್‌ಗಳನ್ನು ಓದಿ ಪರೀಕ್ಷೆ ಬರೆದು ಪಾಸಾಗ್ತಾರೆ, ನಾವು ಹಿರಿಯರು ಮತಯಂತ್ರದ ಗುಂಡಿಗಳನ್ನು ಒತ್ತಲು ಹೆದರಿದರೆ ಚುನಾವಣೆ ಫೇಲಾಗಿಬಿಡುತ್ತದೆ'.

'ಪೋಲಿಂಗ್ ಪರ್ಸೆಂಟೇಜ್ 50-60 ಬಂದರೆ ಸಾಕೆ? ಎಲೆಕ್ಷನ್ ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಬೇಕು'.

'ಪರೀಕ್ಷೆಯಲ್ಲಿ ಫೇಲಾದವರು ಸಪ್ಲಿಮೆಂಟರಿ ಪರೀಕ್ಷೆ ಬರೆದು ಪಾಸಾಗಬಹುದು, ಮತದಾನಕ್ಕೆ ಗೈರಾದವರಿಗೆ ಸಪ್ಲಿಮೆಂಟರಿ ಅವಕಾಶವಿಲ್ಲ'.

'ರಾಜಕೀಯ ರಗಳೆಯಿಂದ ಈಗಿನ ಚುನಾವಣೆಗಳು ಯುದ್ಧಗಳಂತಾಗಿವೆ, ಮತ ಕ್ಷೇತ್ರಗಳು ರಣರಂಗಗಳಾಗಿವೆ. ಪೊಲೀಸ್ ಕಾವಲು ಭೇದಿಸಿ, ಐ.ಡಿ. ಕಾರ್ಡ್ ತೋರಿಸಿ ಮತದಾನ ಮಾಡುವ ಪರಿಸ್ಥಿತಿ ಜನರಲ್ಲಿ ಜುಗುಪ್ಸೆ ತಂದಿರಬಹುದು. ಇಂಥಾ ರಗಳೆಗಳಿಲ್ಲದ ಸರಳ, ಸಹಜ ಚುನಾವಣೆ ನಡೆಯಬೇಕು'.

'ಒಂದು ದೇಶ– ಒಂದು ಪಕ್ಷ– ಒಬ್ಬ ಅಭ್ಯರ್ಥಿ ಎನ್ನುವ ಪದ್ಧತಿ ಜಾರಿಗೆ ತಂದು ಅವಿರೋಧ ಆಯ್ಕೆ ಮಾಡಿ, ಖರ್ಚು, ಕಷ್ಟವಿಲ್ಲದೆ ಸರಳವಾಗಿ ಚುನಾವಣೆ ಮುಗಿಸಬಹುದಷ್ಟೇ…' ಅಂದ ಶಂಕ್ರಿ.

ದಿನದ ಟ್ವೀಟ್

ಸರ್ಕಾರಿ ಶಾಲೆ ಬ್ರ್ಯಾಂಡ್ ಸೃಷ್ಟಿಸಿ

ಸೋರುವ ಸೂರು, ಬೀಳುವ ಸ್ಥಿತಿಯಲ್ಲಿರುವ ಗೋಡೆಗಳು, ಸುತ್ತ ಕಲುಷಿತ ವಾತಾವರಣವಿರುವ ಕಟ್ಟಡಗಳಲ್ಲಿ ಯಾವ ಮಾಧ್ಯಮದಲ್ಲಿ ಪಾಠ ಮಾಡಿದರೂ ಉಪಯೋಗವಿಲ್ಲ. ಸರ್ಕಾರವು 'ಇಂಗ್ಲಿಷ್ ಮೀಡಿಯಂ' ಎಂಬ ಅವೈಜ್ಞಾನಿಕ ಯೋಜನೆ ಬದಲು, ಶಾಲೆಗಳನ್ನು ಸುಸ್ಥಿತಿಯಲ್ಲಿಡುವ, ಬೇಕಾದ ಸವಲತ್ತುಗಳನ್ನು ಒದಗಿಸಿ ಸರ್ಕಾರಿ ಶಾಲೆಗಳದ್ದೇ ಒಂದು ಬ್ರ್ಯಾಂಡ್ ಸೃಷ್ಟಿಸುವ ಕಡೆ ಗಮನ ಕೊಡಲಿ.

ಗಿರೀಶ್ ಕಾರ್ಗದ್ದೆ, ಎಂಜಿನಿಯರ್

ಕಿಡಿನುಡಿ



ಬಾಂಗ್ಲಾ ನುಸುಳುಕೋರರ ವಿಚಾರ ಅಥವಾ ಮತೀಯ– ಉರ್ದು ಓಲೈಕೆಯ ವಿಚಾರ ಬಂದಾಗ ಕನ್ನಡಪರ ದನಿಗಳು ಹೋರಾಡಬೇಕು- ಇದು ಬಿಜೆಪಿ ಬೆಂಬಲಿಗರ ಧೋರಣೆ. ಭ್ರಷ್ಟಾಚಾರ, ಕೋಮುವಾದ, ಕ್ರೋನಿಕ್ಯಾಪಿಟಲಿಸಂನ ವಿಚಾರ ಬಂದಾಗ ಕನ್ನಡಪರ ದನಿಗಳು ಹೋರಾಡಬೇಕು- ಇದು ಕಾಂಗ್ರೆಸ್ ಬೆಂಬಲಿಗರ ಧೋರಣೆ. ಆದರೆ ಕನ್ನಡದ ವಿಚಾರಕ್ಕೆ ಇಬ್ಬರೂ ದನಿಗೂಡಿಸಲಾರರು. ಇದು ಯಾವ ನ್ಯಾಯ?!

ಕಿರಣ್ ಕೊಡ್ಲಾಡಿ

25 ವರ್ಷಗಳ ಹಿಂದೆ

ಶನಿವಾರ, 25-9-1999

• **200 ಕೋಟಿ ಹಗರಣ: ಭವಿಷ್ಯನಿಧಿ ಕಚೇರಿ ಮೇಲೆ ವ್ಯಾಪಕ ದಾಳಿ**

ಬೆಂಗಳೂರು, ಸೆ. 24– ಕೇಂದ್ರ ಕಚೇರಿಯೂ ಸೇರಿದಂತೆ ನಗರದ ವಿವಿಧ ಭಾಗಗಳಲ್ಲಿರುವ ಭವಿಷ್ಯನಿಧಿ ಕಚೇರಿಗಳ ಮೇಲೆ ಸಿಬಿಐ ಅಧಿಕಾರಿಗಳು ಇಂದು ದಾಳಿ ನಡೆಸಿದರು.

ಸಿಬಿಐ ಡಿವೈಎಸ್‌ಪಿ ಕೆ.ವೈ. ಗುರುಪ್ರಸಾದ್ ನೇತೃತ್ವದಲ್ಲಿ ಪೀಣ್ಯ, ಕೆ.ಆರ್.ಪುರಂ, ಬೊಮ್ಮಸಂದ್ರದಲ್ಲಿನ ಕಚೇರಿಗಳು ಮತ್ತು ಕೇಂದ್ರ ಕಚೇರಿ ಮೇಲೆ ಏಕಕಾಲಕ್ಕೆ ವ್ಯಾಪಕವಾಗಿ ದಾಳಿ ನಡೆಸಿದ ಅಧಿಕಾರಿಗಳು ಸುಮಾರು 200 ಕೋಟಿ ರೂ.ಗಳ ಅವ್ಯವಹಾರ ಪತ್ತೆ ಮಾಡಿದ್ದಾರೆಂದು ಸಿಬಿಐ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಬುಧವಾರ, 25-9-1974

• **ಏಳನೇ ತರಗತಿ ಪಬ್ಲಿಕ್ ಪರೀಕ್ಷೆ ರದ್ದತಿಗೆ ಶಿಕ್ಷಣ ಮಂಡಳಿ ನಿರ್ಧಾರ**

ಬೆಂಗಳೂರು, ಸೆ. 24– ಪ್ರಾಥಮಿಕ ಏಳನೇ ತರಗತಿಯ 'ಪಬ್ಲಿಕ್' ಪರೀಕ್ಷೆಯನ್ನು ರದ್ದುಗೊಳಿಸಿ ಆಂತರಿಕ ಮೌಲ್ಯ ನಿರ್ಧಾರದ ಮೂಲಕ ವಿದ್ಯಾರ್ಥಿಯ ಸಾಮರ್ಥ್ಯವನ್ನು ತಿಳಿಯುವ ವ್ಯವಸ್ಥೆಯನ್ನು ಜಾರಿಗೆ ತರಲು ಪ್ರಾಥಮಿಕ ಶಿಕ್ಷಣ ಮಂಡಳಿ ನಿರ್ಣಯ ಮಾಡಿದೆ.

ಮಂಡಳಿಯ ನಿರ್ಧಾರವನ್ನು ಇಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ ಶಿಕ್ಷಣ ಅಡಿಷನಲ್ ಡೈರೆಕ್ಟರ್ ಮುನಿಸ್ವಾಮಿಯವರು ಆಂತರಿಕ ಮೌಲ್ಯ ನಿರ್ಧಾರಕ್ಕೆ ಯಾವ ವಿಧಾನ ಅನುಸರಿಸಬೇಕೆಂಬುದನ್ನು ಇನ್ನೂ ನಿರ್ಧರಿಸಬೇಕಾಗಿದೆಯೆಂದರು.

ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಹೆಚ್ಚು ಪುಷ್ಟೀಕರಣಗೊಳಿಸಲು 'ವೆಚ್ಚವಲ್ಲದ' ಕೈಗೊಂಡಿರುವ ನಾನಾ ಕ್ರಮಗಳನ್ನು ಮುನಿಸ್ವಾಮಿಯವರು ವಿವರಿಸಿ, ಈ ಕಾರ್ಯಕ್ರಮಗಳ ಮೂಲಕ ಪ್ರಾಥಮಿಕ ಶಿಕ್ಷಣಕ್ಕೆ ಹೊಸ ಸ್ವರೂಪ ಕೊಡಲು ಪ್ರಯತ್ನಿಸಲಾಗುತ್ತಿದೆ ಎಂದರು.

• **81 ಸಾವಿರ ಬಾಲಕಿಯರಿಗೆ ವಿದ್ಯಾರ್ಥಿವೇತನ**

ಬೆಂಗಳೂರು, ಸೆ. 24– ಕರ್ನಾಟಕ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಕ್ಕಾಗಿ ಸರ್ಕಾರ ನಲವತ್ತು ಕೋಟಿ ರೂ. ವೆಚ್ಚ ಮಾಡುತ್ತಿದೆ. ಆದರೆ ಪ್ರಾಥಮಿಕ ಮಟ್ಟದಲ್ಲಿ ಸುಮಾರು ಶೇಕಡ 60ರಷ್ಟು ಮಂದಿ ಬಾಲಕ–ಬಾಲಕಿಯರು ಶಾಲೆ ಬಿಟ್ಟು ಹೋಗಿಬಿಡುತ್ತಾರೆ.

ಈ ರೀತಿ ಶಾಲೆ ಬಿಡುವುದು ಗ್ರಾಮಾಂತರ ಪ್ರದೇಶಗಳಲ್ಲೇ ಹೆಚ್ಚೆಂದು ಇಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ ಶಿಕ್ಷಣ ಅಡಿಷನಲ್ ಡೈರೆಕ್ಟರ್ ಮುನಿಸ್ವಾಮಿಯವರು ಶಾಲೆಗಳಲ್ಲಿ ಹಾಜರಾತಿಗಾಗಿ ಪ್ರೋತ್ಸಾಹ ನೀಡಲು 81 ಸಾವಿರ ಬಾಲಕಿಯರಿಗೆ ತಲಾ 40 ರೂ. ನಂತೆ ವಿದ್ಯಾರ್ಥಿವೇತನ ನೀಡಲು ಯೋಜಿಸಲಾಗಿದೆ ಎಂದರು.

ಸಂಗತ

ಸುಳ್ಳಿನ ದಾಳಿಯನ್ನು ಸೋಲಿಸೋಣ

ಸೆ. 28, ವಿಶ್ವ ಸುದ್ದಿ ದಿನ– ಸತ್ಯದೆಡೆಗಿನ ಪತ್ರಿಕೋದ್ಯಮದ ಬದ್ಧತೆ ನೆನೆಯುವ ದಿನ

• ಬ್ರಾಂಕೊ ಬರ್ಕಿಚ್, ಮರಿಯಾ ರೆಸ್ಸಾ

ಪ್ರಿಯ ಓದುಗರೇ,

ಯಾವುದು ಪುನರಾವರ್ತನೆಯಾಗದಿರಲಿ ಎಂದು ಒಂದೊಮ್ಮೆ ನಾವು ಆಶಿಸಿದ್ದೆವೋ ಅಂತಹದ್ದೇ ಪರೀಕ್ಷೆಗಳಿಗೆ 2024ನೇ ಇಸವಿಯು ನಮ್ಮ ಆಧುನಿಕ ಸಮಾಜಗಳನ್ನು ಹಲವು ವಿಧದಲ್ಲಿ ಮುಖಾಮುಖಿಯಾಗಿಸಿದೆ.

ಜಗತ್ತಿನಾದ್ಯಂತ ನಿರಂಕುಶ ಪ್ರಭುತ್ವಗಳ ನೇತಾರರು ಮತ್ತು ಮಹತ್ವಾಕಾಂಕ್ಷೆ ಹೊಂದಿರುವ ಸರ್ವಾಧಿಕಾರಿಗಳು ಗಡಿ, ಜನಾಂಗ, ಧರ್ಮ ಎಲ್ಲವನ್ನೂ ಮೀರಿ ಸ್ವಾತಂತ್ರ್ಯಕ್ಕೆ ಬಹಿರಂಗವಾಗಿಯೇ ಸವಾಲು ಒಡ್ಡುತ್ತಿದ್ದಾರೆ. ಆಧುನಿಕ ಸಂಘರ್ಷಗಳು ಇಡೀ ಭೂಗೋಳವನ್ನೇ ವ್ಯಾಪಿಸಿವೆ ಮತ್ತು ಅಗಾಧವಾದ ವ್ಯಾಪ್ತಿ ಹಾಗೂ ಶಕ್ತಿಯನ್ನು ಹೊಂದಿರುವ ಮಾಹಿತಿಯ ಹರವಿನಲ್ಲಿ ಈ ಸಂಘರ್ಷ ನಡೆಯುತ್ತಿದೆ. ಹೊಸ ತಂತ್ರಜ್ಞಾನಗಳು ಹಾಗೂ ಹೊಸ ವೇದಿಕೆಗಳು ಅವರ ಯುದ್ಧಭೂಮಿಗಳಾಗಿದ್ದು, ನಮ್ಮ ಭವಿಷ್ಯವನ್ನು– ಬಹುತೇಕ ಸಲ ನಮ್ಮ ಸಮ್ಮತಿ ಇಲ್ಲದೆ ಮತ್ತು ಇಚ್ಛೆಗೆ ವಿರುದ್ಧವಾಗಿ– ನಿರ್ಧರಿಸುವ ಸಾಧನಗಳೂ ಆಗಿವೆ.

ಇಂತಹ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ, ನಮ್ಮ ನಾಗರಿಕತೆಗಳು ಕಟ್ಟಿಕೊಟ್ಟಿರುವ ಸ್ವಯಂ ಪ್ರಮಾಣೀಕೃತ ಮೌಲ್ಯಗಳನ್ನು ರಕ್ಷಿಸುವ ಬಹುದೊಡ್ಡ ಕರ್ತವ್ಯವು ಪತ್ರಿಕೋದ್ಯಮದ, ಅಂದರೆ ಸತ್ಯಸಂಗತಿ, ಸಾಕ್ಷ್ಯ ಆಧಾರಿತ ಹಾಗೂ ವಿಶ್ವಾಸಾರ್ಹ ಸುದ್ದಿ ನೀಡುವ ಮಾಧ್ಯಮಗಳ ಮೇಲಿದೆ. ನಮ್ಮ ಓದುಗರು, ವೀಕ್ಷಕರು ಮತ್ತು ಸಮುದಾಯಗಳೊಂದಿಗಿನ ಪವಿತ್ರ ಬಾಂಧವ್ಯವನ್ನು ಗೌರವಿಸುವುದಕ್ಕಾಗಿ ಜಗತ್ತಿನಾದ್ಯಂತ ಪತ್ರಕರ್ತರಾದ ನಾವು ಹೊಣೆಗಾರಿಕೆಯನ್ನು ನಿರ್ವಹಿಸುತ್ತಾ ಬಂದಿದ್ದೇವೆ.

ನಾವು ಬರೆದ ಸುದ್ದಿಗಳು, ವಿಶೇಷ ವರದಿಗಳು ಜನರ ಜೀವಗಳನ್ನು ಉಳಿಸಿದಾಗ, ಜನರ ನಡುವಿನ ಸಂಬಂಧವನ್ನು ಸುಧಾರಿಸಿದಾಗ ಮತ್ತು ಕಷ್ಟದ ಸಮಯದಲ್ಲಿ ಅವು ನಮಗೆ ಮಾರ್ಗದರ್ಶನ ಮಾಡುವಾಗ ನಮಗೆ ಆಗುವ ಸಂತೋಷ ಕೂಡ ಆಗಾಗ ತಪ್ಪು ಮಾಹಿತಿಗಳ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತದೆ. ಇದು ನಂಬಿಕೆಯನ್ನು ನಾಶ ಮಾಡುವುದಲ್ಲದೆ, ನಾವೆಲ್ಲರೂ ಒಂದಾಗಿ ಬದುಕುವ ನಮ್ಮ ಸಾಮರ್ಥ್ಯವನ್ನೇ ಕುಂದಿಸುತ್ತದೆ. ಪರಿಸ್ಥಿತಿ ಈಗ ಎಲ್ಲಿಗೆ ಬಂದಿದೆ ಎಂದರೆ, ಸತ್ಯದ ಅರ್ಥವೂ ಆಕ್ರಮಣಕ್ಕೆ ತುತ್ತಾಗುತ್ತಿದೆ!

ಹಾಗಿದ್ದರೂ, ಈ ಸಂಕಷ್ಟದ ದಿನಗಳು ಕೂಡ ನಮಗೆ ಉತ್ತೇಜನಕಾರಿಯಾಗಿವೆ ಮತ್ತು ಭರವಸೆದಾಯಕವಾಗಿವೆ. ವ್ಯವಸ್ಥೆಗಳು ಕುಸಿಯುತ್ತಿರುವ ಮತ್ತು ಮೂಲಭೂತ ಸತ್ಯಗಳು ಒತ್ತಡದಲ್ಲಿರುವ ಈ ಸಂದರ್ಭದಲ್ಲಿ ನಾವು ಅತ್ಯಂತ ನಿಷ್ಠುರವಾಗಿದ್ದೇವೆ ಎಂಬುದನ್ನು ಜಗತ್ತಿನ ಮಾಧ್ಯಮಗಳು ತೋರಿಸಬೇಕು. ನಮ್ಮ ನಿಲುವುಗಳು ಹೇಗಿರಬೇಕೆಂದರೆ, ಸುಳ್ಳು ಮಾಹಿತಿಗಳ ಅಭಿಯಾನಗಳು, ನಿರಂತರವಾದ ದಾಳಿಗಳು ಮತ್ತು ಸುಳ್ಳಿನ ಪ್ರವಾಹಗಳನ್ನು ಸಮರ್ಥವಾಗಿ ಎದುರಿಸುವಂತಿರಬೇಕು.

ಇವೆಲ್ಲ ಆಕಸ್ಮಿಕವಾಗಿ, ಗೊತ್ತುಗುರಿ ಇಲ್ಲದೆ ನಡೆಯುವ ದಾಳಿಗಳಲ್ಲ. ಇವೆಲ್ಲವೂ ನಮ್ಮ ವ್ಯವಸ್ಥೆಯ ಮೌಲ್ಯಗಳು, ಒಳ್ಳೆಯದು ಮತ್ತು ಕೆಟ್ಟದ್ದರ ಬಗ್ಗೆ ನಮಗಿರುವ ಕನಿಷ್ಠ ಅರಿವಿನ ವಿರುದ್ಧ ನಡೆಯುತ್ತಿರುವ ಯುದ್ಧದ ಭಾಗ. ನಮ್ಮಲ್ಲಿ ಮೌಲ್ಯಗಳು ಇಲ್ಲದಿದ್ದರೆ ಸರಿ ಯಾವುದು, ತಪ್ಪು ಯಾವುದು ಎಂಬುದನ್ನು ಗುರುತಿಸಲು ಸಾಧ್ಯವಿಲ್ಲ. ಅಷ್ಟೇ ಅಲ್ಲ, ನಮ್ಮಲ್ಲಿ ನಾಗರಿಕತೆಯೂ ಉಳಿಯುವುದಿಲ್ಲ.

ಸೆಪ್ಟೆಂಬರ್ 28, ವಿಶ್ವ ಸುದ್ದಿ ದಿನ. ಈ ಹೊತ್ತಿನಲ್ಲಿ ಜಗತ್ತಿನಾದ್ಯಂತ ಇರುವ ಸುದ್ದಿ ಮಾಧ್ಯಮಗಳ ಪ್ರತಿನಿಧಿಗಳಾದ ನಾವು ಒಟ್ಟಾಗಿ, ಓದುಗರಾದ ನಿಮಗೆ ಸುದ್ದಿ, ಸತ್ಯಸಂಗತಿ, ಉತ್ತರದಾಯಿತ್ವ, ಸಾರ್ವಜನಿಕ ಸೇವೆ, ಮಾನವೀಯತೆ, ವಿಮರ್ಶೆ, ಸ್ವಾತಂತ್ರ್ಯ, ನೈತಿಕತೆ ಮತ್ತು ಸಮುದಾಯಗಳಿಗೆ ಸಂಬಂಧಿಸಿದಂತೆ ನಮ್ಮ ಶಾಶ್ವತವಾದ ಬದ್ಧತೆಯನ್ನು ದೃಢೀಕರಿಸುತ್ತೇವೆ.

ಈ ಮೇಲಿನ ಎಲ್ಲಾ ಪದಗಳು ಆಳವಾದ ಅರ್ಥವನ್ನು ಹೊಂದಿವೆ. ನಮಗೆ ಇವು ಬಹಳ ಮುಖ್ಯ.

ಈಗ ನಮ್ಮ ಮುಂದೆ ಇರುವುದು ಒಂದೇ ಆಯ್ಕೆ: ಸುದ್ದಿ ಮಾಧ್ಯಮಗಳಾದ ನಾವು, ನಮ್ಮ ಪವಿತ್ರವಾದ ಕರ್ತವ್ಯವನ್ನು ಮುಂದುವರಿಸುತ್ತೇವೆ. ನಾವು ವರದಿ ಮಾಡುವ ಸುದ್ದಿಗಳು ಯಾವಾಗಲೂ ಸತ್ಯಸಂಗತಿ ಆಧಾರಿತವಾಗಿರಲಿವೆ ಮತ್ತು ಆ ಸತ್ಯವನ್ನು ನಾವು ಸಮರ್ಥಿಸಿಕೊಳ್ಳುತ್ತೇವೆ.

ಪ್ರಿಯ ಓದುಗರೇ, ಮುಂದುವರಿದು ನಾವು ನಿಮಗೆ ನೀಡುವ ಭರವಸೆ ಏನೆಂದರೆ, ನಾವು ಎಂದಿಗೂ ತಾಳ್ಮೆಗೆಡುವುದಿಲ್ಲ, ಕೈ ಚೆಲ್ಲುವುದೂ ಇಲ್ಲ. ಸತ್ಯಕ್ಕಾಗಿ ನಡೆಸಲಾಗುತ್ತಿರುವ ಹೋರಾಟವು ನಮ್ಮೆಲ್ಲರ ಭವಿಷ್ಯಕ್ಕಾಗಿನ ಹೋರಾಟವೂ ಹೌದು ಎಂಬುದನ್ನು ನಾವು ಬಲ್ಲೆವು.

ಪ್ರಕ್ಷುಬ್ಧ ಪರಿಸ್ಥಿತಿಯ ಇತಿಹಾಸ ಇರುವ ಕಡೆಗಳಲ್ಲೆಲ್ಲ ಕರ್ತವ್ಯ ನಿರ್ವಹಿಸುತ್ತಿರುವ ನಮ್ಮ ಸಹೋದ್ಯೋಗಿಗಳು ಹತಾಶರಾಗಬೇಕಿಲ್ಲ. ನೀವು ಏಕಾಂಗಿಗಳಲ್ಲ. ನಾವು ಹೊಂದಿರುವ ಧ್ಯೇಯವು ನಮ್ಮೆಲ್ಲರನ್ನೂ ಒಟ್ಟುಗೂಡಿಸುತ್ತದೆ. ಗದ್ದಲ ಮತ್ತು ಹಿಂಸಾಚಾರ ಕ್ರಮೇಣ ಕಡಿಮೆಯಾಗಲಿವೆ. ಸತ್ಯ ಆಧಾರಿತ ಪರಿಸ್ಥಿತಿ, ಸಭ್ಯ ನಡವಳಿಕೆಗಳು ಮರಳಲಿವೆ. ಈ ಬೆಳವಣಿಗೆಗಳು ತಕ್ಷಣಕ್ಕೆ ಆಗದಿರಬಹುದು; ಆದರೆ, ಮುಂದಿನ ದಿನಗಳಲ್ಲಿ ಖಂಡಿತವಾಗಿಯೂ ಅಂತಹ ವಾತಾವರಣ ನಿರ್ಮಾಣವಾಗಲಿದೆ. ಸದ್ಯ, ಇದಕ್ಕಾಗಿ ಪ್ರತಿ ದಿನದ ಪ್ರತಿ ಗಂಟೆ, ಪ್ರತಿ ಕ್ಷಣವೂ ನಾವು ಹೋರಾಡುತ್ತೇವೆ.

2024ರ ವಿಶ್ವ ಸುದ್ದಿ ದಿನದ ಸಂದರ್ಭದಲ್ಲಿ, ನಾವು ಮೊದಲಿನಿಂದಲೂ ಇಲ್ಲಿ ಏಕೆ ಇದ್ದೇವೆ ಎಂಬುದನ್ನು ಮರೆಯದಿರೋಣ, ನಮ್ಮ ಓದುಗರೊಂದಿಗೆ ಮತ್ತು ನಮ್ಮ ಅಂತರಾತ್ಮದೊಂದಿಗೆ ಸತ್ಯವನ್ನು ಹಂಚಿಕೊಂಡ ಖುಷಿಯನ್ನು ಉಳಿಸಿಕೊಳ್ಳಲು ಪರಸ್ಪರ ನೆರವಾಗೋಣ.

ಲೇಖಕರು: ಬ್ರಾಂಕೊ ಬರ್ಕಿಚ್– ದಕ್ಷಿಣ ಆಫ್ರಿಕಾದ ಡೈಲಿ ಮ್ಯಾವೆರಿಕ್ ಪತ್ರಿಕೆಯ ಮುಖ್ಯ ಸಂಪಾದಕ ಮತ್ತು 'ಸತ್ಯವನ್ನು ಆಯ್ಕೆ ಮಾಡಿ' ಅಭಿಯಾನದ ರೂವಾರಿ.
ಮರಿಯಾ ರೆಸ್ಸಾ– ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತೆ ಮತ್ತು ಫಿಲಿಪ್ಪೀನ್ಸ್‌ನ ರ‍್ಯಾಪ್ಲರ್.ಕಾಮ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ

ವಾಚಕರ ವಾಣಿ

ಗುಣಮಟ್ಟ ಕಾಯ್ದುಕೊಳ್ಳುವಿಕೆಯಲ್ಲಿನ ವೈಫಲ್ಯ

ತಮಿಳುನಾಡಿನ ಡೇರಿಯೊಂದು ಪೂರೈಸಿರುವ ಶಂಕಿತ ಕಲಬೆರಕೆ ತುಪ್ಪವನ್ನು ಲಾಡುಗಳ ತಯಾರಿಕೆಗೆ ಬಳಸಿಲ್ಲ ಎಂದು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಸರ್ಕಾರಕ್ಕೆ ನೀಡಿದ ವರದಿಯಲ್ಲಿ ತಿಳಿಸಿದೆ. ಹಾಗಾದರೆ ದೇವಾಲಯದ ಶುದ್ಧೀಕರಣ ಕಾರ್ಯದ ಅಗತ್ಯ ಬರುವುದಿಲ್ಲ. ಆಡಳಿತದ ಚುಕ್ಕಾಣಿ ಹಿಡಿದಿರುವವರು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕಾದ ಅತ್ಯಂತ ಘೋರ ಘಟನೆಗಳು ಪ್ರತಿನಿತ್ಯ ನಡೆಯುತ್ತಿರುವಾಗ, ಅವೆಲ್ಲವನ್ನೂ ಪರಿಹರಿಸಬೇಕಾದ ಸ್ಥಾನದಲ್ಲಿರುವ ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು ಪ್ರಾಯಶ್ಚಿತ್ತ ದೀಕ್ಷೆ ಪ್ರಾರಂಭಿಸಿರುವುದು ಸಹ ಅನಗತ್ಯವೇ ಆಗುತ್ತದೆ.

ಈ ಕಲಬೆರಕೆ ಪ್ರಹಸನದ ಪ್ರಕರಣಗಳು ನಡೆದ ರೀತಿ ಹೀಗಿದೆ; ಟಿಟಿಡಿಯಿಂದ ಶಂಕಿತ ತುಪ್ಪದ ಮಾದರಿಗಳನ್ನು ಜುಲೈನಲ್ಲಿ ಗುಜರಾತ್‌ನ ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿಯ ಅಂಗಸಂಸ್ಥೆಯಾದ ಜಾನುವಾರು ಮತ್ತು ಆಹಾರ ವಿಶ್ಲೇಷಣೆ ಹಾಗೂ ಕಲಿಕಾ ಕೇಂದ್ರಕ್ಕೆ ಕಳಿಸಲಾಯಿತು. ತುಪ್ಪದ ಮಾದರಿಯು ಸೋಯಾ, ಆಲಿವ್, ಸೂರ್ಯಕಾಂತಿ, ಹತ್ತಿ ಬೀಜ, ತಾಳೆ ಎಣ್ಣೆ, ಮೀನಿನ ಎಣ್ಣೆ, ದನ ಅಥವಾ ಹಂದಿ ಮಾಂಸದ ಕೊಬ್ಬಿನಂತಹ ಯಾವುದೋ ಅಂಶದಿಂದ ಕಲಬೆರಕೆ ಆಗಿದೆ ಎಂದು ಈ ಕೇಂದ್ರವು ವರದಿ ನೀಡಿತು. ಈ ವಿಷಯವನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿ ಎರಡು ತಿಂಗಳಷ್ಟು ತಡವಾಗಿ ಬಹಿರಂಗಪಡಿಸಿದರು. ಆಹಾರ ಕಲಬೆರಕೆ ಬಗ್ಗೆ ಅಂತಿಮ ವರದಿ ನೀಡಬೇಕಾದ ಗಾಜಿಯಾಬಾದ್‌ನ ರಾಷ್ಟ್ರೀಯ ಆಹಾರ ಪ್ರಯೋಗಾಲಯಕ್ಕೆ ಈ ಮಾದರಿಗಳನ್ನು ಕಳಿಸಿ ಫಲಿತಾಂಶವನ್ನು ಇನ್ನೂ ಪಡೆದಿಲ್ಲ.

ಈ ವಿಷಯದಲ್ಲಿ ಗುಣಮಟ್ಟ ಕಾಪಾಡುವಲ್ಲಿ ಟಿಟಿಡಿ ವೈಫಲ್ಯ ನಿಚ್ಚಳವಾಗಿದೆ. ಇದರಿಂದ ಖಂಡಿತವಾಗಲೂ ಭಕ್ತರ ನಂಬಿಕೆಗೆ ಧಕ್ಕೆಯಾಗಿದೆ. ಆದರೂ ಒಂದು ಸಮಾಧಾನಕರ ಸಂಗತಿ ಎಂದರೆ, ಈ ಎಲ್ಲ ಬೆಳವಣಿಗೆಗಳಿಂದ ನಮ್ಮ ಕರ್ನಾಟಕದ ಹೆಮ್ಮೆಯ ನಂದಿನಿ ಬ್ರ್ಯಾಂಡ್‌ನ ವಿಶ್ವಾಸಾರ್ಹತೆ ಬಗ್ಗೆ ಇಡೀ ದೇಶ ಮೆಚ್ಚುಗೆಯಿಂದ ಮಾತನಾಡುವಂತೆ ಆಗಿದೆ. ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳ ಅಬ್ಬರ, ರಾಜಕೀಯ ಕೆಸರೆರಚಾಟದ ನಡುವೆಯೂ ತಿರುಪತಿಯಲ್ಲಿ ಭಕ್ತರ ಸಂಖ್ಯೆ ಕಡಿಮೆಯಾಗಿಲ್ಲ ಹಾಗೂ ಲಾಡುಗಳ ಮಾರಾಟದಲ್ಲಿ ಕುಂಠಿತವಾಗಿಲ್ಲ. ಆದ್ದರಿಂದ ತಿರುಪತಿ ಲಾಡುಗಳಿಗೆ ಬಳಸುವ ತುಪ್ಪದ ಕಲಬೆರಕೆ ಪ್ರಕರಣವನ್ನು ಗುಣಮಟ್ಟ ಕಾಯ್ದುಕೊಳ್ಳುವಲ್ಲಿನ ವೈಫಲ್ಯ ಎಂಬ ಕೋನದಲ್ಲಿ ತನಿಖೆ ಮಾಡಿ, ತಪ್ಪಿತಸ್ಥರಿಗೆ ಬೇಗ ಶಿಕ್ಷೆ ಆಗಿ ಈ ವಿಷಯ ಅಂತ್ಯವಾಗಲಿ.

ಟಿ.ಜಯರಾಂ, ಕೋಲಾರ

ಲಡ್ಡುಗಳಲ್ಲಿ ರಾಜಕಾರಣದ ವಾಸನೆ

'ತಿರುಪತಿ ಲಡ್ಡು ಮತ್ತು ನಮ್ಮ ಜಡ್ಡು' ಲೇಖನದ (ಪ್ರ.ವಾ., ಸೆ. 24) ಮೂಲಕ ರಘುನಾಥ ಚ.ಹ. ಅವರು ನಮ್ಮನ್ನು ಗಂಭೀರ ಚಿಂತನೆಗೆ ಹಚ್ಚಿದ್ದಾರೆ. ಕಾರ್ಲ್‌ಮಾರ್ಕ್ಸ್ ಬಹಳ ಹಿಂದೆ ರಿಲಿಜನ್ ಜನರ ಅಫೀಮು ಎಂದಿದ್ದ. ನಮ್ಮಲ್ಲೀಗ ಧರ್ಮನಿರಪೇಕ್ಷ ರಾಜಕಾರಣದ ಬದಲು ಹಿಂದುತ್ವ ರಾಜಕಾರಣ ಮುನ್ನೆಲೆಗೆ ಬಂದು, ವ್ಯಕ್ತಿ ಮತ್ತು ದೇವರ ನಡುವೆ ಖಾಸಗಿಯಾಗಿ ಇರಬೇಕಾಗಿದ್ದ ಧಾರ್ಮಿಕತೆಯು ಸಾರ್ವಜನಿಕ ಹಿಂಸೆಯ ಮೂಲಾಯುಧವಾಗಿ ಬಳಕೆಗೆ ಬಂದಿದೆ. ಅದರ ವ್ಯಾಪಾರಿ ಮುಖವನ್ನೂ ಆ ಮೂಲಕ ಪ್ರಜಾಪ್ರಭುತ್ವದ ಸೌಧದಲ್ಲಿ ಆಗುತ್ತಿರುವ ಬಿರುಕಿನ ಕಾರಣಗಳನ್ನೂ ಲೇಖನ ವಿಶ್ಲೇಷಿಸಿದೆ.

ನಾವೀಗ ಸತ್ಯೋತ್ತರ ಕಾಲದಲ್ಲಿದ್ದೇವೆ. ಇದು ಜನ ತಮಗೆ ಬೇಕಾದ್ದನ್ನು ಸತ್ಯವೆಂದು ನಂಬುವ ಕಾಲ. ವಿಘಟನೆ ಎಷ್ಟಾಗಿದೆ ಎಂದರೆ, ಧರ್ಮದ ಮೂಲ ಕಲ್ಪನೆಗೂ ನಮ್ಮ ಧಾರ್ಮಿಕ ನಂಬುಗೆಗೂ ಸಂಬಂಧ ಇದೆಯೆಂಬ ನೆನಪೂ ಇಲ್ಲದಂತಾಗಿದೆ. ರಾಜಕೀಯ ಮತ್ತು ಧಾರ್ಮಿಕತೆಯು ಪ್ರಜಾಪ್ರಭುತ್ವದಲ್ಲಿ ಪ್ರತ್ಯೇಕವಾಗಿ ಇರಬೇಕೆಂಬ ಮೂಲ ವಿಚಾರವೇ ಮರೆತುಹೋಗಿದೆ. ರಾಜಕಾರಣಿಗಳು ನಿರಂತರವಾಗಿ ಸುಳ್ಳು ಹೇಳುವುದು, ಸತ್ಯವನ್ನು ತಿರುಚುವುದು ನಮಗೆ ತಪ್ಪು ಎಂದು ಅನಿಸದಿರುವಾಗ, ರಾಜಕಾರಣಿಗಳು ಹಾಕುವ ಭಾವನಾತ್ಮಕ ಗಾಳಕ್ಕೆ ಪ್ರಜೆಗಳು ಸಿಕ್ಕಿಬೀಳುವ ಮೀನುಗಳಾಗುತ್ತಾರೆ. ಪ್ರಾಮಾಣಿಕರಾಗಿದ್ದರೆ ಜನರ ಭಾವನೆಗಳನ್ನು ಕೆದಕದೆ ಪ್ರಾಮಾಣಿಕವಾಗಿ ವಿಚಾರಣೆ ಮಾಡಬೇಕಿತ್ತು. ತುಪ್ಪದ ಗುಣಮಟ್ಟ ವ್ಯವಸ್ಥೆಯನ್ನು ಪಾರದರ್ಶಕಗೊಳಿಸಬೇಕಾಗಿತ್ತು. ಬದಲಾಗಿ, ಲಡ್ಡುಗಳ ತುಂಬಾ ರಾಜಕಾರಣದ ವಾಸನೆ ಹೊಡೆಯುತ್ತಿದೆ. ನಮ್ಮ ನ್ಯಾಯಾಲಯಗಳಲ್ಲಿ ತಿರುಪತಿ ತಿಮ್ಮಪ್ಪ ದೇವರು ಅವನ ಹೆಸರು ಹಾಳು ಮಾಡುವವರ ವಿರುದ್ಧ ಮಾನನಷ್ಟ ಮೊಕದ್ದಮೆ ಹಾಕಲಾರ. ಹಾಗಾಗಿ, ಮಾಸ್ತಿಯವರ ಕತೆಯ ಜೋಗ್ಯೋರ ಅಂಜಪ್ಪ ಹೇಳುವ ಹಾಗೆ, ಗುಡ್ಡದ ಮೇಲಿರುವ ದೇವರು ಅವನ ನ್ಯಾಯಾಲಯದಲ್ಲಿ ಇವರ ವಿಚಾರಣೆ ಮಾಡಬೇಕಷ್ಟೆ. ಆದರೆ ಪ್ರಜಾಪ್ರಭುತ್ವದಲ್ಲಿ ಜನರ ನ್ಯಾಯಾಲಯ ಮನಸ್ಸು ಮಾಡಿದರೆ ಈ ರಾಜಕಾರಣಿಗಳ ಉದ್ರೇಕಿಸುವ ಮಾತು, ವಿಚಾರಗಳಿಗೆ ಕಡಿವಾಣ ಹಾಕಬಹುದು.

ಎಸ್.ಆರ್.ವಿಜಯಶಂಕರ, ಬೆಂಗಳೂರು

ಆ…ಪಟ್ಟಕ್ಕಾಗಿ?!

ಮೊನ್ನೆ, ಧನಂಜಯನೊಂದಿಗೆ
ಕಾದಾಡಿದ್ದ ಕಂಜನ್
ಅರಮನೆಯ ಖಾಸಗಿ ದರ್ಬಾರ್‌ಗೆ
'ಪಟ್ಟದ' ಆನೆಯಾಗಿ
ಆಯ್ಕೆಯಾದನಂತೆ!
ಕಳೆದ ಬಾರಿ ಆ ಪಟ್ಟ
ಧನಂಜಯನದಾಗಿತ್ತಂತೆ!
ಅಂತೂ ದಸರಾ ಆನೆಗಳ
'ಆ' ಕಾದಾಟದ ಗುಟ್ಟು
ಈಗ ಅರ್ಥವಾಗಿರಬೇಕಲ್ಲ?!

ಮ.ಗು.ಬಸವಣ್ಣ
ಮೈಸೂರು

ಪೋಕ್ಸೊಗೆ ಬಲ: ಸ್ವಾಗತಾರ್ಹ ಕ್ರಮ

ಪೋಕ್ಸೊ ಕಾಯ್ದೆಗೆ ಬಲ ತುಂಬಿರುವ ಸುಪ್ರೀಂ ಕೋರ್ಟ್ ತೀರ್ಪು ಅತ್ಯಂತ ಮಹತ್ವದ್ದು. ಮಕ್ಕಳ ಲೈಂಗಿಕ ದುರುಪಯೋಗವು ಆ ನಂತರದ ಅವರ ಜೀವನದಲ್ಲಿ ಮಾನಸಿಕ ಕ್ಷೋಭೆಗೆ ಕಾರಣವಾಗಬಹುದು. ಖಿನ್ನತೆ, ಆತಂಕ, ನಿದ್ರಾಭಂಗದಂತಹ ಆಘಾತಕಾರಿ ನಡವಳಿಕೆಗಳು ಬೇರೂರಬಹುದು. ಮಗು ತನ್ನ ಶಾಲೆ ಮತ್ತು ಸಾಮಾಜಿಕ ಚಟುವಟಿಕೆಗಳಿಂದ ಹಿಂದೆ ಸರಿಯಬಹುದು. ಪ್ರಾಣಿಗಳ ಮೇಲಿನ ಕ್ರೌರ್ಯ ಸೇರಿದಂತೆ ವಿವಿಧ ಕಲಿಕೆ ಮತ್ತು ನಡವಳಿಕೆಯ ಸಮಸ್ಯೆಗಳನ್ನು ಪ್ರದರ್ಶಿಸಬಹುದು. ಅಲ್ಲದೆ ಲೈಂಗಿಕವಾಗಿ ಹರಡುವ ಸೋಂಕುಗಳಿಗೆ ಮಕ್ಕಳು ತುತ್ತಾಗಬಹುದು ಅಥವಾ ಸೋಂಕಿನ ಸಾಧ್ಯತೆ ಹೆಚ್ಚಾಗಬಹುದು. ಹೀಗಾಗಿ, ಮಕ್ಕಳನ್ನು ಲೈಂಗಿಕವಾಗಿ ಬಳಸಿಕೊಳ್ಳುವ ದುರುಳರಿಗೆ ಕಾನೂನಿನ ಅಡಿ ತಕ್ಕ ಶಿಕ್ಷೆ ವಿಧಿಸಲೇಬೇಕಿದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೀಸಲಾತಿಯ ಕ್ರಮಬದ್ಧ ವಿಕೇಂದ್ರೀಕರಣ

• ಸಂತೋಷ್ ಕೋಡಿಹಳ್ಳಿ

ಶೋಷಿತರೊಳಗಿನ ಶೋಷಿತರಿಗೆ, ಅಸ್ಪೃಶ್ಯರೆಂಬ ಹಣೆಪಟ್ಟಿ ಹೊತ್ತವರೊಳಗಿನ ಅಸ್ಪೃಶ್ಯರಿಗೆ; ಪರಿಶಿಷ್ಟರಿಂದಲೇ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಶೋಷಣೆಗೀಡಾಗುತ್ತಾ ಅಗೋಚರ ಅಸ್ಪೃಶ್ಯತೆಗೆ ಒಳಗಾದವರ ಅಭ್ಯುದಯಕ್ಕಾಗಿ ವರ್ಗೀಕರಣ ಮಾಡಿ ನೀಡಲಾಗುವ ಮೀಸಲಾತಿಯನ್ನು ಒಳಮೀಸಲಾತಿಯೆಂದು ಸ್ಥೂಲವಾಗಿ ಅರ್ಥೈಸಿಕೊಳ್ಳಬಹುದು. ಸಾವಿರಾರು ಜಾತಿಗಳನ್ನು ಕೇಂದ್ರೀಕರಿಸಿ ಒಟ್ಟುಗೂಡಿಸಿರುವ ಮೀಸಲಾತಿಯನ್ನು ಕ್ರಮಬದ್ಧವಾಗಿ ವಿಕೇಂದ್ರೀಕರಿಸುವ ಸಾಂವಿಧಾನಿಕ ತತ್ವ ಮತ್ತು ಆಶಯವೇ ಒಳಮೀಸಲಾತಿ.

1950ರಿಂದಲೂ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ 1,241 ಜಾತಿಗಳು, ಪರಿಶಿಷ್ಟ ವರ್ಗಗಳ ಪಟ್ಟಿಯಲ್ಲಿರುವ 705 ಜಾತಿಗಳಿಗೆ ಕೊಡಮಾಡಲಾಗಿರುವ ಪರಿಶಿಷ್ಟರ ಮೀಸಲಾತಿಯು ಕೇಂದ್ರೀಕೃತ ಸ್ಥಿತಿಯಲ್ಲಿಯೇ ಉಳಿದುಹೋಗಿದೆ. ಕೇಂದ್ರೀಕೃತ ಮೀಸಲಾತಿಯನ್ನು ಕೆಲವೇ ಕೆಲವು ಉಪಜಾತಿಗಳು ಎಂಟು ದಶಕಗಳಿಂದ ಮುಫತ್ತಾಗಿ ದಕ್ಕಿಸಿಕೊಂಡು ಎಲ್ಲ ರಂಗಗಳಲ್ಲಿಯೂ ಮೇಲೆ ಬಂದಿವೆ.

ಸ್ವಾತಂತ್ರ್ಯಪೂರ್ವದಲ್ಲಿ ರಾಜಪ್ರಭುತ್ವ ಹಾಗೂ ಬ್ರಿಟಿಷ್ ಪ್ರಭುತ್ವಗಳಿಗೆ ನಿಕಟವಾಗಿದ್ದ ಹಾಗೂ ಸ್ವಾತಂತ್ರ್ಯ ನಂತರದ ಸರ್ಕಾರಗಳಿಗೂ ಹತ್ತಿರವಾಗಿದ್ದ ಉಪಜಾತಿಗಳಲ್ಲಿನ ಮೊದಲೆರಡು ತಲೆಮಾರುಗಳು ಮೀಸಲಾತಿ ಸವಲತ್ತನ್ನು ಪಡೆದು ಮುಖ್ಯವಾಹಿನಿಯಲ್ಲಿ ಭದ್ರವಾಗಿ ಹೆಜ್ಜೆಯೂರಿವೆ. ಅಸಮಾನತೆಯ ಕೂಪವಾದ ಜಾತಿ ವ್ಯವಸ್ಥೆಯ ಶ್ರೇಣಿಗಳಲ್ಲಿ ಸಾಮಾಜಿಕ-ಸಾಂಸ್ಕೃತಿಕ ಕೀಳರಿಮೆಗಳನ್ನು ತಕ್ಕಮಟ್ಟಿಗೆ ಗೆದ್ದು ತಮ್ಮನ್ನು ಮೇಲುಸ್ತರದಲ್ಲಿಟ್ಟುಕೊಂಡು ಉಳಿದ ಶೋಷಿತರಿಂದ ಎಲ್ಲ ಬಗೆಯ ಅಂತರ ಕಾಯ್ದುಕೊಂಡಿವೆ. ವಿಪರ್ಯಾಸವೆಂದರೆ, ಮೇಲಿನ ಎಲ್ಲ ಅಂಶಗಳಿಗೆ ತದ್ವಿರುದ್ಧವಾಗಿ ದೇಶದಾದ್ಯಂತ ಉಳಿದುಹೋಗಿರುವ ನೂರಾರು ಮೀಸಲಾತಿವಂಚಿತ ಉಪಜಾತಿ ಗಳನ್ನು ಕನಿಷ್ಠ ಮಟ್ಟದ ಮೀಸಲಾತಿ ಸೌಲಭ್ಯಗಳನ್ನು ದಕ್ಕಿಸಿಕೊಳ್ಳಲಾಗದ ಶೋಚನೀಯ ಸ್ಥಿತಿಗೆ ತಳ್ಳಲಾಗಿದೆ.

ಮೀಸಲಾತಿಯ ಪಾಲಿನಲ್ಲಿ ಏಕಸ್ವಾಮ್ಯದ ಸವಲತ್ತು ಹೊಂದಿರುವ ಪರಿಶಿಷ್ಟರು ಮತ್ತು ಮೀಸಲಾತಿವಂಚಿತ ಪರಿಶಿಷ್ಟರ ನಡುವೆ ಅದನ್ನು ಹಂಚಬೇಕಿರುವ ಆಡಳಿತಾತ್ಮಕ ಒತ್ತಾಸೆ ಮತ್ತು ನೈತಿಕ ಕರ್ತವ್ಯ ಸರ್ಕಾರಗಳದ್ದಾಗಿದೆ. ಸುಪ್ರೀಂ ಕೋರ್ಟ್ ನೀಡಿರುವ ಐತಿಹಾಸಿಕ ತೀರ್ಪಿನಿಂದ ಒಳಮೀಸಲಾತಿಯ ಬೇಡಿಕೆಯನ್ನು ಸಾಂವಿಧಾನಿಕ ಹಕ್ಕನ್ನಾಗಿ ಪರಿಗಣಿಸಬೇಕಾದ ಸನ್ನಿವೇಶ ಈಗ ಉದ್ಭವವಾಗಿದೆ. ಆಗಸ್ಟ್ 1ರಂದು ಸುಪ್ರೀಂ ಕೋರ್ಟ್ ನೀಡಿರುವ ಐತಿಹಾಸಿಕ ತೀರ್ಪು ಒಳಮೀಸಲಾತಿ ವಿರುದ್ಧ ಈವರೆಗೆ ಚಾಲ್ತಿಯಲ್ಲಿದ್ದ ಬಗೆ ಬಗೆಯ ಒಳ ಆಟಗಳಿಗೆ ಪೂರ್ಣವಿರಾಮ ಇಟ್ಟಿದೆ.

ಒಳಮೀಸಲಿನ ಒಡಲಾಳ

ಒಳಮೀಸಲಿನ ಇತಿಹಾಸ: 1975ರಲ್ಲಿ ಪಂಜಾಬ್ ಹಾಗೂ ಹರಿಯಾಣದಲ್ಲಿ ಬಾಲ್ಮೀಕಿಗಳಿಗೆ ಆನಂತರ ಮಜಬಿ ಸಿಖ್ಖರಿಗೆ ಮೊದಲ ಬಾರಿಗೆ ಪರಿಶಿಷ್ಟರಲ್ಲಿ ಒಳಮೀಸಲು ಕಲ್ಪಿಸಲಾಗಿತ್ತು. ಈ ರಾಜ್ಯಗಳ ಒಳಮೀಸಲು ಪರಿಕಲ್ಪನೆಯಿಂದ ಸ್ಫೂರ್ತಿ ಪಡೆದು 1994ರಲ್ಲಿ ಅವಿಭಜಿತ ಆಂಧ್ರ ಪ್ರದೇಶದಲ್ಲಿ ಮಾದಿಗ ಮೀಸಲಾತಿ ಹೋರಾಟ ಸಮಿತಿ (ಎಂಆರ್‌ಪಿಎಸ್) ಜನ್ಮ ತಳೆಯಿತು. ಆನಂತರ ಮಾದಿಗ ದಂಡೋರ ಹಾಗೂ ಎಂಆರ್‌ಎಚ್‌ಎಸ್ ಎಂಬ ಪ್ರಮುಖ ಸಂಘಟನೆಗಳ ಮೂಲಕ ಒಳಮೀಸಲು ಚಳವಳಿ ಕರ್ನಾಟಕಕ್ಕೂ ವಿಸ್ತರಿಸಿತು. ತಮಿಳುನಾಡಿನಲ್ಲಿ ಅರುಂಧತಿಯಾರರು (ಸಕ್ಕಲೀಯರ್) ಸಹ ವಿವಿಧ ಸಂಘಟನೆಗಳ ಅಡಿಯಲ್ಲಿ ಹೋರಾಟ ಆರಂಭಿಸಿದರು. ಆಂಧ್ರ ಪ್ರದೇಶದಲ್ಲಿ ಮಂದಕೃಷ್ಣ ಮಾದಿಗ ನೇತೃತ್ವದಲ್ಲಿ ಹುಟ್ಟಿಕೊಂಡ ಒಳಮೀಸಲು ಚಳವಳಿಯ ಕಾವು ಕೆಲವೇ ವರ್ಷಗಳಲ್ಲಿ ನೆರೆಯ ಕರ್ನಾಟಕ, ತಮಿಳುನಾಡಿಗೂ ತೀವ್ರವಾಗಿ ವ್ಯಾಪಿಸಿತು.

ಸುಪ್ರೀಂ ಕೋರ್ಟ್ ತೀರ್ಪಿನ ಜಾರಿಗೆ ಆಗ್ರಹಿಸಿ 'ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳು ಒಳಮೀಸಲಾತಿ ಜಾರಿ ಹೋರಾಟ ಸಮಿತಿ' ಸದಸ್ಯರು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದ ಸಂದರ್ಭದ ಚಿತ್ರ

ರಾಮಚಂದ್ರರಾಜು ಆಯೋಗದ ಶಿಫಾರಸುಗಳ ಆಧಾರದಲ್ಲಿ ಉಪವರ್ಗೀಕರಣ ಮಾಡುವ ಮೂಲಕ ದೇಶದಲ್ಲಿ ಒಳಮೀಸಲು ಜಾರಿಗೆ ತಂದ ಮೂರನೇ ರಾಜ್ಯವೆಂಬ ಹೆಗ್ಗಳಿಕೆ ಆಂಧ್ರ ಪ್ರದೇಶದ್ದಾಯಿತು. ತಮಿಳುನಾಡಿನಲ್ಲಿ ಹೋರಾಟಗಳು ಕಾವೇರಿದಂತೆ 2009ರಲ್ಲಿ ಅರುಂಧತಿಯಾರರಿಗೆ ಪ್ರತ್ಯೇಕ ಮೀಸಲು ಕಲ್ಪಿಸುವ ಕಾಯ್ದೆಯನ್ನು ಎಂ.ಕರುಣಾನಿಧಿ ನೇತೃತ್ವದ ಡಿಎಂಕೆ ಸರ್ಕಾರ ಜಾರಿಗೆ ತಂದಿತು. ಕರ್ನಾಟಕದಲ್ಲಿ ಮಾತ್ರ ಸದಾಶಿವ ಆಯೋಗದ ಶಿಫಾರಸುಗಳು ದೂಳು ಹಿಡಿಯಲಾರಂಭಿಸಿದರೆ, ಉತ್ತರ ಪ್ರದೇಶದ ಹುಕುಂ ಸಿಂಗ್ ವರದಿಯ ಶಿಫಾರಸುಗಳ ಅನುಷ್ಠಾನ ಸಂಪೂರ್ಣ ನನೆಗುದಿಗೆ ಬಿದ್ದಿತು.

ಯಾರ ಮಧ್ಯೆ ಕದನ?: ಉತ್ತರ ಭಾರತದ ಪಂಜಾಬ್, ಹರಿಯಾಣ, ಉತ್ತರಪ್ರದೇಶ, ಬಿಹಾರದಲ್ಲಿ ಚಮಾರ್ ಛತ್ರಿಯಡಿ ಬರುವ ವಿವಿಧ ಉಪಜಾತಿಗಳು ಹಾಗೂ ಪಾಸ್ವಾನ್ ಸಮುದಾಯಗಳು ಒಳಮೀಸಲಾತಿಯನ್ನು ಪ್ರಬಲವಾಗಿ ವಿರೋಧಿಸಿವೆ. ಬಾಲ್ಮೀಕಿ-ಮಜಬಿ ಸಿಖ್ಖರು ಒಳಮೀಸಲಿಗಾಗಿ ಹೋರಾಟ ನಡೆಸಿದ್ದಾರೆ. ಪಾಸಿ, ಮುಸಾಹರ್‌ಗಳು ಸ್ಥಳೀಯ ರಾಜಕೀಯ ಕಾರಣಕ್ಕೆ ಒಳಮೀಸಲನ್ನು ಬಯಸಿದರೂ ತಟಸ್ಥರಾಗಿದ್ದಾರೆ.

ಮಹಾರಾಷ್ಟ್ರದಲ್ಲಿ ಮಹರ್, ಚಾರ್ವಾಕರ್, ಧೋರ್‌ಗಳು ಮೀಸಲಾತಿ ವರ್ಗೀಕರಣ ವಿರೋಧಿಸಿದರೆ, ಉಳಿದ ಮಾಂಗ್ (ಮಾತಂಗ್) ಉಪಜಾತಿಗಳು ಅದಕ್ಕಾಗಿ ಹೋರಾಡುತ್ತಾ ಬಂದಿವೆ. ಆಂಧ್ರಪ್ರದೇಶ–ತೆಲಂಗಾಣಗಳಲ್ಲಿ ಮಾಲ ಸಮುದಾಯ ಒಳಮೀಸಲಾತಿ ವಿರೋಧಿಸಿದರೆ, ಮಾದಿಗರು ಇಡೀ ದಕ್ಷಿಣ ಭಾರತದಲ್ಲಿಯೇ ಐತಿಹಾಸಿಕ ಒಳಮೀಸಲಾತಿ ಜನಚಳವಳಿ ಮುನ್ನಡೆಸಿದ ಹೆಗ್ಗಳಿಕೆ ತಮ್ಮದಾಗಿಸಿ ಕೊಂಡಿದ್ದಾರೆ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗಳಲ್ಲಿ ಸ್ಪೃಶ್ಯರಾದ ಲಂಬಾಣಿ, ಭೋವಿ, ಕೊರಚ, ಕೊರಮ, ಛಲವಾದಿ ಜಾತಿಗಳು ಒಳಮೀಸಲಾತಿಯನ್ನು ವಿರೋಧಿಸುತ್ತಿವೆ.

ತಮಿಳುನಾಡಿನಲ್ಲಿ ಪರೈಯರ್ ಮತ್ತು ಪಲ್ಲರ್ ಸಮುದಾಯಗಳು ಇದನ್ನು ವಿರೋಧಿಸಿದರೆ, ಎಡಪಂಥೀಯ ಪಕ್ಷ–ಸಂಘಟನೆಗಳ ಬಲದೊಂದಿಗೆ ಅರುಂಧತಿಯಾರರು ಹೋರಾಟವನ್ನು ಜೀವಂತವಾಗಿಟ್ಟಿದ್ದಾರೆ. ಒಳಮೀಸಲು ವಿರೋಧಿಸುವ ಚಮಾರ್‌ಗಳು (ಬಹುಜನ ಸಮಾಜ ಪಕ್ಷ), ಪಾಸ್ವಾನ್‌ಗಳು (ಎಲ್‌ಜೆಪಿ), ಮಹರ್‌ಗಳು (ಪ್ರಕಾಶ್ ಅಂಬೇಡ್ಕರ್ ನೇತೃತ್ವದ ವಂಚಿತ್ ಬಹುಜನ್ ಆಘಾಡಿ ಪಕ್ಷ ಹಾಗೂ ಆರ್‌ಪಿಐ), ಪರೈಯರ್‌ಗಳು (ವಿದುತಲೈ ಚಿರುತೈಗಳ್ ಕಚ್ಚಿ- ವಿಸಿಕೆ) ಪಕ್ಷ ಸ್ಥಾಪಿಸಿ ಅಧಿಕಾರ ರಾಜಕಾರಣದಲ್ಲಿ ಪಾರಮ್ಯ ಮೆರೆದಿದ್ದಾರೆ.

> ಮೀಸಲಾತಿಯ ಪಾಲಿನಲ್ಲಿ ಏಕಸ್ವಾಮ್ಯದ ಸವಲತ್ತು ಹೊಂದಿರುವ ಪರಿಶಿಷ್ಟರು ಮತ್ತು ಮೀಸಲಾತಿ ವಂಚಿತ ಪರಿಶಿಷ್ಟರ ನಡುವೆ ಅದನ್ನು ಹಂಚಬೇಕಿರುವ ಆಡಳಿತಾತ್ಮಕ ಒತ್ತಾಸೆ ಮತ್ತು ನೈತಿಕ ಕರ್ತವ್ಯ ಸರ್ಕಾರಗಳದ್ದಾಗಿದೆ. ಸುಪ್ರೀಂ ಕೋರ್ಟ್ ನೀಡಿರುವ ಐತಿಹಾಸಿಕ ತೀರ್ಪಿನಿಂದ ಒಳಮೀಸಲಾತಿಯ ಬೇಡಿಕೆಯನ್ನು ಸಾಂವಿಧಾನಿಕ ಹಕ್ಕನ್ನಾಗಿ ಪರಿಗಣಿಸಬೇಕಾದ ಸನ್ನಿವೇಶ ಈಗ ಉದ್ಭವವಾಗಿದೆ. ಸುಪ್ರೀಂ ಕೋರ್ಟ್ ನೀಡಿರುವ ಐತಿಹಾಸಿಕ ತೀರ್ಪು ಒಳಮೀಸಲಾತಿ ವಿರುದ್ಧ ಈವರೆಗೆ ಚಾಲ್ತಿಯಲ್ಲಿದ್ದ ಬಗೆ ಬಗೆಯ ಒಳ ಆಟಗಳಿಗೆ ಪೂರ್ಣವಿರಾಮ ಇಟ್ಟಿದೆ

ಆಂಧ್ರದ ಮಾಲ ಮತ್ತು ಕರ್ನಾಟಕದ ಛಲವಾದಿ ಸಮುದಾಯಗಳು ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳನ್ನು ಲಾಗಾಯ್ತಿನಿಂದಲೂ ನಿಯಂತ್ರಿಸುವ ತಂತ್ರಗಾರಿಕೆ ಮೈಗೂಡಿಸಿಕೊಂಡಿವೆ. ಆದರೆ, ಅದಕ್ಕೆ ವ್ಯತಿರಿಕ್ತವಾಗಿ ಒಳಮೀಸಲಾತಿಗಾಗಿ ಹೋರಾಡುವ ಬಾಲ್ಮೀಕಿ-ಮಜಬಿ ಸಿಖ್ಖರು, ಮಾತಂಗ್, ಮಾದಿಗ, ಅರುಂಧತಿಯಾರರು ಯಾವ ಪರ್ಯಾಯ ರಾಜಕೀಯ ಶಕ್ತಿಯೂ ಆಗದೆ ಕೇವಲ ವಿವಿಧ ಪಕ್ಷಗಳ ಮತಬ್ಯಾಂಕ್‌ಗಳಾಗಿ ಆಳುವ ಸರ್ಕಾರಗಳ ಮರ್ಜಿಯಲ್ಲಿ ಉಳಿದಿದ್ದಾರೆ.

ಕಾನೂನು ಹೋರಾಟ: 1975ರಿಂದ 2004ರವರೆಗೆ ಪಂಜಾಬ್, ಹರಿಯಾಣದಲ್ಲಿ ಒಳಮೀಸಲಾತಿ ಅಬಾಧಿತವಾಗಿತ್ತು. ಆಂಧ್ರದಲ್ಲಿ 90ರ ದಶಕದ ಕೊನೆಗೆ ಒಳಮೀಸಲಾತಿ ಕಲ್ಪಿಸಿದ ನಂತರ ಮಾಲ-ಮಾದಿಗ ಉಪಜಾತಿಗಳ ನಡುವೆ ಕಾನೂನು ಸಮರ ಆರಂಭವಾಯಿತು. ಮಾಲ ಸಮುದಾಯ ಆಂಧ್ರ ಹೈಕೋರ್ಟ್‌ನ ಕದ ಬಡಿಯಿತು. ಹೈಕೋರ್ಟ್ ಉಪವರ್ಗೀಕರಣವನ್ನು ಮಾನ್ಯ ಮಾಡಿತು. ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು. 2004ರಲ್ಲಿ ಇ.ವಿ.ಚಿನ್ನಯ್ಯ ವಿರುದ್ಧ ಆಂಧ್ರಪ್ರದೇಶ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ನೇತೃತ್ವದ ಸಂವಿಧಾನ ಪೀಠವು ಒಳಮೀಸಲಾತಿಯನ್ನು ಅಸಿಂಧುಗೊಳಿಸಿ ತೀರ್ಪು ನೀಡಿತು. ಅದರಿಂದಾಗಿ ದೇಶದಲ್ಲಿ ಒಳಮೀಸಲಾತಿ ಹೋರಾಟಕ್ಕೆ ಭಾರಿ ಹಿನ್ನಡೆಯಾಯಿತು.

ಪಟ್ಟುಬಿಡದ ಪಂಜಾಬ್ ಸರ್ಕಾರ 2006ರಲ್ಲಿ ಕಾಯ್ದೆ ಮೂಲಕ ಪರಿಶಿಷ್ಟ ಜಾತಿಗಳು ಹಾಗೂ ಹಿಂದುಳಿದವರಿಗೆ ಉದ್ಯೋಗಗಳಲ್ಲಿ ಒಳಮೀಸಲಾತಿಯನ್ನು ಮರುಜಾರಿಗೆ ತಂದಿತು. ಇದು ನಾಲ್ಕು ವರ್ಷ ಚಾಲ್ತಿಯಲ್ಲಿತ್ತು. ಕಾಯ್ದೆ ವಿರೋಧಿಸಿ ದವೀಂದರ್ ಸಿಂಗ್ ಎಂಬವರು ಪಂಜಾಬ್ ಹೈಕೋರ್ಟ್ ಮೆಟ್ಟಿಲೇರಿದರು. ಹೈಕೋರ್ಟ್ ಇ.ವಿ.ಚಿನ್ನಯ್ಯ ಪ್ರಕರಣದ ತೀರ್ಪನ್ನು ಉಲ್ಲೇಖಿಸಿ ಕಾಯ್ದೆಯನ್ನು ರದ್ದುಗೊಳಿತು. ನಂತರ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಯಿತು. ಸುಪ್ರೀಂ ಕೋರ್ಟ್‌ನಲ್ಲಿ ದವೀಂದರ್ ಸಿಂಗ್ ಮತ್ತು ಪಂಜಾಬ್ ಸರ್ಕಾರದ ಪ್ರಕರಣ ಎಂದೇ ಹೆಸರಾದ ಪ್ರಕರಣವನ್ನು 2014ರಲ್ಲಿ ಮೂರರಿಂದ ಐವರು ನ್ಯಾಯಮೂರ್ತಿಗಳ ಪೀಠಕ್ಕೆ ವರ್ಗಾಯಿಸಲಾಯಿತು. 2020ರಲ್ಲಿ ನ್ಯಾಯಮೂರ್ತಿ ಅರುಣ್ ಮಿಶ್ರಾ ನೇತೃತ್ವದ ಐವರ ಪೀಠ ಒಳಮೀಸಲು ವರ್ಗೀಕರಣದ ಪರವಾಗಿ ನಿಲುವು ತಳೆಯಿತು. ಈ ಹಿಂದಿನ ತೀರ್ಪು ನೀಡಿದ್ದು ಕೂಡ ಐವರು ನ್ಯಾಯಮೂರ್ತಿಗಳ ಪೀಠವಾಗಿದ್ದರಿಂದ ಐದಕ್ಕಿಂತ ಹೆಚ್ಚು ನ್ಯಾಯಮೂರ್ತಿಗಳ ಪೀಠದ ಅಗತ್ಯ ಇದೆಯೆಂದು ಹೇಳಿತು.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಸಂವಿಧಾನ ಪೀಠವು 6:1 ಅನುಪಾತದ ಬಹುಮತದೊಂದಿಗೆ ಎಸ್‌ಸಿ, ಎಸ್‌ಟಿ ಉಪವರ್ಗೀಕರಣವನ್ನು ಮಾನ್ಯ ಮಾಡಿತು; ಎಸ್‌ಸಿ, ಎಸ್‌ಟಿ ಏಕರೂಪದ ಗುಂಪಲ್ಲ ಎಂದು ಹೇಳಿ ಸಂವಿಧಾನದ 341ನೇ ಪರಿಚ್ಛೇದದ ಚರ್ಚೆಯ ಅವಶ್ಯಕತೆಯನ್ನು ಇಲ್ಲವಾಗಿಸಿದ ಕೋರ್ಟ್, ತನ್ನ ಸುದೀರ್ಘ ವಿಶ್ಲೇಷಣೆಯ ತೀರ್ಪಿನಲ್ಲಿ ಮೀಸಲಾತಿ ವಂಚಿತರ ಹಾಗೂ ಮೀಸಲಾತಿ ಹಂಚಿಕೆಯ ನಿಖರ ದತ್ತಾಂಶಗಳೊಂದಿಗೆ ರಾಜ್ಯಗಳು ಪರಿಣಾಮಕಾರಿ ಪ್ರಾತಿನಿಧ್ಯವನ್ನು ಕಲ್ಪಿಸಲು ಮುಂದಾಗಬೇಕು ಎಂಬುದನ್ನು ಒತ್ತಿ ಹೇಳಿದೆ.

ಒಳಮೀಸಲಾತಿ ಕುರಿತಾಗಿ ಈ ಮೊದಲು ಅಧಿಕಾರದಲ್ಲಿದ್ದ ಯುಪಿಎ ಸರ್ಕಾರ ತಳೆದಿದ್ದ ಜಾಣ ಮೌನ ಹಾಗೂ ಹಾಲಿ ಅಧಿಕಾರದಲ್ಲಿರುವ ಎನ್‌ಡಿಎ ಸರ್ಕಾರದ ನಿಷ್ಕಾಳಜಿ ಒಟ್ಟೊಟ್ಟಿಗೆ ಜಾಹೀರಾಗಿವೆ. ಕರ್ನಾಟಕದ ಕಾಂಗ್ರೆಸ್ ಸರ್ಕಾರ ಪ್ರಣಾಳಿಕೆಯಲ್ಲಿಯೇ ಒಳಮೀಸಲಾತಿಯ ಭರವಸೆ ನೀಡಿತ್ತು. ಸುಪ್ರೀಂ ತೀರ್ಪಿನ ನಂತರ ಸರ್ಕಾರ ಈಗ ಹೈಕಮಾಂಡ್‌ನ ಇಶಾರೆಗೆ ಕಾದು ಕುಳಿತಿದೆ.

ಲೇಖಕ: ಒಳ ಮೀಸಲಾತಿ ಪರ ಹೋರಾಟದಲ್ಲಿ ಸಕ್ರಿಯವಾಗಿರುವ ರಾಜಕೀಯ ವಿಶ್ಲೇಷಕ

ಒಳಮೀಸಲಾತಿ ಭಿಕ್ಷೆ ಅಲ್ಲ, ಹಕ್ಕು

ಒಳಮೀಸಲಾತಿ ಜಾರಿ ಇವತ್ತಿನ ತುರ್ತು. ಶತಮಾನಗಳಿಂದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಅವಕಾಶಗಳಿಂದ ವಂಚಿತವಾದ ಸಮುದಾಯಗಳ ಘನತೆಯ ಬದುಕಿಗಾಗಿ ಇದು ಜರೂರಾಗಿ ಆಗಬೇಕಿದೆ. ಒಳಮೀಸಲಾತಿ ಪರವಾಗಿ ಈಗಾಗಲೇ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.

ಆದರೆ, ಕೆನೆಪದರದ ವಿಚಾರವನ್ನು ಮುಂದು ಮಾಡಿ ಉಪವರ್ಗೀಕರಣ ಆಗದಂತೆ ಮಾಡುವ ಷಡ್ಯಂತ್ರವೂ ನಡೆದಿದೆ. ಸಿದ್ದರಾಮಯ್ಯನವರ ಸರ್ಕಾರ ಕೂಡಲೇ ಒಳಮೀಸಲಾತಿಯನ್ನು ಜಾರಿ ಮಾಡಿ ತಾನು ದೀನ ದಲಿತರ ಪರವಾಗಿದ್ದೇನೆ ಎಂದು ಸಾಬೀತುಪಡಿಸಲಿ. ಇದನ್ನು ವಿರೋಧಿಸುವವರು ಕೊನೆಗೆ ಮೀಸಲಾತಿಯ ಹಾಗೂ ತಳಸಮುದಾಯಗಳ ವಿರೋಧಿಗಳೇ ಆಗುತ್ತಾರೆ.

ಅಶ್ವಿನಿ ಮದನಕರ, ವಕೀಲರು ಮತ್ತು ಮಹಿಳಾ ಹಕ್ಕುಗಳ ಹೋರಾಟಗಾರ್ತಿ

ಸಿನಿ ಬಿಟ್ಸ್

ಸೆಟ್ಟೇರಿತು 'ರಾಜ ದೇವ ಸಿಂಧು'

ಭವಸಖಿ ತಿಮ್ಮಯ್ಯ

ಫ್ಯಾಂಟಸಿ ಹಾಗೂ ಪ್ರಸಕ್ತ ಕಾಲಮಾನದ ಕಥಾಹಂದರ ಹೊಂದಿರುವ 'ರಾಜ ದೇವ ಸಿಂಧು' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ದುರ್ಗ ಮೋಹನ್ ನಿರ್ದೇಶನದ ಚಿತ್ರವನ್ನು ಆರ್‌ಎಸ್‌ಪಿ ಪ್ರೊಡಕ್ಷನ್ಸ್ ಮತ್ತು ಚಿನ್ಮಯ್ ಸಿನಿ ಕ್ರಿಯೇಶನ್ಸ್ ನಿರ್ಮಾಣ ಮಾಡುತ್ತಿದೆ.

'ಇದು ನನ್ನ ನಿರ್ದೇಶನದ ಎರಡನೇ ಸಿನಿಮಾ. ಈ ಚಿತ್ರ ಫ್ಯಾಂಟಸಿ ಹಾಗೂ ಈಗಿನ ಕಾಲಘಟ್ಟದ ಕಾಲ್ಪನಿಕ ಕಥೆಯನ್ನು ಹೊಂದಿರುತ್ತದೆ. ರಾಜರ ಬಗ್ಗೆ ನೆನಪು ಮಾಡಿಕೊಂಡರೆ, ಮೊದಲು ಕೃಷ್ಣದೇವರಾಯ ಕಣ್ಣೆದುರಿಗೆ ಬರುತ್ತಾರೆ. ಅವರು ಮಾಡಿದಂಥ ಸಾಕಷ್ಟು ಸಾಮಾಜಿಕ ಕೆಲಸಗಳು ನೆನಪಾಗುತ್ತವೆ. ಕವಿಗಳಿಗೆ ಆಶ್ರಯ, ಯಾತ್ರಾರ್ಥಿಗಳಿಗೆ ತಂಗುದಾಣಗಳ ನಿರ್ಮಾಣದಂಥ ಅವರ ಹಲವು ಕೆಲಸಗಳನ್ನು ಚಿತ್ರಕಥೆಯಲ್ಲಿ ಬಳಸಿಕೊಳ್ಳಲಾಗಿದೆ. ಇದೇ ರಾಜ ಡೆಲಿವರಿ ಬಾಯ್ ಆಗಿ ಈಗ ಬಂದಾಗ ಏನೆಲ್ಲ ಆಗುತ್ತದೆ ಎಂಬುದೇ ಕಥೆ. 'ದೇವರಾಯ' ಪಟ್ಟಣದಲ್ಲಿ, ಯುವರಾಣಿ 'ಸಿಂಧುಜ' ಜೊತೆ ಈ ಕಥೆ ನಡೆಯುತ್ತದೆ' ಎಂದು ಚಿತ್ರದ ಕುರಿತು ಮಾಹಿತಿ ನೀಡಿದರು ನಿರ್ದೇಶಕರು.

ಭಾರ್ಗವ ಚಿತ್ರದ ನಾಯಕ. ಭವಸಖಿ ತಿಮ್ಮಯ್ಯ, ಸ್ವಾತಿಪ್ರಭು, ಆರಾ ನಾಯಕಿಯರು. ಪ್ರಜ್ವಲ್ ಛಾಯಾಚಿತ್ರಗ್ರಹಣವಿದೆ. ಬೆಂಗಳೂರು, ಮಡಿಕೇರಿ, ಮಂಗಳೂರು ಮೊದಲಾದೆಡೆ ಚಿತ್ರೀಕರಿಸಲು ತಂಡ ಯೋಜನೆ ರೂಪಿಸಿಕೊಂಡಿದೆ.

'ಗೋಚರ'ದ ಹಿಂದೆ ರೂಪಾ ರಾವ್



ರೂಪಾ ರಾವ್

ಯಾರೂ ಸಲೀಸಾಗಿ ಮುಟ್ಟಲಾಗದ ಕಥೆಗೆ ದೃಶ್ಯರೂಪ ಕೊಟ್ಟುವರು ನಿರ್ದೇಶಕಿ ರೂಪಾ ರಾವ್. ಈ ಹಿಂದೆ 'ಗಂಟುಮೂಟೆ' ಎಂಬ ಭಿನ್ನ ಬಗೆಯ ಚಿತ್ರವನ್ನು ನಿರ್ದೇಶನ ಮಾಡಿ ಕನ್ನಡ ಚಿತ್ರರಂಗದಲ್ಲಿ ವಿರಳವಾಗಿರುವ ನಿರ್ದೇಶಕಿಯರ ಸಾಲಿನಲ್ಲಿ ಸ್ಥಾನ ಗಿಟ್ಟಿಸಿಕೊಂಡಿದ್ದರು.

ಅವರ ಮುಂದಿನ ಸಿನಿಮಾ ಯಾವುದೆಂಬ ಕುತೂಹಲ ಇರುವಾಗಲೇ ಏಕಾಏಕಿ ನಿರ್ಮಾಪಕಿಯಾಗಿ ಅಚ್ಚರಿ ಮೂಡಿಸಿದ್ದರು. 'ಕೆಂಡ' ಚಿತ್ರವನ್ನು ನಿರ್ಮಾಣ ಮಾಡಿದರು. ಸಹದೇವ್ ಕೆಳವಡಿ ನಿರ್ದೇಶನದ ಈ ಚಿತ್ರ ಹಲವು ಚಿತ್ರೋತ್ಸವಗಳಲ್ಲಿ ಜನಮನ್ನಣೆ ಗಳಿಸಿತು.

ಇದೀಗ ಮತ್ತೆ ರೂಪಾ ರಾವ್ ನಿರ್ದೇಶನಕ್ಕೆ ಮರಳಿದ್ದಾರೆ. ಈ ಸಿನಿಮಾಕ್ಕೆ 'ಗೋಚರ' ಎಂದು ಹೆಸರಿಡಲಾಗಿದೆ. ಇದನ್ನು ರೂಪಾ ರಾವ್ ಮತ್ತು ಸಹದೇವ್ ಕೆಳವಡಿ ಒಟ್ಟಾಗಿ ನಿರ್ಮಿಸುತ್ತಿದ್ದಾರೆ. 'ಗಂಟುಮೂಟೆ'ಯ ಮುಂದುವರಿದ ಭಾಗವೇ ಎಂಬ ಪ್ರಶ್ನೆ ಮೂಡಿಸುತ್ತಿದೆ ಚಿತ್ರದ ಪೋಸ್ಟರ್. ಹುಡುಗಿ, ರೈಲು, 'ಗಂಟುಮೂಟೆ–2' ಎಂಬ ಸಾಲು ಹೊಂದಿರುವ ಬೆಂಚು ಎಲ್ಲವನ್ನೂ ಚಿತ್ರದ ಪೋಸ್ಟರ್‌ನಲ್ಲಿ ತೋರಿಸಲಾಗಿದೆ.

'ಇದು ಬೇರೆಯದೇ ಕಥೆ. ಇದೊಂದು ಟ್ರಾವೆಲ್ ಕಥೆಯನ್ನು ಹೊಂದಿರುವ ಸಿನಿಮಾ. ಶೀಘ್ರದಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದೆ' ಎಂದಿದೆ ಚಿತ್ರತಂಡ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

'ಸರ್ಕಾರ ಕೊಟ್ಟ ಮಾತಿನಂತೆ ನಡೆಯಲಿ'

ಒಳಮೀಸಲಾತಿ ಜಾರಿ ಮಾಡುವ ಅಧಿಕಾರ ರಾಜ್ಯ ಸರ್ಕಾರಗಳಿಗಿದೆ ಎಂದು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಚಾರಿತ್ರಿಕವಾಗಿದೆ. ಇದರಿಂದ ಮೀಸಲಾತಿಯ ಒಳಗೆ ಅವಕಾಶ ವಂಚಿತ ಸಮುದಾಯಗಳಿಗೆ ಸಾಮಾಜಿಕ ನ್ಯಾಯದ ಭರವಸೆ ಸಿಕ್ಕಂತಾಗಿದೆ. ಆದರೆ, ಒಳಮೀಸಲಾತಿಯನ್ನು ಜಾರಿ ಮಾಡುವ ವಾಗ್ದಾನ ಮಾಡಿದ್ದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಸುಪ್ರೀಂ ಕೋರ್ಟ್ ತೀರ್ಪನ್ನು ಜಾರಿಗೆ ತರುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದು ಖಂಡನಾರ್ಹ.

ಒಳಮೀಸಲಾತಿ ಎನ್ನುವುದು ಪರಿಶಿಷ್ಟರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಹಂಚಿಕೊಳ್ಳುವಂತಹ ಸಂವಿಧಾನ ಬದ್ಧವಾದ ನೀತಿಯಾಗಿದೆ. ಒಳಮೀಸಲಾತಿ ಜಾರಿಗಾಗಿ ಕಳೆದ ಮೂರು ದಶಕಗಳಿಂದ ಸತತವಾಗಿ ಹೋರಾಟಗಳನ್ನು ಮಾಡಲಾಗಿದೆ.

ನ್ಯಾ. ಸದಾಶಿವ ಆಯೋಗದ ವರದಿ, ನ್ಯಾ.ನಾಗಮೋಹನ್ ದಾಸ್ ಆಯೋಗದ ವರದಿ ಮತ್ತು ಕಾಂತರಾಜು ಅವರು ನೀಡಿದ್ದ ವರದಿಯ ದತ್ತಾಂಶ ಆಧರಿಸಿ ಸುಗ್ರೀವಾಜ್ಞೆ ಮೂಲಕ ಒಳಮೀಸಲಾತಿ ಯನ್ನು ಜಾರಿಗೆ ತರುವ ದಿಸೆಯಲ್ಲಿ ಸರ್ಕಾರ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಬೇಕು. ಒಳಮೀಸಲಾತಿಯು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಶಯವೂ ಆಗಿತ್ತು. ಸಂವಿಧಾನ ರಕ್ಷಣೆ, ಪ್ರಜಾಪ್ರಭುತ್ವದ ರಕ್ಷಣೆಗೆ ನಮ್ಮ ಬದ್ಧತೆ ಎನ್ನುವ ಕಾಂಗ್ರೆಸ್ ಸರ್ಕಾರ, ಕೊಟ್ಟ ಮಾತಿನಂತೆ ನಡೆದುಕೊಳ್ಳಲಿ.

ಬಸವರಾಜ್ ಕೌತಾಳ್, ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟದ ಪ್ರಧಾನ ಸಂಚಾಲಕ

ಅಕ್ಕನ ದೇವರು, ನಮ್ಮ ದೇವರು!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

30

ಅಕ್ಕಮಹಾದೇವಿಗೆ ಎಲ್ಲದರಲ್ಲೂ, ಎಲ್ಲರಲ್ಲೂ ಚನ್ನಮಲ್ಲಿಕಾರ್ಜುನನೇ ಕಾಣುತ್ತಿದ್ದ. ಆಕೆಯ ದೇವರು ಈ ವಿಶ್ವವನ್ನು ಮೀರಿದ್ದು. ನಮ್ಮ ದೇವರು ಹಾಂಗಿಲ್ಲ. ನಮ್ಮ ದೇವರು ನಮ್ಮ ಕುಲಕ್ಕಷ್ಟೇ ದೇವರು, ನಮ್ಮ ಜಾತಿಗಷ್ಟೇ ದೇವರು, ಕಷ್ಟಬಂದರಷ್ಟಕ್ಕೇ ದೇವರು. ನಾವು ಸೀಜನ್ ನೋಡಿ ದೇವರನ್ನು ಮಾಡಿಕೊಳ್ಳೋರು. ನಾವು ಸೀಜನ್ಡ್ ಭಕ್ತರು. ಕಷ್ಟ ಬಂತು ಅಂದ್ರ ದೇವರ ಗುಡಿಗೆ ಹೋಗುತ್ತೀವಿ. ಆಗ ದೇವರು ಏನಂತಾನ? 'ನಮ್ಮ ನಮ್ಮ ಜಗಳ ನಾವೇ ಬಗೆಹರಿಸಿಕೊಂಡು ದೇವರಾಗೀವಿ, ನೀವೂ ಹಾಂಗ ನಿಮ್ಮ ನಿಮ್ಮ ಜಗಳ ನೀವೇ ಬಗೆಹರಿಸಿಕೊಳ್ಳಿ, ನೀವೂ ದೇವರಾಗ್ತೀರಿ' ಅಂತಾನೆ.

ಅಕ್ಕಮಹಾದೇವಿಯ ಚನ್ನಮಲ್ಲಿಕಾರ್ಜುನನ ಮೇಲಿನ ದೇವ ಪ್ರೇಮ ವಸ್ತು ವಿಷಯಗಳಿಗೆ ಸೀಮಿತವಾಗಿರಲಿಲ್ಲ. ನಾಮರೂಪಗಳಿಗೆ ಸೀಮಿತವಾಗಿರಲಿಲ್ಲ. ಆಕೆಯದ್ದು ಬಯಲಿನಾಚೆಗಿನ ಬೆಳಗು. ವಿಶ್ವದಾಚೆಗಿನ ಸತ್ಯವನ್ನು ಪ್ರೇಮಿಸಿದವಳು ಅಕ್ಕ. ನಮ್ಮ ಕತಿ ಏನಾಗೈತಿ ಅಂದ್ರ ತಲೆ ದೊಡ್ಡದಾಗೈತಿ, ಕೈಯಾಗ ದುಡ್ಡು ಬಂದಾವ. ಆದರೆ ಹೃದಯ ಬಾಡ್ಯಾವ. ತಲೆ ಇರಬೇಕು, ಕೈಯೊಳಗೆ ಭಗೀರಥ ಪ್ರಯತ್ನ ಇರಬೇಕು, ಹೃದಯದೊಳಗೆ ಮುಗ್ಧ ಮನಸ್ಸಿನ ಮಗುವಿನ ಪ್ರೇಮ ಇರಬೇಕು. ಅದು ಶಿಕ್ಷಣ.

'ಓದಿ ಓದಿ ಯಾರೂ ಪಂಡಿತರಾಲ್ಲ. ಹೃದಯ ದಲ್ಲಿ ಪ್ರೇಮ ಇದ್ದವನೇ ಪಂಡಿತ' ಅಂತ ಕಬೀರರು ಹೇಳ್ತಾರೆ. ಎದೆಯೊಳಗೆ ಬರೀ ಅಕ್ಷರ ತುಂಬಿದ್ದರೆ ಅವರನ್ನು ವಿದ್ಯಾವಂತ ಅನಕ್ಷರಸ್ಥ ಎನ್ನಬಹುದು. ನಮ್ಮ ಪ್ರೇಮ ಪವಿತ್ರವಾಗಿ ಉಳಿದಿಲ್ಲ. ನಮ್ಮ ಪ್ರೇಮ ದಲ್ಲಿ ವ್ಯವಹಾರ ಬರತೈತಿ. ವಿಷಯಗಳ ವಾಸನೆ ಬಡಿತೈತಿ.

ಯಾಜ್ಞ್ಯವಲ್ಕ ಅಂತ ಒಬ್ಬರು ಇದ್ದರು. ಅವರ ಪತ್ನಿ ಮೈತ್ರೇಯಿ. ಆಕಿ ಒಮ್ಮೆ, 'ಈ ಜಗತ್ತಿನಲ್ಲಿ ಜನ ಅಧಿಕಾರ, ಸಂಪತ್ತು, ಗಂಡ ಹೆಂಡತಿಯನ್ನು, ಹೆಂಡತಿ ಗಂಡನನ್ನು, ಮಕ್ಕಳನ್ನು ಇಷ್ಟೆಲ್ಲಾ ಪ್ರೀತಿ ಮಾಡ್ತಾರಲ್ಲ ಯಾಕ' ಎಂದು ಕೇಳಿದಳು. ಅದಕ್ಕೆ ಯಾಜ್ಞ್ಯವಲ್ಕ, 'ಎದಕ ಪ್ರೀತಿ ಮಾಡ್ತಾರೆಂದರೆ ಯಾರೂ ಇನ್ನೊಬ್ಬರ ಮೇಲಿನ ಪ್ರೀತಿಗಾಗಿ ಪ್ರೀತಿ ಮಾಡಲ್ಲ, ತನ್ನ ಮೇಲಿನ ಪ್ರೇಮಕ್ಕೆ ಪ್ರೇಮ ಮಾಡ್ತಾರ. ತನ್ನ ಸುಖಕ್ಕೆ ಪ್ರೀತಿ ಮಾಡ್ತಾರ' ಎಂದು ಉತ್ತರಿಸಿದರು.

ಈಗ ನೀವು ಬಹಳ ಪ್ರೀತಿಯಿಂದ ಮನೆ ಕಟ್ಟಿಸ್ತೀರಿ. ಸಾಲ ಮಾಡಿ ಕಟ್ಟಿಸ್ತೀರಿ. ಅದಕ್ಕೆ ನಿಮ್ಮ ಪತ್ನಿ ಹೆಸರೇ ಇಟ್ಟಿರ್ತೀರಿ. ಆದರೆ ಸಾಲ ತೀರಿಸೋಕೆ ಆಗಲ್ಲ. ಬ್ಯಾಂಕ್‌ನವರು ಬಂದು ಧಮಕಿ ಹಾಕ್ತಾರ. ಪೊಲೀಸರಿಗೆ ದೂರು ಕೊಡ್ತಾರ. ಪೊಲೀಸರು ಬಂದು ನಿನ್ನ ಅರೆಸ್ಟ್ ಮಾಡ್ತೀನಿ ಅಂದಾಗ, 'ಮನೆ ಹೋದರೆ ಹೋಗಲಿ; ನನ್ನ ಬಟ್ಟು ಬಿಡು' ಅಂತೀರಿ. ಅಂದರೆ ಮನೆ ಕಟ್ಟಿಸಿದ್ದು ನಿಮ್ಮ ಮೇಲಿನ ಪ್ರೀತಿಗೆ ಅಷ್ಟೆ. ಒಳ್ಳೆ ಗಾಡಿ ತಗೊಂಡಿರ್ತೀರಿ. ಅದು ನನ್ನ ಕನಸು, ಅದು ನನ್ನ ಪ್ರಾಣ ಅಂತೀರಿ. ಒಂದಿನ ಅಪಘಾತವಾಯ್ತು. ಡ್ರೀಮು, ಡ್ರೀಮ್ ಗರ್ಲ್ ಎರಡೂ ಬಿಟ್ಟು ನೀವು 108ರ ಗಾಡಿಯಲ್ಲಿ ಹೋಗ್ತೀರಿ. ನಿಮಗೆ ಅದರ ಬಗ್ಗೆ ಬಹಳ ಪ್ರೀತಿ ಇತ್ತು ಅಂದ್ರ ಗಾಡಿಯನ್ನು 108ರ ವಾಹನದಲ್ಲಿ ಕಳಿಸಬೇಕಿತ್ತಲ್ಲ. ಹಾಗೆ ಮಾಡಿಲ್ಲ ನೀವು. ಯಾಕೆಂದರೆ ನೀವು ಪ್ರೀತಿಸಿದ್ದು ನಿಮ್ಮನ್ನ. ಅಂದರೆ ಮನುಷ್ಯ ಸುಖ ಕೊಡುವುದನ್ನು ಪ್ರೀತಿ ಮಾಡ್ತಾನ ಮತ್ತು ದುಃಖ ಕೊಡತೈತಿ ಎನ್ನುವುದು ಗೊತ್ತಾದ ತಕ್ಷಣ ಅದನ್ನು ಬಿಟ್ಟುಬಿಡ್ತಾನ.

ಇದು ಮನುಷ್ಯನ ಸ್ವಭಾವ ಅಂತಾರ ಯಾಜ್ಞ್ಯವಲ್ಕರು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಸೆಪ್ಟೆಂಬರ್ 25, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಅಷ್ಟಮಿ ಗಂ. 12-11 ನಕ್ಷತ್ರ: ಆರ್ದ್ರಾ ಗಂ. 22-24 ಯೋಗ: ವರಿಯಾನ್ ಗಂ. 24-18 ಕರಣ: ಕೌಲವ ಗಂ. 12-11, ಕನ್ಯಾ ಮಾಸದ 09 ನೇ ದಿನ, ಮಳೆನಕ್ಷತ್ರ: ಉತ್ತರಫಲ್ಗುಣಿ 4.

ರಾಹುಕಾಲ: ಮಧ್ಯಾಹ್ನ 12-00 – 01-30

ಸೂರ್ಯೋದಯ: 06-23 ಸೂರ್ಯಾಸ್ತ : 06-21

ಮುಸ್ಲಿಂ ದಿನಾಂಕ: 21 ರಬೀಉಲ್ಲಾವಲ್

ದಿನ ವಿಶೇಷ: ಮಾತೃ ನವಮಿ, ಅದೃಷ್ಟ ಸಂಖ್ಯೆ : 2, 10

ಮೇಷ: ಪರಿಶ್ರಮದ ಫಲವಾಗಿ ಅವಮಾನಿಸಿದ ವ್ಯಕ್ತಿಗಳಿಂದ ಗೌರವ ಪಡೆಯುವಂಥ ಕಾಲವನ್ನು ನಿರೀಕ್ಷಿಸಬಹುದು. ವ್ಯಾಪಾರ ನಿಮಿತ್ತ ಜನಗಳ ವಿಶ್ವಾಸವನ್ನು ಸಂಪಾದಿಸುವಲ್ಲಿ ಯಶಸ್ವಿಯಾಗುವಿರಿ.

ವೃಷಭ: ರಾಜಕಾರಣಿಗಳು ಸುತ್ತಲಿನ ಜನರ ಸಹಾಯವನ್ನು ಪಡೆಯುವಲ್ಲಿ ಸೋಲನ್ನು ಕಾಣುವ ಸ್ಥಿತಿ ಬರಲಿದೆ. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಅನೇಕ ತರಹದ ಅವಕಾಶಗಳು ಒದಗಿಬರುತ್ತವೆ. ಯಾತ್ರಿಗಳಿಗೆ ಶುಭ.

ಮಿಥುನ: ತಪ್ಪು ಮಾಡುವುದು ಮಕ್ಕಳ ಸ್ವಾಭಾವಿಕ ಗುಣವೆಂಬುವುದು ಮರೆತು ಮಕ್ಕಳನ್ನು ಅತಿಯಾಗಿ ಶಿಕ್ಷಿಸಬೇಡಿ. ಅನಿವಾರ್ಯದ ಮಾತುಗಳನ್ನು ಎರಡು ಬಾರಿ ಯೋಚಿಸಿ ಮಾತನಾಡಿ. ಪ್ರೀತಿಪಾತ್ರರೊಡನೆ ಸಮಯ ಕಳೆಯುವಿರಿ.

ಕರ್ಕಾಟಕ: ನಿಯೋಜಿತವಾದ ಕಾರ್ಯಕಲಾಪಕ್ಕೆ ಅಡ್ಡಿ ಆತಂಕಗಳು ಎದುರಾಗಬಹುದು. ಆಹಾರ ಪದ್ಧತಿಯು ಅನಾರೋಗ್ಯಕ್ಕೆ ಮೂಲ ಕಾರಣವಾಗುತ್ತದೆ. ಆದಾಯದ ಬಗ್ಗೆಯೂ ಗಮನವಿರಲಿ.

ಸಿಂಹ: ಕಾರ್ಖಾನೆಯೊಂದನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳುವ ಅವಕಾಶಗಳು ನಂಬಿಕಸ್ಥ ಸ್ನೇಹಿತನ ಸಹಾಯದಿಂದ ಪಡೆಯಬಹುದು. ವ್ಯವಹಾರಿಕ ಸಂಬಂಧಗಳು ವಿಸ್ತಾರಗೊಳ್ಳುವ ಸಮಯ ಇದಾಗಿದೆ.

ಕನ್ಯಾ: ಕೆಲವೊಂದು ಜವಾಬ್ದಾರಿಯುತ ಕಾರ್ಯಗಳು ಮುಂದಾಳತ್ವದಲ್ಲಿ ನಡೆಯಲಿದೆ. ಆಹಾರದಲ್ಲಿ ಎಣ್ಣೆ ಮತ್ತು ಖಾರದ ಪದಾರ್ಥಗಳನ್ನು ಸಾಧ್ಯವಾದಷ್ಟು ಮಿತವಾಗಿ ಬಳಸಿ.

ತುಲಾ: ಸರ್ಕಾರಿ ಸಂಬಂಧ ವ್ಯವಹಾರಗಳಿಂದ ನಿರೀಕ್ಷೆಗೂ ಮೀರಿದ ಲಾಭ ಅನುಭವಿಸುತ್ತೀರಿ. ಹಣಕಾಸು ಸಂಸ್ಥೆಗಳ ನೆರವಿನಿಂದ ಬಹು ದಿನದ ಸ್ವಂತ ಉದ್ದಿಮೆ ಪ್ರಾರಂಭಿಸುವ ಯೋಜನೆ ಕೈಗೂಡುವುದು.

ವೃಶ್ಚಿಕ: ಮನರಂಜನೆಗೂ ಸಾಕಷ್ಟು ಸಮಯವನ್ನು ಮೀಸಲಿಡುವುದರಿಂದ ನೆಮ್ಮದಿ ಇರಲಿದೆ. ಸಂಶೋಧಕರು ಸಾಧನೆಯ ಕುರಿತು ಹೆಮ್ಮೆ ಪಡಲು ಸುಸಮಯವಾಗಿದೆ. ಮಹಾಲಕ್ಷ್ಮಿಯ ಅನುಗ್ರಹ ಸಿಗಲಿದೆ.

ಧನು: ಮನೆ ಕಟ್ಟಲು ಅಥವಾ ಮನೆಯನ್ನು ನವೀಕರಿಸಲು ಹಣದ ವ್ಯವಸ್ಥೆ ಸಹೋದರರಿಂದ ಆಗಲಿದೆ. ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧವನ್ನು ಮುಂದುವರಿಸಿ.

ಮಕರ: ಸಂಸ್ಥೆಯಿಂದ ತರಬೇತಿ ಪಡೆದುಕೊಳ್ಳುವ ಅವಕಾಶಗಳು ಎದುರಾದಲ್ಲಿ ಸದುಪಯೋಗ ಪಡಿಸಿಕೊಳ್ಳಿ. ತಿಂಡಿ-ತಿನಿಸುಗಳ ವ್ಯಾಪಾರದಲ್ಲಿನ ಲಾಭ ಇನ್ನೊಂದು ವ್ಯವಹಾರದ ಅಭಿವೃದ್ಧಿಗೆ ಸಹಕಾರಿಯಾಗಲಿದೆ.

ಕುಂಭ: ಮಗಳ ಆರೋಗ್ಯದಲ್ಲಿನ ವ್ಯತ್ಯಾಸಗಳು ನಿಮ್ಮನ್ನು ದುರ್ಬಲಗೊಳಿಸುವುದು. ನಿಮ್ಮ ಧೈರ್ಯದಿಂದ ಮಾತ್ರವೇ ಆಕೆ ಚೇತರಿಕೊಳ್ಳಲು ಸಾಧ್ಯ. ಸ್ಫೂರ್ತಿಯಿಂದ ಜೀವನ ನಡೆಸಿ.

ಮೀನ: ಅಭಿವೃದ್ಧಿಯ ವಿಚಾರದಲ್ಲಿ ಸ್ವಪ್ರಯತ್ನದೊಂದಿಗೆ ದೈವ ಬಲವೂ ಇರುತ್ತದೆ. ವೈದ್ಯ ವೃತ್ತಿಯವರಿಗೆ ತೃಪ್ತಿಕರ ವರಮಾನ ಪ್ರಾಪ್ತಿಯಾಗುತ್ತದೆ. ವ್ಯಾಪಾರದಲ್ಲಿ ನಿರೀಕ್ಷೆಗೂ ಮೀರಿ ಲಾಭ ಸಿಗಲಿದೆ.

ಪದಬಂಧ 5813

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಆಮೇಲೆ ಕಾಣಿಸಿದ ಕಬ್ಬಿನ ಗಾಣ (2)
3.ಸಂಪೂರ್ಣ ಹಾನಿಯಿದು (4)
5.ಅಸಹಾಯಕ ನೀಡಿದ ನೆರವು (3)
6.ವನದಲ್ಲಿ ತಿಳಿದುಬಂದಿರುವ ಸುದ್ದಿ (4)
8.ನರಕಾಧಿಪತಿಯೊಡನಿರುವ ಒಜ್ಜೆ (4)
11.ಒಳಗಿನ ಉದ್ದೇಶ (4)
14.ಒಪ್ಪವಾಗಿ ರಾಗದೊಡನಿರುವ ಪ್ರೀತಿ (4)
15.ಬಿರಿ ಬಿರನೆ ಆಗಿರುವ ವಿಕ್ರಯ (3)
16.ಸಭೆಯನ್ನು ವಿಸರ್ಜಿಸುವುದು (4)
17.ಮಣ್ಣಿನ ಅಥವಾ ಪಿಂಗಾಣಿಯ ಪಾತ್ರೆ (2)

ಮೇಲಿಂದ ಕೆಳಕ್ಕೆ

1.ಕೃಷ್ಣ ಮತ್ತು ಗೋಪಿಕೆಯರ ಶೃಂಗಾರ ನರ್ತನ (4)
2.ಆದಾಯ ಮತ್ತು ಖರ್ಚು (4)
3.ವರ ನೋಡುತ್ತಿರುವ ಕೊಳ (4)
4.ರೋಗ ಮೊದಲಾದವನ್ನು ಗುಣಪಡಿಸುವಿಕೆ (3)
7.ಮಾರ್ವಾಡಿ ನೀಡಿದ ಜವಾಬು (3)
9. ನಮ್ಮ ದೇಶವಿದು (3)
10.ಅರ್ಧ ಚಂದ್ರಾಕೃತಿಯ ರಚನೆ (3)
11.ಸುಗಂಧ ಲೇಪನ (4)
12.ಎಲ್ಲೆಯೊಳಗೆ ತೋರಿದ ಆತುರ (4)
13.ಗರಿ ಹಿಡಿದಿರುವ ಸುಸಂಸ್ಕೃತ! (4)
14.ಅರಸನ ಹತ್ತಿರವಿರುವ ಮಡಿವಾಳ (3)



5812ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಒತ್ತೆ 2.ದಿವಾನಖಾನೆ 5.ಪರ್ವ 6.ತಸ್ಕರ 7.ಮಾರು 8.ನೆಂಟರಮೇಲೆಪ್ರೀತಿ 13.ಇಳೆ 14.ಪಾವಲಿ 15.ಪಾತ್ರ 16.ವರಣಮಾಲೆ 17.ನಗ

ಮೇಲಿಂದ ಕೆಳಕ್ಕೆ: 1.ಒಗೆತನ 3.ನಜರು 4.ನೆರೆಮನೆ 5.ಪರದಾಟ 7.ಮಾರೋಲೆ 9.ರಗಳೆ 10.ಪ್ರೀತಿಪಾತ್ರ 11.ಅಸಂಭವ 12.ಕಲಿಯುಗ 13.ಇಲ್ಲಣ

ಸುಡೊಕು 6198

		3			7		1	4
8		7	6		4	2		9
			3					
2	4			1		9		
			8				7	
7	5			9		3	4	
	8							3
			4		8	5		
9		4			2		6	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6197 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಷೇರುಪೇಟೆ ವಹಿವಾಟು 14



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,939
ಇಂದಿನ ಅಂತ್ಯ	25,940
▲	1
ದಿನದ ಗರಿಷ್ಠ	26,011

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹224
ಆರ್‌ಎಸ್‌ಎಸ್-5	₹220
ಗುಡ್ ಲಾಟ್	₹205

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹411-560
ದ್ವಿತಳಿ (ಬಿ.ವಿ)	₹285-708

ಕನಿಷ್ಠ ಬೆಂಬಲ ಬೆಲೆ: ₹2,378 ಕೋಟಿ ಬಿಡುಗಡೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಜ್ಯ ಸರ್ಕಾರಕ್ಕೆ ಬರಬೇಕಾಗಿರುವ ₹2,378 ಕೋಟಿಯನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಅವರು, ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರಲ್ಲಿ ಮನವಿ ಮಾಡಿದರು.

ಮಂಗಳವಾರ ಇಲ್ಲಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಅವರು, 'ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಿರುವ ಸಹಾಯಧನದ ಬಾಕಿ ಮೊತ್ತ ಬಿಡುಗಡೆ ಮಾಡಬೇಕು' ಎಂದು ಒತ್ತಾಯಿಸಿದರು.

ಸಿಬಿಐಸಿ ಕಾರ್ಯಾಚರಣೆ • ₹10 ಸಾವಿರ ಕೋಟಿ ಜಿಎಸ್‌ಟಿ ವಂಚನೆ ಬಯಲಿಗೆ

10,700 ನಕಲಿ ಕಂಪನಿ ಪತ್ತೆ

ನವದೆಹಲಿ (ಪಿಟಿಐ): ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್ ಮಂಡಳಿಯಿಂದ (ಸಿಬಿಐಸಿ) ದೇಶದಾದ್ಯಂತ ಜಿಎಸ್‌ಟಿ ನಕಲಿ ನೋಂದಣಿ ವಿರುದ್ಧ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಇಲ್ಲಿಯವರೆಗೆ 10,700 ನಕಲಿ ಕಂಪನಿಗಳನ್ನು ಪತ್ತೆ ಹಚ್ಚಲಾಗಿದೆ. ಒಟ್ಟು ₹10,179 ಕೋಟಿ ವಂಚನೆ ಬೆಳಕಿಗೆ ಬಂದಿದೆ.

ನಕಲಿ ನೋಂದಣಿ ವಿರುದ್ಧ ಹಮ್ಮಿಕೊಂಡಿರುವ ಈ ಎರಡನೇ ಹಂತದ ವಿಶೇಷ ಕಾರ್ಯಾಚರಣೆಯು ಅಕ್ಟೋಬರ್ 15ರ ವರೆಗೆ ನಡೆಯಲಿದೆ.

ಮಂಗಳವಾರ ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ (ಅಸೋಚಾಂ) ಹಮ್ಮಿಕೊಂಡಿದ್ದ

ಕಾರ್ಯಕ್ರಮದಲ್ಲಿ ಮಾತನಾಡಿದ ಸಿಬಿಐಸಿ ಸದಸ್ಯ ಶಶಾಂಕ್ ಪ್ರಿಯಾ, ಈಗಾಗಲೇ ದೇಶದ 12 ರಾಜ್ಯಗಳಲ್ಲಿ ಆಧಾರ್ ಸಂಖ್ಯೆ ಆಧಾರಿತ ಜಿಎಸ್‌ಟಿ ನೋಂದಣಿ ದೃಢೀಕರಣ ಪ್ರಕ್ರಿಯೆ ಜಾರಿಯಲ್ಲಿದೆ. ಅಕ್ಟೋಬರ್ 4ರಿಂದ ನಾಲ್ಕು ರಾಜ್ಯಗಳಲ್ಲಿ ಆರಂಭವಾಗಲಿದೆ ಎಂದರು.

'ಅಂತಿಮವಾಗಿ ದೇಶದ 20 ರಾಜ್ಯಗಳಲ್ಲಿ ಈ ಪ್ರಕ್ರಿಯೆ ಜಾರಿಗೆ ಬರಲಿದೆ' ಎಂದು ಹೇಳಿದರು.

'ತೆರಿಗೆ ವಂಚನೆ ಎಸಗುವ ವರ್ತಕರಿಗೆ ಇಲಾಖೆಯು ಭವಿಷ್ಯದಲ್ಲಿ ಕೆಲವು ನಿರ್ಬಂಧಗಳನ್ನು ವಿಧಿಸುವ ಸಾಧ್ಯತೆ ಇದೆ' ಎಂದು ಹೇಳಿದರು.

'ಇಂತಹ ತೆರಿಗೆದಾರರು ಎಷ್ಟು ಇನ್‌ವಾಯ್ಸ್ ವಿತರಿಸಬಹುದು ಎಂಬ ಬಗ್ಗೆ ಕೆಲವು ನಿರ್ಬಂಧ ಹೇರುತ್ತೇವೆ' ಎಂದ ಅವರು, 'ತೆರಿಗೆ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಳ್ಳುವುದು ಸರಿಯಲ್ಲ. ಇದಕ್ಕೆ ಕಡಿವಾಣ ಹಾಕಲು ಮಂಡಳಿಯು ಎಲ್ಲಾ ವಿಧಾನಗಳನ್ನು ಅನುಸರಿಸಲಿದೆ' ಎಂದು ಹೇಳಿದರು.

ಸರಕು ಮತ್ತು ಸೇವಾ ತೆರಿಗೆ ಅಡಿ ವರ್ತಕರಿಗೆ ಗುರುತಿನ ಸಂಖ್ಯೆ (ಜಿಎಸ್‌ಟಿಐಎನ್) ನೀಡಲಾಗುತ್ತದೆ. ಒಟ್ಟು 67,970 ಜಿಎಸ್‌ಟಿಐಎನ್‌ಗಳನ್ನು ಗುರುತಿಸಲಾಗಿದೆ. ಈ ಪೈಕಿ ಇಲ್ಲಿಯವರೆಗೆ 39,965 ಜಿಎಸ್‌ಟಿಐಎನ್‌ಗಳ ಪರಿಶೀಲನೆ ಪೂರ್ಣಗೊಂಡಿದೆ ಎಂದು ಹೇಳಿದರು.

ನಕಲಿ ಇನ್‌ವಾಯ್ಸ್ ಸಲ್ಲಿಸಿ ಪಡೆದಿದ್ದ ₹2,994 ಕೋಟಿ ಮೊತ್ತದಷ್ಟು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಅನ್ನು ಪತ್ತೆ ಹಚ್ಚಲಾಗಿದೆ. ಈ ಪೈಕಿ ಇಲ್ಲಿಯವರೆಗೆ ₹28 ಕೋಟಿಯನ್ನು ವಶಕ್ಕೆ ಪಡೆಯಲಾಗಿದೆ ಎಂದರು.

ದೇಶದಲ್ಲಿ ಮೊದಲ ಹಂತದಲ್ಲಿ 2023ರ ಮೇ 16ರಿಂದ ಜುಲೈ 15ರ ವರೆಗೆ ನಕಲಿ ನೋಂದಣಿ ವಿರುದ್ಧ ಕಾರ್ಯಾಚರಣೆ ನಡೆದಿತ್ತು. 21,791 ನಕಲಿ ಕಂಪನಿಗಳನ್ನು ಪತ್ತೆ ಹಚ್ಚಿದ್ದ ತೆರಿಗೆ ಅಧಿಕಾರಿಗಳು, ₹24,010 ಕೋಟಿ ವಂಚನೆಯನ್ನು ಬಯಲಿಗೆ ಎಳೆದಿದ್ದರು.

ಮುಂಬೈ ಧಾರಣೆ (ಶೇಂಗಾ)

24-09-2024

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1520)
ಒಂದು ವಾರದ ಡೆಲಿವರಿ	1515 (1515)
ಪಾಮ್ ವಾರದ ಡೆಲಿವರಿ	1233 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1175 (1190)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹74,500 (74,350)

ಬೆಳ್ಳಿ ಕೆ.ಜಿ ₹88,500 (88,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹15000-17008
ಬೆಂಗಳೂರು	₹12500-13500
ದಾವಣಗೆರೆ	₹8300-8500
ತಿಪಟೂರು	₹16800-17000
ದಾವಣಗೆರೆ	₹16500-16600

'ಜಿಡಿಪಿ ಶೇ 6.8 ಪ್ರಗತಿ'

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿಯು ಶೇ 6.8ರಷ್ಟು ಪ್ರಗತಿ ಕಾಣಲಿದೆ.

ಅಕ್ಟೋಬರ್‌ನಲ್ಲಿ ನಡೆಯಲಿರುವ ಹಣಕಾಸು ನೀತಿ ಸಮಿತಿ ಸಭೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರ ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ಜಾಗತಿಕ ಕ್ರೆಡಿಟ್ ರೇಟಿಂಗ್ ಸಂಸ್ಥೆ ಎಸ್ ಆ್ಯಂಡ್ ಪಿ ಗ್ಲೋಬಲ್ ತಿಳಿಸಿದೆ.

ಮಂಗಳವಾರ ಏಷ್ಯಾ ಪೆಸಿಫಿಕ್ ಆರ್ಥಿಕ ಮುನ್ನೋಟ ಕುರಿತ ವರದಿಯನ್ನು ಬಿಡುಗಡೆ ಮಾಡಿದೆ. 2025–26ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 6.9ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಅಂದಾಜಿಸಿದೆ.

ಚಿಲ್ಲರೆ ಹಣದುಬ್ಬರವನ್ನು ಶೇ 4ರ ಮಿತಿಯೊಳಗೆ ತರಲು ಆರ್‌ಬಿಐ ಹಲವು ಕ್ರಮಕೈಗೊಂಡಿದೆ. ಆರ್ಥಿಕ ಸ್ಥಿರತೆಯು ಇದಕ್ಕೆ ನೆರವಾಗಲಿದೆ ಎಂದು ಹೇಳಿದೆ.

ಬೆಂಗಳೂರಿನಲ್ಲಿ ಬಿಟಿಎಸ್: ದೆಹಲಿಯಲ್ಲಿ ರೋಡ್‌ಶೋ

'ಸೆಮಿಕಂಡಕ್ಟರ್: ರಾಜ್ಯಕ್ಕೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸೆಮಿಕಂಡಕ್ಟರ್ ವಲಯ ಸ್ಥಾಪನೆಗೆ ಬೇಕಾದ ಎಲ್ಲ ಮೂಲಸೌಕರ್ಯ ಕರ್ನಾಟಕದಲ್ಲಿದೆ. ಆದರೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಗುಜರಾತ್‌ನಲ್ಲಿ ಹೂಡಿಕೆ ಮಾಡುವಂತೆ ಉದ್ಯಮಿಗಳಿಗೆ ಒತ್ತಡ ಹೇರುತ್ತಿದೆ. ಈ ಮೂಲಕ ಕರ್ನಾಟಕಕ್ಕೆ ಅನ್ಯಾಯ ಮಾಡುತ್ತಿದೆ' ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

ಬೆಂಗಳೂರು ತಂತ್ರಜ್ಞಾನ ಶೃಂಗದ (ಬಿಟಿಎಸ್) 27ನೇ ಆವೃತ್ತಿ ನವೆಂಬರ್ 19ರಿಂದ 21ರವರೆಗೆ ಬೆಂಗಳೂರಿನಲ್ಲಿ ನಡೆಯಲಿದೆ. ಬಿಟಿಎಸ್-25ಕ್ಕೆ ಪೂರ್ವಭಾವಿಯಾಗಿ ಮಂಗಳವಾರ

ಪ್ರಿಯಾಂಕ್ ಖರ್ಗೆ

ಇಲ್ಲಿ ಏರ್ಪಡಿಸಿದ್ದ ರೋಡ್ ಶೋ ಮತ್ತು ಉದ್ಯಮಿಗಳೊಂದಿಗಿನ ವಿಚಾರ ವಿನಿಮಯ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸೆಮಿಕಂಡಕ್ಟರ್ ವಲಯಗಳ ಸ್ಥಾಪನೆಗೆ ಕರ್ನಾಟಕ ಸರ್ಕಾರ ಪ್ರಸ್ತಾವ ಸಲ್ಲಿಸಿತ್ತು. ಆದರೆ, ಗುಜರಾತ್‌ಗೆ ನಾಲ್ಕು ಸೆಮಿಕಂಡಕ್ಟರ್ ವಲಯಗಳನ್ನು ಮಂಜೂರು ಮಾಡಲಾಗಿದೆ. ಅಲ್ಲಿ ಯಾವುದೇ ಮೂಲಸೌಕರ್ಯ ಇಲ್ಲ. ಮೋದಿ ಅವರು ದೇಶದ ಪ್ರಧಾನಿಯೋ ಅಥವಾ ಗುಜರಾತ್‌ನ ಮುಖ್ಯಮಂತ್ರಿಯೋ ಎಂಬ ಅನುಮಾನ ಕಾಡುತ್ತಿದೆ' ಎಂದರು.

'ಶೃಂಗಸಭೆಯಲ್ಲಿ 40ಕ್ಕೂ ಹೆಚ್ಚು ರಾಷ್ಟ್ರಗಳಿಂದ 50 ಸಾವಿರ ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆ ಇದೆ. ಈ ವರ್ಷ ಜೈವಿಕ ತಂತ್ರಜ್ಞಾನ ಮತ್ತು ಆರೋಗ್ಯ ತಂತ್ರಜ್ಞಾನ, ಎಲೆಕ್ಟ್ರೋ ಮತ್ತು ಸೆಮಿಕಾನ್, ಟೆಲಿಕಾಂ, ವಿಜ್ಞಾನ-ತಂತ್ರಜ್ಞಾನ, ಸಾರಿಗೆ, ಹಸಿರು ತಂತ್ರಜ್ಞಾನ, ಬಿಎಫ್‌ಎಸ್‌ಐ, ಫಿನ್‌ಟೆಕ್, ಗೇಮಿಂಗ್‌ನಂತಹ ವಲಯಗಳಿಗೆ ವಿಶೇಷ ಒತ್ತು ನೀಡಲಾಗುತ್ತಿದೆ' ಎಂದರು.

ಸಮಕಾಲೀನ ಉದ್ಯಮಗಳಿಗೆ ನಾವು ತೆರೆದುಕೊಂಡಿದ್ದು, ಇದಕ್ಕಾಗಿ ಜಗತ್ತಿನ ಪ್ರಮುಖ ಆವಿಷ್ಕಾರ ತಾಣಗಳೊಂದಿಗೆ ಜಾಗತಿಕ ಆವಿಷ್ಕಾರ ಸಹಭಾಗಿತ್ವ ಉಪಕ್ರಮದಡಿ ಒಪ್ಪಂದಗಳನ್ನು ಮಾಡಿಕೊಳ್ಳಲು ಉತ್ಸುಕವಾಗಿದ್ದೇವೆ ಎಂದು ತಿಳಿಸಿದರು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ಚಿರಸ್ಮರಣೆ

ಶ್ರೀಮತಿ ಕೆಂಪಮ್ಮ

ನಿಧನ: 10.01.2014



ಹನುಮಂತಪ್ಪ ಉರುಫ್ ತಾಯಪ್ಪ

ನಿಧನ : 25.09.1991

ನೀವು ತೋರಿದ ಮಾರ್ಗದರ್ಶನ ನಮಗೆ ಸದಾ ದಾರಿದೀಪವಾಗಿದೆ.

ಇಂತಿ, ಪುತ್ರ ಹೆಚ್.ಎನ್.ಕೃಷ್ಣಪ್ಪ, ವಕೀಲರು (ನಿವೃತ್ತ ಎಸ್.ಇ. ಬೆಸ್ಕಾಂ) ಮತ್ತು ಶಶಿಕಲಾ, ಪ್ರಮೋದ್, ಸುಷ್ಮ, ಶ್ರೇಯಸ್, ರಂಜಿತಾ, ತೇಜಸ್, ರಮ್ಯ, ತನಯ್, ಅಮೂಲ್ಯ, ಮಿತಾಕ್ಷಿ,ಯದುಶ್ರೀ, ಹಗದೂರು, ವೈಟ್‌ಫೀಲ್ಡ್, ಬೆಂ-66

ಇ.ವಿ ಬೈಕ್ ರಫ್ತಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನವೋದ್ಯಮ ಕಂಪನಿ ಅಲ್ಟ್ರಾವಯೋಲೆಟ್ ಆಟೊಮೋಟಿವ್ ತಯಾರಿಸಿರುವ ಎಫ್–77 ಸ್ಪೋರ್ಟ್ಸ್ ಸ್ತರದ ವಿದ್ಯುತ್‌ಚಾಲಿತ ಬೈಕ್‌ಗಳನ್ನು ಯುರೋಪಿಯನ್ ಒಕ್ಕೂಟದ ಮಾರುಕಟ್ಟೆಗಳಿಗೆ ರಫ್ತು ಮಾಡುವ ಪ್ರಕ್ರಿಯೆಗೆ ಮಂಗಳವಾರ ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, 'ಅಲ್ಟ್ರಾವಯೋಲೆಟ್ ಕಂಪನಿಯು ಇ.ವಿ ಬೈಕ್‌ಗಳನ್ನು ರಫ್ತು ಮಾಡುತ್ತಿರುವುದು ಭಾರತದ ಆಟೊಮೋಟಿವ್ ಉದ್ಯಮದಲ್ಲಿ ಪ್ರಮುಖ ಘಟ್ಟವಾಗಲಿದೆ. ಜಾಗತಿಕವಾಗಿ ಭಾರತದ ಉತ್ಪನ್ನಗಳು ಪೈಪೋಟಿ ನೀಡುವ ಸಾಮರ್ಥ್ಯಕ್ಕೆ ಇದು ಪುಷ್ಟಿ ನೀಡಿದೆ' ಎಂದರು.

ಭಾರತದ ನವೋದ್ಯಮಗಳು ಎಲೆಕ್ಟ್ರಿಕ್ ಮೊಬಿಲಿಟಿ ಕ್ಷೇತ್ರದಲ್ಲಿ ಹೊಸತನಕ್ಕೆ ಪ್ರಾಮುಖ್ಯತೆ ನೀಡುತ್ತಿವೆ ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ. ಭಾರತವನ್ನು ವಿದ್ಯುತ್ ಚಾಲಿತ ವಾಹನಗಳ ತಯಾರಿಕಾ ವಲಯವನ್ನಾಗಿ ರೂಪಿಸಲು ಕೇಂದ್ರ ಸರ್ಕಾರ ದಿಟ್ಟಹೆಜ್ಜೆ ಇಟ್ಟಿದೆ. ಸರ್ಕಾರದ ದೂರದೃಷ್ಟಿಗೆ ಇದು ಪೂರಕವಾಗಿದೆ ಎಂದರು.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮಾತನಾಡಿ, 'ವಿದ್ಯುತ್‌ಚಾಲಿತ ವಾಹನಗಳ ಕ್ರಾಂತಿಯಲ್ಲಿ ಬೆಂಗಳೂರು ಮುಂಚೂಣಿಯಲ್ಲಿದೆ. ಜಾಗತಿಕ ಗುಣಮಟ್ಟದ ಬೈಕ್‌ಗಳನ್ನು ತಯಾರಿಸಿ ರಫ್ತು ಮಾಡುತ್ತಿರುವ ಅಲ್ಟ್ರಾವಯೋಲೆಟ್ ಕಂಪನಿಯನ್ನು 'ಭಾರತದ ಟೆಸ್ಲಾ' ಎಂದು ಬಣ್ಣಿಸಬಹುದು ಎಂದರು.

ಕಂಪನಿಯ ಸಹ ಸ್ಥಾಪಕ ಮತ್ತು ಸಿಇಒ ನಾರಾಯಣ್ ಸುಬ್ರಮಣಿಯಂ ಮತ್ತು ನೀರಜ್ ರಾಜಮೋಹನ್ ಇದ್ದರು.

ಲ್ಯಾಪ್‌ಟಾಪ್ ಆಮದಿಗೆ ಆನ್‌ಲೈನ್ ದೃಢೀಕರಣ ವಿಸ್ತರಣೆ

ನವದೆಹಲಿ (ಪಿಟಿಐ): ಲ್ಯಾಪ್‌ಟಾಪ್, ಟ್ಯಾಬ್ಲೆಟ್ ಸೇರಿ ಐ.ಟಿ ಹಾರ್ಡ್‌ವೇರ್ ಉಪಕರಣಗಳನ್ನು ಆಮದು ಮಾಡಿಕೊಳ್ಳುವ ಸಂಬಂಧ ರೂಪಿಸಿರುವ ಆನ್‌ಲೈನ್ ದೃಢೀಕರಣ ವ್ಯವಸ್ಥೆಯ ಅವಧಿಯನ್ನು ಡಿಸೆಂಬರ್ 31ರ ವರೆಗೆ ವಿಸ್ತರಿಸಲಾಗಿದೆ ಎಂದು ಕೇಂದ್ರ ತಿಳಿಸಿದೆ.

ಇದಕ್ಕೂ ಮೊದಲು ಈ ವ್ಯವಸ್ಥೆಯು ಸೆಪ್ಟೆಂಬರ್ 30ರ ವರೆಗೆ ಜಾರಿಯಲ್ಲಿತ್ತು.

ಲ್ಯಾಪ್‌ಟಾಪ್, ಪರ್ಸನಲ್ ಕಂಪ್ಯೂಟರ್, ಮೈಕ್ರೊ ಕಂಪ್ಯೂಟರ್ ಸೇರಿ ಕೆಲವು ದತ್ತಾಂಶ ಸಂಸ್ಕರಣಾ ಯಂತ್ರಗಳನ್ನು ಆಮದು ಮಾಡಿಕೊಳ್ಳಲು ಆಮದುದಾರರು ಈ ದೃಢೀಕರಣ ಪಡೆದುಕೊಳ್ಳಬೇಕಿದೆ ಎಂದು ಕಳೆದ ವರ್ಷದ ಆಗಸ್ಟ್ 3ರಂದು ಸರ್ಕಾರ ಆದೇಶ ಹೊರಡಿಸಿತ್ತು.

ಆಮದುದಾರರು ಆನ್‌ಲೈನ್ ದೃಢೀಕರಣ ಪಡೆದುಕೊಳ್ಳಲು 2025ರ ಜನವರಿ 1ರಿಂದ ಹೊಸದಾಗಿ ನೋಂದಣಿ ಮಾಡಿಕೊಳ್ಳಬೇಕಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಿಶ್ವನಾಥ್, ಬೆಂಗಳೂರು.

- **ಪ್ರಶ್ನೆ: ಪ್ರಸ್ತುತ ನಾನು ಸಾರ್ವಜನಿಕ ವಲಯದ ಕಂಪನಿಯೊಂದರಲ್ಲಿ ಮಹಾಪ್ರಬಂಧಕನಾಗಿದ್ದೇನೆ. ಮುಂದಿನ ವರ್ಷದ ಮಾರ್ಚ್‌ನಲ್ಲಿ (35 ವರ್ಷ ಸೇವೆ) ನಿವೃತ್ತಿ ಹೊಂದುತ್ತೇನೆ. ಈ ನಿಮಿತ್ತ ನಿವೃತ್ತಿಗೆ ಸಂಬಂಧಿಸಿದ ಅನೇಕ ಆರ್ಥಿಕ ಗಳಿಕೆಯನ್ನು ಪಡೆಯುವವನಿದ್ದೇನೆ. ಇದರಲ್ಲಿ ಪಿ.ಎಫ್ ಮೊತ್ತ ಸುಮಾರು ₹75 ಲಕ್ಷ, ರಜಾ ಸಂಬಂಧಿತ ಗಳಿಕೆ ₹4 ಲಕ್ಷ, ಗ್ರ್ಯಾಚ್ಯುಟಿ ಮೊತ್ತ ಸುಮಾರು ₹10 ಲಕ್ಷ, ಗ್ರೂಪ್ ಇನ್ಶೂರೆನ್ಸ್ ಮೊತ್ತ ₹3 ಲಕ್ಷ ಹೀಗೆ ಒಟ್ಟಾರೆ ಮೊತ್ತ ₹92 ಲಕ್ಷದಿಂದ ₹1 ಕೋಟಿ ತನಕ ಸಿಗಬಹುದು.**

ಮುಂದಿನ ವರ್ಷಕ್ಕೆ ಅಂದಾಜು ಸುಮಾರು ₹9 ರಿಂದ ₹10 ಲಕ್ಷ ಪಿಂಚಣಿ ಬರಬಹುದು ಎಂದು ಊಹಿಸಿದ್ದೇನೆ. ಈ ಮೊತ್ತವನ್ನು ಸದ್ಯದ ಪರಿಸ್ಥಿತಿಯಲ್ಲಿ ಉತ್ತಮ ಆದಾಯ ನೀಡುವ ಕಡೆ ಹೂಡಿಕೆ ಮಾಡುವ ಯೋಚನೆಯಿದೆ. ದೀರ್ಘಾವಧಿಯಲ್ಲಿ ಯಾವುದಾದರೂ ಭೂಮಿ ಅಥವಾ ಮನೆ ಕೊಳ್ಳುವ ಬಗ್ಗೆಯೂ ಯೋಜನೆ ಇದೆ. ಈ ಬಗ್ಗೆ ಮಾಹಿತಿ ಕೊಡಿ. ತೆರಿಗೆ ಉಳಿಸುವ ಅವಕಾಶ ಇದ್ದರೆ ಅದನ್ನು ತಿಳಿಸಿ.

ಉತ್ತರ: ಈಗಾಗಲೇ ಪ್ರಶ್ನೆಯಲ್ಲಿ ತಿಳಿಸಿರುವಂತೆ ನೀವು ಸಾರ್ವಜನಿಕ ವಲಯ ಕಂಪನಿಯೊಂದರಲ್ಲಿ ಸೇವೆ ಸಲ್ಲಿಸುತ್ತಿದ್ದೀರಿ. ನಿಮಗೆ ಸಿಗಲಿರುವ ಬಹುತೇಕ ಎಲ್ಲ ಮೊತ್ತಗಳು ತೆರಿಗೆ ಮುಕ್ತ ಆಗಿರುವವೇ ಆಗಿವೆ. ನಿಮ್ಮ ಈ ಮೊತ್ತವನ್ನು ನಿಗದಿತ ಯೋಜನೆಗಳಲ್ಲಿ ಹೂಡಿಕೆ ಮಾಡಿ ಆದಾಯ ತೆರಿಗೆ ಉಳಿತಾಯಕ್ಕೆ ಅವಕಾಶ ಇದೆ.

ನಿಮ್ಮ ಸೇವೆ ಸಾರ್ವಜನಿಕ ವಲಯದ ಕಂಪನಿಯಲ್ಲಾದ ಕಾರಣ ನಿಮಗೆ ಸಿಗುವ ಮೊತ್ತವನ್ನು ಪ್ರತ್ಯೇಕವಾದ ಯೋಜನೆಯಲ್ಲಿ ಹೂಡಿಕೆ ಮಾಡುವ ಅವಕಾಶ ಇದೆ. ನಿವೃತ್ತಿಗೆ ಸಂಬಂಧಿಸಿ ಸಿಗುವ ಮೊತ್ತವನ್ನು ಮೂರು ತಿಂಗಳ ಒಳಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ಇತರೆ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಸಾರ್ವಜನಿಕ ವಲಯದ ಕಂಪನಿಯ ಉದ್ಯೋಗಿಗಳ ನಿವೃತ್ತಿಯ ಠೇವಣಿ ಯೋಜನೆಯಲ್ಲಿ ತೊಡಗಿಸಿ.

ಈ ಯೋಜನೆಯ ಠೇವಣಿಗೆ ಸಿಗುವ ಬಡ್ಡಿಗೆ ಸೆಕ್ಷನ್ 10(15)(iv) ಅಡಿ ಸಂಪೂರ್ಣ ತೆರಿಗೆ ವಿನಾಯಿತಿ ಸಿಗುತ್ತದೆ. ಆ ಠೇವಣಿಯನ್ನು ಮೂರು ವರ್ಷ ಕಾಲ ಹಿಂಪಡೆಯುವಂತಿಲ್ಲ. ಅಲ್ಲಿಯ ತನಕ ಬಡ್ಡಿಗೆ ತೆರಿಗೆ ಇರುವುದಿಲ್ಲ. ಇದಕ್ಕೆ ಅಗತ್ಯವಾಗಿ ನಿಮ್ಮ ಕಂಪನಿ ಸಾರ್ವಜನಿಕ ವಲಯದ ಕಂಪನಿ ಎಂಬುದಾಗಿ ಹಾಗೂ ನಿಮಗೆ ಸಿಕ್ಕಿದ ಮೊತ್ತ ನಿವೃತ್ತಿಗೆ ಸಂಬಂಧಿಸಿದ್ದಾಗಿದೆ ಎಂದು ದೃಢೀಕರಿಸಿರುವ ಕಂಪನಿಯ ಪ್ರಮಾಣ ಪತ್ರ ಪಡೆದುಕೊಳ್ಳಿ. ರಿಟರ್ನ್ಸ್ ಸಲ್ಲಿಸುವಾಗ ವಿನಾಯಿತಿ ಆದಾಯದಲ್ಲಿ ಈ ಬಡ್ಡಿ ಮೊತ್ತ ಘೋಷಿಸಬೇಕು. ಇತರೆ ಕಡೆ ಎಲ್ಲೇ ಹೂಡಿಕೆ ಮಾಡಿದರೂ ಸಿಗುವ ಬಡ್ಡಿಗೆ ತೆರಿಗೆ ಇದೆ ಎಂಬುದನ್ನು ಗಮನಿಸಿ.

ಸೌಮ್ಯ ಎಸ್., ತುಮಕೂರು.

- **ಪ್ರಶ್ನೆ: ನನಗೆ 30 ವರ್ಷ. ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ವಾರ್ಷಿಕ ಆದಾಯ ₹10 ಲಕ್ಷ ಇದೆ. ಇದಕ್ಕೆ ಸಂಸ್ಥೆಯವರು ತೆರಿಗೆ ಕಡಿತ ಮಾಡುತ್ತಿದ್ದಾರೆ. ಈ ಆದಾಯಕ್ಕೆ ನಾನು ಪ್ರತಿವರ್ಷ ಹೊಸ ತೆರಿಗೆ ಪದ್ಧತಿಯಂತೆ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುತ್ತಾ ಬಂದಿದ್ದೇನೆ.**

ಸುಮಾರು ಐದು ವರ್ಷದ ಹಿಂದೆ ಕೊರಟಗೆರೆ ತಾಲ್ಲೂಕಿನ ಕೋಳಾಲ ಗ್ರಾಮದ ಬಳಿ 9 ಎಕರೆ ಕೃಷಿ ಜಮೀನು ಖರೀದಿಸಿದ್ದೇನೆ. ಪಹಣಿ ಮತ್ತು ಇತರೆ ದಾಖಲೆಗಳು ನನ್ನ ಹೆಸರಲ್ಲಿವೆ. ಇಲ್ಲಿ ಸುಮಾರು 1,000 ಅಡಿಕೆ ಮರ ಹಾಗೂ 450 ತೆಂಗಿನ ಸಸಿಗಳನ್ನು ಬೆಳೆಸುತ್ತಿದ್ದೇನೆ. ಕಾರ್ಮಿಕರು ಇದನ್ನು ನೋಡಿಕೊಳ್ಳುತ್ತಾರೆ.

ಈ ವರ್ಷ ಅಡಿಕೆ ಮರಗಳು ಫಸಲಿಗೆ ಬಂದಿದ್ದು, ₹4 ಲಕ್ಷ ವಾರ್ಷಿಕ ಮೌಲ್ಯಕ್ಕೆ ಗೇಣಿ ಕೊಟ್ಟಿದ್ದೇನೆ. ಇದರ ಜೊತೆಗೆ ಆಗಾಗ ತರಕಾರಿ ಬೆಳೆದು ಕಾರ್ಮಿಕರ ಮೂಲಕ ಸಗಟು ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದೇನೆ. ಹೀಗೆ ಈ ವರ್ಷ ಕಂತುಗಳಲ್ಲಿ ಸುಮಾರು ₹5 ಲಕ್ಷ ಕೃಷಿ ಆದಾಯ ಗಳಿಸಿದ್ದೇನೆ. ಈ ಎಲ್ಲವೂ ನಗದು ಮೂಲಕವೇ ವ್ಯವಹಾರ ನಡೆಯುತ್ತಿದೆ. ಈ ಆದಾಯವು ಬರುವ ವರ್ಷಗಳಲ್ಲಿ ಹೆಚ್ಚಾಗುವ ನಿರೀಕ್ಷೆ ಇದೆ.

ನಮ್ಮಿಂದ ಖರೀದಿಸುವ ಅಡಿಕೆ ಮಧ್ಯವರ್ತಿಗಳು ಅಥವಾ ತರಕಾರಿ ಮಧ್ಯವರ್ತಿಗಳು ಅಧಿಕೃತವಾಗಿ ಯಾವುದೇ ರಸೀದಿ ನೀಡುವುದಿಲ್ಲ. ನಾನು ಕೊಡುವ ದಿನಗೂಲಿ ಹಾಗೂ ಇತರೆ ಖರ್ಚನ್ನು ಕೂಡ ನಗದು ಮೂಲಕವೇ ಕೊಡುತ್ತಿದ್ದೇನೆ. ಹೀಗಿರುವಾಗ ಇವೆಲ್ಲವನ್ನು ಮುಂದಿನ ವರ್ಷದ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ಯಾವ ರೀತಿ ವಿವರ ಸಲ್ಲಿಸಬೇಕು ಎಂಬುದನ್ನು ತಿಳಿಸಬೇಕೆಂದು ಕೋರುತ್ತೇನೆ. ನಾನು ಯಾವ ರೀತಿ ಹಣಕಾಸು ದಾಖಲೆಗಳನ್ನು ನಿರ್ವಹಿಸಬೇಕು? ಇದನ್ನು ಆಡಿಟ್ ಮಾಡಿಸಬೇಕೇ? ಆದಾಯ ತೆರಿಗೆ ಇಲಾಖೆಯಿಂದ ಏನಾದರು ತೊಂದರೆ ಬರಬಹುದೇ?

ಉತ್ತರ: ನೀವು ಪ್ರಶ್ನೆಯಲ್ಲಿ ತಿಳಿಸಿರುವಂತೆ ಈಗಾಗಲೇ ಖಾಸಗಿ ಸಂಸ್ಥೆಯೊಂದರಲ್ಲಿ ಉದ್ಯೋಗಿಯಾಗಿದ್ದು, ವೇತನ ಆದಾಯವಲ್ಲದೆ ಕೃಷಿ ಭೂಮಿಯಿಂದ ವಿವಿಧ ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಆದಾಯವೂ ಇದೆ ಎಂಬುದನ್ನು ಉಲ್ಲೇಖಿಸಿದ್ದೀರಿ.

ನೀವು ಹೊಸ ತೆರಿಗೆ ಪದ್ಧತಿ ಅನುಸರಿಸುತ್ತಿದ್ದು, ನಿಮ್ಮ ವೇತನ ಆದಾಯ ಗರಿಷ್ಠ ಆದಾಯ ವಿನಾಯಿತಿ ಮಿತಿಯಾದ ₹3 ಲಕ್ಷಕ್ಕಿಂತ ಅಧಿಕ ಇದೆ. ಕೃಷಿ ಆದಾಯವೂ ₹5 ಲಕ್ಷಕ್ಕಿಂತ ಮೇಲ್ಪಟ್ಟಿರುವುದರಿಂದ ನಿಮ್ಮ ವಾರ್ಷಿಕ ರಿಟರ್ನ್ಸ್ ಸಲ್ಲಿಸುವಾಗ ಕೃಷಿ ಆದಾಯ ಮೊತ್ತವನ್ನೂ ಅದರಲ್ಲಿ ಪರಿಗಣಿಸಬೇಕಾಗುತ್ತದೆ. ಮುಂದೆ ಅನೇಕ ವರ್ಷದ ಕೃಷಿ ಆದಾಯ ಒಟ್ಟಾಗಿ ನಿಮ್ಮ ಬ್ಯಾಂಕ್ ಖಾತೆಯಲ್ಲಿ ಜಮಾ ಆದಾಗ ಹಾಗೂ ಅವೆಲ್ಲಾ ನಗದು ರೂಪದಲ್ಲೇ ಇರುವ ಕಾರಣ ಅದರ ಮೂಲದ ಬಗ್ಗೆ ಪ್ರಶ್ನೆ ಬರದಂತೆ ಇಂತಹ ಆದಾಯ ಘೋಷಣೆಯು ಕಾನೂನು ಪರಿಧಿಯಲ್ಲಿ ಅನಿವಾರ್ಯ. ರಿಟರ್ನ್ಸ್ ಸಲ್ಲಿಕೆಗೆ ನಿಮ್ಮ ಸ್ಥಳೀಯ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ.

ಕೃಷಿಗೆ ಸಂಬಂಧಿಸಿದ ಆದಾಯ ಯಾವುದು ಎಂಬುದನ್ನು ಆದಾಯ ತೆರಿಗೆ ಸೆಕ್ಷನ್ 2(1ಎ) ಯಲ್ಲಿ ಹೇಳಲಾಗಿದೆ. ಇದಕ್ಕೆ ಸಂಬಂಧಿಸಿದ ವಿನಾಯಿತಿಗಳನ್ನು ಸೆಕ್ಷನ್ 10(1) ರಲ್ಲಿ ಹೇಳಲಾಗಿದೆ. ನಿಮ್ಮ ಎಲ್ಲ ಆದಾಯಗಳೂ ವಿನಾಯಿತಿ ಪರಿಧಿಯಲ್ಲೇ ಇವೆ. ಇನ್ನು ನಿಮ್ಮ ಕೃಷಿಗೆ ಸಂಬಂಧಪಟ್ಟ ಲೆಕ್ಕಪತ್ರದ ನಿರ್ವಹಣೆ ಬಗ್ಗೆ ಹೇಳುವುದಾದರೆ, ಇದು ವಾಣಿಜ್ಯ ವ್ಯವಹಾರದ ಪರಿಮಿತಿಯಲ್ಲಿ ಇಲ್ಲ. ಹಾಗಾಗಿ, ಯಾವುದೇ ಲೆಕ್ಕಪತ್ರ ತಪಾಸಣೆಯ ಅಗತ್ಯ ಇಲ್ಲ. ಆದರೆ, ನೀವು ಘೋಷಿಸುವ ಕೃಷಿ ಆದಾಯ ಸಂದೇಹಾಸ್ಪದವಾಗದ ರೀತಿ ಇರಲಿ. ಇದಕ್ಕಾಗಿ ಬೇಕಾದ ಮಾಹಿತಿ ಹಾಗೂ ದಿನವಹಿ ಲೆಕ್ಕ ಇಟ್ಟುಕೊಳ್ಳಿ.

ದೊಡ್ಡ ಮೊತ್ತದ ವ್ಯವಹಾರವನ್ನು ಯಾವತ್ತೂ ಬ್ಯಾಂಕ್ ಮೂಲಕವೇ ನಡೆಸಿ. ಯಾವುದೇ ಸಂದರ್ಭದಲ್ಲಿ ಒಂದೇ ಮಾರಾಟಕ್ಕೆ ಸಂಬಂಧಿಸಿ ₹2 ಲಕ್ಷಕ್ಕಿಂತ ಅಧಿಕ ಮೊತ್ತವನ್ನು ಪಡೆಯದಿರಿ. ಕೃಷಿ ವ್ಯವಹಾರಕ್ಕಾಗಿ ಪ್ರತ್ಯೇಕವಾದ ಬ್ಯಾಂಕ್ ಖಾತೆ ನಿರ್ವಹಿಸಿ ಮಾಹಿತಿ ಇರಿಸುವುದು ಪಾರದರ್ಶಕತೆ ದೃಷ್ಟಿಯಲ್ಲಿ ಉತ್ತಮ ನಡೆ ಆಗಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.

ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.

ಇ-ಮೇಲ್: businessdesk@prajavani.co.in

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹3800-4400
ಮಧ್ಯಮ	₹2500-3800
ಸಣ್ಣ	₹1000-2500

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹18300
ಎಸಿ	₹11205
ಆರ್‌ಪಿ	₹20250
ಆರ್‌ಸಿ	₹10350

ಮೋದಿ– ಝೆಲೆನ್‌ಸ್ಕಿ ಭೇಟಿ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಮೂರು ದಿನಗಳ ಪ್ರವಾಸದ ಕೊನೆಯ ದಿನ ಸೋಮವಾರ ಇಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಭೇಟಿ ಮಾಡಿದರು. ಕಳೆದ 3 ತಿಂಗಳಲ್ಲಿ ಮೋದಿ ಹಾಗೂ ಝೆಲೆನ್‌ಸ್ಕಿ ಅವರ ಮೂರನೇ ಭೇಟಿ ಇದಾಗಿದೆ.

ಉಭಯ ನಾಯಕರು ಈ ಭೇಟಿ ಕುರಿತು ತಮ್ಮ 'ಎಕ್ಸ್' ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. 'ಉಕ್ರೇನ್–ರಷ್ಯಾ ಯುದ್ಧವು ಅಂತ್ಯಗೊಂಡು, ಶಾಂತಿ ನೆಲಸಬೇಕು ಎಂಬ ನಿಲುವಿಗೆ ಇಂದಿಗೂ ನಾವು ಬದ್ಧರಾಗಿದ್ದೇವೆ. ಶಾಂತಿ ಸ್ಥಾಪನೆಗಾಗಿ ಭಾರತದ ಮಿತಿಯಲ್ಲಿ ಸಾಧ್ಯವಾಗುವ ಎಲ್ಲ ಸಹಕಾರವನ್ನೂ ನೀಡಲಾಗುವುದು' ಎಂದು ಪ್ರಧಾನಿ ಮೋದಿ ಹೇಳಿದರು.

'ಉಕ್ರೇನ್ ಕಡೆಯಿಂದಲೇ ಈ ಭೇಟಿಗೆ ಆಮಂತ್ರಣ ಬಂದಿತ್ತು' ಎಂದು ಭಾರತ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ತಿಳಿಸಿದರು. ಇಬ್ಬರು ನಾಯಕರ ಭೇಟಿ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ಹಂಚಿಕೊಂಡ ಅವರು, 'ಯುದ್ಧವನ್ನು ಅಂತ್ಯಗೊಳಿಸಬೇಕು ಎನ್ನುವ ಕುರಿತು ಪ್ರಧಾನಿ ಮೋದಿ ಅವರ ಪ್ರಯತ್ನ ಶ್ಲಾಘನೀಯವಾಗಿದೆ ಎಂದು ಝೆಲೆನ್‌ಸ್ಕಿ ಹೇಳಿದರು. ಮಾತುಕತೆಯ ವೇಳೆ ಉಕ್ರೇನ್–ಭಾರತದ ದ್ವಿಪಕ್ಷೀಯ ಸಂಬಂಧದ ಕುರಿತೂ ಚರ್ಚಿಸಲಾಯಿತು' ಎಂದು ತಿಳಿಸಿದರು.

ಹರಿಣಿ ಅಮರಸೂರ್ಯ ಶ್ರೀಲಂಕಾದ ನೂತನ ಪ್ರಧಾನಿ

ಕೊಲಂಬೊ (ಪಿಟಿಐ): ಶ್ರೀಲಂಕಾದ ನೂತನ ಪ್ರಧಾನಿಯಾಗಿ ಹರಿಣಿ ಅಮರಸೂರ್ಯ ಅವರು ಮಂಗಳವಾರ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಶ್ರೀಲಂಕಾದ ಮೂರನೇ ಮಹಿಳಾ ಪ್ರಧಾನಿಯಾಗಿರುವ ಅವರು, ಸಿರಿಮಾವೊ ಬಂಡಾರನಾಯಿಕೆ ಬಳಿಕ ಈ ಹುದ್ದೆಗೇರಿದ ಮೊದಲ ಮಹಿಳೆ.

ನ್ಯಾಷನಲ್ ಪೀಪಲ್ಸ್ ಪವರ್ (ಎನ್‌ಪಿಪಿ) ಪಕ್ಷದ ನಾಯಕಿ ಹರಿಣಿ (54) ಮತ್ತು ಮೂವರು ಸಚಿವರಿಗೆ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ಅವರು ಪ್ರಮಾಣ ವಚನ ಬೋಧಿಸಿದರು.

ಹರಿಣಿ ಅವರು ಪ್ರಧಾನಿ ಹುದ್ದೆಯೊಂದಿಗೆ ಕಾನೂನು, ಶಿಕ್ಷಣ, ಕಾರ್ಮಿಕ, ಕೈಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ, ಆರೋಗ್ಯ ಹಾಗೂ ಹೂಡಿಕೆ ಖಾತೆಗಳನ್ನು ನಿರ್ವಹಿಸಲಿದ್ದಾರೆ.

ನೂತನ ಅಧ್ಯಕ್ಷರಾಗಿ ದಿಸ್ಸನಾಯಕೆ ಅವರು ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಈ ಹಿಂದೆ ಪ್ರಧಾನಿಯಾಗಿದ್ದ ದಿನೇಶ್ ಗುಣವರ್ಧನೆ ಅವರು ಸೋಮವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಎನ್‌ಪಿಪಿ ನಾಯಕರಾದ ವಿಜಿಥ ಹೆರತ್ ಮತ್ತು ಲಕ್ಷ್ಮಣ್ ನಿಪುನರಚ್ಚಿ ಅವರು ಸಂಪುಟ ದರ್ಜೆಯ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಸಂಪುಟವನ್ನು ವಿಸರ್ಜಿಸಿ, ಚುನಾವಣೆಗೆ ಕರೆ ನೀಡುವವರೆಗೆ ಅವರು ಕಾರ್ಯನಿರ್ವಹಿಸಲಿದ್ದಾರೆ. 'ನವೆಂಬರ್‌ನಲ್ಲಿ ಸಂಸತ್ ಚುನಾವಣೆ ನಡೆಯುವ ಸಾಧ್ಯತೆಗಳಿವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-48000
ಚಿತ್ರದುರ್ಗ	
ಅಪಿ	47619-48059
ಬೆಟ್ಟೆ	33329-33799
ಕೆಂಪುಗೋಟು	27809-28210
ರಾಶಿ	47139-47569
ಪುತ್ತೂರು	
ಕೋಕ	21000-27500
ಹೊಸತು	32000-40500
ಸಾಗರ	
ಬಿಳಿಗೋಟು	21290-23989
ಚಾಲಿ	27701-33029
ಕೋಕ	16699-22569
ಕೆಂಪುಗೋಟು	28199-28199
ರಾಶಿ	26989-47899
ಸಿಪ್ಪೆಗೋಟು	16500-16500
ಶಿವಮೊಗ್ಗ	
ಬೆಟ್ಟೆ	46010-55700
ಗೊರಬಲು	16009-36059
ಹೊಸತು	40199-44159
ರಾಶಿ	31519-48989
ಸರಕು	41000-88710
ಸಿದ್ದಾಪುರ	
ಬಿಳಿಗೋಟು	25289-29909
ಚಾಲಿ	31009-34529
ಕೋಕ	20369-24409
ಕೆಂಪುಗೋಟು	20699-21889
ರಾಶಿ	41599-46089
ತಟ್ಟಿಬೆಟ್ಟೆ	26509-45499
ಶಿರಸಿ	
ಬೆಟ್ಟೆ	16699-31699
ಬಿಳಿಗೋಟು	12599-29899
ಚಾಲಿ	30219-35320
ರಾಶಿ	28699-44689
ಯಲ್ಲಾಪುರ	
ಅಪಿ	63309-63309
ಬಿಳಿಗೋಟು	16269-28101
ಚಾಲಿ	29012-35699
ಕೋಕ	6000-18999
ಕೆಂಪುಗೋಟು	16899-23399
ರಾಶಿ	40129-54329
ತಟ್ಟಿಬೆಟ್ಟೆ	24000-39499

ಬೈರೂತ್ ಮೇಲಿನ ದಾಳಿಯಲ್ಲಿ ಹಿಜ್ಬುಲ್ಲಾ ಕಮಾಂಡರ್ ಸಾವು

ಲೆಬನಾನ್: ಸಾವಿನ ಸಂಖ್ಯೆ 558ಕ್ಕೆ ಏರಿಕೆ

ಬೈರೂತ್ (ಲೆಬನಾನ್), (ಎಪಿ/ಎಎಫ್‌ಪಿ): ಹಿಜ್ಬುಲ್ಲಾ ಬಂಡುಕೋರರ ತಾಣವನ್ನು ಗುರಿಯಾಗಿಸಿಕೊಂಡು ಇಸ್ರೇಲ್ ಸೇನೆ ಮಂಗಳವಾರ ಲೆಬನಾನ್‌ನ ರಾಜಧಾನಿ ಬೈರೂತ್‌ನ ದಕ್ಷಿಣ ಭಾಗದಲ್ಲಿ ವೈಮಾನಿಕ ದಾಳಿ ನಡೆಸಿದೆ.

ಎರಡು ದಿನದ ವೈಮಾನಿಕ ದಾಳಿಯಲ್ಲಿ 50 ಮಕ್ಕಳು, 94 ಮಹಿಳೆಯರು ಸೇರಿದಂತೆ 558 ಜನರು ಮೃತಪಟ್ಟಿದ್ದು, 1,835 ಜನರು ಗಾಯಗೊಂಡಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವ ಫಿರಾಸ್ ಅಬಿಯಾದ್ ತಿಳಿಸಿದ್ದಾರೆ.

ಬೈರೂತ್ ಮೇಲೆ ನಡೆದ ದಾಳಿಯಲ್ಲಿ 15 ಮಂದಿ ಮೃತಪಟ್ಟಿದ್ದಾರೆ. ಹಿಜ್ಬುಲ್ಲಾ ಕಮಾಂಡರ್ ಇಬ್ರಾಹಿಂ ಖುಬೈಸಿ ಅವರೂ ಮೃತರಲ್ಲಿ ಸೇರಿದ್ದಾರೆ ಎಂದು ಮೂಲಗಳು ತಿಳಿಸಿವೆ. ಆದರೆ, ಹಿಜ್ಬುಲ್ಲಾ ಈ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ.

ಇಸ್ರೇಲ್ ನಡೆಸಿದ ದಾಳಿಯಿಂದ ದಕ್ಷಿಣ ಲೆಬನಾನ್‌ನ ಅಕ್ಬೀಹ್ ಗ್ರಾಮದ ಕಟ್ಟಡವೊಂದು ಧ್ವಂಸಗೊಂಡಿದೆ —ಪಿಟಿಐ ಚಿತ್ರ

'ಹಿಜ್ಬುಲ್ಲಾದ ಕ್ಷಿಪಣಿ ಮತ್ತು ರಾಕೆಟ್ ವಿಭಾಗದ ಕಮಾಂಡರ್ ಇಬ್ರಾಹಿಂ ಖುಬೈಸಿ ಅವರನ್ನು ಹತ್ಯೆ ಮಾಡಿದ್ದೇವೆ. ಇಸ್ರೇಲ್ ಮೇಲೆ ಹಿಜ್ಬುಲ್ಲಾ ನಡೆಸುತ್ತಿದ್ದ ಕ್ಷಿಪಣಿ ದಾಳಿಗೆ ಅವರು ಕಾರಣರಾಗಿದ್ದರು' ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಇಸ್ರೇಲ್ ಗಡಿಗೆ ಸಮೀಪವಿರುವ ಬಿಂತ್ ಜೆಬೈಲ್ ಆಸ್ಪತ್ರೆಯು ಮಂಗಳವಾರದ ದಾಳಿಯಲ್ಲಿ ಹಾನಿಗೊಳಗಾಗಿದೆ.

'ಹಿಜ್ಬುಲ್ಲಾ ಬಂಡುಕೋರರನ್ನು ಲೆಬನಾನ್‌ನಿಂದ ಹೊರಹಾಕಲು ಇಸ್ರೇಲ್ ಎಲ್ಲ ಪ್ರಯತ್ನ ಮಾಡಲಿದೆ' ಎಂದು ಸೇನಾ ವಕ್ತಾರ, ಡೇನಿಯಲ್ ಹಗರಿ ಹೇಳಿದ್ದಾರೆ.

'ಹಿಜ್ಬುಲ್ಲಾ ಬಂಡುಕೋರರು ಹಲವು ವರ್ಷಗಳಲ್ಲಿ ಸುಮಾರು 9 ಸಾವಿರ ರಾಕೆಟ್‌ಗಳು ಮತ್ತು ಡ್ರೋನ್‌ಗಳನ್ನು ಇಸ್ರೇಲ್ ಮೇಲೆ ಉಡಾಯಿಸಿದ್ದಾರೆ. ಸೇನೆಯು ಸೋಮವಾರ ಒಂದೇ ದಿನ ಉಗ್ರರ 1,300 ಗುರಿಗಳನ್ನು ನಾಶಗೊಳಿಸಿದೆ' ಎಂದಿದ್ದಾರೆ.

ಎಚ್ಚರಿಕೆ: 2006ರ ನಂತರ ಇಸ್ರೇಲ್–ಹಿಜ್ಬುಲ್ಲಾ ಬಂಡುಕೋರರ ನಡುವೆ ನಡೆಯುತ್ತಿರುವ ಬೃಹತ್ ಸಂಘರ್ಷ ಇದಾಗಿದೆ. ದಾಳಿಯನ್ನು ಮತ್ತಷ್ಟು ತೀವ್ರಗೊಳಿಸುವ ಮುನ್ನ, ದಕ್ಷಿಣ, ಪೂರ್ವ ಲೆಬನಾನ್‌ನ ನಿವಾಸಿಗಳು ಸ್ಥಳಾಂತರಗೊಳ್ಳುವಂತೆ ಇಸ್ರೇಲ್ ಸೇನೆಯು ಎಚ್ಚರಿಕೆ ನೀಡಿದೆ. ಅಪಾರ ಸಂಖ್ಯೆಯ ಜನರು ಪಲಾಯನ ಮಾಡುತ್ತಿದ್ದು, ಹೆದ್ದಾರಿಯಲ್ಲಿ ಸಂಚಾರ ದಟ್ಟಣೆ ಉಂಟಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಪ್ರವಾಸ

Travel

02.12.2024 04.01.2025 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 18.11.2024 13.01.2025 ದುಬೈ,ಅಬುದಾಬಿ 5 ದಿನಗಳು. 21.11.2024 ನೇಪಾಳ 9 ದಿನಗಳು. 22.10.2024 23.11.2024 ಭೂತಾನ್ 8 ದಿನಗಳು. 24.11.2024 14.12.2024 ಶ್ರೀಲಂಕಾ 6 ದಿನಗಳು. 17.11.2024 ಅಸ್ಸಾಂ, ಮೇಘಾಲಯ 9 ದಿನಗಳು. 22.10.2024 26.11.2024 10.12.2024 ಗುಜರಾತ್/ ಉಜ್ಜಯಿನಿ 8/11 ದಿನಗಳು. 24.11.2024 07.12.2024 ರಾಜಸ್ಥಾನ್ 10 ದಿನಗಳು. 18.11.2024 12.12.2024 ಮಧ್ಯಪ್ರದೇಶ 10 ದಿನಗಳು. 04.12.2024 ಕಾಶಿ,ಗಯಾ,ಅಯೋಧ್ಯ 7 ದಿನಗಳು. ಸಂಪರ್ಕಿಸಿ. ಜೈನ್ ಟ್ರಾವಲ್ಸ್ ಬೆಂಗಳೂರು-03. 9448402248 7022547922

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲಿ ವರ್ಕ್ ಫ್ರಮ್ ಹೋಮ್ ಕೆಲಸಮಾಡಿ 4000–20,000/– ಪಡೆಯಿರಿ. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ADMISSION CORNER

Admission Guidance for 2024-25
Under NRI & Management Quota
MBBS, MS/MD, BDS, BAMS, BHMS, B Tech, BE & MBA
Get Admission in the Best College in Karnataka
FCC, BLR: 9900005943/9900005947
Toll free: 1800-570-3344 | www.fccbharat.com

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಉಡುಪಿಯಲ್ಲಿ ಹೆಸರಾಂತ ಬ್ಯೂಟಿ ಪಾರ್ಲರ್ ಗೆ ಲೇಡೀಸ್ ಬ್ಯೂಟಿಷನ್, ಲೇಡೀಸ್ ರಿಸೆಪ್ಷನಿಸ್ಟ್, ಜಂಟ್ಸ್ ಬ್ಯೂಟಿಷನ್ ಬೇಕಾಗಿದ್ದಾರೆ. ಉತ್ತಮ ವೇತನ, ಕಮಿಷನ್, ಉಚಿತ ವಸತಿ ಸೌಲಭ್ಯವಿದೆ. 9900250666, 9481269415

ಮನೆಯಲ್ಲೇ ಉಳಿದುಕೊಂಡು ಸಸ್ಯಾಹಾರಿ ಅಡುಗೆ ಮಾಡಲು ಮತ್ತು ಮಕ್ಕಳನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ ಆಸಕ್ತಿ ಇರುವವರು ಸಂಪರ್ಕಿಸಿ : 7358546756

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9148525233, 9900859248

ಭವಿಷ್ಯ

Astrology

ಒಂದೇ ಕರೆಯಲ್ಲಿ 100% ಶಾಶ್ವತ ಪರಿಹಾರ ಕೆಲವೇ ಗಂಟೆಗಳಲ್ಲಿ ಅಸಾಧ್ಯವಾದದ್ದು ಇಲ್ಲಿ ಸಾಧ್ಯ ಸಮಸ್ಯೆ ನಿಮ್ಮದು ಪರಿಹಾರ ನಮ್ಮದು: 9741637382

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಎಂಬಿಬಿಎಸ್ ಪ್ರವೇಶ: ಪಂಜಾಬ್ ಸರ್ಕಾರಕ್ಕೆ ಸುಪ್ರೀಂ ಕೋರ್ಟ್‌ನಲ್ಲಿ ಹಿನ್ನಡೆ

‘ಎನ್‌ಆರ್‌ಐ ಕೋಟಾ: ವಂಚನೆ ನಿಲ್ಲಲಿ’

ಪ್ರಜಾವಾಣಿ ವಾರ್ತೆ/ಪಿಟಿಐ

ಪ್ರತಿಭಾವಂತರ ಬದಲು ವಿದೇಶಗಳಲ್ಲಿ ನೆಲೆನಿಂತವರ ದೂರದ ಸಂಬಂಧಿಗಳು ‘ಎನ್‌ಆರ್‌ಐ ಕೋಟಾ’ದಡಿ ಪ್ರವೇಶ ಪಡೆಯುವುದಕ್ಕೆ ಅನುಮತಿಸಲಾಗದು ಸುಪ್ರೀಂ ಕೋರ್ಟ್

ನವದೆಹಲಿ: ‘ಎನ್‌ಆರ್‌ಐ ಕೋಟಾ’ದಡಿ ರಾಜ್ಯದಲ್ಲಿ ಎಂಬಿಬಿಎಸ್ ಹಾಗೂ ದಂತ ವೈದ್ಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಪಂಜಾಬ್ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ತಿರಸ್ಕರಿಸಿರುವ ಸುಪ್ರೀಂ ಕೋರ್ಟ್‌. ‘ಈ ವಂಚನೆ ನಿಲ್ಲಬೇಕು’ ಎಂದು ಮಂಗಳವಾರ ಹೇಳಿದೆ.

ಎನ್‌ಆರ್‌ಐ ಕೋಟಾ ವ್ಯಾಪ್ತಿಯನ್ನು ಹಿಗ್ಗಿಸಿ, ವೈದ್ಯ ಮತ್ತು ದಂತ ವೈದ್ಯ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿ ಪಂಜಾಬ್ ಸರ್ಕಾರ ಕೈಗೊಂಡಿದ್ದ ನಿರ್ಧಾರವನ್ನು ರದ್ದುಗೊಳಿಸಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಸೆ.10ರಂದು ತೀರ್ಪು ನೀಡಿತ್ತು.

ಇದನ್ನು ಪ್ರಶ್ನಿಸಿ ಪಂಜಾಬ್ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ, ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠವು ‘ಹೈಕೋರ್ಟ್ ತೀರ್ಪು ನಿಸ್ಸಂಶಯವಾಗಿ ಸರಿಯಾಗಿದೆ’ ಎಂದಿದೆ.

‘ಪಂಜಾಬ್ ಸರ್ಕಾರದ ಮೇಲ್ಮನವಿಯಲ್ಲಿ ಯಾವುದೇ ತಿರುಳು ಹೊಂದಿಲ್ಲ ಹಾಗೂ ಸಮರ್ಥನೀಯವೂ ಅಲ್ಲ’ ಎಂದು ಹೇಳಿದೆ.

‘ಪಂಜಾಬ್ ಸರ್ಕಾರದ ನಿರ್ಧಾರದಿಂದಾಗುವ ಅಪಾಯಕಾರಿ ಪರಿಣಾಮಗಳನ್ನು ಗಮನಿಸಬೇಕು. ‘ಎನ್‌ಆರ್‌ಐ ಕೋಟಾ’ದಡಿ ಬರುವ ಅಭ್ಯರ್ಥಿಗಿಂತ ನೀಟ್‌-ಯುಜಿಯಲ್ಲಿ ಮೂರು ಪಟ್ಟು ಹೆಚ್ಚು ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗೆ ಪ್ರವೇಶ ಸಿಗುವುದಿಲ್ಲ’ ಎಂದಿದೆ.

‘ಇದು, ಹಣ ಗಳಿಸುವ ಮಾರ್ಗವಷ್ಟೆ. ಇಂತಹ ವಂಚನೆ ಕೊನೆಗೊಳ್ಳಬೇಕು. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇಂತಹ ವಂಚನೆಗೆ ನಾವು ಅವಕಾಶ ಮಾಡಿಕೊಡುತ್ತಿದ್ದೇವೆ. ‘ಎನ್‌ಆರ್‌ಐ ಕೋಟಾ’ ವ್ಯವಹಾರವನ್ನು ನಾವು ನಿಲ್ಲಿಸಲೇಬೇಕಿದೆ. ಕಾನೂನುಬಾಹಿರವಾದ ನಡೆಗೆ ನಾವು ಒಪ್ಪಿಗೆ ನೀಡಲು ಸಾಧ್ಯ ಇಲ್ಲ. ಈ ವಿಷಯದಲ್ಲಿ ಹೈಕೋರ್ಟ್ ಸರಿಯಾದ ನಿರ್ಧಾರವನ್ನೇ ಕೈಗೊಂಡಿದೆ’ ಎಂದು ಪೀಠ ಹೇಳಿದೆ.

ಪಂಜಾಬ್ ಸರ್ಕಾರದ ಪರ ಹಾಜರಿದ್ದ ಹಿರಿಯ ವಕೀಲ ಶಾದಾನ್ ಫರಾಸತ್,‘ಹಿಮಾಚಲ ಪ್ರದೇಶ, ಉತ್ತರ ಪ್ರದೇಶ ಸೇರಿದಂತೆ ಕೆಲ ರಾಜ್ಯಗಳು ‘ಎನ್‌ಆರ್‌ಐ ಕೋಟಾ’ ಪದದ ವಿಶಾಲ ಅರ್ಥವನ್ನೇ ಪಾಲನೆ ಮಾಡುತ್ತಿವೆ’ ಎಂದು ಪೀಠಕ್ಕೆ ತಿಳಿಸಿದರು.

‘ಎನ್‌ಆರ್‌ಐ ಕೋಟಾದಡಿ ಶೇ 15ರಷ್ಟು ಮೀಸಲಾತಿಯನ್ನು ಯಾವ ರೀತಿ ಹಂಚಿಕೆ ಮಾಡಬೇಕು ಎಂಬುದನ್ನು ನಿರ್ಧರಿಸುವ ಅಧಿಕಾರವನ್ನು ರಾಜ್ಯಗಳು ಹೊಂದಿವೆ’ ಎಂದೂ ಅವರು ಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಪೀಠ, ‘ಈ ವಿಚಾರ ಕುರಿತು ಕೇಂದ್ರ ಸರ್ಕಾರ ಈಗ ಗಮನ ಹರಿಸಬೇಕು’ ಎಂದು ಹೇಳಿತು.

ರಾಜ್ಯದ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಪ್ರವೇಶಕ್ಕೆ ಸಂಬಂಧಿಸಿ ಅನಿವಾಸಿ ಭಾರತೀಯರಿಗೆ (ಎನ್‌ಆರ್‌ಐ) ಶೇ 15ರಷ್ಟು ಮೀಸಲಾತಿ ಇದೆ. ಎನ್‌ಆರ್‌ಐಗಳ ಸೋದರ ಸಂಬಂಧಿಗಳು, ಮೊಮ್ಮಕ್ಕಳು ಸೇರಿದಂತೆ ದೂರದ ಸಂಬಂಧಿಗಳನ್ನು ಕೂಡ ಅನಿವಾಸಿ ಭಾರತೀಯರು ಎಂಬುದಾಗಿ ಪರಿಗಣಿಸಿ, ಅವರಿಗೂ ಈ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಅವಕಾಶ ಕಲ್ಪಿಸಿ ಆಗಸ್ಟ್ 20ರಂದು ಪಂಜಾಬ್ ಸರ್ಕಾರ ಆದೇಶ ಹೊರಡಿಸಿತ್ತು.

ಕೆಲಸಕ್ಕಾಗಿ ಬೇರೆ ಇರುವುದು ಕ್ರೌರ್ಯವಲ್ಲ: ಹೈಕೋರ್ಟ್

• ಸಂಜಯ್ ಪಾಂಡೆ

ಲಖನೌ: ಪತಿ ಮತ್ತು ಪತ್ನಿ ಉದ್ಯೋಗದ ಕಾರಣಕ್ಕೆ ಪ್ರತ್ಯೇಕವಾಗಿ ವಾಸ ಮಾಡುವುದು ಕ್ರೌರ್ಯವಲ್ಲ, ಒಬ್ಬರನ್ನು ಇನ್ನೊಬ್ಬರು ತೊರೆದಂತೆಯೂ ಆಗುವುದಿಲ್ಲ; ಹೀಗಾಗಿ, ವಿಚ್ಛೇದನ ನೀಡಲು ಅದು ಆಧಾರವಾಗುವುದಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಸುಮಿತ್ರಾ ದಯಾಳ್ ಸಿಂಗ್ ಮತ್ತು ದೋನಾದಿ ರಮೇಶ್ ಅವರು ಇದ್ದ ವಿಭಾಗೀಯ ಪೀಠವು ಈಚೆಗೆ ನೀಡಿರುವ ಆದೇಶದಲ್ಲಿ ಈ ಮಾತು ಹೇಳಿದೆ. ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದ ಪತಿಯ ಅರ್ಜಿಯನ್ನು ಕಾನ್ಪುರದ ಕೌಟುಂಬಿಕ ನ್ಯಾಯಾಲಯವು ಇದೇ ಕಾರಣಕ್ಕೆ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಪತಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಪತಿಯ ಅರ್ಜಿಯನ್ನು ಹೈಕೋರ್ಟ್ ಕೂಡ ವಜಾಗೊಳಿಸಿದೆ.

ತಾನು ಮತ್ತು ಪತ್ನಿ ಕಳೆದ 21 ವರ್ಷಗಳಿಂದ ಪ್ರತ್ಯೇಕವಾಗಿ ವಾಸಿಸುತ್ತಿರುವುದಾಗಿ ಪತಿ ಹೇಳಿದ್ದರು. ಪತಿಯು ಝಾನ್ಸಿಯಲ್ಲಿ ರೈಲ್ವೆ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಪತ್ನಿಯು 2000ನೆಯ ಇಸವಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕಿ ಕೆಲಸ ಪಡೆದುಕೊಂಡರು.

ಪತ್ನಿಗೆ ಪತಿಯ ಪೂರ್ವಜರ ಮನೆಯಿಂದ ಎರಡು ಕಿ.ಮೀ. ದೂರದಲ್ಲಿ ಕೆಲಸ ಸಿಕ್ಕಿತು. ಪತಿಯು 2007ರಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದರು. ಪತ್ನಿಯು ತನ್ನನ್ನು ತೊರೆದಿದ್ದಾಳೆ, ತನ್ನ ಜೊತೆ ಕ್ರೂರವಾಗಿ ನಡೆದುಕೊಳ್ಳುತ್ತಿದ್ದಾಳೆ ಎಂದು ದೂರಿದರು. ಆದರೆ ಪತಿಯ ವಾದವನ್ನು ಅಲ್ಲಗಳೆದಿದ್ದ ಪತ್ನಿಯು, ತಾನು ಆಸ್ಪತ್ರೆಗೆ ದಾಖಲಾಗಿದ್ದಾಗ ಪತಿ ಅಲ್ಲಿಗೆ ಭೇಟಿ ನೀಡಿದ್ದರು, ಪತಿಯು ತಾನು ಕೆಲಸ ಮಾಡುವ ಶಾಲೆಗೂ ಬಂದಿದ್ದರು ಎಂದರು.

ಪತಿಯ ಒಪ್ಪಿಗೆಯೊಂದಿಗೇ ಪತ್ನಿಯು, ಪೂರ್ವಜರ ಮನೆಗೆ ಸನಿಹದಲ್ಲಿ ಕೆಲಸಕ್ಕೆ ಸೇರಿದ್ದರು ಎಂಬುದನ್ನು ನಂಬದೆ ಇರಲಾಗದು ಎಂದು ಹೈಕೋರ್ಟ್ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ವಿಚಾರಣೆ ಬಾಕಿ– ಮುಚ್ಚಿದ ಲಕೋಟೆ ಪ್ರಕ್ರಿಯೆಗೆ ಆಧಾರವಲ್ಲ: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರಿ ಅಧಿಕಾರಿಯ ವಿರುದ್ಧ ತನಿಖೆ ನಡೆಯುತ್ತಿದೆ, ಅಧಿಕಾರಿಯ ವಿರುದ್ಧ ಕಾನೂನು ಕ್ರಮ ಜರುಗಿಸಲು ಸಕ್ಷಮ ಪ್ರಾಧಿಕಾರ ಅನುಮತಿ ನೀಡಿದೆ ಎಂಬುದು ‘ಮುಚ್ಚಿದ ಲಕೋಟೆ ಪ್ರಕ್ರಿಯೆ’ ಆಧರಿಸಿ ಆ ಅಧಿಕಾರಿಗೆ ಸಿಗಬೇಕಿರುವ ಬಡ್ತಿಯನ್ನು ನಿರಾಕರಿಸಲು ಅವಕಾಶ ಮಾಡಿಕೊಡುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ಶಿಸ್ತುಕ್ರಮದ ಭಾಗವಾಗಿ ನೌಕರನಿಗೆ ಆರೋಪಣಾ ಪತ್ರವನ್ನು ನೀಡಿದ್ದಾಗ ಅಥವಾ ಕ್ರಿಮಿನಲ್ ಕ್ರಮ ಜರುಗಿಸುವುದಕ್ಕೆ ಸಂಬಂಧಪಟ್ಟ ನ್ಯಾಯಾಲಯದಲ್ಲಿ ದೋಷಾರೋಪ ಪಟ್ಟಿ ಸಲ್ಲಿಕೆ ಆಗಿದ್ದಾಗ ಮಾತ್ರ ನೌಕರನ ವಿರುದ್ಧ ಶಿಸ್ತು ಕ್ರಮ ಅಥವಾ ಕ್ರಿಮಿನಲ್ ಕ್ರಮ ಆರಂಭವಾಗಿದೆ ಎನ್ನಬಹುದು ಎಂದು ನ್ಯಾಯಮೂರ್ತಿಗಳಾದ ಸಂದೀಪ್ ಮೆಹ್ತಾ ಮತ್ತು ಆರ್. ಮಹಾದೇವನ್ ಅವರು ಇದ್ದ ವಿಭಾಗೀಯ ನ್ಯಾಯಪೀಠವು ಪ್ರಕರಣವೊಂದರಲ್ಲಿ ಹೇಳಿದೆ.

‘ಆರೋಪಣಾ ಪತ್ರ ನೀಡಿದ ನಂತರದಲ್ಲಿ ಅಥವಾ ದೋಷಾರೋಪ ಪಟ್ಟಿ ಸಲ್ಲಿಸಿದ ನಂತರದಲ್ಲಿ ಮಾತ್ರವೇ ಮುಚ್ಚಿದ ಲಕೋಟೆ ಪ್ರಕ್ರಿಯೆಯ ಮೊರೆಹೋಗಬಹುದು’ ಎಂದು ಪೀಠವು ಹೇಳಿದೆ.

ದೆಹಲಿ ಹೈಕೋರ್ಟ್ ಆದೇಶ ಪ್ರಶ್ನಿಸಿ ಕೇಂದ್ರ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಪೀಠವು ವಜಾಗೊಳಿಸಿದೆ. ಇಲಾಖಾ ಬಡ್ತಿ ಸಮಿತಿಯು ಅಧಿಕಾರಿಯೊಬ್ಬರನ್ನು ಬಡ್ತಿಗೆ ‘ಅರ್ಹ’ ಎಂದು 2007ರಲ್ಲಿ ಪರಿಗಣಿಸಿದ್ದ ಕಾರಣಕ್ಕೆ, ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನ್ಯಾಯಪೀಠವು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಇದಕ್ಕೂ ಮೊದಲು, ಕೇಂದ್ರ ಆಡಳಿತ ನ್ಯಾಯಮಂಡಳಿಯು ‘ಮುಚ್ಚಿದ ಲಕೋಟೆಯನ್ನು ತೆರೆದು, ಅಧಿಕಾರಿಗೆ ಬಡ್ತಿ ನೀಡಬೇಕು’ ಎಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಕೇಂದ್ರವು ಹೈಕೋರ್ಟ್ ಮೊರೆ ಹೋಗಿತ್ತು. ಆದರೆ, ಕೇಂದ್ರದ ಮನವಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ವೈವಾಹಿಕ ಅತ್ಯಾಚಾರ: ಪ್ರತಿಕ್ರಿಯೆ ಸಲ್ಲಿಸದ ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ವೈವಾಹಿಕ ಸಂಬಂಧದಲ್ಲಿ ನಡೆಯುವ ಅತ್ಯಾಚಾರವನ್ನು ಕ್ರಿಮಿನಲ್ ಅಪರಾಧವನ್ನಾಗಿ ಪರಿಗಣಿಸಬೇಕು ಎಂಬ ಮನವಿ ಇರುವ ಅರ್ಜಿಯ ವಿಚಾರಣೆಯನ್ನು ಈ ವಾರ ವಿಚಾರಣೆಗೆ ಎತ್ತಿಕೊಳ್ಳಬಾರದು ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಕೋರಿಕೆ ಸಲ್ಲಿಸಿದೆ.

ವೈವಾಹಿಕ ಸಂಬಂಧದಲ್ಲಿ ನಡೆಯುವ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ತನ್ನ ಪ್ರತಿಕ್ರಿಯೆಯನ್ನು ಕೋರ್ಟ್‌ಗೆ ಇನ್ನಷ್ಟೇ ಸಲ್ಲಿಸಬೇಕಿದೆ ಎಂದು ಕೇಂದ್ರ ಹೇಳಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ, ಮನೋಜ್ ಮಿಶ್ರಾ ಅವರು ಇದ್ದ ತ್ರಿಸದಸ್ಯ ಪೀಠದ ಎದುರು ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಕೇಂದ್ರವು ತನ್ನ ಪ್ರತಿಕ್ರಿಯೆಯನ್ನು ಇನ್ನಷ್ಟೇ ಸಲ್ಲಿಸಬೇಕಿರುವ ಕಾರಣಕ್ಕೆ ವಿಚಾರಣೆಯನ್ನು ಈ ವಾರ ಕೈಗೆತ್ತಿಕೊಳ್ಳುವುದು ಬೇಡ ಎಂದರು.

ವೈವಾಹಿಕ ಸಂಬಂಧದಲ್ಲಿ ಅತ್ಯಾಚಾರ ನಡೆದರೆ, ಪತಿಗೆ ಕ್ರಿಮಿನಲ್ ಕ್ರಮದಿಂದ ವಿನಾಯಿತಿ ನೀಡಿರುವುದನ್ನು ಕಾನೂನಿನ ತತ್ವಗಳ ಆಧಾರದಲ್ಲಿ ಪರಿಶೀಲಿಸಲಾಗುವುದು ಎಂದು ನ್ಯಾಯಪೀಠವು ಸೆಪ್ಟೆಂಬರ್ 18ರಂದು ಹೇಳಿತ್ತು.

ಒಡಿಶಾ: ವೃದ್ಧಾಪ್ಯ ವೇತನಕ್ಕಾಗಿ 2 ಕಿ.ಮೀ ತೆವಳಿದ ಮಹಿಳೆ

ಕ್ಯೊಂಜಾರ್ (ಒಡಿಶಾ)(ಪಿಟಿಐ): ಜಿಲ್ಲೆಯ ರಾಯ್‌ಸುವಾನ್ ಗ್ರಾಮದ 70 ವರ್ಷದ ಮಹಿಳೆಯೊಬ್ಬರು ವೃದ್ಧಾಪ್ಯ ವೇತನ ಪಡೆಯುವುದಕ್ಕಾಗಿ ತನ್ನ ಮನೆಯಿಂದ ಪಂಚಾಯಿತಿ ಕಚೇರಿವರೆಗೆ 2 ಕಿ.ಮೀ.ನಷ್ಟು ತೆವಳಿಕೊಂಡೇ ಹೋಗಿದ್ದಾರೆ.

ಕಾಯಿಲೆಯಿಂದಾಗಿ ನಡೆಯಲು ಆಗದ ಕಾರಣ, ಗ್ರಾಮದ ಪಥೂರಿ ದೆಹುರಿ ಎಂಬ ಮಹಿಳೆ ತೆವಳಿಕೊಂಡು ಹೋಗಿದ್ದಾರೆ. ಈ ಕುರಿತ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಈ ಗ್ರಾಮ ಪಂಚಾಯಿತಿಯು ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಅವರ ತವರು ಜಿಲ್ಲೆ ಕ್ಯೊಂಜಾರ್‌ನ ತೆಲ್ಕೋಯಿ ತಾಲ್ಲೂಕಿನಲ್ಲಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಪಂಚಾಯಿತಿ ಸದಸ್ಯ ಬಗುನ್ ಚಂಪಿಯಾ, ‘ವೃದ್ಧೆ ತೆವಳುತ್ತಾ ಹೋಗುತ್ತಿದ್ದ ದೃಶ್ಯಗಳನ್ನು ಟಿವಿಗಳಲ್ಲಿ ನೋಡಿದೆ. ಪತ್ರಿಕೆಗಳಲ್ಲಿ ಪ್ರಕಟಗೊಂಡ ಚಿತ್ರಗಳನ್ನೂ ನೋಡಿ, ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿರುವೆ’ ಎಂದಿದ್ದಾರೆ. ‘ವಯೋಸಹಜ ಕಾಯಿಲೆಗಳಿಂದಾಗಿ ಮಹಿಳೆ ನಡೆಯಲು ಅಸಮರ್ಥಳಾಗಿದ್ದಾರೆ ಎಂಬುದನ್ನು ಗ್ರಾಮಸ್ಥರೊಂದಿಗೆ ಮಾತನಾಡಿ ಖಚಿತಪಡಿಸಿಕೊಂಡಿರುವೆ’ ಎಂದೂ ಹೇಳಿದ್ದಾರೆ.

‘ವೃದ್ಧಾಪ್ಯ ವೇತನವನ್ನು ಈ ಹಿಂದೆ ದೆಹುರಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿತ್ತು. ಕಾಯಿಲೆ ಕಾರಣ ಬ್ಯಾಂಕಿಗೆ ಹೋಗಲು ಆಕೆಗೆ ಸಾಧ್ಯವಾಗದ ಕಾರಣ, ಸ್ಥಳೀಯ ಆಡಳಿತವು ವೃದ್ಧಾಪ್ಯವೇತನವನ್ನು ನೇರವಾಗಿ ಮಹಿಳೆಗೆ ವಿತರಿಸಲು ಆರಂಭಿಸಿತ್ತು’ ಎಂದು ಬಿಡಿಒ ಗೀತಾ ಮುರ್ಮು ಹೇಳಿದ್ದಾರೆ.

‘ದೆಹುರಿ ಅವರ ಮನೆಗೇ ತೆರಳಿ ವೃದ್ಧಾಪ್ಯ ವೇತನ ನೀಡುವಂತೆ ಅಧಿಕಾರಿಗೆ ಹೇಳಲಾಗಿದೆ ಮತ್ತು ಗಾಲಿ ಕುರ್ಚಿ ಒದಗಿಸಲಾಗಿದೆ’ ಎಂದು ತಿಳಿಸಿದ್ದಾರೆ.

‘ಫ್ಯೂಚರ್ಸ್ ಮತ್ತು ಆಪ್ಷನ್’ನಲ್ಲಿ ಸಣ್ಣ ಹೂಡಿಕೆದಾರರಿಗೆ ನಷ್ಟ

‘ದೊಡ್ಡವರ’ ಹೆಸರು ತಿಳಿಸಿ: ರಾಹುಲ್

ನವದೆಹಲಿ (ಪಿಟಿಐ): ಕಳೆದ 3 ವರ್ಷಗಳಲ್ಲಿ ಸಣ್ಣ ಹೂಡಿಕೆದಾರರ ಪೈಕಿ ಶೇ 90ರಷ್ಟು ಜನರು ‘ಫ್ಯೂಚರ್ಸ್ ಮತ್ತು ಆಪ್ಷನ್’ (ಎಫ್ ಅಂಡ್ ಒ) ವಹಿವಾಟಿನಲ್ಲಿ ₹1.8 ಲಕ್ಷ ಕೋಟಿ ಕಳೆದುಕೊಂಡಿದ್ದಾರೆ ಎಂದಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಸಣ್ಣ ಹೂಡಿಕೆದಾರರಿಗೆ ಹಾನಿ ಉಂಟು ಮಾಡಿ, ಲಾಭ ಗಳಿಸುತ್ತಿರುವ ‘ದೊಡ್ಡ ವ್ಯಕ್ತಿಗಳ’ ಹೆಸರುಗಳನ್ನು ಸೆಬಿ ಬಹಿರಂಗ ಪಡಿಸಬೇಕು ಎಂದು ಮಂಗಳವಾರ ಆಗ್ರಹಿಸಿದ್ದಾರೆ.

ರಾಹುಲ್ ಗಾಂಧಿ

ಈ ಕುರಿತು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ಅನಿಯಂತ್ರಿತ ‘ಫ್ಯೂಚರ್ಸ್ ಮತ್ತು ಆಪ್ಷನ್’ ವಹಿವಾಟು ಕಳೆದ ಐದು ವರ್ಷಗಳಲ್ಲಿ 45 ಪಟ್ಟು ಹೆಚ್ಚಾಗಿದೆ’ ಎಂದಿದ್ದಾರೆ.

‘ಫ್ಯೂಚರ್ಸ್ ಮತ್ತು ಆಪ್ಷನ್’ ವಹಿವಾಟು ನಡೆಸುತ್ತಿರುವವರ ಪೈಕಿ, ಶೇ 91ರಷ್ಟು ಅಥವಾ 73 ಲಕ್ಷ ಮಂದಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣ ಕಳೆದುಕೊಂಡಿದ್ದಾರೆ. ಒಬ್ಬ ವ್ಯಕ್ತಿ ಸರಾಸರಿ ₹1.2 ಲಕ್ಷದಷ್ಟು ನಷ್ಟ ಅನುಭವಿಸಿದ್ದಾನೆ ಎಂದು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನಡೆಸಿದ ಅಧ್ಯಯನದಿಂದ ತಿಳಿದುಬಂದಿದೆ.

ಕಳೆದ ಮೂರು ವರ್ಷಗಳ ಅವಧಿಯಲ್ಲಿ, ‘ಫ್ಯೂಚರ್ಸ್ ಮತ್ತು ಆಪ್ಷನ್’ ವಹಿವಾಟು ನಡೆಸಿದ್ದ ಒಂದು ಕೋಟಿಗೂ ಅಧಿಕ ಮಂದಿ ಪೈಕಿ, ಶೇ 93ರಷ್ಟು ಜನರು ಪ್ರತಿ ವಹಿವಾಟಿನಲ್ಲಿ ಸರಾಸರಿ ₹2 ಲಕ್ಷದಷ್ಟು ಹಣ ಕಳೆದುಕೊಂಡಿದ್ದಾರೆ. ಈ ವಹಿವಾಟುದಾರರು ಅನುಭವಿಸಿದ ಸರಾಸರಿ ನಷ್ಟ ₹1.8 ಲಕ್ಷ ಕೋಟಿಗೂ ಅಧಿಕ ಎಂದೂ ವರದಿಯಲ್ಲಿ ವಿವರಿಸಲಾಗಿದೆ.

ಇದೇ ಅವಧಿಯಲ್ಲಿ, ‘ಫ್ಯೂಚರ್ಸ್ ಮತ್ತು ಆಪ್ಷನ್’ ವಹಿವಾಟು ನಡೆಸಿದವರ ಪೈಕಿ, ಶೇ 7.2ರಷ್ಟು ಮಂದಿ ಮಾತ್ರ ಲಾಭ ಗಳಿಸಿದ್ದಾರೆ. ಶೇ 1ರಷ್ಟು ಮಂದಿ ಮಾತ್ರ, ಎಲ್ಲ ವೆಚ್ಚಗಳ ಹೊಂದಾಣಿಕೆ ನಂತರ, ₹1ಲಕ್ಷಕ್ಕೂ ಅಧಿಕ ಲಾಭ ಮಾಡಿಕೊಳ್ಳುವಲ್ಲಿ ಯಶ ಕಂಡಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಎಸ್‌ಬಿಐ ನಿರ್ಧಾರ ಪರಿಶೀಲನೆಗೆ ಕಾಂಗ್ರೆಸ್ ಆಗ್ರಹ

ಸುಪ್ರೀಂ ಇನ್‌ಫ್ರಾಸ್ಟ್ರಕ್ಚರ್ ಇಂಡಿಯಾ ಲಿಮಿಟೆಡ್ (ಎಸ್‌ಐಐಎಲ್) ಕಂಪನಿಯ ಬಾಕಿ ಸಾಲವನ್ನು ಈಕ್ವಿಟಿಯಾಗಿ ಪರಿವರ್ತಿಸಲು ಎಸ್‌ಬಿಐ ನಿರ್ಧರಿಸಿದೆ ಎನ್ನಲಾಗುತ್ತಿದ್ದು, ಈ ನಡೆ ಖಂಡನೀಯ ಎಂದು ಕಾಂಗ್ರೆಸ್ ಮಂಗಳವಾರ ಹೇಳಿದೆ.

ಈ ವಿಚಾರದಲ್ಲಿ ಆರ್‌ಬಿಐ ತಕ್ಷಣವೇ ಮಧ್ಯಪ್ರವೇಶಿಸಿ, ಪರಿಶೀಲಿಸಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆಗ್ರಹಿಸಿದ್ದಾರೆ.

‘ಎಸ್‌ಐಐಎಲ್‌ಗೆ ಸಾಲ ನೀಡಿರುವ ಬ್ಯಾಂಕುಗಳ ಪೈಕಿ ಎಸ್‌ಬಿಐ ಪ್ರಮುಖ ಸಾರ್ವಜನಿಕ ವಲಯದ ಸಂಸ್ಥೆಯಾಗಿದೆ. ಈಗ, ಬಾಕಿ ಸಾಲವನ್ನು ಈಕ್ವಿಟಿಯನ್ನಾಗಿ ಪರಿವರ್ತಿಸುವ ನಿರ್ಧಾರದ ಮೂಲಕ ಕಂಪನಿಯಲ್ಲಿ ಪಾಲುದಾರಿಕೆ ಹೊಂದಲು ಎಸ್‌ಬಿಐ ಹೊರಟಿದೆ’ ಎಂದು ಅವರು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಮುಕೇಶ್ ಬಂಧನ, ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ನಟ, ಸಿಪಿಎಂ ಶಾಸಕ ಎಂ.ಮುಕೇಶ್ ಅವರನ್ನು ಮಂಗಳವಾರ ಬಂಧಿಸಿ, ನಂತರ ಬಿಡುಗಡೆ ಮಾಡಲಾಗಿದೆ.

ಮಲಯಾಳ ಸಿನಿಮಾ ಕಲಾವಿದರ ಸಂಘದ (ಎಎಂಎಂಎ) ಮಾಜಿ ಪ್ರಧಾನ ಕಾರ್ಯದರ್ಶಿ, ನಟ ಸಿದ್ದೀಕ್ ಅವರು ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಕೇರಳ ಹೈಕೋರ್ಟ್ ವಜಾಗೊಳಿಸಿದ್ದು, ಸಿದ್ದೀಕ್ ಅವರನ್ನೂ ಬಂಧಿಸುವ ಸಾಧ್ಯತೆ ಇದೆ.

ಮುಕೇಶ್ ಅವರನ್ನು, ವಿಶೇಷ ತನಿಖಾ ತಂಡ (ಎಸ್‌ಐಟಿ) ಕೊಚ್ಚಿಯಲ್ಲಿ ವಿಚಾರಣೆಗೆ ಒಳಪಡಿಸಿದ ನಂತರ ಬಂಧಿಸಿತು. ಆದರೆ, ಈ ಮೊದಲೇ ಅವರು ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದ ಕಾರಣ, ಅವರನ್ನು ಬಿಡುಗಡೆ ಮಾಡಲಾಯಿತು.

‘ಸಿನಿಮಾದಲ್ಲಿ ಅವಕಾಶ ನೀಡುವುದಾಗಿ ಆಮಿಷ ಒಡ್ಡಿ ತಿರುವನಂತಪುರ ಹೋಟೆಲ್‌ವೊಂದರಲ್ಲಿ 2016ರಲ್ಲಿ ಸಿದ್ದೀಕ್ ಅವರು ಅತ್ಯಾಚಾರ ನಡೆಸಿದ್ದಾರೆ’ ಎಂದು ಮಹಿಳೆ ಆರೋಪಿಸಿದ್ದಾರೆ. ಈ ಬೆನ್ನಲ್ಲೇ ಸಿದ್ದೀಕ್ ಅವರ ಬಂಧನಕ್ಕೆ ವಿಶೇಷ ತನಿಖಾ ತಂಡವು ಸಿದ್ಧತೆ ನಡೆಸಿದೆ. ಅವರು ದೇಶ ಬಿಟ್ಟು ಹೋಗುವುದನ್ನು ತಡೆಯುವುದಕ್ಕಾಗಿ ಲುಕ್‌ಔಟ್ ನೋಟಿಸ್ ಜಾರಿ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ.

ಸನಾತನ ಧರ್ಮದ ಕುರಿತು ಟೀಕೆ; ಪವನ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತಿರುಪತಿಯ ಲಾಡುಗಳನ್ನು ಸಿದ್ಧಪಡಿಸಲು ಪ್ರಾಣಿಗಳ ಕೊಬ್ಬು ಬಳಸಲಾಗುತ್ತಿತ್ತು ಎಂಬ ಚರ್ಚೆ ಇದೀಗ ಸನಾತನ ಧರ್ಮದ ವಿಚಾರದೆಡೆಗೆ ವಾಲಿದೆ.

‘ಸನಾತನ ಧರ್ಮದ ಕುರಿತು ವ್ಯಂಗ್ಯವಾಡುವವರು ನೂರು ಬಾರಿ ಯೋಚಿಸಬೇಕು, ಯಾವುದೇ ಕಾರಣಕ್ಕೂ ನಾವು ಸುಮ್ಮನಿರುವುದಿಲ್ಲ’ ಎಂದು ಆಂಧ್ರಪ್ರದೇಶ ಉಪ ಮುಖ್ಯಮಂತ್ರಿ ಪವನ್ ಕಲ್ಯಾಣ್ ಎಚ್ಚರಿಕೆ ನೀಡಿದ್ದಾರೆ.

‘ಜಾತ್ಯತೀತತೆ ಎಂಬುದು ಏಕಮುಖಿಯಲ್ಲ, ಎರಡು ಕಡೆಯ ಅಭಿಪ್ರಾಯ ಅವಲಂಬಿಸಿರುತ್ತದೆ. ಹಿಂದೂಗಳ ಭಾವನೆಗಳು, ಆಚರಣೆಗಳು, ಸಂಪ್ರದಾಯ ಹಾಗೂ ಧರ್ಮದ ವಿಚಾರಕ್ಕೆ ತೊಂದರೆ ನೀಡಿದವರನ್ನು ಕ್ಷಮಿಸಲು ಸಾಧ್ಯವಿಲ್ಲ. ಎಲ್ಲ ಧರ್ಮೀಯರಿಗೂ ದೇಶದಲ್ಲಿ ಸಮಾನ ಹಕ್ಕುಗಳನ್ನು ನೀಡಲಾಗಿದ್ದು, ನಾನು ಕೂಡ ಎಲ್ಲ ಧರ್ಮಗಳನ್ನು ಗೌರವಿಸುತ್ತೇನೆ’ ಎಂದು ತಿಳಿಸಿದರು.

ವಿಜಯವಾಡದ ಶ್ರೀ ಕನಕದುರ್ಗಾ ದೇವಾಲಯದಲ್ಲಿ ನಡೆದ ‘ಪ್ರಾಯಶ್ಚಿತ ದೀಕ್ಷೆ’ ಅಂಗವಾಗಿ ದೇವಾಲಯದ ಮೆಟ್ಟಿಲುಗಳಿಗೆ ಪೂಜೆ ಸಲ್ಲಿಸಿ ಮಾತನಾಡಿದ ಅವರು, ‘ತಿರುಪತಿಯಲ್ಲಿ ನಡೆದಂತಹ ಪ್ರಕರಣಗಳು ಮಸೀದಿ, ಚರ್ಚ್‌ನಲ್ಲಿ ನಡೆದಿದ್ದರೆ, ಇದೇ ರೀತಿಯ ಹೇಳಿಕೆಗಳನ್ನು ನೀಡುತ್ತಿದ್ದರೆ ಎಂದು ಪ್ರಶ್ನಿಸಿದ್ದಾರೆ.

ಪ್ರಕಾಶ್‌ರಾಜ್ ವಿರುದ್ಧ ಟೀಕೆ: ‘ಸೂಕ್ಷ್ಮ ವಿಚಾರದ ಕುರಿತು ಮಾತನಾಡುವ ಮೊದಲು ನಟ ಪ್ರಕಾಶ್‌ರಾಜ್ ಯೋಚಿಸಬೇಕು. ಅವರು ನನ್ನ ಉತ್ತಮ ಸ್ನೇಹಿತ. ಆದರೆ, ಸನಾತನ ಧರ್ಮದ ವಿರುದ್ಧ ಮಾತನಾಡುವವರನ್ನು ಕ್ಷಮಿಸಲು ಸಾಧ್ಯವಿಲ್ಲ. ನಾನು ಸನಾತನ ಧರ್ಮದ ಉಳಿವಿಗಾಗಿ ಹೋರಾಟ ನಡೆಸಲು ಸಿದ್ಧನಿದ್ದು, ಹಿಂದೂಗಳು ಹೋರಾಟದಲ್ಲಿ ಕೈ ಜೋಡಿಸಬೇಕು’ ಎಂದು ಪವನ್ ಕಲ್ಯಾಣ್ ಮನವಿ ಮಾಡಿದರು.

ಪಾಕಿಸ್ತಾನದಿಂದ ಬಂದ ನಿರಾಶ್ರಿತರಿಗೆ ಮೊದಲ ಬಾರಿಗೆ ಮತದಾನದ ಹಕ್ಕು

ಪ್ರಜಾವಾಣಿ ವಾರ್ತೆ

ಶ್ರೀನಗರ: ಪಾಕಿಸ್ತಾನದಿಂದ ವಲಸೆ ಬಂದ ಸಾವಿರಾರು ನಿರಾಶ್ರಿತ ಕುಟುಂಬಗಳು, ಅದರಲ್ಲೂ ಹೆಚ್ಚಾಗಿ ಹಿಂದೂಗಳು, ಜಮ್ಮು ಮತ್ತು ಕಾಶ್ಮೀರದ ವಿಧಾನಸಭಾ ಚುನಾವಣೆಯಲ್ಲಿ ಇದೇ ಮೊದಲ ಬಾರಿಗೆ ಮತ ಚಲಾಯಿಸಲು ಸಿದ್ಧರಾಗಿದ್ದಾರೆ.

ಪಶ್ಚಿಮ ಪಾಕಿಸ್ತಾನ ನಿರಾಶ್ರಿತರು (ಡಬ್ಲ್ಯುಪಿಆರ್) ಎಂದು ಕರೆಯಲಾಗುವ ಈ ಕುಟುಂಬಗಳು 1947ರ ದೇಶ ವಿಭಜನೆಯ ನಂತರ ಈಗ ಪಾಕಿಸ್ತಾನವಾಗಿರುವ ಪಶ್ಚಿಮ ಪಂಜಾಬ್‌ನಿಂದ ವಲಸೆ ಬಂದಿದ್ದವು. ಜಮ್ಮುವಿನ ಗಡಿಯಲ್ಲಿ ನೆಲೆಸಿರುವ ಡಬ್ಲ್ಯುಪಿಆರ್‌ಗಳು ಈ ಹಿಂದೆ ಸಂಸತ್ತಿನ ಚುನಾವಣೆಗಳಲ್ಲಿ ಮತ ಚಲಾಯಿಸಿದ್ದವು. ಆದರೆ, ವಿಧಾನಸಭೆ ಚುನಾವಣೆಗಳಲ್ಲಿ ಮತ ಚಲಾಯಿಸುವ ಹಕ್ಕು ಸಿಕ್ಕಿರಲಿಲ್ಲ. ಸಂವಿಧಾನದ ವಿಧಿ 370ರಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು 2019ರ ಆಗಸ್ಟ್‌ನಲ್ಲಿ ರದ್ದುಗೊಳಿಸಿದ ನಂತರ ಈ ಕುಟುಂಬಗಳಿಗೆ ವಿಧಾನಸಭೆ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕು ಸಿಕ್ಕಿದೆ.

2020ರ ಜಿಲ್ಲಾ ಅಭಿವೃದ್ಧಿ ಮಂಡಳಿ (ಡಿಡಿಸಿ) ಚುನಾವಣೆಯಲ್ಲಿ ಡಬ್ಲ್ಯುಪಿಆರ್‌ಗಳು ತಮ್ಮ ಮತದಾನದ ಹಕ್ಕನ್ನು ಮೊದಲ ಬಾರಿಗೆ ಚಲಾಯಿಸಿದ್ದವು. ಅಧಿಕೃತ ಮಾಹಿತಿ ಪ್ರಕಾರ, 1947ರಲ್ಲಿ ಜಮ್ಮುವಿನಲ್ಲಿ 5,764 ಡಬ್ಲ್ಯುಪಿಆರ್ ಕುಟುಂಬಗಳಿದ್ದವು. ಈಗ 20,000 ಕುಟುಂಬಗಳಿವೆ. ಡಬ್ಲ್ಯುಪಿಆರ್ ಸಮುದಾಯದ ಅನೇಕರಿಗೆ, ಮತದಾನದ ಹಕ್ಕು ಸಿಕ್ಕಿರುವುದು ಸಂಭ್ರಮ ಉಂಟು ಮಾಡಿದೆ.

ಮತ ಯಾಚನೆ ಹರಿಯಾಣ ವಿಧಾನಸಭೆ ಚುನಾವಣೆ ಪ್ರಚಾರದ ಭಾಗವಾಗಿ ಕಾಂಗ್ರೆಸ್ ಕಾರ್ಯಕರ್ತರು ನೂಹ್ ಜಿಲ್ಲೆಯಲ್ಲಿ ಮಂಗಳವಾರ ಜೆಸಿಬಿ ಯಂತ್ರಗಳಲ್ಲಿ ಸಾಗಿ ಮತಯಾಚಿಸಿದರು –ಪಿಟಿಐ ಚಿತ್ರ

ಜಮ್ಮು–ಕಾಶ್ಮೀರ ವಿಧಾನಸಭೆ ಚುನಾವಣೆ

2ನೇ ಹಂತದ ಮತದಾನ ಇಂದು

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ಜಮ್ಮು– ಕಾಶ್ಮೀರ ವಿಧಾನಸಭೆಯ 26 ಕ್ಷೇತ್ರಗಳಿಗೆ ಬುಧವಾರ ಎರಡನೇ ಹಂತದ ಮತದಾನ ನಡೆಯಲಿದೆ.

ಆರು ಜಿಲ್ಲೆಗಳ 25.78 ಲಕ್ಷ ಮತದಾರರು ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ, ಮಾಜಿ ಸ್ಪೀಕರ್ ಮುಬಾರಕ್ ಗುಲ್, ಜಮ್ಮು–ಕಾಶ್ಮೀರ ಕಾಂಗ್ರೆಸ್ ಘಟಕದ ಅಧ್ಯಕ್ಷ ತಾರಿಕ್ ಹಮೀದ್ ಕರ್ರಾ ಸೇರಿದಂತೆ 239 ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದ್ದಾರೆ.

ಪಿಡಿಪಿಯ ಮಾಜಿ ಸಚಿವರಾದ ಆಸಿಯಾ ನಕಾಶ್, ಗುಲಾಂ ನಬಿ ಹಂಜೂರಾ, ಜೈಲಿನಲ್ಲಿರುವ ಪ್ರತ್ಯೇಕತಾವಾದಿ ನಾಯಕ ಸರ್ಜನ್ ಅಹ್ಮದ್ ವಾಗೇ, ಅಪ್ನಿ ಪಕ್ಷದ ಅಧ್ಯಕ್ಷ ಅಲ್ತಾಫ್ ಬುಖಾರಿ, ಮಾಜಿ ಸಚಿವರಾದ ಅಲಿ ಮೊಹಮ್ಮದ್ ಸಾಗರ್ ಸಹ ಚುನಾವಣಾ ಅಖಾಡದಲ್ಲಿರುವ ಪ್ರಮುಖ ಅಭ್ಯರ್ಥಿಗಳು.

ನಗರ ಪ್ರದೇಶದಲ್ಲಿ 1,056 ಹಾಗೂ ಗ್ರಾಮೀಣ ಪ್ರದೇಶದಲ್ಲಿ 2,446 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು,

ರಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆ ಬಳಿಯ ಹಳ್ಳಿಯ ಮತಗಟ್ಟೆಯೊಂದಕ್ಕೆ ಮತದಾನದ ಪರಿಕರಗಳೊಂದಿಗೆ ತೆರಳಿದ ಸಿಬ್ಬಂದಿ –ಪಿಟಿಐ ಚಿತ್ರ

ಪ್ರಜಾ ಮತ
ಜನತಂತ್ರದ ಹಬ್ಬ

ಪಾರದರ್ಶಕತೆಯ ಖಚಿತತೆಗಾಗಿ ಎಲ್ಲ ಮತಗಟ್ಟೆಗಳು ವೆಬ್‌ಕಾಸ್ಟಿಂಗ್ ಸೌಲಭ್ಯ ಹೊಂದಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭದ್ರತೆಯ ದೃಷ್ಟಿಯಿಂದ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿ ವಾಹನಗಳ ಮೇಲೆ ಕಣ್ಗಾವಲಿಡಲಾಗಿದೆ.

ಸೆ. 18ರಂದು ನಡೆದ ಮೊದಲ ಹಂತದ ಮತದಾನದಲ್ಲಿ ಶೇ 61.38ರಷ್ಟು ಮತದಾನವಾಗಿತ್ತು. ಮೂರನೇ ಹಂತದ ಮತದಾನವು ಅಕ್ಟೋಬರ್ 1ರಂದು ನಡೆಯಲಿದೆ.

ತಮಿಳುನಾಡಿನ 11 ಸ್ಥಳಗಳಲ್ಲಿ ಎನ್‌ಐಎ ದಾಳಿ

ನವದೆಹಲಿ (ಪಿಟಿಐ): ರಾಷ್ಟ್ರವ್ಯಾಪಿ ಇಸ್ಲಾಮಿಕ್ ಆಡಳಿತವನ್ನು ಜಾರಿಗೆ ತರುವ ಉದ್ದೇಶ ಹೊಂದಿರುವ ‘ಹಿಜ್ಬ್‌-ಉಲ್‌- ತಹ್ರೀರ್’ ಸಂಘಟನೆ ನಡೆಸುತ್ತಿದ್ದ ‘ಚುನಾವಣಾ ವಿರೋಧಿ ಅಭಿಯಾನ’ದ ಬೆನ್ನಲ್ಲೇ, ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ತಮಿಳುನಾಡಿನಲ್ಲಿ ಏಕಕಾಲಕ್ಕೆ 11 ಸ್ಥಳಗಳಲ್ಲಿ ದಾಳಿ ನಡೆಸಿದೆ.

‘ಚೆನ್ನೈನ ತಂಬ್ರಾಮ್, ಕನ್ಯಾಕುಮಾರಿ ಜಿಲ್ಲೆಯ 11 ಮನೆಗಳ ಮೇಲೆ ದಾಳಿ ನಡೆಸಿದ್ದು, ಡಿಜಿಟಲ್ ಉಪಕರಣಗಳು, ನಗದು, ಸಂಘಟನೆಗೆ ಸೇರಿದ ಸಾಹಿತ್ಯಗಳನ್ನು ಸ್ಥಳದಿಂದ ವಶಕ್ಕೆ ಪಡೆಯಲಾಗಿದೆ’ ಎಂದು ತಿಳಿಸಿದರು.

ಚುನಾವಣಾ ಪ್ರಕ್ರಿಯೆ ಕುರಿತಂತೆ ಸಂಘಟನೆಗೆ ಸೇರಿದ ಸಾಮಾಜಿಕ ಜಾಲತಾಣದ ಖಾತೆಗಳಲ್ಲಿ ಅಪಪ್ರಚಾರ ಮಾಡುತ್ತಿದ್ದ ಬೆನ್ನಲ್ಲೇ, ಎನ್‌ಐಎ ಈ ದಾಳಿ ನಡೆಸಿದೆ. ಸಂಘಟನೆಯ ಪ್ರಕಾರ, ಚುನಾವಣೆಯೂ ಇಸ್ಲಾಮಿಕ್ ವಿರೋಧಿಯಾಗಿದ್ದು, ‘ಹರಾಂ’ ಎಂದು ಪರಿಗಣಿಸುತ್ತಿತ್ತು.

‘ಹಿಜ್ಬ್‌-ಉಲ್‌- ತಹ್ರೀರ್’ ಮೂಲಭೂತ ಸಂಘಟನೆಯಾಗಿದ್ದು, ತನ್ನ ಸದಸ್ಯರ ಮೂಲಕ ಚುನಾಯಿತ ಸರ್ಕಾರವನ್ನು ಪತನಗೊಳಿಸಲು ಪ್ರಚೋದನೆ ನೀಡುತ್ತಿತ್ತು’ ಎಂದು ಅಧಿಕಾರಿಯೊಬ್ಬರು ವಿವರಿಸಿದರು. ಹಮೀದ್ ಹುಸೈನ್ ಪ್ರಮುಖ ಸಂಚುಕೋರನಾಗಿದ್ದು, ಉಳಿದ ಐದು ಮಂದಿ ಸದಸ್ಯರು ಗುಪ್ತ ಸಭೆಗಳನ್ನು ನಡೆಸುವ ಮೂಲಕ ಭಾರತ ವಿರೋಧಿ ಅಭಿಯಾನಕ್ಕೆ ಕೈ ಜೋಡಿಸುತ್ತಿದ್ದರು ಎಂದು ಅಧಿಕಾರಿಗಳು ವಿವರಿಸಿದರು.

ಚೆನ್ನೈ ಪೊಲೀಸರು ನಡೆಸುತ್ತಿದ್ದ ತನಿಖೆಯನ್ನು ಈ ವರ್ಷದ ಜುಲೈ ತಿಂಗಳಲ್ಲಿ ಎನ್‌ಐಎ ಕೈಗೆತ್ತಿಕೊಂಡಿತ್ತು. ಇದಾದ ಬಳಿಕ ಸಂಘಟನೆಗೆ ಸೇರಿದ ಹಲವು ದಾಖಲೆಗಳನ್ನು ವಶಪಡಿಸಿಕೊಂಡಿತ್ತು.

ವೈಎಸ್‌ಆರ್ ಕಾಂಗ್ರೆಸ್‌ನ ಮತ್ತೊಬ್ಬ ಸಂಸದ ರಾಜೀನಾಮೆ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಹಿಂದುಳಿದ ವರ್ಗ ಪ್ರಮುಖ ನಾಯಕ, ವೈಎಸ್‌ಆರ್ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಆರ್. ಕೃಷ್ಣಯ್ಯ ಅವರು ಮಂಗಳವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಆರ್.ಕೃಷ್ಣಯ್ಯ

ಮೂಲಗಳ ಪ್ರಕಾರ, ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರು ಕೃಷ್ಣಯ್ಯ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ.

ಆಗಸ್ಟ್ 29ರಂದು ವೈಎಸ್‌ಆರ್ ಕಾಂಗ್ರೆಸ್‌ನ ಬೀದ ಮಸ್ತಾನ್ ರಾವ್ ಹಾಗೂ ಮೊಪಿದೇವಿ ವೆಂಕಟರಮಣ ರಾವ್ ಅವರು ತಮ್ಮ ರಾಜ್ಯಸಭಾ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಕೃಷ್ಣಯ್ಯ ಅವರು ಬಿಜೆಪಿ ಸೇರುವ ಸಾಧ್ಯತೆಗಳಿವೆ ಎನ್ನಲಾಗಿದೆ.

ಉತ್ತರ ಪ್ರದೇಶ: ಆಹಾರದ ಮೇಲೆ ಉಗುಳಿದ, ಮೂತ್ರ ಮಾಡಿದ ಆರೋಪ

‘ರೆಸ್ಟೋರೆಂಟ್ ಮಾಲೀಕರ ಹೆಸರು ಪ್ರದರ್ಶನ ಕಡ್ಡಾಯ’

ಪ್ರಜಾವಾಣಿ ವಾರ್ತೆ

ಲಖನೌ: ರಾಜ್ಯದಲ್ಲಿರುವ ಢಾಬಾಗಳು, ರೆಸ್ಟೋರೆಂಟ್‌ಗಳು ಸೇರಿದಂತೆ ಆಹಾರ ಪದಾರ್ಥಗಳ ಮಾರಾಟ ಮಳಿಗೆಗಳಲ್ಲಿ ಅವುಗಳ ಮಾಲೀಕರು, ವ್ಯವಸ್ಥಾಪಕರು ಹಾಗೂ ಇತರ ಸಿಬ್ಬಂದಿ ಹೆಸರುಗಳನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು ಎಂದು ಉತ್ತರ ಪ್ರದೇಶ ಸರ್ಕಾರ ಮಂಗಳವಾರ ನಿರ್ದೇಶಿಸಿದೆ.

ರಾಜ್ಯದ ಕೆಲ ಭಾಗಗಳಲ್ಲಿನ ಢಾಬಾ, ರೆಸ್ಟೋರೆಂಟ್‌ಗಳಲ್ಲಿ ಆಹಾರ ಪದಾರ್ಥಗಳು ಹಾಗೂ ಹಣ್ಣಿನ ಜ್ಯೂಸ್‌ನಲ್ಲಿ ಮೂತ್ರ ಸೇರಿಸಲಾಗುತ್ತಿದೆ, ಅವುಗಳ ಮೇಲೆ ಉಗುಳಲಾಗುತ್ತಿದೆ ಎಂಬ ವ್ಯಾಪಕ ಆರೋಪಗಳು ಕೇಳಿ ಬಂದ ಬೆನ್ನಲ್ಲೇ, ಸರ್ಕಾರ ನಿರ್ದೇಶನ ನೀಡಿದೆ.

ಈ ರೀತಿಯ ಆರೋಪಗಳ ಕುರಿತು ರಾಜ್ಯವ್ಯಾಪಿ ಪರಿಶೀಲನೆ ನಡೆಸುವಂತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ನಿರ್ದೇಶನ ನೀಡಿದ್ದಾರೆ.

ಈ ವಿಚಾರವಾಗಿ ಹಿರಿಯ ಅಧಿಕಾರಿಗಳೊಂದಿಗೆ ನಡೆಸಿದ ಉನ್ನತ ಸಭೆ ನಂತರ ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

‘ಆರೋಪಗಳು ಕೇಳಿಬಂದಿರುವ ಢಾಬಾ, ರೆಸ್ಟೋರೆಂಟ್ ಸೇರಿದಂತೆ ಎಲ್ಲ ತಿಂಡಿ ಮಳಿಗೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳ ಕುರಿತು ಪೊಲೀಸರು ಪರಿಶೀಲಿಸಬೇಕು. ಪೊಲೀಸರು, ಆಹಾರ ಸುರಕ್ಷತೆ ಹಾಗೂ ಔಷಧ ನಿಯಂತ್ರಣ ಅಧಿಕಾರಿಗಳನ್ನು ಒಳಗೊಂಡ ತಂಡಗಳು ತಕ್ಷಣವೇ ಈ ಕಾರ್ಯ ಆರಂಭಿಸಬೇಕು’ ಎಂದೂ ಅವರು ನಿರ್ದೇಶನ ನೀಡಿದ್ದಾರೆ.

ಯೋಗಿ ಹೇಳಿದ್ದು

- ಜನಸಾಮಾನ್ಯರ ಆರೋಗ್ಯದ ದೃಷ್ಟಿಯಿಂದ ಅಗತ್ಯ ಕಂಡಬಂದಲ್ಲಿ ನಿಯಮಗಳಿಗೆ ತಿದ್ದುಪಡಿ ತರಬೇಕು
- ರೆಸ್ಟೋರೆಂಟ್‌ನ ಇತರ ಭಾಗಗಳಲ್ಲಿಯೂ ಸಿ.ಸಿ.ಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು

ಪ್ರಸಾದ ಪೊಟ್ಟಣಗಳ ಮೇಲೆ ಇಲಿಗಳ ಓಡಾಟ: ತನಿಖೆ ಶುರು

ಮುಂಬೈ(ಪಿಟಿಐ): ಪ್ರಸಿದ್ಧ ಸಿದ್ಧಿವಿನಾಯಕ ದೇವಸ್ಥಾನದ ಪ್ರಸಾದದ ಪೊಟ್ಟಣಗಳ ಮೇಲೆ ಇಲಿಗಳು ಓಡಾಡುತ್ತಿದ್ದವು ಎನ್ನಲಾದ ದೃಶ್ಯಗಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಈ ಆರೋಪವನ್ನು ಶ್ರೀ ಸಿದ್ಧಿವಿನಾಯಕ ಗಣಪತಿ ದೇವಸ್ಥಾನ ಟ್ರಸ್ಟ್ (ಎಸ್‌ಎಸ್‌ಜಿಟಿ) ತಳ್ಳಿಹಾಕಿದ್ದು, ಈ ವಿಚಾರ ಕುರಿತು ತನಿಖೆ ಆರಂಭಿಸಲಾಗಿದೆ ಎಂದಿದೆ.

ತಿರುಪತಿ ದೇವಸ್ಥಾನದ ಪ್ರಸಾದ ಲಾಡುವಿನಲ್ಲಿ ಪ್ರಾಣಿಗಳ ಕೊಬ್ಬಿನ ಅಂಶ ಪತ್ತೆಯಾಗಿದೆ ಎಂಬುದರ ಕುರಿತು ವಿವಾದ ಭುಗಿಲೆದ್ದಿರುವ ನಡುವೆಯೇ, ಸಿದ್ಧಿವಿನಾಯಕ ದೇವಸ್ಥಾನ ಪ್ರಸಾದ ಕುರಿತ ಈ ವಿಚಾರ ಕಳವಳಕ್ಕೆ ಕಾರಣವಾಗಿದೆ.

ನೀಲಿ ಬಣ್ಣದ ಟ್ರೆವೊಂದರಲ್ಲಿರುವ, ಪ್ರಸಾದದ ಹರಿದ ಪೊಟ್ಟಣಗಳ ಮೇಲೆ ಇಲಿಗಳು ಓಡಾಡುತ್ತಿರುವ ದೃಶ್ಯಗಳು, ಸಿದ್ಧಿವಿನಾಯಕ ದೇವಸ್ಥಾನಕ್ಕೆ ಸಂಬಂಧಿಸಿದ್ದು ಎನ್ನಲಾಗುತ್ತಿರುವ ವಿಡಿಯೊದಲ್ಲಿವೆ.

ಈ ಕುರಿತು ಪ್ರತಿಕ್ರಿಯಿಸಿರುವ ಶಿವಸೇನಾ ಮುಖಂಡ ಹಾಗೂ ಟ್ರಸ್ಟ್‌ನ ಮುಖ್ಯಸ್ಥ ಸದಾ ಸರವಣಕರ್ ‘ಸಿ.ಸಿ.ಟಿವಿ ಯಲ್ಲಿನ ದೃಶ್ಯಗಳನ್ನು ಪರಿಶೀಲಿಸಲಾಗುವುದು. ಡಿಸಿಪಿ ಶ್ರೇಣಿಯ ಅಧಿಕಾರಿಯೊಬ್ಬರಿಂದ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದೂ ಅವರು ಹೇಳಿದ್ದಾರೆ.

ತ್ರಿಪುರಾ: 500 ಉಗ್ರರ ಶರಣಾಗತಿ

ಅಗರ್ತಲಾ (ಪಿಟಿಐ): ನ್ಯಾಷನಲ್ ಲಿಬರೇಷನ್ ಫ್ರಂಟ್ ಆಫ್ ತ್ರಿಪುರಾ (ಎನ್‌ಎಲ್‌ಎಫ್‌ಟಿ) ಮತ್ತು ಆಲ್ ತ್ರಿಪುರಾ ಟೈಗರ್ ಫೋರ್ಸ್‌ಗೆ (ಎಟಿಟಿಎಫ್) ಸೇರಿದ ಸುಮಾರು 500 ಉಗ್ರರು ಮಂಗಳವಾರ ಮುಖ್ಯಮಂತ್ರಿ ಮಾಣಿಕ್ ಸಹಾ ಎದುರು ಶಸ್ತ್ರಾಸ್ತ್ರ ತ್ಯಜಿಸಿ ಶರಣಾಗತರಾದರು.

ಸೆಪಹಿಜಾಲ ಜಿಲ್ಲೆಯ ಜಂಪುಯಿಜಾಲಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಮಾಣಿಕ್ ಸಹಾ ಅವರು ಉಗ್ರರನ್ನು ಮುಖ್ಯವಾಹಿನಿಗೆ ಸ್ವಾಗತಿಸಿದರು. ಈ ವೇಳೆ ಮಾತನಾಡಿ, ’ಉಗ್ರವಾದ ಯಾವುದೇ ಸಮಸ್ಯೆಗೆ ಪರಿಹಾರವಲ್ಲ‘ ಎಂದು ತಿಳಿಸಿದರು.

’ಈ ಸಾಮೂಹಿಕ ಶರಣಾಗತಿಯಿಂದ ಈಶಾನ್ಯ ರಾಜ್ಯವು ಉಗ್ರರಿಂದ ಮುಕ್ತ ಪ್ರದೇಶವಾಗಿದೆ‘ ಎಂದು ತಿಳಿಸಿದರು.

ಮಂಗಳವಾರ 500 ಉಗ್ರರು ಶರಣಾಗಿದ್ದು, ಉಳಿದವರು ಮುಂದಿನ ದಿನಗಳಲ್ಲಿ ಶರಣಾಗಲಿದ್ದಾರೆ. ಶರಣಾಗತಿ ವೇಳೆ ಉಗ್ರರು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದೆಹಲಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೊಂದಿಗೆ ಸೆ.4ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಮ್ಮುಖದಲ್ಲಿ ಒಪ್ಪಂದವೊಂದಕ್ಕೆ ಸಹಿ ಹಾಕಿದ ಬಳಿಕ ಉಗ್ರರ ಶರಣಾಗತಿ ನಡೆದಿದೆ.

ಈ ಎರಡು ಉಗ್ರರ ಗುಂಪುಗಳು 1990ರಿಂದ ರಾಜ್ಯದಲ್ಲಿ ಸಾಕಷ್ಟು ವಿಧ್ವಂಸಕ ಕೃತ್ಯ ನಡೆಸಿದ್ದವು.

ಒಲಿಂಪಿಯಾಡ್: ಐತಿಹಾಸಿಕ ಚಿನ್ನ ಗೆದ್ದ ಭಾರತ ತಂಡಗಳ ಸದಸ್ಯರಿಗೆ ಆತ್ಮೀಯ ಸ್ವಾಗತ

ತವರಿಗೆ ಬಂದಿಳಿದ ಚೆಸ್ ವೀರರು

ಚೆನ್ನೈ (ಪಿಟಿಐ): ಬುಡಾಪೆಸ್ಟ್ ಚೆಸ್ ಒಲಿಂಪಿಯಾಡ್‌ನಲ್ಲಿ ಚಾರಿತ್ರಿಕ ಚಿನ್ನ ಗೆದ್ದ ಭಾರತ ಒಲಿಂಪಿಯಾಡ್ ತಂಡದ ಸದಸ್ಯರು ಮಂಗಳವಾರ ಬೆಳಿಗ್ಗೆ ಇಲ್ಲಿ ಬಂದಿಳಿದಾಗ ಅವರಿಗೆ ಉತ್ಸಾಹಿ ಚೆಸ್ ಅಭಿಮಾನಿಗಳು, ಅಧಿಕಾರಿಗಳು, ಕುಟುಂಬ ಸದಸ್ಯರು ಆತ್ಮೀಯವಾಗಿ ಸ್ವಾಗತ ಕೋರಿದರು.

ಡಿ.ಗುಕೇಶ್, ಆರ್.ಪ್ರಜ್ಞಾನಂದ, ಆರ್. ವೈಶಾಲಿ ಮತ್ತು ಪುರುಷರ ತಂಡದ ನಾಯಕ ಶ್ರೀನಾಥ್ ನಾರಾಯಣನ್ ಅವರು ಬೆಳಗಿನ ಜಾವ ವಿಮಾನದಲ್ಲಿ ಇಲ್ಲಿಗೆ ಬಂದಿಳಿದರು. ಬುಡಾಪೆಸ್ಟ್‌ನಲ್ಲಿ ಪುರುಷರ ಮತ್ತು ಮಹಿಳಾ ತಂಡಗಳು ಮೊದಲ ಬಾರಿ ಚಿನ್ನ ಗೆದ್ದಿದ್ದವು.

ಈ ನಾಲ್ವರು ವಿಮಾನ ನಿಲ್ದಾಣದಿಂದ ಹೊರ-ಬರುತ್ತಿದ್ದಂತೆ ಹರ್ಷೋದ್ಗಾರಗಳು ಮೊಳಗಿದವು. ಗುಕೇಶ್ ಅವರು ಓಪನ್ ವಿಭಾಗದಲ್ಲಿ ಅಜೇಯರಾಗಿ ಚಿನ್ನ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈಗಾಗಲೇ ಕ್ಯಾಂಡಿಡೇಟ್ಸ್ ಟೂರ್ನಿ ಗೆದ್ದಿರುವ 18 ವರ್ಷ ವಯಸ್ಸಿನ ಈ ಆಟಗಾರ ವಿಶ್ವ ಚಾಂಪಿಯನ್‌ಗೆ ಚಾಲೆಂಜರ್ ಆಗಿದ್ದಾರೆ. ಇದೇ ನವೆಂಬರ್ 25ರಿಂದ ಸಿಂಗಪುರದಲ್ಲಿ ನಡೆಯುವ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಹಾಲಿ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ಅವರನ್ನು ಎದುರಿಸಲಿದ್ದಾರೆ.

‘ಎರಡೂ ತಂಡಗಳು ಚಿನ್ನ ಗೆದ್ದಿರುವುದು ತುಂಬಾ ವಿಶೇಷವಾಗಿದೆ’ ಎಂದು ಗುಕೇಶ್ ಪಿಟಿಐ ವಿಡಿಯೊಗೆ ತಿಳಿಸಿದರು.

ಮೊದಲು ತಲುಪಿದ ಪ್ರಜ್ಞಾನಂದ ಮತ್ತು ವೈಶಾಲಿ, ಶ್ರೀನಾಥ್ ನಾರಾಯಣನ್ ಅವರಿಗೂ ಅಭಿಮಾನಿಗಳು, ಕುಟುಂಬವರ್ಗದವರು ಪುಷ್ಪಗುಚ್ಛ, ಹಾರಗಳನ್ನು ಹಾಕಿ ಸ್ವಾಗತಿಸಿದರು. ಅಭಿಮಾನಿಗಳು ಸೆಲ್ಫಿ ಕ್ಲಿಕ್ಕಿಸಿಕೊಂಡರು.

‘ಮೊದಲ ಬಾರಿ ಚಿನ್ನ ಗೆದ್ದಿರುವುದು ಸಂತಸ ತಂದಿದೆ. ಇದುವರೆಗೆ ನಾವು ಕಂಚಿನ ಪದಕ ಮಾತ್ರ ಗೆದ್ದಿದ್ದೆವು. ನಾವು ಎರಡೂ ವಿಭಾಗಗಳಲ್ಲಿ ಗೆಲ್ಲುವಲ್ಲಿ ಯಶಸ್ವಿಯಾಗಿದ್ದೇವೆ. ಇದು ಧನ್ಯತಾಭಾವ ಮೂಡಿಸಿದ ಕ್ಷಣ’ ಎಂದು ಪ್ರಜ್ಞಾನಂದ ಹೇಳಿದರು.

ಚೆನ್ನೈ ವಿಮಾನ ನಿಲ್ದಾಣದಲ್ಲಿ ಗ್ರ್ಯಾಂಡ್ ಮಾಸ್ಟರ್ ಡಿ. ಗುಕೇಶ್ ಅವರಿಗೆ ಆತ್ಮೀಯ ಸ್ವಾಗತ ಕೋರಲಾಯಿತು –ಪಿಟಿಐ ಚಿತ್ರ

‘ಚೆನ್ನೈನಲ್ಲಿ ಚಿನ್ನದ ಪದಕ ಕೈತಪ್ಪಿದಾಗ ಬೇಸರವಾಗಿತ್ತು. ಈ ಬಾರಿ ಭಾರತದ ಎರಡೂ ತಂಡಗಳು ಗೆದ್ದಿರುವುದು ಸಂತಸ ಮೂಡಿಸಿದೆ. ಇದೊಂದು ಐತಿಹಾಸಿಕ ಸಂದರ್ಭ’ ಎಂದು ವೈಶಾಲಿ ಪ್ರತಿಕ್ರಿಯಿಸಿದರು.

‘ನಾವು ಆರು ಪಂದ್ಯಗಳನ್ನು ಸತತವಾಗಿ ಗೆದ್ದುಕೊಂಡೆವು. ನಂತರ ಪೋಲೆಂಡ್‌ಗೆ ಸೋತರೂ, ಪುನರಾಗಮನ ಮಾಡಿದೆವು. ಅಮೆರಿಕ ವಿರುದ್ಧ ಡ್ರಾ ಮಾಡಿ, ನಿರ್ಣಾಯಕವಾ-ಗಿದ್ದ ಕೊನೆಯ ಎರಡು ಸುತ್ತುಗಳನ್ನು ಗೆದ್ದು ಚಿನ್ನ ನಮ್ಮದಾಗಿಸಿಕೊಂಡೆವು’ ಎಂದರು.

‘ಒಲಿಂಪಿಯಾಡ್ ಚಿನ್ನ ಗೆದ್ದ ಅತ್ಯಂತ ಪ್ರಬಲ ತಂಡವೊಂದರ ನಾಯಕನಾಗಿರುವುದು ನನಗೆ ಅತೀವ ಹೆಮ್ಮೆ ಮೂಡಿಸಿದೆ. ತಂಡದ ಇಂಥ ಸಾಧನೆಯ ಹಿಂದೆ ವರ್ಷಗಳ ಶ್ರಮ ಇರುತ್ತದೆ’ ಎಂದು ನಾಯಕ ಶ್ರೀನಾಥ್ ಹೇಳಿದರು.

ಗುಕೇಶ್, ಅರ್ಜುನ್ ಇರಿಗೇಶಿ ಮತ್ತು ಪ್ರಜ್ಞಾನಂದ ಅವರನ್ನು ಒಳಗೊಂಡಂತೆ ಹೊಸ ತಲೆಮಾರಿನ ಆಟಗಾರಾರು ವಿಶ್ವದ ಯಾವುದೇ ಆಟಗಾರನನ್ನು ಸೋಲಿಸಬಲ್ಲರು ಎಂದು 30 ವರ್ಷ ವಯಸ್ಸಿನ ಶ್ರೀನಾಥ್ ಹೇಳಿದರು.

‘ಈಗಿನ ಆಟಗಾರರು ವಿಶ್ವವಿಜೇತರು. ಅವರು ಅದನ್ನು ಇಲ್ಲಿ ಮಾತ್ರವಲ್ಲ, ಕ್ಯಾಂಡಿಡೇಟ್ಸ್ ಸೇರಿ ವಿವಿಧ ಟೂರ್ನಿಗಳಲ್ಲಿ ಸಾಧಿಸಿ ತೋರಿಸಿದ್ದಾರೆ’ ಎಂದರು.

‘ನಮ್ಮ ಮುಂದಿನ ಗುರಿ ವಿಶ್ವ ಚಾಂಪಿಯನ್ ಆಟಗಾರನನ್ನು ಹೊಂದುವುದು’ ಎಂದರು. ಗುಕೇಶ್ ಈಗ ಆ ಅವಕಾಶ ಹೊಂದಿದ್ದಾರೆ.

ವೈಯಕ್ತಿಕ ಸ್ಪರ್ಧೆಯಂತೆ ಆಡಿದೆ: ಗುಕೇಶ್

ಚೆನ್ನೈ (ಪಿಟಿಐ): ‘ಬುಡಾಪೆಸ್ಟ್ ಚೆಸ್ ಒಲಿಂಪಿಯಾಡ್‌ನಲ್ಲಿ ನಾನು ವೈಯಕ್ತಿಕ ಸ್ಪರ್ಧೆಯ ರೀತಿಯಲ್ಲಿ ಆಡಿದೆ. ಇದರಲ್ಲಿ ನನ್ನ ಪ್ರದರ್ಶನವೂ ಸಂತೃಪ್ತಿ ತಂದಿದೆ’ ಎಂದು ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಮಂಗಳವಾರ ಹೇಳಿದರು.

‘ಒಲಿಂಪಿಯಾಡ್ ತಂಡ ಸ್ಪರ್ಧೆಯಾದರೂ, ನಾನು ಹಾಗೆ ಭಾವಿಸಲಿಲ್ಲ. ಈ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡುವುದಷ್ಟೇ ನನ್ನ ಎದುರಿಗಿರುವ ಗುರಿಯಾಗಿತ್ತು. ನನ್ನ ಆಟ ಮತ್ತು ತಂಡದ ಪ್ರದರ್ಶನದ ಬಗ್ಗೆ ತುಂಬಾ ಸಂತಸವಾಗಿದೆ’ ಎಂದು ಅವರು ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಮೊದಲ ಬೋರ್ಡ್‌ನಲ್ಲಿ ಆಡಿದ್ದ ಗುಕೇಶ್, 10 ಪಂದ್ಯಗಳಲ್ಲಿ ಎಂಟು ಗೆದ್ದು, ಎರಡು ಡ್ರಾ ಮಾಡಿ 9 ಪಾಯಿಂಟ್ಸ್ ಸಂಪಾದಿಸಿದ್ದು ವೈಯಕ್ತಿಕ ಚಿನ್ನವನ್ನೂ ಗೆದ್ದುಕೊಂಡಿದ್ದರು.

ಈಗ ಗುಕೇಶ್ ಮುಂದಿರುವ ಗುರಿ ನವೆಂಬರ್ 25 ರಿಂದ ಡಿಸೆಂಬರ್ 13ರವರೆಗೆ ನಡೆಯುವ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಗೆಲ್ಲುವುದು. ಕಳೆದ ಏಪ್ರಿಲ್‌ನಲ್ಲಿ ಕ್ಯಾಂಡಿಡೇಟ್ಸ್ ಟೂರ್ನಿ ಗೆಲ್ಲುವ ಮೂಲಕ ಅವರು ಚಾಲೆಂಜರ್ ಅರ್ಹತೆ ಪಡೆದಿದ್ದರು. ಆ ಟೂರ್ನಿ ಗೆದ್ದಾಗ ಅವರ ವಯಸ್ಸು 17. ಮೇ ತಿಂಗಳಲ್ಲಿ ಹದಿನೆಂಟಕ್ಕೆ ಕಾಲಿಟ್ಟಿದ್ದರು.

‘ವಿಶ್ವ ಚಾಂಪಿಯನ್‌ಷಿಪ್ ಮೊದಲು ನನ್ನ ಈ ಪ್ರದರ್ಶನ ನನಗೆ ಖುಷಿ ತಂದಿದೆ. ವಿಶ್ವ ಚಾಂಪಿಯನ್‌ಷಿಪ್‌ಗೆ ಒಂದೆರಡು ತಿಂಗಳು ಉಳಿದಿವೆ. ಅದಕ್ಕೆ ಶ್ರಮ ಹಾಕಿ ಪೂರ್ಣ ಪ್ರಮಾಣದಲ್ಲಿ ಸಜ್ಜಾಗುತ್ತೇನೆ’ ಎಂದರು.

ಜೀವನ್–ವಿಜಯ್ ಚಾಂಪಿಯನ್

ಹಾಂಗ್‌ಝೌ ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ಜೀವನ್ ನೆಡುಂಚೆಳಿಯನ್ ಮತ್ತು ಅವರ ಜೊತೆಗಾರ ವಿಜಯ್ ಸುಂದರ್ ಪ್ರಶಾಂತ್ ಅವರು ಮೊದಲ ಬಾರಿ ಒಟ್ಟಾಗಿ ಎಟಿಪಿ ಟೂರ್ನಿಯೊಂದರಲ್ಲಿ ಪ್ರಶಸ್ತಿಯೊಂದನ್ನು ಗೆದ್ದುಕೊಂಡಿದ್ದಾರೆ. ಹಾಂಗ್‌ಝೌ ಓಪನ್ ಪುರುಷರ ಡಬಲ್ಸ್ ಟೂರ್ನಿಯ ಫೈನಲ್‌ನಲ್ಲಿ ಅವರು ಜರ್ಮನಿಯ ಜೋಡಿಯನ್ನು ಮಂಗಳವಾರ ಸೋಲಿಸಿದರು.

ಒಂದು ಗಂಟೆ 49 ನಿಮಿಷಗಳವರೆಗೆ ನಡೆದ ಫೈನಲ್‌ನಲ್ಲಿ ಶ್ರೇಯಾಂಕರಹಿತ ಜೀವನ್– ವಿಜಯ್ ಜೋಡಿ ಹಿನ್ನಡೆಯಿಂದ ಚೇತರಿಸಿಕೊಂಡು ಜರ್ಮನಿಯ ಕಾನ್‌ಸ್ಟಂಟೈನ್ ಫ್ರಾಂಟ್ಜೆನ್–ಹೆಂಡ್ರಿಕ್ ಜೆಬೆನ್ಸ್ ಜೋಡಿಯನ್ನು 4–6, 7–6 (5), 10–7 ರಿಂದ ಸೋಲಿಸಿದರು. ಜರ್ಮನಿಯ ಜೋಡಿ ಸಹ ಶ್ರೇಯಾಂಕ ಪಡೆದಿರಲಿಲ್ಲ.

35 ವರ್ಷ ವಯಸ್ಸಿನ ಜೀವನ್ ಅವರಿಗೆ ಇದು ಎರಡನೇ ಎಟಿಪಿ ಟೂರ್ ಪ್ರಶಸ್ತಿ. ಅವರು ಈ ಹಿಂದೆ, 2017ರಲ್ಲಿ ರೋಹನ್ ಬೋಪಣ್ಣ ಜೊತೆಗೂಡಿ ಚೆನ್ನೈ ಓಪನ್‌ನಲ್ಲಿ ವಿಜೇತರಾಗಿದ್ದ-ರು. ಇನ್ನೊಂದೆಡೆ ವಿಜಯ್‌ಗೆ ಒಲಿದ ಮೊದಲ ಎಟಿಪಿ ಪ್ರಶಸ್ತಿಯಿದು.

ಮೊದಲ ಸೆಟ್‌ಅನ್ನು 4–6ರಲ್ಲಿ ಸೋತ ನಂತರ ಭಾರತದ ಜೋಡಿ ಪ್ರತಿರೋಧ ಪ್ರದರ್ಶಿಸಿತು. ಎರಡನೇ ಸೆಟ್‌ಅನ್ನು ಟೈಬ್ರೇಕರ್‌ನಲ್ಲಿ ಪಡೆದು, ಪಂದ್ಯವನ್ನು ನಿರ್ಣಾಯಕ ಸೆಟ್‌ಗೆ ಬೆಳೆಸಿದರು. ಇಲ್ಲಿ ಒತ್ತಡದ ನಡುವೆಯೂ ಸಂಯಮ ವಹಿಸಿ ಸೆಟ್ ಹಾಗೂ ಪಂದ್ಯ ತನ್ನದಾಗಿಸಿಕೊಂಡಿತು.

ಪ್ರಶಸ್ತಿಯೊಂದಿಗೆ ಭಾರತದ ವಿಜಯ್ ಸುಂದರ್ ಪ್ರಶಾಂತ್ ಮತ್ತು ಜೀವನ್ ನೆಡುಂಚೆಳಿಯನ್ –ಎಎಫ್‌ಪಿ ಚಿತ್ರ

ಭಾಂಬ್ರಿ–ಒಲಿವೆಟ್ಟಿ ಜೋಡಿಗೆ ರನ್ನರ್ ಅಪ್ ಪ್ರಶಸ್ತಿ: ಯೂಕಿ ಭಾಂಬ್ರಿ ಮತ್ತು ಫ್ರಾನ್ಸ್‌ನ ಅವರ ಜೊತೆಗಾರ ಅಲ್ಬಾನೊ ಒಲಿವೆಟ್ಟಿ ಅವರು ಈ ವರ್ಷ ಮೂರನೇ ಪ್ರಶಸ್ತಿಯನ್ನು ಮಂಗಳವಾರ ಚೀನಾದ ಚೆಂಗ್ಡುವಿನಲ್ಲಿ ಸ್ವಲ್ಪದರಲ್ಲೇ ಕಳೆದುಕೊಂಡರು. ತೀವ್ರ ಹೋರಾಟ ಕಂಡ ಚೆಂಗ್ಡು ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಫೈನಲ್‌ನಲ್ಲಿ ಯೂಕಿ– ಒಲಿವೆಟ್ಟಿ ಜೋಡಿ 4–6, 6–4, 4–10ರಲ್ಲಿ ಅಗ್ರ ಶ್ರೇಯಾಂಕದ ಸಾದಿಯೊ ದೌಂಬಿಯಾ–ಫ್ಯಾಬಿಯನ್ ರಿಬೋಲ್ ಜೋಡಿ ಎದುರು ಸೋಲನುಭವಿಸಿತು.

ಹೊರಬಿದ್ದ ನಗಾಲ್

ಭಾರತದ ಅಗ್ರ ರ‍್ಯಾಂಕ್‌ನ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಬೀಜಿಂಗ್ ಓಪನ್ ಟೆನಿಸ್ ಟೂರ್ನಿಯ ಅರ್ಹತಾ ಸುತ್ತಿನಲ್ಲೇ ಸೋಲ-ನುಭವಿಸಿದರು. ಆರನೇ ಶ್ರೇಯಾಂಕದ ಪಾವೆಲ್ ಕೊಟೊವ್ (ರಷ್ಯಾ) ಅವರು 6–2, 7–5 ರಿಂದ ನಗಾಲ್ ಅವರನ್ನು ಸೋಲಿಸಿದರು.

ಬೈಕ್ ರೇಸ್: ಭಾರತಕ್ಕೆ 10ನೇ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸರ್ದಾರ್ ಶಹಾನ್ ಖಾನ್, ದೇವ್ ವೆಂಕಟೇಶ್ ಮತ್ತು ಕೇರಳದ ಆನಂದ್ ಅವರನ್ನು ಒಳಗೊಂಡ ಭಾರತ ತಂಡವು ದಕ್ಷಿಣ ಆಫ್ರಿಕಾದ ನಮೀಬಿಯಾದಲ್ಲಿ ನಡೆದ ಬಿಎಂಡಬ್ಲ್ಯು ಜಿ.ಎಸ್. ಟ್ರೋಫಿ ಮೋಟಾರ್ ಸೈಕಲ್ ರೇಸ್‌ನಲ್ಲಿ 10ನೇ ಸ್ಥಾನ ಗಳಿಸಿದೆ.

ಸೆ.15ರಿಂದ 21ರವರೆಗೆ ನಡೆದ ಆರು ದಿನಗಳ ಸ್ಪರ್ಧೆಯಲ್ಲಿ 22 ದೇಶಗಳಿಂದ ಖ್ಯಾತನಾಮ ರೇಸರ್‌ಗಳು ಭಾಗವಹಿಸಿದ್ದರು. ಭಾರತ ತಂಡವು ಇದೇ ಮೊದಲ ಬಾರಿಗೆ ಅಗ್ರ 10ರ ಸಾಧನೆ ಮಾಡಿದೆ. ಎರಡು ವರ್ಷಕ್ಕೊಮ್ಮೆ ನಡೆಯುವ ಈ ಸ್ಪರ್ಧೆಯಲ್ಲಿ 2018ರಿಂದ ಭಾರತ ತಂಡ ಭಾಗವಹಿಸುತ್ತಿದೆ. ಈ ಹಿಂದಿನ ಆವೃತ್ತಿಗಳಲ್ಲಿ 17ನೇ ಸ್ಥಾನ ಗಳಿಸಿದ್ದು ಭಾರತದ ಈವರೆಗಿನ ಉತ್ತಮ ಸಾಧನೆಯಾಗಿತ್ತು.

ಈ ಸ್ಪರ್ಧೆಗಾಗಿ 2023ರ ನವೆಂಬರ್‌ನಲ್ಲಿ ಟ್ರಯಲ್ಸ್ ನಡೆಸಲಾಗಿತ್ತು. ದೇಶದ ವಿವಿಧೆಡೆಯಿಂದ 150ಕ್ಕೂ ಅಧಿಕ ರೇಸರ್‌ಗಳು ಪಾಲ್ಗೊಂಡಿದ್ದು, ಅಂತಿಮವಾಗಿ ಬೆಂಗಳೂರಿನ ಶಹಾನ್, ದೇವ್ ಮತ್ತು ಆನಂದ್ ಆಯ್ಕೆಯಾಗಿದ್ದರು.

‘ನಮೀಬಿಯಾದ ಬೆಟ್ಟ, ಕಚ್ಚಾರಸ್ತೆ, ಮರುಭೂಮಿಯಲ್ಲಿ ಸ್ಪರ್ಧೆ ಆಯೋಜನೆಯಾಗಿತ್ತು. ಬೈಕ್ ರೇಸ್‌ನಲ್ಲಿ ಖ್ಯಾತಿ ಪಡೆದ ವಿದೇಶಿ ರೇಸರ್‌ಗಳ ಜತೆ ನಾವೂ ಹೋರಾಟ ಮಾಡಿದ್ದು ಉತ್ತಮ ಅನುಭವ ಕೊಟ್ಟಿತು. ಸ್ಪರ್ಧೆಯ ಮೂರನೇ ದಿನ ನಮ್ಮ ತಂಡ ಅಗ್ರ ಐದರಲ್ಲಿ ಸ್ಥಾನ ಪಡೆದಿತ್ತು. ಮೊದಲ ಮೂರು ಸ್ಥಾನಗಳ ನಿರೀಕ್ಷೆಯಲ್ಲಿದ್ದೆವು. ಆದರೆ, ಕೊನೆಯ ಹಂತದಲ್ಲಿ ನಾವು ಮಾಡಿದ ತಾಂತ್ರಿಕ ತಪ್ಪಿನಿಂದಾಗಿ ಆ ಅವಕಾಶ ತಪ್ಪಿತು. ಆದರೂ ನಮ್ಮ ಸಾಧನೆ ಖುಷಿ ತಂದಿದೆ’ ಎಂದು ಶಹಾನ್ ಮಂಗಳವಾರ ನಮೀಬಿಯಾ ರೇಸ್‌ನ ಅನುಭವ ಹಂಚಿಕೊಂಡರು.

ಬೈಕ್ ರೇಸರ್‌ಗಳಾದ ಸರ್ದಾರ್ ಶಹಾನ್ ಖಾನ್, ಆನಂದ್ ಹರಸನ್ ಮತ್ತು ದೇವ್ ವೆಂಕಟೇಶ್

‘ಆರು ದಿನ 1,300 ಕಿ.ಮೀ. ದೂರ ಸಾಗಬೇಕಿತ್ತು. ಪ್ರತಿ ಹಂತವೂ ಸವಾಲಿನಿಂದ ಕೂಡಿತ್ತು. 21 ವರ್ಷ ವಯಸ್ಸಿನ ಶಹಾನ್, ಸ್ಪರ್ಧೆಯಲ್ಲಿದ್ದ ಅತ್ಯಂತ ಕಿರಿಯ ರೇಸರ್. ಅವರು ಸ್ಪರ್ಧೆಯ ವೇಳೆ ಗಾಯಗೊಂಡರೂ ವಿಚಲಿತರಾಗದೆ ತಂಡವನ್ನು ಅಗ್ರ 10ಕ್ಕೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು’ ಎಂದು ಸಹ ಸ್ಪರ್ಧಿ ದೇವ್ ತಿಳಿಸಿದರು.

ಹಾಲಿ– ಮಾಜಿ ಕೋಚ್‌ಗಳ ತುಲನೆ ಮಾಡಿದ ಅಶ್ವಿನ್

‘ರಾಹುಲ್ ಕಟ್ಟುನಿಟ್ಟು, ಗಂಭೀರ್ ಆರಾಮ’

ಚೆನ್ನೈ (ಪಿಟಿಐ): ರಾಹುಲ್ ದ್ರಾವಿಡ್ ಅವರ ಕಟ್ಟುನಿಟ್ಟು, ಶಿಸ್ತಿನ ಸ್ವಭಾವಕ್ಕೆ ಹೋಲಿಸಿದರೆ, ಗೌತಮ್ ಗಂಭೀರ್ ಸ್ವಲ್ಪ ನಿರಾಳವಾಗಿ ಇರುವ ಕೋಚ್.... ಇದು ಹಾಲಿ ಭಾರತ ತಂಡದ ಅತಿ ಹಿರಿಯ ಆಟಗಾರ ರವಿಚಂದ್ರನ್ ಅಶ್ವಿನ್ ಅವರು ಹಿಂದಿನ ಮತ್ತು ಈಗಿನ ಮುಖ್ಯ ಕೋಚ್ ಅವರನ್ನು ತುಲನೆ ಮಾಡಿದ ರೀತಿ.

ದ್ರಾವಿಡ್ ಅವರು 2021ರ ನವೆಂಬರ್‌ನಿಂದ ಈ ವರ್ಷದ ಜುಲೈವರೆಗೆ ಟೀಮ್ ಇಂಡಿಯಾದ ಮುಖ್ಯ ಕೋಚ್ ಆಗಿದ್ದರು. ಟಿ20 ವಿಶ್ವಕಪ್ ನಂತರ ಅವರ ಅವಧಿ ಕೊನೆಗೊಂಡಿದ್ದು, ಗಂಭೀರ್ ಆ ಸ್ಥಾನಕ್ಕೆ ನೇಮಕಗೊಂಡಿದ್ದಾರೆ.

ಗಂಭೀರ್ ಅವರ ಈ ನಿರಾಳ, ಆರಾಮವಾಗಿರುವ ಸ್ವಭಾವದಿಂದಾಗಿ ಡ್ರೆಸಿಂಗ್ ರೂಮ್‌ನಲ್ಲಿ ಲವಲವಿಕೆಯ ವಾತಾವರಣ ಮೂಡಿದೆ. ಗಂಭೀರ್ ಅವರನ್ನು ‘ರಿಲ್ಯಾಕ್ಸ್ಡ್ ರ‍್ಯಾಂಚೊ’ ಎಂದು ಅಶ್ವಿನ್ ಕರೆದಿದ್ದಾರೆ. ಗಂಭೀರ್ ತುಂಬಾ ಆರಾಮವಾಗಿರುತ್ತಾರೆ. ಒಂದಿಷ್ಟೂ ಒತ್ತಡವಿಲ್ಲದವರು ಎಂದು ಬಣ್ಣಿಸಿದ್ದಾರೆ.

‘ಬೆಳಿಗ್ಗೆ ತಂಡದ ಸಭೆಯಿರುತ್ತದೆ. ಅವರು ಆ ವೇಳೆಯೂ ಒತ್ತಡ ತೆಗೆದುಕೊಳ್ಳುವುದಿಲ್ಲ. ಸಭೆಗೆ ನೀನು ಬರುತ್ತಿಯಾ?, ದಯವಿಟ್ಟು ಬಾ ಎನ್ನುವಷ್ಟಕ್ಕೇ ಸುಮ್ಮನಾಗುತ್ತಾರೆ’ ಎಂದು ಅಶ್ವಿನ್ ಹೇಳಿದ್ದಾರೆ.

ರವಿಚಂದ್ರನ್ ಅಶ್ವಿನ್

ದ್ರಾವಿಡ್ ವಿಷಯಕ್ಕೆ ಬರುವುದಾದರೆ, ಅವರು ತುಂಬಾ ಶಿಸ್ತಿನ ಮನುಷ್ಯ. ಅವರು ಆದೇಶ ನೀಡುವವರು. ಒಂದು ಬಾಟಲಿಯನ್ನು ಕೂಡ ನಿರ್ದಿಷ್ಟ ಸಮಯದಲ್ಲಿ ಅದರದ್ದೇ ಆದ ಜಾಗದಲ್ಲೇ ಇಟ್ಟಿರಬೇಕು ಎಂದು ಬಯಸುವ ವ್ಯಕ್ತಿ. ಅವರದು ಸೇನೆಯ ಶಿಸ್ತು ಎಂದು ಅವರು ಬಹಿರಂಗ ಪಡಿಸಿದ್ದಾರೆ.

‘ಗಂಭೀರ್ ಅದನ್ನೆಲ್ಲಾ ನಿರೀಕ್ಷಿಸುವುದಿಲ್ಲ. ಅವರು ಆರಾಮವಾಗಿ ಹೇಳುವವರು. ಅವರ ಸಾಮಾನ್ಯರ ಕೋಚ್. ಅವರ ಎಲ್ಲರ ಹೃದಯ ಗೆಲ್ಲಬಯಸುವ ವ್ಯಕ್ತಿ. ಅವರನ್ನು ಎಲ್ಲರೂ ಇಷ್ಟಪಡುತ್ತಾರೆ ಎನ್ನುವುದು ನನ್ನ ಅನಿಸಿಕೆ’ ಎಂದು ಹೊಗಳಿಕೆಯ ಮಾತುಗಳನ್ನೂ ಆಡಿದ್ದಾರೆ.

‘ಪಂತ್– ಕ್ರಿಕೆಟ್‌ಗಾಗಿಯೇ ಹುಟ್ಟಿದವರು’: 16 ತಿಂಗಳ ಹಿಂದೆ ಭೀಕರ ಅಪಘಾತದ ನಂತರ ಕ್ರಿಕೆಟ್‌ಗೆ ಮರಳಿದ ಪಂತ್ ಕೂಡ ಇತ್ತೀಚಿನ ಟೆಸ್ಟ್‌ನಲ್ಲಿ ಶತಕ ಹೊಡೆದು ಸುದ್ದಿಯಾದರು. ಅವರ ಬಗ್ಗೆ ಪ್ರಸ್ತಾಪಿಸಿದ ಅಶ್ವಿನ್, ‘ಅವರು ಕ್ರಿಕೆಟ್‌ಗಾಗಿಯೇ ಹುಟ್ಟಿದವರು. ಅವರ ಸಾಮರ್ಥ್ಯವನ್ನು ಸರಿಯಾಗಿ ಅಂದಾಜು ಮಾಡಿಲ್ಲ’ ಎಂದು ಅಭಿಪ್ರಾಯಪಟ್ಟರು.

‘ಅವರು (ಪಂತ್) ಚೆನ್ನಾಗಿ ಆಡುತ್ತಾರೆ. ಇದನ್ನು ರೋಹಿತ್ ಶರ್ಮಾ ಅವರಿಗೆ ಹಲವು ಹತ್ತಾರು ಬಾರಿ ಹೇಳಿದ್ದೇನೆ. ಕೆಲವೊಮ್ಮೆ, ಅವರು ಹೇಗೆ ಔಟಾಗುತ್ತಾರೆ, ಏಕೆ ರನ್ ಹೊಡೆಯುವುದಿಲ್ಲ ಎನ್ನುವುದೇ ನನಗೆ ಅರ್ಥವಾಗುವುದಿಲ್ಲ’ ಎಂದು ಅಭಿಪ್ರಾಯಪಟ್ಟರು.

‘ಎಲ್ಲ ದೃಷ್ಟಿಯಿಂದ ಅವರು ಕ್ರಿಕೆಟ್‌ಗಾಗಿಯೇ ಹುಟ್ಟಿದವರು. ಅವರು ಗಟ್ಟಿ ಮನುಷ್ಯ. ಚೆಂಡನ್ನು ಬಲವಾಗಿ ಹೊಡೆಯಬಲ್ಲವರು. ಒಂದೇ ಕೈಯಿಂದ ಕೂಡ ಹೊಡೆದಟ್ಟಬಲ್ಲವರು’ ಎಂದು ಬಣ್ಣಿಸಿದರು.

ಭಾರತ ಇತರರ ತಂಡದಲ್ಲಿ ಪಡಿಕ್ಕಲ್, ಪ್ರಸಿದ್ಧ ಕೃಷ್ಣ

ನವದೆಹಲಿ (ಪಿಟಿಐ): ಮಧ್ಯಮ ಕ್ರಮಾಂಕದ ಆಟಗಾರ ಸರ್ಫರಾಜ್ ಖಾನ್, ವಿಕೆಟ್ ಕೀಪರ್ ಧ್ರುವ್ ಜುರೇಲ್ ಮತ್ತು ವೇಗಿ ಯಶ್ ದಯಾಳ್ ಅವರನ್ನು, ಇರಾನಿ ಕಪ್ ಪಂದ್ಯಕ್ಕಾಗಿ ಭಾರತ ತಂಡದಿಂದ ಮುಕ್ತಗೊಳಿಸುವ ಸಾಧ್ಯತೆಯಿದೆ. ಇದೇ 27 ರಿಂದ ಕಾನ್ಪುರದಲ್ಲಿ ಬಾಂಗ್ಲಾದೇಶ ವಿರುದ್ಧ ಆರಂಭವಾಗುವ ಎರಡನೇ ಟೆಸ್ಟ್ ಪಂದ್ಯ ಆಡುವ ತಂಡಕ್ಕೆ ಆಯ್ಕೆಯಾಗದಿದ್ದಲ್ಲಿ ಈ ಮೂವರು ಇರಾನಿ ಕಪ್ ಆಡಲಿದ್ದಾರೆ.

ಪಡಿಕ್ಕಲ್

ಇರಾನಿ ಕಪ್‌ಗೆ 15 ಆಟಗಾರರ ಭಾರತ ಇತರರ ತಂಡವನ್ನು ಮಂಗಳವಾರ ಬಿಸಿಸಿಐ ಆಯ್ಕೆ ಮಾಡಿದ್ದು, ಕರ್ನಾಟಕದ ಆರಂಭ ಆಟಗಾರ ದೇವದತ್ತ ಪಡಿಕ್ಕಲ್ ಮತ್ತು ವೇಗದ ಬೌಲರ್ ಪ್ರಸಿದ್ಧ ಕೃಷ್ಣ ಅವರು ಸ್ಥಾನ ಪಡೆದಿದ್ದಾರೆ. ಲಖನೌದಲ್ಲಿ ಅಕ್ಟೋಬರ್ 1 ರಿಂದ 5ರವರೆಗೆ ನಡೆಯುವ ಇರಾನಿ ಟ್ರೋಫಿ ಪಂದ್ಯದಲ್ಲಿ ರಣಜಿ ಚಾಂಪಿಯನ್ ಮುಂಬೈ ತಂಡವನ್ನು ಭಾರತ ಇತರರ ತಂಡ ಎದುರಿಸಲಿದೆ.

‘ಭಾರತ ಇತರರ ತಂಡಕ್ಕೆ ಧ್ರುವ್, ಯಶ್ ದಯಾಳ್ ಅವರನ್ನು ಆಯ್ಕೆ ಮಾಡಲಾಗಿದೆ. ಬಾಂಗ್ಲಾದೇಶ ವಿರುದ್ಧ ಎರಡನೇ ಟೆಸ್ಟ್ ಆಡದಿದ್ದಲ್ಲಿ ಮಾತ್ರ ಇವರಿಬ್ಬರು ಇರಾನಿ ಕಪ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದು ಬಿಸಿಸಿಐ ಹೇಳಿಕೆ ತಿಳಿಸಿದೆ.

ರಿಷಭ್ ಪಂತ್ ಅವರೇನಾದರೂ ಗಾಯಾಳಾಗಿ ಆಡಲಾ-ಗದಿದ್ದಲ್ಲಿ ಕೆ.ಎಲ್.ರಾಹುಲ್ ಅವರ ಸ್ಥಾನದಲ್ಲಿ ಕೀಪಿಂಗ್ ಮಾಡಲಿದ್ದಾರೆ. ಭಾರತ ತಂಡದಲ್ಲಿರುವ ಸರ್ಫರಾಜ್ ಖಾನ್ ತವರು ಮುಂಬೈ ತಂಡಕ್ಕೆ ಆಡಲಿದ್ದಾರೆ. ಮುಂಬೈ ತಂಡವನ್ನು ಅಜಿಂಕ್ಯ ರಹಾನೆ ಮುನ್ನಡೆಸಲಿದ್ದಾರೆ.

ಅ.6ರಂದು ಗ್ವಾಲಿಯರ್‌ನಲ್ಲಿ ಬಾಂಗ್ಲಾ ವಿರುದ್ಧ ನಡೆಯಲಿರುವ ಟಿ20 ಪಂದ್ಯಕ್ಕೆ 3ರಂದು ವರದಿ ಮಾಡಿಕೊ-ಳ್ಳಬೇಕಾಗಿರುವ ಕಾರಣ ಭಾರತ ಟಿ20 ತಂಡದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಮತ್ತು ಆಲ್‌ರೌಂಡರ್ ಶಿವಂ ದುಬೆ ಅವರು ಮುಂಬೈ ತಂಡಕ್ಕೆ ಅಲಭ್ಯರಾಗುವ ಸಾಧ್ಯತೆಯಿದೆ.

ಭಾರತ ಇತರೆ ತಂಡ: ಋತುರಾಜ್ ಗಾಯಕವಾಡ (ನಾಯಕ), ಅಭಿಮನ್ಯು ಈಶ್ವರನ್ (ಉಪ ನಾಯಕ), ಸಾಯಿ ಸುದರ್ಶನ್, ದೇವದತ್ತ ಪಡಿಕ್ಕಲ್, ಧ್ರುವ್ ಜುರೇಲ್ (ವಿಕೆಟ್ ಕೀಪರ್), ಇಶಾನ್ ಕಿಶನ್ (ವಿಕೆಟ್ ಕೀಪರ್), ಮಾನವ ಸುತಾರ್, ಸಾರಾಂಶ್ ಜೈನ್, ಪ್ರಸಿದ್ಧ ಕೃಷ್ಣ, ಮುಖೇಶ್ ಕುಮಾರ್, ಯಶ್ ದಯಾಳ್, ರಿಕಿ ಭುಯಿ, ಶಾಶ್ವತ್ ರಾವತ್, ಖಲೀಲ್ ಅಹ್ಮದ್ ಮತ್ತು ರಾಹುಲ್ ಚಾಹರ್.

ಉಷಾ ವಿರುದ್ಧ ಕಾನೂನು ಕ್ರಮ: ಸಹದೇವ್ ಎಚ್ಚರಿಕೆ

ನವದೆಹಲಿ (ಪಿಟಿಐ): ‘ತಮ್ಮ ವ್ಯಕ್ತಿತ್ವಕ್ಕೆ ಕಳಂಕ ಆರೋಪ ಹೊರಿಸಿ ಷೋಕಾಸ್ ನೋಟಿಸ್ ಜಾರಿ ಮಾಡಿದ ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಧ್ಯಕ್ಷೆ ಪಿ.ಟಿ. ಉಷಾ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಸಂಸ್ಥೆಯ ಖಜಾಂಚಿ ಸಹದೇವ್ ಯಾದವ್ ಎಚ್ಚರಿಕೆ ನೀಡಿದ್ದಾರೆ.

ಕಳೆದ ಚುನಾವಣೆಯಲ್ಲಿ ಖಜಾಂಚಿ ಹುದ್ದೆಗೆ ಸಹದೇವ್ ಅವರ ಆಯ್ಕೆಯಲ್ಲಿ ರಾಷ್ಟ್ರೀಯ ಕ್ರೀಡಾ ಸಂಹಿತೆ ಉಲ್ಲಂಘಿಸಿದೆ ಎಂದು ಆರೋಪಿಸಿ ವ್ಯಕ್ತಿಯೊಬ್ಬರು ಒಲಿಂಪಿಕ್ ಸಂಸ್ಥೆಗೆ ದೂರು ನೀಡಿದ್ದರು. ಅದರ ಆಧಾರದಲ್ಲಿ ಸೆ.10ರಂದು ಉಷಾ ನೋಟಿಸ್ ನೀಡಿದ್ದರು.

ಸಹದೇವ್ ಮತ್ತು ಸಂಸ್ಥೆಯ ಕೆಲವು ಅಧಿಕಾರಿಗಳು ವಯೋಮಿತಿ ಮತ್ತು ಅಧಿಕಾರಾವಧಿಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಕಚೇರಿಯಲ್ಲಿ ಮುಂದುವರಿದಿದ್ದಾರೆ ಎಂದು ವ್ಯಕ್ತಿಯು ದೂರಿನಲ್ಲಿ ಆರೋಪಿಸಿದ್ದರು.

‘2022ರಲ್ಲಿ ಸುಪ್ರೀಂ ಕೋರ್ಟ್‌ನ ಮೇಲ್ವಿಚಾರಣೆಯಲ್ಲಿ ಐಒಎ ಕಾರ್ಯಕಾರಿ ಮಂಡಳಿಗೆ ಚುನಾವಣೆ ನಡೆಸಲಾಗಿದೆ. ಅದು ತಮಗೆ ತಿಳಿದಿದ್ದರೂ ಇಂತಹ ಆಧಾರರಹಿತ ಮತ್ತು ರಾಜಕೀಯ ಪ್ರೇರಿತ ಪತ್ರಕ್ಕೆ ಮಹತ್ವವನ್ನು ನೀಡಿರುವುದು ತುಂಬಾ ದುರದೃಷ್ಟಕರ’ ಎಂದು ಯಾದವ್ ತಿರುಗೇಟು ನೀಡಿದ್ದಾರೆ.

ಕೊಕ್ಕೊ

ಚುರುಕು ಚಿಣ್ಣ

ನವದೆಹಲಿಯ ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿಯ ಆಶ್ರಯದಲ್ಲಿ ಬೆಂಗಳೂರಿನ ಶ್ರೀಸಿದ್ಧಗಂಗಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿರುವ ಸಿಬಿಎಸ್‌ಇ ವಲಯ- 8 ಕೊಕ್ಕೊ ಟೂರ್ನಿಯ ಎರಡನೇ ದಿನವಾದ ಮಂಗಳವಾರ ಬಾಲಕರ ವಿಭಾಗದ ಪಂದ್ಯದಲ್ಲಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಪರಿವರ್ತನಾ ಶಾಲೆಯ ವಿದ್ಯಾರ್ಥಿ ಶ್ರವಂತ್ ಸಾಯಿ, ಆತಿಥೇಯ ಶ್ರೀಸಿದ್ಧಗಂಗಾ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಕುಶಾಲ್‌ನನ್ನು ಔಟ್ ಮಾಡಿ, ತಮ್ಮ ತಂಡವನ್ನು ಸೆಮಿಫೈನಲ್‌ಗೆ ಮುನ್ನಡೆಸಿದರು -ಪ್ರಜಾವಾಣಿ ಚಿತ್ರ: ರಂಜು ಪಿ

ಪಠಾಣ್ ಮಿಂಚು: ಬರೋಡಾ ಮೇಲುಗೈ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಬಾಸಫಿ ಪಠಾಣ್ (20ಕ್ಕೆ 4) ಮತ್ತು ಲುಕ್ಮಾನ್ ಮೇರಿವಾಲಾ (44ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಬರೋಡಾ ತಂಡವು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಫೈನಲ್‌ನ ಮೊದಲ ಇನಿಂಗ್ಸ್‌ನಲ್ಲಿ ಮೇಲುಗೈ ಸಾಧಿಸಿದೆ.

ಪಂದ್ಯದ ಮೊದಲ ದಿನವಾದ ಮಂಗಳವಾರ ಬ್ಯಾಟಿಂಗ್‌ಗೆ ಇಳಿದ ಮಹಾರಾಷ್ಟ್ರ ತಂಡವನ್ನು ಪಠಾನ್ ಮತ್ತು ಲುಕ್ಮಾನ್ ಕಾಡಿದರು. ಹೀಗಾಗಿ, ತಂಡವು 33.5 ಓವರ್‌ಗಳಲ್ಲಿ 127 ರನ್‌ಗಳಿಗೆ ಕುಸಿಯಿತು. ಅರ್ಷಿನ್ ಕುಲಕರ್ಣಿ (48) ಅವರನ್ನು ಹೊರತುಪಡಿಸಿ ಉಳಿದವರು ನಿರಾಸೆ ಮೂಡಿಸಿದರು. ಬರೋಡಾ ಮೊದಲ ಇನಿಂಗ್ಸ್‌ನಲ್ಲಿ ಮಿತೇಶ್ ಪಟೇಲ್ (ಔಟಾಗದೇ 77; 97ಎ) ಬ್ಯಾಟಿಂಗ್ ಬಲದಿಂದ 33 ಓವರ್‌ಗಳಲ್ಲಿ 4 ವಿಕೆಟ್‌ಗೆ 130 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರ್: ಮಹಾರಾಷ್ಟ್ರ: 33.5 ಓವರ್‌ಗಳಲ್ಲಿ 127 (ಅಂಕಿತ್ ಭಾವ್ನೆ 22, ಅರ್ಷಿನ್ ಕುಲಕರ್ಣಿ 48; ಬಾಬಾಸಫಿ ಪಠಾಣ್ 20ಕ್ಕೆ 4, ಲುಕ್ಮಾನ್ ಮೇರಿವಾಲಾ 44ಕ್ಕೆ 4, ರಾಜ್ ಲಿಂಬಾನಿ 35ಕ್ಕೆ 2). ಬರೋಡಾ: 33 ಓವರ್‌ಗಳಲ್ಲಿ 4ಕ್ಕೆ 130 (ಮಿತೇಶ್ ಪಟೇಲ್ ಔಟಾಗದೇ 77, ರಾಮಕೃಷ್ಣ ಘೋಷ್ 37ಕ್ಕೆ2, ರಾಜವರ್ಧನ್ ಹಂಗರಗೇಕರ್ 30ಕ್ಕೆ 2).

ಸ್ಯಾಫ್ ಫುಟ್‌ಬಾಲ್: ಭಾರತಕ್ಕೆ ಜಯ

ಥಿಂಪು (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು 17 ವರ್ಷದೊಳಗಿನವರ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವಿನ ಓಟವನ್ನು ಮುಂದುವರಿಸಿತು.

ಈಗಾಗಲೇ ಸೆಮಿಫೈನಲ್‌ಗೆ ಅರ್ಹತೆ ಪಡೆದಿರುವ ಭಾರತ ಮಂಗಳವಾರ ‘ಎ’ ಗುಂಪಿನ ಪಂದ್ಯದಲ್ಲಿ 3–0ಯಿಂದ ಮಾಲ್ಡೀವ್ಸ್ ತಂಡವನ್ನು ಸೋಲಿಸಿತು.

ಭಾರತ ಮೊದಲ ಪಂದ್ಯದಲ್ಲಿ 1–0ಯಿಂದ ಬಾಂಗ್ಲಾದೇಶವನ್ನು ಸೋಲಿಸಿತ್ತು. ‘ಎ’ ಗುಂಪಿನಲ್ಲಿ ಭಾರತ 6 ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನದೊಂದಿಗೆ ಸೆಮಿಫೈನಲ್‌ಗೆ ಮುನ್ನಡೆಯಿತು.

ಕಿಕ್‌ಸ್ಟಾರ್ಟ್ ಎಫ್‌ಸಿ ಶುಭಾರಂಭ

ಬೆಂಗಳೂರು: ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವು ಇಲ್ಲಿ ನಡೆಯುತ್ತಿರುವ ಸಿ.ಪುಟ್ಟಯ್ಯ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು 7–1 ಗೋಲುಗಳಿಂದ ಸುಲಭವಾಗಿ ಮಣಿಸಿತು.

ದಿನದ ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ ತಂಡವು 3–1ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ತಂಡವನ್ನು ಮಣಿಸಿತು.

ಪಿ.ವಿ.ಸಿಂಧು ಹೊಸ ಕೋಚ್ ಅನೂಪ್ ಶ್ರೀಧರ್ ಹೇಳಿಕೆ

‘ಲಯಕ್ಕೆ ಮರಳಿಸುವುದು ಆದ್ಯತೆ’

ನವದೆಹಲಿ (ಪಿಟಿಐ): ‘ಪಿ.ವಿ.ಸಿಂಧು ಈಗಲೂ ಯಶಸ್ಸಿನ ಹಂಬಲದಲ್ಲಿದ್ದಾರೆ. ಅವರು ಮತ್ತೆ ಸ್ಥಿರ ಪ್ರದರ್ಶನ ನೀಡುವಂತೆ ಮಾಡುವದು ಮೊದಲ ಆದ್ಯತೆಯಾಗಿದೆ’ ಎಂದು ಅವರಿಗೆ ತಾತ್ಕಾಲಿಕ ನೆಲೆಯಲ್ಲಿ ಕೋಚ್ ಆಗಿರುವ ಅನೂಪ್ ಶ್ರೀಧರ್ ಮಂಗಳವಾರ ಹೇಳಿದ್ದಾರೆ.

2016 ಮತ್ತು 2021ರಲ್ಲಿ ಎರಡು ಬಾರಿ ಒಲಿಂಪಿಕ್ಸ್ ಪದಕ ಗೆದ್ದಿದ್ದ ಸಿಂಧು, ಪ್ಯಾರಿಸ್ ಕ್ರೀಡೆಗಳಲ್ಲಿ ಬರಿಗೈನಲ್ಲಿ ಮರಳಿದ್ದರು. ಪ್ರಸ್ತುತ ಅನೂಪ್ ಶ್ರೀಧರ್ ಅವರು ಹೈದರಾಬಾದಿನ ಗಚ್ಚಿಬೌಲಿ ಕ್ರೀಡಾಂಗಣದಲ್ಲಿ ಮೂರು ವಾರಗಳಿಂದ ಸಿಂಧು ಅವರಿಗೆ ತರಬೇತಿ ನೀಡುತ್ತಿದ್ದಾರೆ. ಶ್ರೀಧರ್ 2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

‘ನಾನು ಸಿಂಧು ಅವರ ತಂಡದ ಜೊತೆ ಕೆಲವಾರಗಳ ಹಿಂದೆ ಮಾತನಾಡಿದ್ದೆ. ಈಗ ಅವರು ಹೈದರಾಬಾದಿನಲ್ಲಿ ನನ್ನಿಂದ ತರಬೇತಿ ಪಡೆಯುತ್ತಿದ್ದಾರೆ. ನಾವು ಗಣನೀಯ ಪ್ರಗತಿ ಕಂಡಿದ್ದೇವೆ. ಇನ್ನೆರಡು ವಾರಗಳಲ್ಲಿ ಟೂರ್ನಿಗಳಲ್ಲಿ ಭಾಗವಹಿಸಲು ಯುರೋಪ್‌ಗೆ ಹೋಗಲಿದ್ದೇವೆ’ ಎಂದು 41 ವರ್ಷ ವಯಸ್ಸಿನ ಶ್ರೀಧರ್ ಸುದ್ದಿಸಂಸ್ಥೆಗೆ ತಿಳಿಸಿದರು. ಅರ್ಜುನ ಪ್ರಶಸ್ತಿ ಪುರಸ್ಕೃತರಾದ ಶ್ರೀಧರ್ ಈ ಹಿಂದೆ ಲಕ್ಷ್ಯ ಸೇನ್ ಅವರಿಗೂ ಕೆಲಕಾಲ ತರಬೇತಿ ನೀಡಿದ್ದರು.

ಪಿ.ವಿ.ಸಿಂಧು

ಪ್ಯಾರಿಸ್ ಒಲಿಂಪಿಕ್ಸ್‌ನ ಪ್ರಿಕ್ವಾ-ರ್ಟರ್‌ಫೈನಲ್‌ನಲ್ಲಿ ಸಿಂಧು ಅವರು ಚೀನಾದ ಹೆ ಬಿಂಗ್‌ಜಿಯಾವೊ ಅವರಿಗೆ ಮಣಿದಿದ್ದರು. ಬಿಡಬ್ಲ್ಯುಎಫ್ ವಿಶ್ವ ಟೂರ್ ಋತುವನ್ನು 29 ವರ್ಷ ವಯಸ್ಸಿನ ಆಟಗಾರ್ತಿ ಯುರೋಪ್ ಪ್ರವಾಸದೊಡನೆ ಆರಂಭಿಸಲಿದ್ದಾರೆ. ಫಿನ್ಲೆಂಡ್‌ನ ವಾಂಟಾದಲ್ಲಿ ಆರ್ಕ್ಟಿಕ್ ಓಪನ್ (ಅ. 8 ರಿಂದ 13), ಒಡೆನ್ಸ್‌ನಲ್ಲಿ ಡೆನ್ಮಾರ್ಕ್ ಓಪನ್ (ಅ. 15 ರಿಂದ 20) ಆಡಲಿದ್ದಾರೆ.

ಕನ್ಸಲ್ಟೆಂಟ್ ಕೋಚ್ ಆಗಿ ಲೀ ಹ್ಯುನ್

ನವದೆಹಲಿ (ಪಿಟಿಐ): ಮುಂದಿನ ತಿಂಗಳು ಸ್ಪರ್ಧಾತ್ಮಕ ಬ್ಯಾಡ್ಮಿಂಟನ್‌ಗೆ ಮರಳಲು ಸಜ್ಜಾಗಿರುವ ಪಿ.ವಿ. ಸಿಂಧು ಅವರು ತಮ್ಮ ನೆರವು ಸಿಬ್ಬಂದಿ ತಂಡವನ್ನು ಬಲಗೊಳಿಸಿದ್ದು, ದಕ್ಷಿಣ ಕೊರಿಯಾದ ದಿಗ್ಗಜ ಆಟಗಾರ ಲೀ ಹ್ಯುನ್ ಇಲ್ ಅವರು ಹಂಗಾಮಿ ಕನ್ಸಲ್ಟೆಂಟ್ ಕೋಚ್ ಆಗಿ ಸೇರ್ಪಡೆ-ಗೊಂಡಿದ್ದಾರೆ. ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರರಾದ ಹ್ಯುನ್, 2006ರಲ್ಲಿ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ಗೆದ್ದುಕೊಂಡಿದ್ದರು. ಎರಡು ಬಾರಿ (2002, 2014) ಏಷ್ಯನ್ ಗೇಮ್ಸ್ ತಂಡ ಸ್ವರ್ಣ ವಿಜೇತರಾಗಿದ್ದಾರೆ.

ಪ್ರೀಮಿಯರ್ ಬ್ಯಾಡ್ಮಿಂಟನ್ ಲೀಗ್‌ನಲ್ಲಿ ಸಿಂಧು ಜೊತೆ ಒಂದೇ ತಂಡದಲ್ಲಿ ಆಡಿದ್ದರು.

ಟ್ರೀಸಾ–ಗಾಯತ್ರಿ ಜೋಡಿ ಮುನ್ನಡೆ

ಮಕಾವು (ಪಿಟಿಐ): ಮೂರನೇ ಶ್ರೇಯಾಂಕದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಜಪಾನಿನ ಅಕಾರಿ ಸಾಟೊ ಮತ್ತು ಮಯಾ ತಗುಚಿ ಅವರ ಪ್ರತಿರೋಧ ಮೆಟ್ಟಿನಿಂತು ಮಕಾವು ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯ ಡಬಲ್ಸ್ ಎರಡನೇ ಸುತ್ತಿಗೆ ಮುನ್ನಡೆದರು.

ಮಂಗಳವಾರ ನಡೆದ ಪಂದ್ಯದಲ್ಲಿ ಭಾರತದ ಆಟಗಾರ್ತಿಯರು 15–21, 21–16, 21–14 ರಿಂದ ಜಪಾನ್‌ನ ಎದುರಾಳಿಗಳನ್ನು ಸೋಲಿಸಿ ಪ್ರಿಕ್ವಾ-ರ್ಟರ್‌ಫೈನಲ್ ತಲುಪಿದರು. ಮಹಿಳಾ ಡಬಲ್ಸ್ ಕ್ವಾಲಿಫಿಕೇಷನ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಸಿಕ್ಕಿ ರೆಡ್ಡಿ–ಋತ್ವಿಕಾ ಶಿವಾನಿ ಜೋಡಿ 21–15, 21–10 ರಿಂದ ಹಾಂಗ್‌ಕಾಂಗ್–ಚೀನಾದ ಚಿಯುಂಗ್ ಯಾನ್ ಯು– ಚು ವಿಂಗ್ ಚಿ ಜೋಡಿಯನ್ನು ಸೋಲಿಸಿತು.

ಪುರುಷರ ಸಿಂಗಲ್ಸ್ 16ರ ಕ್ವಾಲಿಫಿಕೇಷನ್ ಸುತ್ತಿನಲ್ಲಿ ಆರ್ಯಮನ್ ಟಂಡನ್ 11–21, 21–15, 21–17 ರಿಂದ ಸ್ವದೇಶದ ತರುಣ್ ಮನೇಪಲ್ಲಿ ಅವರನ್ನು ಮಣಿಸಿದರು. ಆದರೆ ನಂತರ ಕ್ವಾಲಿಫಿಕೇಷನ್ ಕ್ವಾರ್ಟರ್‌ಫೈನಲ್‌ನಲ್ಲಿ 10–21, 22–24ರಲ್ಲಿ ಭಾರತದ ಇನ್ನೊಬ್ಬ ಆಟಗಾರ ಅಲಾಪ್ ಮಿಶ್ರಾ ಎದುರು ಸೋಲನುಭವಿಸಿದರು.